# ಪ್ರಬೋಧಸುಧಾಕರ

## (ಪ್ರಕರಣಗಳು - ಸಂಪುಟ -೮)

ಪ್ರಕಾಶಕರು

**ಅಧ್ಯಾತ್ಮ ಪ್ರಕಾಶಕಾರ್ಯಾಲಯ**

ಹೊಳೆನರಸೀಪುರ

೧೯೯೯

# ಕೆಲವು ಪ್ರಕರಣ ಗ್ರಂಥಗಳು

**೧. ಪ್ರಕರಣಗಳು - ೧ನೆಯ ಸಂಪುಟ :** ಉಪದೇಶಸಾಹಸ್ರಿ. ಇದು ಪದ್ಯಭಾಗವೆಂದೂ ಗದ್ಯಭಾಗವೆಂದೂ ಎರಡು ಭಾಗಗಳಾಗಿವೆ. ಪದ್ಯ ಪ್ರಬಂಧವು ಶ್ರೀಶ್ರೀಗಳವರಿಂದ (ಪೂರ್ವಾಶ್ರಮ : ವೈ. ಸುಬ್ಬರಾವ್) ಕನ್ನಡಾನುವಾದ, ಟಿಪ್ಪಣಿ, ವಿವರಣೆ - ಮುಂತಾದ ಸೌಕರ್ಯಗಳೊಡನೆ ಪ್ರಥಮ ಬಾರಿಗೆ 1939ರಲ್ಲಿ ಒಂದನೆಯ ಭಾಗವು ಪ್ರಕಟತವಾಯಿತು. 1947 ರಲ್ಲಿ ಎರಡನೆಯ ಮತ್ತು 1956ರಲ್ಲಿ ಮೂರನೆಯ ಭಾಗವೂ ಕ್ರಮವಾಗಿ ಪ್ರಕಟನವಾಗಿ ಪೂರ್ತಿಗೊಂಡಿತ್ತು. 1955ರಲ್ಲಿ ಮೂರು ಪದ್ಯ ಭಾಗಗಳನ್ನೂ ಒಟ್ಟು ಗೂಡಿಸಿ ಮೂಲ, ಅನುವಾದ, ಅನ್ವಯ, ಟಿಪ್ಪಣಿ, ವಿವರಣೆ ಗಳೊಡನೆ ಒಂದೇ ಸಂಪುಟದಲ್ಲಿ ಹೊರತಂದಿದೆ. ವಿಚಾರಶೈಲಿಯಲ್ಲಿ ಪ್ರಸ್ಥಾನತ್ರಯಿ ಗಳೊಡನೆ ಸರಿತೂಗುವ ಗ್ರಂಥವಿದು.

**(ಮೊದಲನೆಯ ಹೊಸ ಮುದ್ರಣ ( 1995) : ಪು. ಡೆಮ್ಮಿ ೧೬+೫೨೮)**

ಇದೇ ಗ್ರಂಥದ ಗದ್ಯಭಾಗವು 1983ರಲ್ಲಿ ಪ್ರತ್ಯೇಕ ಗ್ರಂಥವಾಗಿ ಪ್ರಕಟವಾಗಿದ್ದು ಈಗ ಪುನರ್ಮುದ್ರಣಕ್ಕಾಗಿ ಕಾದಿದೆ. ಇದರಲ್ಲಿಗುರುಶಿಷ್ಯಸಂವಾದರೂಪವಾಗಿ ವೇದಾಂತ ತತ್ತ್ವವನ್ನು ವಿಚಾರಮಾಡಲಾಗಿದೆ. ಪ್ರಸ್ಥಾನತ್ರಯಭಾಷ್ಯಗಳಂತೆಯೇ ಪರಿಶುದ್ಧವೇದಾಂತ ತತ್ತ್ವವನ್ನು ನಿರೂಪಿಸಲಾಗಿದೆ.

**(ಮೂರನೆಯ ಮುದ್ರಣ : ( 1983) ಪು. ಡೆಮ್ಮಿ ೧೨+೧೮೦)**

**೨. ಪ್ರಕರಣಗಳು : ೨ನೆಯ ಸಂಪುಟ :** ಇದರಲ್ಲಿಸ್ವಾತ್ಮನಿರೂಪಣ, ಮನೀಷಾ ಪಂಚಕ, ನಿರ್ವಾಣಷಟ್ಕ, ಬ್ರಹ್ಮಾನುಚಿಂತನ, ಸದಾಚಾರಾನುಸಂಧಾನ, ದಶಶ್ಲೋಕೀ - ಈ ಆರು ಪ್ರಕರಣಗಳಿವೆ. ಪ್ರತಿಯೊಂದಕ್ಕೂ ಅರ್ಥ, ಟಿಪ್ಪಣಿಗಳು, ವಿಚಾರ ಪ್ರಚೋದಕವಾದ ಪೀಠಿಕೆ ಮುಂತಾದವುಗಳಿವೆ.

**(ಮೊದಲನೆಯ ಮುದ್ರಣ : ( 1957) ಪು. ಡೆಮ್ಮಿ ೨೬+೧೧೦)**

**೩. ಪ್ರಕರಣಗಳು : ೩ನೆಯ ಸಂಪುಟ ಅಥವಾ ವಿವೇಕಚೂಡಾಮಣಿ :** ಶ್ರೀಶಂಕರಾಚಾರ್ಯರಚಿತವೆಂದು ಪ್ರಸಿದ್ಧವಾಗಿರುವ ಈ ಗ್ರಂಥವು ತನ್ನ ಸರಳವಾದ ಶೈಲಿಯಿಂದ ತತ್ತ್ವಪ್ರತಿಪಾದನೆ ಮಾಡುವದರಿಂದ ಬಹುಜನಪ್ರಿಯವಾದ ಪ್ರಕರಣವಾಗಿದೆ. 'ಗೀತಾ ತಾತ್ಪರ್ಯ ಬೋಧಿಸಿ' ಕರ್ತೃಗಳಾದ ಶ್ರೀ ಶಂಕರಾನಂದರ ಕೃತಿಯಿದು - ಎಂಬುದನ್ನು ಶ್ರೀ ಶ್ರೀಗಳವರು ಪರಿಶಿಷ್ಟದಲ್ಲಿ ಎರಡೂ ಗ್ರಂಥಗಳ ಭಾಗಗಳ ಪರಸ್ಪರ ಹೋಲಿಕೆಯಿಂದ ಪ್ರತಿಪಾದಿಸಿದ್ದಾರೆ. ಮುಮುಕ್ಷುಗಳಿಗೂ ವಿಚಾಥಪರರಾದ ಸಂಶೋಧಕರಿಗೂ ಅಗತ್ಯವಾಗಿ ಬೇಕಾದ ಗ್ರಂಥವಾಗಿದೆ.

**(ಮೂರನೆಯ ಮುದ್ರಣ : ( 1957, 1975, 1993) ಪು. ಡೆಮ್ಮಿ ೧೮ + ೨೨೦)**

**೪. ಪ್ರಕರಣಗಳು - ೪ನೆಯ ಸಂಪುಟ :** ಇದರಲ್ಲಿ ಜೀವನ್ಮುಕ್ತಾನಂದಲಹರೀ, ಯತಿಪಂಚಕ, ಮಾಯಾಪಂಚಕ, ನಿರ್ವಾಣಮಂಜರಿ, ಬ್ರಹ್ಮಜ್ಞಾನಾವಳೀಮಾಲೆ, ಅನಾತ್ಮಶ್ರೀ ವಿಗರ್ಹಣ, ತತ್ತ್ವೋಪದೇಶ, ಪ್ರೌಢಾನುಭೂತಿ, ಉಪದೇಶಪಂಚಕ, ಸ್ವರೂಪಾನು ಸಂಧಾನ, ಮಹಾವಾಕ್ಯದರ್ಪಣ ಈ ಹನ್ನೊಂದು ಪ್ರಕರಣಗಳು ಮೂಲ, ಅರ್ಥ ಸಮೇತ ಇವೆ. ಮಹಾವಾಕ್ಯದರ್ಪಣವು ಸ್ವಲ್ಪ ದೊಡ್ಡ ಪ್ರಕರಣವಾಗಿದ್ದು ಮಹಾ ವಾಕ್ಯ ವಿಚಾರವನ್ನೊಳಗೊಂಡಿದೆ.

**(ಮೊದಲನೆಯ ಮುದ್ರಣ :( 1962) ಪು. ಡೆಮ್ಮಿ ೧೬+೧೭೦)**

ಅಧ್ಯಾತ್ಮಗ್ರಂಥಾವಳಿ

# ಪ್ರಬೋಧಸುಧಾಕರ

(ಪ್ರಶ್ನೋತ್ತರರತ್ನಮಾಲಿಕೆ, ಶ್ರೀರಾಮಭುಜಂಗಪ್ರಯಾತಸ್ತೋತ್ರ, ದತ್ತಲಹರಿ - ಇವುಗಳೊಡನೆ)


ಅನುವಾದಕರು:

ಅಧ್ಯಾತ್ಮವಿದ್ಯಾಪ್ರವೀಣ, ವೇದವಿದ್ಯಾಭೂಷಣ

ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ



ಕ್ರಮಾಂಕ: ೧೮೦

ಪ್ರಕಾಶಕರು

ಅಧ್ಯಾತ್ಮ ಪ್ರಕಾಶಕಾರ್ಯಾಲಯ

ಹೊಳೆನರಸೀಪುರ

೧೯೯೯

ಮೊದಲನೆಯ ಮುದ್ರಣ (೧೯೭೮) ೫೦೦ ಪ್ರತಿಗಳು
ಎರಡನೆಯ ಮುದ್ರಣ (೧೯೯೯) ೧೦೦೦ ಪ್ರತಿಗಳು

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಅಕ್ಷರ ಜೋಡಣೆ:
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. 213, ಬಾಲಾಜಿರಸ್ತೆ, ತ್ಯಾಗರಾಜನಗರ
ಬೆಂಗಳೂರು - 28, ದೂರವಾಣಿ: 6677016.

ಮುದ್ರಣಸ್ಥಾನ:
**ಕಾಮಧೇನು ಪ್ರಿಂಟರ್ಸ್**
ನಂ. 5, 1ನೇ ಮುಖ್ಯರಸ್ತೆ, ತ್ಯಾಗರಾಜನಗರ
ಬೆಂಗಳೂರು - 28, ದೂರವಾಣಿ: 6672082

# ಮುನ್ನುಡಿ

ಈ ಪ್ರಕರಣಗ್ರಂಥವು ೧೯೭೮ರಲ್ಲಿ ಒಂದೆರಡು ಸ್ತೋತ್ರಗಳೊಡನೆ 'ಪ್ರಕರಣಗಳು- ೮ನೆಯ ಸಂಪುಟ ' ಎಂಬ ಹೆಸರಿನಿಂದ ಪ್ರಕಟವಾಗಿತ್ತು. ಆ ಕಾಲಕ್ಕೆ ಬಹಳಮಟ್ಟಿಗೆ 'ಶ್ರೀಶಂಕರಾಚಾರ್ಯರ ಗ್ರಂಥಗಳು' ಎಂಬ ಗ್ರಂಥಮಾಲೆಯು ಸಂಪೂರ್ಣವಾಗಿತ್ತು. ೧೯೫೬ನೆಯ ವರ್ಷದವರೆಗೆ ಮೈಸೂರುಅರಮನೆಯವರ ಧನ ಸಹಾಯದಿಂದ ಹೊರಬರುತ್ತಿದ್ದ 'ಜಯಚಾಮರಾಜೇಂದ್ರಗ್ರಂಥರತ್ನಮಾಲೆಯ' ಪ್ರಕಟನೆಯು ನಿಂತುಹೋದ ಅನಂತರ • 'ಅಧ್ಯಾತ್ಮಗ್ರಂಥಾವಳಿ' ಮಾಲೆಯಲ್ಲಿಯೇ **'ಪ್ರಬೋಧಸುಧಾಕರ'** ಎಂಬ ಹೆಸರಿನಿಂದ ಈ ಪುಸ್ತಕವು ಪ್ರಕಟವಾಗಿತ್ತು.

ಈಗ ಎರಡನೆಯಬಾರಿಗೆ ಈ ಗ್ರಂಥವನ್ನು ಹಿಂದಿನ ಸಂಸ್ಕರಣದಂತೆಯೇ ಹೊರ ತರಲಾಗಿದೆ. ಇದರಲ್ಲಿರುವ ವೇದಾಂತಪ್ರಕ್ರಿಯೆಯ ವಿಚಾರವಾಗಿ ಪೀಠಿಕೆಯಲ್ಲಿ ಕೆಲವು ವಿವರಗಳನ್ನು ನೀಡಲಾಗಿದೆ. ಆಚಾರ್ಯರ ಹೆಸರಿನಲ್ಲಿ ಪ್ರಸಿದ್ಧವಾಗಿರುವ ಪ್ರಕರಣ ಗಳೆಲ್ಲವೂ ಭಾಷ್ಯಕಾರರಾದ ಶ್ರೀಶಂಕರಭಗವತ್ಪಾದರವರ ಸಾಕ್ಷಾತ್‌ಕೃತಿಗಳೇ ಎಂದು ಹೇಳಲಾಗುವದಿಲ್ಲ. ಆದರೂ ಭಾಷ್ಯಪ್ರಕ್ರಿಯೆಗೆ ವಿರೋಧವಲ್ಲದ ಅಂಶಗಳನ್ನು ಜಿಜ್ಞಾಸುಗಳು ಸ್ವೀಕರಿಸಬಹುದಾಗಿದೆ. ಹಿಂದಿನ ಸಂಸ್ಕರಣದಂತೆಯೇ ಈ ಸಂಪುಟವನ್ನು ಅಚ್ಚಿನ ತಪ್ಪುಗಳನ್ನು ಸರಿಪಡಿಸಿ ಮುದ್ರಿಸಿ ವಾಚಕರಿಗೆ ಸಮರ್ಪಿಸಲಾಗಿದೆ.

ಪೂಜ್ಯ ಶ್ರೀಶ್ರೀಗಳವರ ಕಾಲಾನಂತರ ಗ್ರಂಥಪ್ರಕಟನೆಯಕಾರ್ಯವನ್ನು ಕಾರ್ಯಾಲಯದ ಪಂಡಿತರಾದ ಶ್ರೀ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳು ನಿರ್ವಹಿಸುತ್ತಿದ್ದು ಈ ಗ್ರಂಥವನ್ನು ಅವರೇ ಸಿದ್ಧಗೊಳಿಸಿರುತ್ತಾರೆ. ಈ ಬಗ್ಗೆ ಕಾರ್ಯಾಲಯ ದವರು ಕೃತಜ್ಞರಾಗಿರುತ್ತಾರೆ.

ವಾಚಕರು ಎಂದಿನಂತೆ ಈ ಗ್ರಂಥವನ್ನು ಸ್ವೀಕರಿಸಿ ಪ್ರೋತ್ಸಾಹಿಸಬೇಕಾಗಿ ಕೋರಿದೆ.

ಇತಿ ತಮ್ಮ ವಿಶ್ವಾಸಿ

**೩೦-೧೨-೧೯೯೯** **ಅರಕಲಗೂಡು ತಾಂಡವೇಶ್ವರ**

ಹೊಳೆನರಸೀಪುರ. ಅಧ್ಯಕ್ಷರು

# ಪೀಠಿಕೆ

## ೧. ಪ್ರಬೋಧಸುಧಾಕರ

ಶ್ರೀಶಂಕರಾಚಾರ್ಯವಿರಚಿತವೆಂದು ಪ್ರಸಿದ್ಧವಾಗಿದ್ದು ಶ್ರೀರಂಗದ ವಾಣೀವಿಲಾಸಮುದ್ರಣಾಲಯದವರು ಪ್ರಕಟಿಸಿರುವ ಆಚಾರ್ಯರ ಪ್ರಕರಣಗ್ರಂಥಗಳಲ್ಲಿ 'ಪ್ರಬೋಧಸುಧಾಕರ'ವೂ ಸೇರಿರುತ್ತದೆ. ೨೫೭ ಸಂಖ್ಯೆಯ ಆರ್ಯಾ ವೃತ್ತದ ಪದ್ಯಗಳಿಂದ ರಚಿತವಾಗಿರುವ ಈ ಗ್ರಂಥವು ಅನೇಕವಿಷಯಗಳಿಂದ ಕೂಡಿದೆ. ಪ್ರಕರಣವಾದ್ದರಿಂದಲೇ ವೇದಾಂತಸಿದ್ಧಾಂತದ ಯಾವದೇ ಮುಖ್ಯ ಪ್ರಮೇಯಗಳನ್ನಾಗಲೀ ಪ್ರಕ್ರಿಯೆಗಳನ್ನಾಗಲೀ ಇಲ್ಲಿ ಸ್ವೀಕರಿಸಿರುವದಿಲ್ಲ.

ಗ್ರಂಥಕಾರರು ಕೃಷ್ಣಸ್ತುತಿರೂಪವಾದ ಮಂಗಳವನ್ನು ಮಾಡಿ ಗ್ರಂಥಾರಂಭವನ್ನು ಮಾಡಿರುತ್ತಾರೆ. ಮುಂದೆ ೨೦೦ನೆಯ ಪದ್ಯದಿಂದ ಕೊನೆಯವರೆಗೂ ಸಗುಣಭಕ್ತಿಯ ವರ್ಣನೆಯನ್ನು ಮಾಡುವಾಗ ಬಹಳಮಟ್ಟಿಗೆ ಕೃಷ್ಣನ ಚರಿತ್ರೆಯನ್ನು ವರ್ಣಿಸಿರುತ್ತಾರೆ. ನಡುವೆಯಲ್ಲಿ ವೇದಾಂತವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ವಿರಕ್ತಿಯು ಉಂಟಾಗಲು ಜೀವನ ಗರ್ಭವಾಸಾದಿಗಳನ್ನು ಪ್ರಸ್ತಾಪಿಸಿ ದೇಹನಿಂದೆ, ವಿಷಯನಿಂದೆ, ಮನಸ್ಸಿನ ನಿಂದೆಗಳನ್ನು ಮಾಡಿದ ಅನಂತರ ವೈರಾಗ್ಯವಿಚಾರವನ್ನು ಉಪಸಂಹಾರಮಾಡಿದ್ದಾರೆ. ಮುಂದೆ ಆತ್ಮಸಿದ್ಧಿಯನ್ನು ತರ್ಕದ ಸರಣಿಯಿಂದ ಪ್ರಸ್ತಾಪಿಸಿರುತ್ತಾರೆ. ದೃಷ್ಟಾಂತಗಳನ್ನೂ ಕೊಟ್ಟಿರುತ್ತಾರೆ. ಮಾಯಾಸಿದ್ಧಿಯ ಸಂದರ್ಭದಲ್ಲಿಯೂ ಹೀಗೆಯೇ ಆಕ್ಷೇಪ ಪರಿಹಾರಗಳ ರೂಪವಾದ ತರ್ಕಸರಣಿಯೇ ಮುಂದುವರೆದಿದೆ. ೧೯೯ನೆಯ ಪದ್ಯದಿಂದ ಅದ್ವೈತ ಸ್ವರೂಪವನ್ನು ವರ್ಣಿಸುವಾಗ ಅನುಭವದ ಪರಾಮರ್ಶವೂ ಇದ್ದು ಕೊಂಡಿದೆ. ಆತ್ಮನು ಸ್ವಪ್ರಕಾಶಸ್ವಭಾವನೆಂಬ ಸಿದ್ಧಾಂತವೂ ಗ್ರಂಥಕಾರರಿಗೆ ಒಪ್ಪಾದ ವಿಷಯವೇ ಆಗಿದೆ (ಪು.೨೮) ೧೪೪ನೆಯ ಪದ್ಯದಿಂದ ೧೪೯ರವರೆಗೆ ನಾದಾನುಸಂಧಾನ, ಚಿತ್ತಲಯವೇ ಮುಂತಾದ ವಿಷಯಗಳ ಪ್ರಸ್ತಾಪವಿದೆ. ಅನಂತರ ಎರಡು ವಿಧವಾದ ಭಕ್ತಿಗಳ ವರ್ಣನೆಯಿದೆ. ಉಪಸಂಹಾರವೂ ಭಕ್ತಿಯಲ್ಲಿಯೇ ಕೊನೆಗಂಡಿರುತ್ತದೆ. ಹೀಗೆ ಭಕ್ತಿ ಹಾಗೂ ಯೋಗದರ್ಶನಗಳಿಂದ ಮಿಶ್ರವಾದ ವೇದಾಂತಸಿದ್ಧಾಂತವು ಈ ಪ್ರಕರಣ ದಲ್ಲಿ ನಿರೂಪಿಸಲ್ಪಟ್ಟಿದೆ. ಆದ್ದರಿಂದ ಸುಪ್ರಸಿದ್ಧ ಭಾಷ್ಯಕಾರರಾದ ಶ್ರೀಶಂಕರಭಗವತ್ಪಾದರ ಕೃತಿಯೇ ಇದಾಗಿರಬಹುದೆ? ಎಂಬುದನ್ನು ವಿದ್ವಾಂಸರು ವಿಮರ್ಶಿಸ ಬೇಕಾಗಿದೆ.

ಆಚಾರ್ಯರ ಕಾಲದಿಂದ ಈಚೆಗೆ ರಚಿತವಾದ ಅನೇಕ ವೇದಾಂತಪ್ರಕರಣಗಳು ಇದರಂತೆಯೇ ದರ್ಶನಾಂತರಗಳ ಸಂಮಿಶ್ರಣದಿಂದಲೂ ತರ್ಕಸರಣಿಯಿಂದಲೂ

ಕೂಡಿದ್ದು ಈಗಿನ ಕಾಲಕ್ಕೆ ಅವೇ ಹೆಚ್ಚಿನ ಬಳಕೆಯಲ್ಲಿದ್ದು ಮೂಲವಾದ ಪ್ರಸ್ಥಾನತ್ರಯ ಭಾಷ್ಯಗಳು ಪ್ರಚಾರದಲ್ಲಿ ಹಿಂದಕ್ಕೆ ಬಿದ್ದಿವೆ. ನಮ್ಮ ಪೂಜ್ಯ ಶ್ರೀಗಳವರು ಪ್ರಧಾನವಾಗಿ ಪ್ರಸ್ಥಾನತ್ರಯಭಾಷ್ಯಗಳ ಪ್ರಕಟನೆ, ಪ್ರವಚನಾದಿಗಳ ಮೂಲಕ ಪರಿಶುದ್ಧವಾದ ಶಂಕರ ಸಿದ್ಧಾಂತದ ಪ್ರಚಾರಕಾರ್ಯವನ್ನು ಕೈಗೊಂಡು ಅದಕ್ಕಾಗಿಯೇ ತಮ್ಮ ಜೀವನವನ್ನು ಮೀಸಲಾಗಿರಿಸಿದ್ದರು. ಆದ್ದರಿಂದ ವಾಚಕರು ಭಾಷ್ಯಗ್ರಂಥಗಳಿಗೂ ಪ್ರಕರಣಗ್ರಂಥಗಳಿಗೂ ವಿಷಯಪ್ರತಿಪಾದನೆಯಲ್ಲಿ ಇರುವ ತಾರತಮ್ಯವನ್ನು ಮನಗಂಡು ಭಾಷ್ಯವಿರೋಧಿಯಲ್ಲದ ಅಂಶಗಳನ್ನು ಎಲ್ಲಾ ಪ್ರಕರಣಗಳಿಂದಲೂ ಸ್ವೀಕರಿಸಬಹುದೆಂತ ಕೋರಲಾಗಿದೆ.

ವಾಚಕರು ಈ ಪ್ರಕರಣವನ್ನು ಒಮ್ಮೆ ವ್ಯಾಸಂಗಮಾಡುವದರಲ್ಲಿ ಲಾಭವಿದೆ. ಗ್ರಂಥಕಾರರು ತಮ್ಮ ಮೆಚ್ಚಿನ ದೈವವಾದ ಶ್ರೀಕೃಷ್ಣನನ್ನು ಬಹಳ ಚೆನ್ನಾಗಿ ಇಲ್ಲಿ ಸ್ತುತಿಸಿರುತ್ತಾರೆ. ಕೃಷ್ಣನೆಂದರೆ ಅದ್ವಿತೀಯಪರಬ್ರಹ್ಮವೇ ಎಂಬಿದು ಗ್ರಂಥಕಾರರ ಹೃದಯವೆಂತ ತಿಳಿದುಬರುತ್ತದೆ. ಅನನ್ಯಭಕ್ತಿಯೇ ಜ್ಞಾನವೆಂಬುದನ್ನು ಇಲ್ಲಿ ಪ್ರತಿಪಾದಿಸಲಾಗಿದೆ. ಭಕ್ತಿ - ಜ್ಞಾನಗಳೆರಡೂ ಒಂದೇ- ಎಂಬಿದನ್ನು ಶಂಕರವೇದಾಂತದ ಪ್ರಕಾರವೂ ಸಮನ್ವಯಗೊಳಿಸಬಹುದಾದರೂ 'ಜ್ಞಾನವೊಂದೇ ಮುಕ್ತಿಗೆ ಸಾಧನ'ವೆಂಬ ವೇದಪ್ರಮಾಣದಂತೆ ಶಂಕರಾಚಾರ್ಯರು ಪ್ರತಿಪಾದಿಸಿರುವ ಅನುಭವಪರ್ಯಂತವಾದ ಜ್ಞಾನವು ಒಂದರ್ಥದಲ್ಲಿ ಭಕ್ತಿಗಿಂತ ಹೆಚ್ಚಿನದಾಗಿರುತ್ತದೆ. ಆದರೂ ಜ್ಞಾನಿಯನ್ನೂ ಭಕ್ತನೆಂದೇ ಗೀತೆಯಲ್ಲಿ ಸಂಬೋಧಿಸಿದೆ. ಇದು ಭಕ್ತನಿಗೂ ಭಗವಂತನಿಗೂ ತಾದಾತ್ಮ್ಯಭಾವದಿಂದ ಹೇಳಿದ ಮಾತು. ಹೀಗೆ ಫಲದಲ್ಲಿ 'ಏಕಮೇವಾದ್ವಿತೀಯವಾದ ಪರಬ್ರಹ್ಮವೊಂದೇ ಎಲ್ಲವೂ ಆಗಿದೆ, ಅದೇ ತಾನು' ಎಂಬ ಅನುಭವವು ಯಾವನಿಗೆ ಉಂಟಾಗಿರುವದೋ ಅವನನ್ನು ಭಕ್ತನೆಂದರೂ ಜ್ಞಾನಿಯೆಂದರೂ ಏನೂ ಹೆಚ್ಚುಕಡಿಮೆಯಾಗುವದಿಲ್ಲ. ಅಂತೂ ಜ್ಞಾನಭಕ್ತಿಗಳ ತಿರುಳನ್ನು ಬೋಧಿಸುವ ಈ ಪ್ರಕರಣವು ಜಿಜ್ಞಾಸುಗಳಿಗೆ ಗ್ರಾಹ್ಯವಾಗಿದೆ.

## ೨. ಪ್ರಶ್ನೋತ್ತರರತ್ನಮಾಲಿಕಾ

ಅರವತ್ತೇಳು ಆರ್ಯಾವೃತ್ತದ ಸರಳವಾದ ಹಾಗೂ ಸುಂದರವಾದ ಪದ್ಯಗಳಿಂದ ಪ್ರಶ್ನೋತ್ತರರೂಪದಲ್ಲಿ ತತ್ತ್ವವನ್ನೂ ನೀತಿಯನ್ನೂ ಬೋಧಿಸುತ್ತಿರುವ ಈ ಚಿಕ್ಕಗ್ರಂಥವು ಸರ್ವರಿಗೂ ಗ್ರಾಹ್ಯವಾಗಿದೆ. 'ಭಜಗೋವಿಂದಸ್ತೋತ್ರ'ದಂತೆಯೇ ಮುದ್ದಾದ ಭಾಷೆಯಿಂದ ಕಾವ್ಯಸರಣಿಯಲ್ಲಿ ಹಿತೋಪದೇಶವನ್ನು ಮಾಡಿರುವ ಈ ಗ್ರಂಥದಲ್ಲಿ ಯಾವದೊಂದೂ ಭಾಷ್ಯವಿರೋಧಿಪ್ರಕ್ರಿಯೆಗಳ ಪ್ರಸ್ತಾಪವಿಲ್ಲದಿರುವದರಿಂದ ಶ್ರೀಶಂಕರಾಚಾರ್ಯರ ಕೃತಿಯೆಂದು ಕರೆದರೂ ತಪ್ಪಾಗಲಾರದು. ೧೧ನೆಯ ಪದ್ಯದಲ್ಲಿ ''ನಲಿನೀದಲಗತಜಲವತ್ತರಲಂ'' ಎಂಬ ಪ್ರಯೋಗವಿದ್ದು ಇದೇ ಪದವೃಂದವು ಭಜಗೋವಿಂದಸ್ತೋತ್ರದ ೧೦ನೆಯ ಪದ್ಯದಲ್ಲಿಯೂ ಇರುವದರಿಂದ ಇವೆರಡು ಕೃತಿಗಳ

ಕರ್ತೃವೂ ಒಬ್ಬರೇ ಆಗಿರಬಹುದೆಂದು ಊಹಿಸುವದಕ್ಕೆ ಅವಕಾಶವಿದೆ. ದಯೆ, ದಾನ, ಧರ್ಮ ಪರೋಪಕಾರಾದಿಸದ್ಗುಣಗಳು ಮಾನವನಿಗೆ ಅಗತ್ಯವೆಂಬುದನ್ನು ಇಲ್ಲಿ ಒತ್ತಿ ಹೇಳಿದೆ. ಸಂಸಾರದ ಅಸಾರತೆ, ಸಂನ್ಯಾಸದ ಶ್ರೇಷ್ಠತೆ, ಮುಕ್ತಿಯು ದುರ್ಲಭವೆಂಬ ವಿಚಾರ, ಸತ್ಸಹವಾಸದ ಹೆಚ್ಚುಗಾರಿಕೆ ಮುಂತಾದ ವಿಷಯಗಳ ಪ್ರಸ್ತಾಪವಿದೆ. 'ಚತುರ್ಭದ್ರ' ವೆಂಬ ಹೆಸರಿನಿಂದ ದಾನ, ಜ್ಞಾನ, ಶೌರ್ಯ, ಐಶ್ವರ್ಯಗಳನ್ನು ಚಮತ್ಕಾರ ವಾಗಿ ವರ್ಣಿಸಿರುವದು ಮನಸೆಳೆಯುವಂತಿದೆ. ಕುಂಟನಾರು? ಎಂಬಂಥ ಪ್ರಶ್ನೆಗಳಿಗೆ ಅನ್ಯೋಕ್ತಿಗಳ ಮೂಲಕ ಉತ್ತರಕೊಟ್ಟಿರುವದು ಸ್ವಾರಸ್ಯಕರವಾಗಿದೆ. ಭಗವದ್ಗೀತೆಯ ೨-೩೪ನೆಯ ಪದ್ಯವನ್ನು ಇಲ್ಲಿ ೪೪ನೆಯ ಪದ್ಯದಲ್ಲಿ ಪರಾಮರ್ಶಿಸಿದೆ. ಹೀಗೆ ಈ ಕೃತಿಯು ನಿಜವಾಗಿಯೂ ಕಂಠಪಾಠಮಾಡಲು ಯೋಗ್ಯವಾಗಿದ್ದು ವಿದ್ಯಾರ್ಥಿಗಳಿಗೆ ಕಾಮಧೇನುವಿ ನಂತಿದೆ. ಇಂಥ ಕೃತಿಗಳಿಂದ ಕೇಲವೇ ಪದ್ಯಗಳನ್ನಾದರೂ ಆರಿಸಿ ವಿದ್ಯಾಭ್ಯಾಸಇಲಾಖೆ ಯವರು ಮಿಡಲ್ ಹಾಗೂ ಹೈಸ್ಕೂಲ್ ಪಠ್ಯಪುಸ್ತಕಗಳಲ್ಲಿ ಜೋಡಿಸಿದರೆ ನಮ್ಮ ಸಂಸ್ಕೃತಿಯ ಪರಿಚಯವನ್ನು ಸೂಕ್ಷ್ಮವಾಗಿಯಾದರೂ ವಿದ್ಯಾರ್ಥಿಗಳಿಗೆ ಮಾಡಿಕೊಡಲು ಅವಕಾಶ ವಾದೀತು. ಅಂತೂ ವೇದಾಂತವನ್ನು ಓದದೆ ಉಳಿದ ಶಾಸ್ತ್ರಗಳನ್ನು ಅಧ್ಯಯನಮಾಡಿ ರುವ 'ಬಾಲಕ'ರೆಲ್ಲರಿಗೂ ಈ ರತ್ನಮಾಲಿಕೆಯ ಭೂಷಣಪ್ರಾಯವಾಗಿರುವದೆಂಬುದರಲ್ಲಿ ಸಂಶಯವಿಲ್ಲ.

## ೩. ಶ್ರೀರಾಮಭುಜಂಗಪ್ರಯಾತಸ್ತೋತ್ರ

ಇದು ಶ್ರೀಶಂಕರಾಚಾರ್ಯವಿರಚಿತಸ್ತೋತ್ರಮಾಲೆಗಳಲ್ಲಿ ಸೇರಿದ್ದು ವಾಣೀ ವಿಲಾಸಗ್ರಂಥಾವಳಿಯಲ್ಲಿ ಪ್ರಕಾಶಿತವಾಗಿದೆ. ಶ್ರೀರಾಮನನ್ನು ಸಚ್ಚಿದಾನಂದಪರಬ್ರಹ್ಮ ನೆಂದೇ ತಿಳಿಸಿ ನಾನಾರೂಪವಾದ ವಾಕ್ಕುಗಳಿಂದ ಇಲ್ಲಿ ಸ್ತುತಿಸಲಾಗಿದೆ. ಪದ್ಯಗಳೇನೂ ಅಷ್ಟೊಂದು ಗಂಭೀರವಾಗಿಯೂ ಸಾಹಿತ್ಯಪುಷ್ಟವಾಗಿಯೂ ಇಲ್ಲ. ಸಾಧಾರಣಮಟ್ಟದ ರಚನೆಯಾಗಿದೆ. ಭಕ್ತಿಯ ಭಾಷೆಯಲ್ಲಿ ಮುಂದಿಡಲಾಗಿದೆಯಾದ್ದರಿಂದ ಜನಸಾಮಾನ್ಯರಿಗೆ ಮೆಚ್ಚಾಗುವದರಲ್ಲಿ ಸಂಶಯವಿಲ್ಲ. ಶ್ರೀ ರಾಮನಿಗಿಂತ ಮಿಗಿಲಾದ ದೇವರಿಲ್ಲ - ಎಂಬ ಉತ್ಕರ್ಷವಚನರೂಪವಾದ ಅಭಿಪ್ರಾಯವು ೨೩ರಿಂದ ಮೂರು ಪದ್ಯಗಳಲ್ಲಿ ಪ್ರಸ್ತುತ ವಾಗಿದೆ. ರಾಮಭಕ್ತರಿಗೆ ಪ್ರಿಯವಾಗಿರುವ ಈ ಸ್ತೋತ್ರವು ಗ್ರಾಹ್ಯವಾಗಿದೆ- ಎಂಬಿದರಲ್ಲಿ ಸಂಶಯವಿಲ್ಲ. ಭುಜಂಗಪ್ರಯಾತವೃತ್ತವೂ ಪಠನಕ್ಕೆ ಅನುಕೂಲವಾಗಿದೆ.

## ೪. ದತ್ತಲಹರೀಸ್ತೋತ್ರ

'ದಲಾದನಮುನಿವಿರಚಿತ'ವೆಂದು ಪ್ರಸಿದ್ಧವಾಗಿರುವ ಈ ಸ್ತೋತ್ರವು ಬೊಂಬಾಯಿನ 'ನಿರ್ಣಯಸಾಗರಮುದ್ರಣಾಲಯ' ದಿಂದ ಪ್ರಕಾಶಿತವಾಗಿರುವ ''ಬೃಹತ್

ಸ್ತೋತ್ರರತ್ನಾಕರ''ದಲ್ಲಿದೆ. ಈ ಸ್ತೋತ್ರವು ಎಲ್ಲಿಯೂ ಹೆಚ್ಚು ಪ್ರಸಿದ್ಧವಾಗಿರುವಂತೆ ಕಾಣಲಿಲ್ಲ. ಪ್ರಾರಂಭದಲ್ಲಿ ವೇದಾಂತವಿಚಾರಗಳಿಂದ ಕೂಡಿರುವ ಈ ಸ್ತೋತ್ರವು ಮನನಕ್ಕೆ ಚೆನ್ನಾಗಿದೆಯೆಂತ ಆಕರ್ಷಿತನಾದ ನಾನು ಅನುವಾದಮಾಡಲು ಒಳಹೊಕ್ಕಾಗ ಇದರಲ್ಲಿ ಅಡಗಿರುವ ಮಂತ್ರ-ತಂತ್ರ ಶಾಸ್ತ್ರಗಳ ಅನೇಕಪ್ರಕ್ರಿಯೆಗಳು ಗೋಚರವಾದವು. ಆ ಶಾಸ್ತ್ರಗಳಲ್ಲಿ ನಾನು ಅಭಿಜ್ಞನಲ್ಲವಾದ್ದರಿಂದ ಅನುವಾದಮಾಡುವದು ಕಷ್ಟವೇ ಆಯಿತು. ಜೊತೆಗೆ ಶ್ಲೋಕಗಳ ಕ್ಲಿಷ್ಟಾನ್ವಯ, ನಿಗೂಢವಾದ ತಾತ್ಪರ್ಯ- ಮುಂತಾದ ಕಾರಣಗಳಿಂದ ಶ್ಲೋಕಗಳ ಅಭಿಪ್ರಾಯವನ್ನು ಪೂರ್ಣವಾಗಿ ಅರಿತು ಭಾವಾರ್ಥವನ್ನು ವಿವರಿಸಲು ನನಗೆ ಸಾಧ್ಯವಾಗಲಿಲ್ಲ. ಆದ್ದರಿಂದ ನನಗೆ ಹೊಳೆದಮಟ್ಟಿಗೆ ಅರ್ಥವನ್ನು ಹೊಂದಿಸಿಕೊಂಡು, ಕೆಲವುಕಡೆ ಕೇವಲ ಅಕ್ಷರಾನುವಾದವನ್ನು ಮಾಡಿ ಈ ಕಾರ್ಯವನ್ನು ಪೂರ್ಣಗೊಳಿಸಿದ್ದೇನೆ. ೩೭, ೭೮ನೆಯ ಶ್ಲೋಕಗಳ ಅಭಿಪ್ರಾಯವು ತಿಳಿಯದ್ದರಿಂದ ಕೈಬಿಟ್ಟಿರುತ್ತೇನೆ. ಆದರೂ ಈ ಸ್ತೋತ್ರವು ಒಮ್ಮೆ ಹೊರಬಂದರೆ ವಿದ್ವಾಂಸರ ಕಣ್ಣಿಗೆಬಿದ್ದು ಹೆಚ್ಚಿನ ವಿವರಣೆಗಳಿಂದ ಕೂಡಿ ಪ್ರಚಾರವಾಗಬಹುದೆಂತ ಭಾವಿಸಿ ಪ್ರಕಟಿಸಲಾಗಿದೆ. ಮೂಲಗ್ರಂಥದ ಶೋಧನೆಯೂ ಇಲ್ಲಿ ಅಗತ್ಯವಾಗಿದೆ. ನನಗೆ ಬೇರೆಬೇರೆಯ ಮುದ್ರಿತ ಪ್ರತಿಗಳು ದೊರಕಲಿಲ್ಲವಾದ್ದರಿಂದ ಅದು ಸಾಧ್ಯವಾಗಿಲ್ಲ.

ಹೀಗಿದ್ದರೂ ಈ ಸ್ತೋತ್ರವು ದತ್ತಭಕ್ತರಿಗೂ ಉಪಾಸಕರಿಗೂ ಅನರ್ಘವಾದುದಾಗಿದ್ದು ಅನೇಕ ರಹಸ್ಯವಿಚಾರಗಳನ್ನು ಒಳಗೊಂಡಿದೆ. ಶ್ರೀದತ್ತಾತ್ರೇಯರ ಮಹಿಮೆ, ಧ್ಯಾನಕ್ರಮ, ಧ್ಯೇಯಮೂರ್ತಿಯ ಸ್ವರೂಪ, ದತ್ತಮೂರ್ತಿಯ ಪ್ರತ್ಯೇಕವಾದ ಅವಯವಗಳ ವರ್ಣನೆ, ಮಂತ್ರಸ್ವರೂಪ, ಅದರ ಅನುಷ್ಠಾನದ ಕ್ರಮ, ಸಿದ್ಧಿಗಳ ವಿವರ - ಹೀಗೆ ಈ ಸ್ತೋತ್ರದಲ್ಲಿ ಉಪಾಸಕರಿಗೆ ಬೇಕಾದ ಅನೇಕವಿಚಾರಗಳು ಅಡಗಿವೆ. ಆದರೆ ವೇದಾಂತವಿಚಾರಗಳು ಹೆಚ್ಚಾಗಿ ಇರುವದಿಲ್ಲ. ಶ್ರೀ ಶಂಕರಾಚಾರ್ಯರು ತಂತ್ರಶಾಸ್ತ್ರದ ಕೆಲವು ವಿಷಯಗಳನ್ನು ಖಂಡಿಸಿ ಮತ್ತೆ ಕೆಲವು ವಿಚಾರಗಳನ್ನು ಸ್ವೀಕರಿಸಿದ್ದಾರೆಂದು ವಿದ್ವಾಂಸರ ಆಭಿಪ್ರಾಯವಿದೆ. ನಮ್ಮ ದೇಶದಲ್ಲಿ ಹುಟ್ಟಿರುವ ಎಲ್ಲಾ ದರ್ಶನಗಳೂ ಶಾಸ್ತ್ರಗಳೂ ವೇದಾಂತದೊಡನೆ ಬೆರೆತು ವೇದಾಂತಸಿದ್ಧಾಂತವು ನಾನಾ ಮುಖಗಳನ್ನು ಹೇಗೆ ಹೊಂದಿರುತ್ತದೆಯೆಂಬುದಕ್ಕೆ ಈ ಕೃತಿಯೂ ಒಂದು ಉದಾಹರಣೆಯಾಗಿದೆ. ಆದ್ದರಿಂದ ಜಿಜ್ಞಾಸುಗಳು ಹೆಚ್ಚಿನ ಶೋಧನೆಗೆ ಹೋಗದೆ ಗ್ರಾಹ್ಯವಾದ ವಿಷಯಗಳನ್ನು ಸ್ವೀಕರಿಸಿ ಉಪಾಸನಾಮಾರ್ಗದಿಂದ ಜ್ಞಾನಕ್ಕೆ ಅಣಿಯಾಗುವಷ್ಟು ಮಟ್ಟಿಗೆ ಈ ಸ್ತೋತ್ರವನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಹೆಚ್ಚಿನ ವಿಮರ್ಶೆಯನ್ನು ವಿದ್ವಾಂಸರಿಗೇ ಒಪ್ಪಿಸಿದ್ದೇನೆ.

ಇತಿ-

ತಾ||15-6-78

ಸಜ್ಜನವಿಧೇಯ

**ಅನುವಾದಕ.**

# ವಿಷಯಾನುಕ್ರಮಣಿಕೆ

(ಕಂಸದಲ್ಲಿರುವ ಸಂಖ್ಯೆಗಳು ಪುಟಗಳನ್ನು ಸೂಚಿಸುವವು)


## ೧. ಪ್ರಬೋಧಸುಧಾಕರ

ಮಂಗಲ (೧) ಭಗವಂತನು ಮಾತುಗಳಿಗೆ ಅಗೋಚರನು (೧) ವಿರಕ್ತನೇ ಮುಕ್ತಿಗೆ ಅಧಿಕಾರಿ (೧) ಜೀವನಗರ್ಭವಾಸ, ಸಂಸಾರದುಃಖ (೨) ದೇಹದ ನಿಂದೆ (೪) ವಿಷಯಗಳ ನಿಂದೆ (೬) ಮನಸ್ಸಿನ ನಿಂದೆ (೧೦) ವಿಷಯಗಳನ್ನು ಗೆಲ್ಲುವಿಕೆ (೧೧) ಮನೋನಿಗ್ರಹ (೧೩) ವೈರಾಗ್ಯ (೧೫) ಆತ್ಮಸಿದ್ಧಿ (೧೭) ಮಾಯಾಸಿದ್ಧಿ (೨೦) ಲಿಂಗದೇಹಾದಿಗಳ ನಿರೂಪಣೆ (೨೨)ಅದ್ವೈತಸ್ವರೂಪ (೨೪) ಕರ್ತೃತ್ವಭೋಕ್ತೃತ್ವಗಳು (೨೭) ಸ್ವಪ್ರಕಾಶ ಸ್ವಭಾವ (೨೮) ನಾದಾನುಸಂಧಾನ (೨೯) ಮನೋಲಯ (೩೦) ಪ್ರಬೋಧಸ್ವರೂಪ (೩೧) ಎರಡುವಿಧವಾದ ಭಕ್ತಿಗಳು (೩೩) ಧ್ಯಾನವಿಧಿ (೩೬) ಸಗುಣನಿರ್ಗುಣಗಳ ಐಕ್ಯ (೩೭) ಭಕ್ತರಿಗೆ ಅನುಗ್ರಹ (೪೩).

ಪುಟಗಳು ೧-೫೦

೨. ಪ್ರಶ್ನೋತ್ತರರತ್ನಮಾಲಿಕಾ — ಪುಟಗಳು ೫೧-೬೩

೩. ಶ್ರೀರಾಮಭುಜಂಗಪ್ರಯಾತಸ್ತೋತ್ರಮ್ — ಪುಟಗಳು ೬೪-೭೧

೪. ಶ್ರೀದತ್ತಲಹರೀಸ್ತೋತ್ರಮ್ — ಪುಟಗಳು ೭೨-೧೦೩

|| ಓಮ್ ||

# ಪ್ರಬೋಧಸುಧಾಕರ

## ಮಂಗಲ

**ನಿತ್ಯಾನನ್ದೈಕರಸಂ ಸಚ್ಚಿನ್ಮಾತ್ರಂ ಸ್ವಯಂಜ್ಯೋತಿಃ ।**
**ಪುರುಷೋತ್ತಮಮಜಮೀಶಂ ವನ್ದೇ ಶ್ರೀ ಯಾದವಾಧೀಶಮ್**[1] **॥೧॥**

೧. ನಿತ್ಯಾನಂದಸ್ವರೂಪನೂ ಏಕರಸನೂ ಸತ್ತು, ಚಿತ್ತುಗಳೇ ಆಗಿರುವವನೂ ಸ್ವಯಂಪ್ರಕಾಶನೂ ಜನ್ಮರಹಿತನೂ ಪುರುಷೋತ್ತಮನೂ ಪ್ರಭುವೂ ಆದ ಶ್ರೀಯಾದವಾಧೀಶನಾದ (ಕೃಷ್ಣಭಗವಂತನನ್ನು) ನಮಸ್ಕರಿಸುತ್ತೇನೆ.

## ಭಗವಂತನು ಮಾತುಗಳಿಗೆ ಅಗೋಚರನು

**ಯಂ ವರ್ಣಯಿತುಂ ಸಾಕ್ಷಾತ್ ಶ್ರುತಿರಪಿ ಮೂಕೇವ ಮೌನಮಾಚರತಿ ।**
**ಸೋಽಸ್ಮಾಕಂ ಮನುಜಾನಾಂ ಕಿಂ ವಾಚಾಂ ಗೋಚರೋ ಭವತಿ ॥೨॥**

೨. ಯಾವನನ್ನು ನೇರಾಗಿ ವರ್ಣಿಸಲು ಹೊರಟ ಶ್ರುತಿಯುಕೂಡ ಮಾತು ಬಾರದವನಂತೆ ಮೂಕವಾಗಿ ಸುಮ್ಮನಾಗಿಬಿಡುವದೋ ಅಂಥ (ಭಗವಂತನು) ಮಾನವ ರಾದ ನಮ್ಮ ಮಾತುಗಳಿಗೆ ಗೋಚರನಾದಾನೇನು?

**ಯದ್ಯಪ್ಯೇವಂ ವಿದಿತಂ ತಥಾಪಿ ಪರಿಭಾಷಿತೋ ಭವೇದೇವ ।**
**ಅಧ್ಯಾತ್ಮ ಶಾಸ್ತ್ರಸಾರೈರ್ಹರಿಚಿನ್ತನಕೀರ್ತನಾಭ್ಯಾಸೈಃ ॥ ೩ ॥**

೩. ಹೀಗೆ (ಮಾತಗಳಿಗೆ ಗೋಚರನಲ್ಲವೆಂದು) ತಿಳಿಯಲ್ಪಟ್ಟಿದ್ದರೂ ಆಧ್ಯಾತ್ಮ ಶಾಸ್ತ್ರಗಳ ಸಾರವಾದ[2] ಹರಿಚಿಂತನ, ಕೀರ್ತನ, (ಯೋಗಾ) ಭ್ಯಾಸಾದಿಗಳಿಂದ (ಜ್ಞಾನ ಗೋಚರನೆಂದು) ಹೇಳಲ್ಪಡುವವನೇ ಆಗುವನು.

## ವಿರಕ್ತನೇ ಮುಕ್ತಿಗೆ ಅಧಿಕಾರಿ

**ಕ್ಲೃಪ್ತೈರ್ಬಹುಭಿರುಪಾಯೈರಭ್ಯಾಸಜ್ಞಾನಭಕ್ತ್ಯಾದ್ಯೈಃ ।**
**ಪುಂಸೋ ವಿನಾ ವಿರಾಗಂ ಮುಕ್ತೇರಧಿಕಾರಿತಾ ನ ಸ್ಯಾತ್ ॥ ೪ ॥**

---

1. ಈ ಗ್ರಂಥದ ಕರ್ತೃಗಳು ಶಂಕರಾಚಾರ್ಯರೆಂದು ಪ್ರಸಿದ್ಧಿ. ಇಲ್ಲಿ ಶ್ರೀಕೃಷ್ಣಸ್ತುತಿರೂಪವಾದ ಮಂಗಳವನ್ನು ಮಾಡಿ ಗ್ರಂಥಾರಂಭಮಾಡಿದೆ. ಪೀಠಿಕೆಯನ್ನು ನೋಡಿರಿ.

2. 'ಶಾಸ್ತ್ರಕಾರ್ಯೈಃ' ಎಂಬ ಪಾಠವಿದ್ದಿದ್ದರೆ ಇನ್ನೂ ಚೆನ್ನಾಗಿ ಅರ್ಥವಾಗುತ್ತಿತ್ತು.

೪. ಗೊತ್ತಾದ (ಯೋಗಾ)ಭ್ಯಾಸ, ವಿಚಾರ, ಭಕ್ತಿ ಮುಂತಾದ ಉಪಾಯಗಳಿದ್ದರೂ ಮನುಷ್ಯನಿಗೆ ವೈರಾಗ್ಯವಿಲ್ಲದೆ ಮುಕ್ತಿಗೆ ಅರ್ಹತೆಯು ಬರಲಾರದು.

**ವೈರಾಗ್ಯಮಾತ್ಮಬೋಧೋ ಭಕ್ತಿಶ್ಚೇತಿ ತ್ರಯಂ ಗದಿತಮ್ ।**
**ಮುಕ್ತೇಃ ಸಾಧನಮಾದೌ ತತ್ರ ವಿರಾಗೋ ವಿತೃಷ್ಣತಾ ಪ್ರೋಕ್ತಾ ॥ ೫ ॥**

೫. ಮುಕ್ತಿಗೆ ಸಾಧನವಾಗಿ ವೈರಾಗ್ಯ , ಆತ್ಮಬೋಧ, ಭಕ್ತಿಗಳೆಂಬ ಮೂರನ್ನು ಹೇಳಿದೆ. (ಅವುಗಳಲ್ಲಿ) ವೈರಾಗ್ಯವು ಮೊದಲನೆಯದು. ವೈರಾಗ್ಯವೆಂದರೆ ಆಸೆಗಳು ಇಲ್ಲದಿರುವಿಕೆ - ಎಂದರ್ಥ.

**ಸಾ ಚಾಹಂಮಮತಾಭ್ಯಾಂ ಪ್ರಚ್ಛನ್ನಾ ಸರ್ವದೇಹೇಷು ।**
**ತತ್ರಾಹಂತಾ ದೇಹೇ ಮಮತಾ ಭಾರ್ಯಾದಿವಿಷಯೇಷು ॥ ೬ ॥**

೬. ಆ (ವೈರಾಗ್ಯವು) ಅಹಂಕಾರಮಮಕಾರಗಳಿಂದ ಎಲ್ಲಾ ದೇಹಗಳಲ್ಲಿಯೂ ಆಡಗಿಕೊಂಡಿರುತ್ತದೆ. ಅವುಗಳಲ್ಲಿ ದೇಹವೇ ನಾನೆಂಬುದು ಅಹಂತೆಯು; ಹೆಂಡತಿಯೇ ಮುಂತಾದ ವಿಷಯಗಳಲ್ಲಿರುವ (ಅಭಿಮಾನವು ಮಮತೆಯು).

**ದೇಹಃ ಕಿಮಾತ್ಮಕೋಽಯಂ ಕಃ ಸಂಬನ್ಧೋಽಸ್ಯ ವಾ ವಿಷಯೈಃ ।**
**ಏವಂ ವಿಚಾರ್ಯಮಾಣೇಽಹಂತಾಮಮತೇ ನಿವರ್ತೇತೇ ॥ ೭ ॥**

೭. ಈ ದೇಹವು ಏತರಿಂದಾದದ್ದು? ಇದಕ್ಕೆ ವಿಷಯಗಳೊಡನೆ ಇರುವ ಸಂಬಂಧವಾದರೂ ಯಾವದು? ಹೀಗೆಂದು ವಿಚಾರಮಾಡಲಾಗಿ ಅಹಂತೆಯೂ ಮಮತೆಯೂ (ನಾನುನನ್ನದೆಂಬಿವುಗಳು) ಹೊರಟುಹೋಗುತ್ತವೆ.

## ಜೀವನ ಗರ್ಭವಾಸ, ಸಂಸಾರದುಃಖ

**ಸ್ತ್ರೀಪುಂಸೋಃ ಸಂಯೋಗಾತ್ ಸಂಪಾತೇ ಶುಕ್ರಶೋಣಿತಯೋಃ ।**
**ಪ್ರವಿಶನ್ ಜೀವಃ ಶನಕೈಃ ಸ್ವಕರ್ಮಣಾ ದೇಹಮಾದತ್ತೇ ॥ ೮ ॥**

೮. ಸ್ತ್ರೀಪುರುಷರಿಬ್ಬರೂ (ಕಾಮದಿಂದ) ಕೂಡಿದಾಗ ಶುಕ್ರಶೋಣಿತಗಳು ಬೆರೆಯಲಾಗಿ ತನ್ನ ಕರ್ಮಫಲನಿಮಿತ್ತವಾಗಿ ಜೀವನು ಪ್ರವೇಶಮಾಡಿ ಮೆಲ್ಲಮೆಲ್ಲಗೆ ಶರೀರವನ್ನು ಧರಿಸುತ್ತಾನೆ.

**ಮಾತೃಗುರೂದರದರ್ಯಾಂ ಕಫಮೂತ್ರಪುರೀಷಪೂರ್ಣಾಯಾಮ್ ।**
**ಜಠರಾಗ್ನಿಜ್ವಾಲಾಭಿಃ ನವಮಾಸಂ ಪಚ್ಯತೇ ಜನ್ತುಃ ॥ ೯ ॥**

೯. ತಾಯಿಯ ಭಾರವಾದ ಹೊಟ್ಟೆಯೆಂಬ ಕಫ, ಮೂತ್ರ, ಅಮೇಧ್ಯಗಳಿಂದ ತುಂಬಿದ ಗುಂಡಿಯಲ್ಲಿ ಜಠರಾಗ್ನಿಯ ಉರಿಗಳಿಂದ ಈ ಪ್ರಾಣಿಯು ಒಂಬತ್ತು ತಿಂಗಳುಗಳ ಕಾಲ ಬೇಯಿಸಲ್ಪಡುತ್ತಾನೆ.

**ದೈವಾತ್ ಪ್ರಸೂತಿಸಮಯೇ ಶಿಶುಸ್ತಿರಶ್ಚೀನತಾಂ ಯದಾ ಯಾತಿ ।**
**ಶಸ್ತ್ರೈರ್ವಿಖಣ್ಡ್ಯೈಷ ತದಾ ಬಹಿರಿಹ ನಿಷ್ಕಾಸ್ಯತೇಽತಿಬಲಾತ್ ॥ ೧೦ ॥**

೧೦. ಹೆರಿಗೆಯ ಕಾಲದಲ್ಲಿ ದೈವವಶದಿಂದ ಮಗುವು ಅಡ್ಡವಾಗಿ ಹೊರ ಬರಲಾರಂಭಿಸಿದರೆ ಆಗ ಅದು ಬಲಾತ್ಕಾರದಿಂದ, ಆಯುಧಗಳಿಂದ ತುಂಡು ಮಾಡಲ್ಪಟ್ಟು ಹೊರಕ್ಕೆ ಹಾಕಲ್ಪಡುವದು. [1]

**ಅಥವಾ ಯನ್ತ್ರಚ್ಛಿದ್ರಾತ್ ಯದಾ ತು ನಿಃಸಾರ್ಯತೇ ಪ್ರಬಲೈಃ ।**
**ಪ್ರಸವಸಮೀರೈಶ್ಚ ತದಾ ಯಃ ಕ್ಲೇಶಃ ಸೋಽಪ್ಯನಿರ್ವಾಚ್ಯಃ ॥೧೧ ॥**

೧೧. ಹಾಗಿಲ್ಲದೆ (ಅದೃಷ್ಟವು ಚೆನ್ನಾಗಿದ್ದು) ಹುಟ್ಟುವಾಗ ಪ್ರಬಲವಾದ ಸೂತಿಕಾವಾಯುವಿನಿಂದ ತಳ್ಳಲ್ಪಟ್ಟು (ಯೋನಿ) ಯಂತ್ರದ ದೆಸೆಯಿಂದ ಹೊರಕ್ಕೆ ಬಂದುದಾದರೆ ಆಗಲೂ ಯಾವ ದುಃಖವುಂಟಾಗುವದೋ[2] ಅದೂಕೂಡ ವರ್ಣಿಸಲ-ಸಾಧ್ಯವಾದುದು.

**ಆಧಿವ್ಯಾಧಿವಿಯೋಗಾತ್ಮೀಯವಿಪತ್ಕಲಹದೀರ್ಘದಾರಿದ್ರ್ಯೈಃ ।**
**ಜನ್ಮಾನನ್ತರಮಪಿ ಯಃ ಕ್ಲೇಶಃ ಕಿಂ ಶಕ್ಯತೇ ವಕ್ತುಮ್ ॥೧೨॥**

೧೨. ಹುಟ್ಟಿದ ಅನಂತರವೂ ಮಾನಸಿಕದುಃಖ, ಶಾರೀರಕದುಃಖ, ತನ್ನವರ ಅಗಲುವಿಕೆ, ಸಂಕಟಗಳು, ಜಗಳ, ಬಡತನ- ಮುಂತಾದವುಗಳಿಂದ ಯಾವ ಕ್ಲೇಶ ವುಂಟಾಗುವುದೋ ಅದನ್ನು ಹೇಳಲು ಸಾಧ್ಯವೆ ?

**ನರಪಶುವಿಹಂಗತಿರ್ಯಗ್ ಯೋನೀನಾಂ ಚತುರಶೀತಿಲಕ್ಷಾಣಾಮ್।**
**ಕರ್ಮನಿಬದ್ಧೋ ಜೀವಃ ಪರಿಭ್ರಮನ್ ಯಾತನಾ ಭುಙ್ಕ್ತೇ ॥೧೩॥**

೧೩. ಮನುಷ್ಯ, ಪಶು, ಪಕ್ಷಿ- ಮುಂತಾದ ಎಂಭತ್ತುನಾಲ್ಕುಲಕ್ಷಮೂಕ ಜನ್ಮಗಳ (ಸಾಲಿನಲ್ಲಿ) ಜೀವನು (ತನ್ನ) ಕರ್ಮಗಳಿಗೆ ಕಟ್ಟುಬಿದ್ದವನಾಗಿ ಸುತ್ತುತ್ತಾ ನೋವುಗಳನ್ನು ಅನುಭವಿಸುತ್ತಿರುವನು.

**ಚರಮಸ್ತತ್ರ ನೃದೇಹಃ ತತೋಽಪ್ಯಜ್ಜನ್ಮಾನ್ವಯೋತ್ಪತ್ತಿಃ ।**
**ಸ್ವಕುಲಾಚಾರವಿಚಾರಃ ಶ್ರುತಿಪ್ರಚಾರಶ್ಚ ತತ್ರಾಪಿ ॥೧೪॥**

೧೪. ಅವುಗಳಲ್ಲಿ ಮನುಷ್ಯಜನ್ಮವೇ ಕೊನೆಯದು.[3] ಅದರಲ್ಲಿಯೂ ಉತ್ತಮವಾದ ವಂಶದಲ್ಲಿ ಹುಟ್ಟುವದು, ತನ್ನ ಕುಲ, ಆಚಾರಗಳನ್ನು ವಿಚಾರಮಾಡಿ (ಅದರಂತೆ ನಡೆಯುವದು) ಅದರಲ್ಲಿಯೂ ವೇದವನ್ನು ಅನುಸರಿಸಿ ನಡೆಯುವದು- (ಇವು ದುರ್ಲಭವು.)

---

1. ತಾಯಿಯ ಜೀವಕ್ಕೆ ಅಪಾಯವೊದಗುವಂಥ ಹೆರಿಗೆಯಲ್ಲಿ ಮಗುವನ್ನೇ ಕತ್ತರಿಸಿ ತೆಗೆದುಬಿಡುವರು. 2. ಭ. ಗೀ. ೧೩-೮ರ ಸೂಚನೆ.

3. ಕೊನೆಯದು ಎಂದರೆ ತಿರ್ಯಗ್ಜನ್ಮಗಳಲ್ಲಿ ಕಡೆಯದೆಂದರ್ಥ. ಮನುಷ್ಯನಿಗಿಂತ ಮೇಲಿನ ಗಂಧರ್ವಾದಿಜನ್ಮಗಳು ಪುಣ್ಯಜನ್ಮಗಳೆಂದಭಿಪ್ರಾಯ. ಅಥವಾ ಮೋಕ್ಷವನ್ನು ಹೊಂದಲು ನೃಜನ್ಮವೇ ಶ್ರೇಷ್ಠ. ಅಲ್ಲಿ ಜ್ಞಾನವಾಗಿಬಿಟ್ಟರೆ ಮುಕ್ತನಾಗಿಬಿಡುವದರಿಂದ ಅದೇ ಕೊನೆಯದು-ಎಂದೂ ಆಗ ಬಹುದು.

**ಆತ್ಮಾನಾತ್ಮವಿವೇಕೋ ನೋ ದೇಹಸ್ಯ ಚ ವಿನಾಶಿತಾಜ್ಞಾನಮ್ ।**
**ಏವಂ ಸತಿ ಸ್ವಮಾಯುಃ ಪ್ರಾಜ್ಞೈರಪಿ ನೀಯತೇ ಮಿಥ್ಯಾ ॥೧೫॥**

೧೫. ನಮಗೆ ಆತ್ಮಾನಾತ್ಮವಿವೇಕವೂ ದೇಹವು ನಾಶವಾಗುತ್ತದೆಯೆಂಬ ತಿಳಿವಳಿಕೆಯೂ ಇಲ್ಲದಿದ್ದರೆ ವಿವೇಕಿಗಳಾಗಿದ್ದರೂ ಕೂಡ 'ವ್ಯರ್ಥವಾಗಿ ತಮ್ಮ ಆಯುಷ್ಯವನ್ನು ಕಳೆಯುತ್ತಾರೆಂದೇ (ಭಾವಿಸಬೇಕು.)

**ಆಯುಃ ಕ್ಷಣಲವಮಾತ್ರಂ ನ ಲಭ್ಯತೇ ಹೇಮಕೋಟಿಭಿಃ ಕ್ವಾಪಿ ।**
**ತಚ್ಚೇದ್ ಗಚ್ಛತಿ ಸರ್ವಂ ಮೃಷಾ ತತಃ ಕಾಽಧಿಕಾ ಹಾನಿಃ ॥೧೬॥**

೧೬. ಕೋಟಿಗಳಷ್ಟು ಚಿನ್ನದ (ನಾಣ್ಯ)ಗಳಿಂದಲೂ ಒಂದು ಕ್ಷಣದಷ್ಟು ಕೂಡ ಆಯುಷ್ಯವು ಎಲ್ಲಿಯೂ ದೊರೆಯುವದಿಲ್ಲ. ಹೀಗಿರುವಾಗ ಆಯುಷ್ಯವೆಲ್ಲವೂ ಕಳೆದೇಹೋದರೆ ಅದಕ್ಕಿಂತ ಹೆಚ್ಚಿನ ಹಾನಿಯಾದರೂ ಏನಿದ್ದೀತು ?

## ದೇಹದ ನಿಂದೆ

**ನರದೇಹಾತಿಕ್ರಮಣಾತ್ ಪ್ರಾಪ್ತೌ ಪಶ್ವಾದಿದೇಹಾನಾಮ್ ।**
**ಸ್ವತನೋರಪ್ಯಜ್ಞಾನೇ ಪರಮಾರ್ಥಸ್ಯಾತ್ರ ಕಾ ವಾರ್ತಾ ॥೧೭॥**

೧೭. ಮನುಷ್ಯದೇಹವನ್ನು (ಸಾರ್ಥಕಮಾಡಿಕೊಳ್ಳದೆ) ಮೀರಿದ್ದರಿಂದ ಪಶು ದೇಹವೇ ಮುಂತಾದವುಗಳುಂಟಾಗಲಾಗಿ (ಆ ಸ್ಥಿತಿಯಲ್ಲಿ) ತನ್ನ ಶರೀರವನ್ನೇ ತಾನು ಅರಿಯದೆ ಇರುವಷ್ಟು ಅಜ್ಞಾನ(ವಿರುವಾಗ) ಪರಮಾರ್ಥ (ವಿಚಾರದ) ಸುದ್ದಿಯಾದರೂ ಎಲ್ಲಿಯದು ?

**ಸತತಂ ಪ್ರವಾಹ್ಯಮಾನೈರ್ವೃಷಭೈರಶ್ವೈಃ ಖರೈರ್ಗಜೈರ್ಮಹಿಷೈಃ ।**
**ಹಾ ಕಷ್ಟಂ ಕ್ಷುತ್‌ಕ್ಷಾಮೈಃ ಶ್ರಾನ್ತೈರ್ನೋ ಶಕ್ಯತೇ ವಕ್ತುಮ್ ॥೧೮॥**

೧೮. ಎತ್ತುಗಳು, ಕುದುರೆಗಳು, ಕತ್ತೆಗಳು, ಆನೆಗಳು, ಕೋಣಗಳು (ಮುಂತಾದ) ಶರೀರವನ್ನು ಧರಿಸಿದಾಗ, ಯಾವಾಗಲೂ ಹೊರೆಯನ್ನು ಹೊತ್ತು ನಡೆಯುತ್ತಾ ಹಸಿವುಬಾಯಾರಿಕೆಗಳಿಂದ ಬಳಲಿದಾಗ, ಮಾತನಾಡುವದಕ್ಕೂ ಬಾರದಿರುವಾಗ (ಉಂಟಾಗುವ) ಕಷ್ಟವನ್ನು (ಅಯ್ಯೋ, ಎಷ್ಟು ಹೇಳಿದರೂ ಕಡಿಮೆಯೇ ಸರಿ.)

**ರುಧಿರತ್ರಿಧಾತುಮಜ್ಜಾಮೇದೋಮಾಂಸಾಸ್ಥಿಸಂಹತಿರ್ದೇಹಃ ।**
**ಸ ಬಹಿಸ್ತ್ವಚಾ ಪಿನದ್ಧಃ ತಸ್ಮಾನ್ನೋ ಭಕ್ಷ್ಯತೇ ಕಾಕೈಃ ॥೧೯॥**

೧೯. ರಕ್ತ, (ವಾತಪಿತ್ತಕಫಗಳೆಂಬ) ಮೂರು ಧಾತುಗಳು, ಮಜ್ಜೆ, ಕೊಬ್ಬು, ಮಾಂಸ, ಮೂಳೆ- ಇವುಗಳ ಗುಂಪಿನಿಂದಾದ ದೇಹವು ಹೊರಗಡೆಗೆ ಚರ್ಮದಿಂದ ಮುಚ್ಚಲ್ಪಟ್ಟಿರುವದು. ಆದ್ದರಿಂದ ಕಾಗೆಗಳಿಂದ ತಿನ್ನಲ್ಪಟ್ಟಿರುವದಿಲ್ಲ.

**ನಾಸಾಗ್ರಾದ್ ವದನಾದ್ವಾ ಕಫಂ ಮಲಂ ಪಾಯುತೋ ವಿಸೃಜತ್ ।**
**ಸ್ವಯಮೇವೈತಿ ಜುಗುಪ್ಸಾಂ ಅನ್ತಃ ಪ್ರಸೃತಂ ಚ ನೋ ವೇತ್ತಿ ॥ ೨೦ ॥**

೨೦. ಮೂಗಿನ ತುದಿಯಿಂದಾಗಲಿ, ಬಾಯಿಯಿಂದಾಗಲಿ ಕಫವನ್ನೂ ಪಾಯುವಿನಿಂದ ಮಲವನ್ನೂ ಬಿಡುತ್ತಾಇರುವಾಗ ತನಗೇ ಅಸಹ್ಯವುಂಟಾಗುವದು. ಆದರೆ ಅದೇ (ಮಲವು) ಒಳಗೆ ಇದ್ದುಕೊಂಡಿರುವಾಗ (ಹೊಲಸೆಂದು) ಅರಿತಿರುವದಿಲ್ಲ.

**ಪಥಿ ಪತಿತಮಸ್ಥಿ ದೃಷ್ಟ್ವಾ ಸ್ಪರ್ಶಭಯಾದನ್ಯ ಮಾರ್ಗತೋ ಯಾತಿ।**
**ನೋ ಪಶ್ಯತಿ ನಿಜದೇಹಂ ಚಾಸ್ಥಿಸಹಸ್ರಾವೃತಂ ಪರಿತಃ ॥ ೨೧ ॥**

೨೧. ದಾರಿಯಲ್ಲಿ ಬಿದ್ದಿರುವ ಎಲುಬಿನ (ಚೂರನ್ನು) ನೋಡಿ ಮುಟ್ಟಿದರೆ (ಮೈಲಿಗೆ) ಯಾದೀತೆಂಬ ಭಯದಿಂದ ಬೇರೊಂದು ದಾರಿಯಿಂದ (ಮನುಷ್ಯನು) ಹೋಗುತ್ತಾನೆ. ಆದರೆ ತನ್ನ ದೇಹವೇ ಸುತ್ತಲೂ ಸಾವಿರಾರು ಎಲುಬುಗಳಿಂದ ತುಂಬಿರುವದೆಂಬುದನ್ನು ಕಂಡುಕೊಳ್ಳುವದಿಲ್ಲ.

**ಕೇಶಾವಧಿ ನಖರಾಗ್ರಾದಿದಮನ್ತಃ ಪೂತಿಗನ್ಧಸಂಪೂರ್ಣಮ್ ।**
**ಬಹಿರಪಿ ಚಾಗರುಚನ್ದನಕರ್ಪೂರಾದ್ಯೈರ್ವಿಲೇಪಯತಿ ॥ ೨೨ ॥**

೨೨. ಕೂದಲಿನಿಂದ ಹಿಡಿದು ಉಗುರು ತುದಿಯವರೆಗೂ ಈ (ಶರೀರವು) ಒಳಗಡೆ ದುರ್ವಾಸನೆಯಿಂದ ತುಂಬಿರುವದು. ಹೊರಗಡೆಯಾದದೋ (ಮನುಷ್ಯನು) ಆಗರು, ಚಂದನ, ಕರ್ಪೂರ- ಮುಂತಾದ (ಸುಗಂಧದ್ರವ್ಯಗಳಿಂದ) ಬಳಿದಿರುವನು.

**ಯತ್ನಾದಸ್ಯ ಪಿಧತ್ತೇ ಸ್ವಾಭಾವಿಕದೋಷಸಙ್ಘಾತಮ್ ।**
**ಔಪಾಧಿಕಗುಣನಿವಹಂ ಪ್ರಕಾಶಯನ್ ಶ್ಲಾಘತೇ ಮೂಢಃ ॥ ೨೩ ॥**

೨೩. (ಈ ಶರೀರದ) ಸ್ವಾಭಾವಿಕವಾದ ದೋಷಗಳ ಸಮೂಹವನ್ನು ಪ್ರಯತ್ನಪೂರ್ವಕವಾಗಿ ಮೂಢನಾದ (ಮನುಷ್ಯನು) ಮುಚ್ಚಿಡುತ್ತಾನೆ. ಮತ್ತು ಉಪಾಧಿಯಿಂದ ತೋರುವ ಗುಣಗಳ ಸಮೂಹವನ್ನು ಹೊರಪಡಿಸುತ್ತಾ ಹೋಗುತ್ತಾನೆ.

**ಕ್ಷತಮುತ್ಪನ್ನಂ ದೇಹೇ ಯದಿ ನ ಪ್ರಕ್ಷಾಲ್ಯತೇ ತ್ರಿದಿನಮ್ ।**
**ತತ್ರೋತ್ಪತನ್ತಿ ಬಹವಃ ಕ್ರಿಮಯೋ ದುರ್ಗನ್ಧಸಂಕೀರ್ಣಾಃ ॥ ೨೪ ॥**

೨೪. ಶರೀರದಲ್ಲಿ ಉಂಟಾದ ಗಾಯವನ್ನು ಒಂದುವೇಳೆ ಮೂರುದಿನಗಳ ಕಾಲ ತೊಳೆಯದೆ ಇದ್ದರೆ ಅದರಲ್ಲಿ ಕೆಟ್ಟ ವಾಸನೆಯಿಂದ ಕೂಡಿದ ಅನೇಕ ಕ್ರಿಮಿಗಳು ಹುಟ್ಟಿಕೊಳ್ಳುವವು.

**ಯೋ ದೇಹಃ ಸುಪ್ತೋಽಭೂತ್ ಸುಪುಷ್ಪಶಯ್ಯೋಪಶೋಭಿತೇ ತಲ್ಪೇ**
**ಸಂಪ್ರತಿ ಸ ರಜ್ಜುಕಾಷ್ಠೈಃ ನಿಯನ್ತ್ರಿತಃ ಕ್ಷಿಪ್ಯತೇ ವಹ್ನೌ ॥ ೨೫ ॥**

೨೫. ಯಾವ ದೇಹವು ಮೊದಲು ಒಳ್ಳೆಯ ಹೂಗಳಿಂದ ಅಲಂಕೃತವಾದ ಹಾಸಿಗೆಯಲ್ಲಿ ಮಲಗಿತ್ತೋ, ಈಗ ಅದು ಹಗ್ಗ - ಬಿದಿರುಗಳಿಂದ ಬಿಗಿಯಲ್ಪಟ್ಟು ಬೆಂಕಿಯಲ್ಲಿ ಹಾಕಲ್ಪಡುತ್ತದೆ.

**ಸಿಂಹಾಸನೋಪವಿಷ್ಟಂ ದೃಷ್ಟ್ವಾ ಯಂ ಮುದಮವಾಪ ಲೋಕೋಽಯಮ್ ।**
**ತಂ ಕಾಲಾಕೃಷ್ಟತನುಂ ವಿಲೋಕ್ಯ ನೇತ್ರೇ ನಿಮೀಲಯತಿ ॥ ೨೬ ॥**

೨೬. ಸಿಂಹಾಸನದಲ್ಲಿ ಕುಳಿತಿದ್ದ ಯಾವ (ರಾಜನನ್ನು) ನೋಡಿ ಈ ಜನವು ಸಂತೋಷಗೊಂಡಿತ್ತೋ, ಯಮನಿಂದ ಎಳೆಯಲ್ಪಟ್ಟ ಶರೀರವುಳ್ಳ ಅವನನ್ನು ನೋಡಿ (ಜನರು) ಎರಡು ಕಣ್ಣುಗಳನ್ನೂ ಮುಚ್ಚಿಕೊಳ್ಳುತ್ತಾರೆ.

**ಏವಂವಿಧೋಽತಿಮಲಿನೋ ದೇಹೋ ಯತ್ಸತ್ತಯಾ ಚಲತಿ ।**
**ತಂ ವಿಸ್ಮೃತ್ಯ ಪರೇಶಂ ವಹತ್ಯಹನ್ತಾಮನಿತ್ಯೇಽಸ್ಮಿನ್ ॥ ೨೭ ॥**

೨೭. ಈ ರೀತಿಯಾಗಿರುವ ತೀರ ಕೊಳಕಾಗಿರುವ (ಈ) ದೇಹವು ಯಾವ (ಭಗವಂತನ) ಇರವಿನಿಂದ ಚಲಿಸುತ್ತದೆಯೋ ಆ ಪರೇಶನನ್ನು ಮರೆತು ಅನಿತ್ಯವಾದ ಈ (ದೇಹದಲ್ಲಿ) 'ನಾನು' ಎಂದು (ಅಹಂಕಾರವನ್ನು ಹೊಂದುತ್ತಾನೆ.)

**ಕ್ವಾತ್ಮಾ ಸಚ್ಚಿದ್ರೂಪಃ ಕ್ವ ಮಾಂಸರುಧಿರಾಸ್ಥಿನಿರ್ಮಿತೋ ದೇಹಃ ।**
**ಇತಿ ಯೋ ಲಜ್ಜತಿ ಧೀಮಾನ್ ಇತರಶರೀರಂ ಸ ಕಿಂ ಮನುತೇ ॥ ೨೮ ॥**

೨೮. ಸತ್ತೂ ಚಿತ್ತೂ ಆಗಿರುವ ಸ್ವರೂಪವುಳ್ಳ ಆತ್ಮನೆಲ್ಲಿ ? ಮಾಂಸ, ರಕ್ತ, ಎಲುಬುಗಳಿಂದಾಗಿರುವ ದೇಹವೆಲ್ಲಿ ? ಹೀಗೆಂದು ಯಾವ ಬುದ್ಧಿವಂತನು ನಾಚಿಕೆಗೊಳ್ಳುವನೋ ಅವನು ಮತ್ತೊಬ್ಬರ ಶರೀರವನ್ನು ತನ್ನದೆಂದು ಭಾವಿಸಿಯಾನೇನು?

## ವಿಷಯಗಳ ನಿಂದೆ

**ಮೂಢಃ ಕುರುತೇ ವಿಷಯಜಕರ್ದಮಸಂಮಾರ್ಜನಂ ಮಿಥ್ಯಾ ।**
**ದುರದೃಷ್ಟವೃಷ್ಟಿವಿರಸೋ ದೇಹೋ ಗೇಹಂ ಪತತ್ಯೇವ ॥ ೨೯ ॥**

೨೯. ದಡ್ಡನಾದವನು (ಶರೀರವೆಂಬ) ಮನೆಯನ್ನು ವಿಷಯಗಳೆಂಬ ಕೆಸರಿನಿಂದ ಹೋಗಲಾಡಿಸಿ (ಶುದ್ಧವಾಗಿರಿಸಲು) ವ್ಯರ್ಥವಾಗಿ ಪ್ರಯತ್ನಮಾಡುವನು. (ಆದರೆ) ದುರದೃಷ್ಟವೆಂಬ ಮಳೆಯಿಂದ ಶಕ್ತಿಹೀನವಾದ ಈ ದೇಹವು ಬಿದ್ದೇಹೋಗುವದು.

**ಭಾರ್ಯಾ ರೂಪವಿಹೀನಾ ಮನಸಃ ಕ್ಷೋಭಾಯ ಜಾಯತೇ ಪುಂಸಾಮ್**
**ಅತ್ಯನ್ತಂ ರೂಪಾಢ್ಯಾ ಸಾ ಪರಪುರುಷೈರ್ವಶೀಕ್ರಿಯತೇ ॥ ೩೦ ॥**

೩೦. ಹೆಂಡತಿಯು ಸುಂದರಿಯಲ್ಲದಿದ್ದರೆ ಗಂಡಸರಿಗೆ ಮನಸ್ಸಿನ ಆತಂಕಕ್ಕೇ ಕಾರಣಳಾಗುವಳು. ಬಹಳ ಸುಂದರಿಯಾಗಿದ್ದರೆ ಆಕೆಯು ಬೇರೆಯ ಗಂಡಸರಿಂದ ವಶಪಡಿಸಿಕೊಳ್ಳಲ್ಪಡುತ್ತಾಳೆ.

**ಯಃ ಕಶ್ಚಿತ್ ಪರಪುರುಷೋ ಮಿತ್ರಂ ಭೃತ್ಯೋಽಥವಾ ಭಿಕ್ಷುಃ ।**
**ಪಶ್ಯತಿ ಹಿ ಸಾಭಿಲಾಷಂ ವಿಲಕ್ಷಣೋದಾರರೂಪವತೀಮ್ ॥ ೩೧ ॥**

೩೧. ಸ್ನೇಹಿತನಾಗಲಿ, ಸೇವಕನಾಗಲಿ, ಯಾಚಕನಾಗಲಿ, ಯಾವನಾದರೊಬ್ಬ ಪರಪುರುಷನು ಲೋಕೋತ್ತರವಾದ ಹೆಚ್ಚಿನ ರೂಪವತಿಯಾದ (ಆಕೆಯನ್ನು) ಕಾಮ (ಮನಸ್ಕ)ನಾಗಿ ನೋಡಿಯೇತೀರುತ್ತಾನೆ.

**ಯಂ ಕಂಚಿತ್ ಪುರುಷವರಂ ಸ್ವಭರ್ತುರತಿಸುನ್ದರಂ ದೃಷ್ಟ್ವಾ ।**
**ಮೃಗಯತಿ ಕಿಂ ನ ಮೃಗಾಕ್ಷೀ ಮನಸೇವ ಪರಸ್ತ್ರಿಯಂ ಪುರುಷಃ ॥ ೩೨ ॥**

೩೨. ತನ್ನ ಗಂಡನಿಗಿಂತಲೂ ಹೆಚ್ಚು ಸುಂದರನಾದ ಯಾವನಾದರೊಬ್ಬ ಪುರುಷಶ್ರೇಷ್ಠನನ್ನು ಕಂಡು ಮೃಗ (ಜಿಂಕೆ) ದಂತೆ ಚಂಚಲವಾದ ಕಣ್ಣುಗಳುಳ್ಳ (ಸ್ತ್ರೀಯು)- ಪುರುಷನು ಮನಸ್ಸಿನಿಂದ ಪರಸ್ತ್ರೀಯನ್ನು ಹೇಗೋ ಹಾಗೆ-ಹುಡುಕದೆ ಇದ್ದಾಳೆ ?

**ಏವಂ ಸುರೂಪನಾರ್ಯಾ ಭರ್ತಾ ಕೋಪಾತ್ ಪ್ರತಿಕ್ಷಣಂ ಕ್ಷೀಣಃ ।**
**ನೋ ಲಭತೇ ಸುಖಲೇಶಂ ಬಲಿಮಿವ ಬಲಿಭುಕ್ ಬಹುಷ್ವೇಕಃ ॥ ೩೩ ॥**

೩೩. ಈ ರೀತಿಯಾಗಿ ಸುಂದರಿಯಾದ ಹೆಂಡತಿಯ (ನಿಮಿತ್ತದಿಂದ) ಕೋಪ ದಿಂದ ಗಂಡನು ಪ್ರತಿಕ್ಷಣವೂ ಕೊರಗುತ್ತಾ - ಅನೇಕ ಹಕ್ಕಿಗಳಲ್ಲಿ ತಾನೊಂದಾದ, ಬಲಿಯ ಅನ್ನವನ್ನು ತಿನ್ನುವ ಕಾಗೆಯು ಅನ್ನಕ್ಕಾಗಿ ಕಚ್ಚಾಡುವಂತೆ-ಸ್ವಲ್ಪವೂ ಸುಖವನ್ನು ಹೊಂದುವ ದಿಲ್ಲ.

**ವನಿತಾ ನಿತಾನ್ತಮಜ್ಞಾ ಸ್ವಾಜ್ಞಾಮುಲ್ಲಙ್ಘ್ಯ ವರ್ತತೇ ಯದಿ ಸಾ ।**
**ಶತ್ರೋರಪ್ಯಧಿಕತರಾ ಪರಾಭಿಲಾಷಿಣ್ಯಸೌ ಕಿಮುತ ॥ ೩೪ ॥**

೩೪. ಹೆಂಗಸು ಸಂಪೂರ್ಣವಾಗಿ ದಡ್ಡಳೇ ಆಗಿದ್ದು ತನ್ನ (ಗಂಡನ) ಅಪ್ಪಣೆಯನ್ನು (ಅರಿಯದೆ) ಮೀರಿ ನಡೆಯುವಳಾದರೆ ಆಕೆಯು ಶತ್ರುವಿಗಿಂತ ಹೆಚ್ಚಿನ ಅಪಕಾರಿಣಿ ಯಾಗುವಳು. ಹೀಗಿರುವಾಗ ಮತ್ತೊಬ್ಬನನ್ನು ಬಯಸುವ ಈಕೆಯ (ವಿಷಯಕ್ಕೆ) ಹೇಳ ತಕ್ಕದ್ದಾದರೂ ಏನಿದೆ ?

**ಲೋಕೋ ನಾಪುತ್ರಸ್ಯಾಸ್ತೀತಿ ಶ್ರುತ್ಯಾಸ್ಯ ಕಃ ಪ್ರಭಾಷಿತೋ ಲೋಕಃ ।**
**ಮುಕ್ತಿಃ ಸಂಸರಣಂ ವಾ ತದನ್ಯಲೋಕೋಽಥವಾ ನಾದ್ಯಃ ॥ ೩೫ ॥**
**ಸರ್ವೇಽಪಿ ಪುತ್ರಭಾಜಸ್ತನ್ಮುಕ್ತೌ ಸಂಸೃತಿರ್ಭವತಿ ।**
**ಶ್ರವಣಾದಯೋಽಪ್ಯುಪಾಯಾ ಮೃಷಾ ಭವೇಯುಸ್ತೃತೀಯೇಽಪಿ ॥ ೩೬ ॥**

೩೫-೩೬. 'ಪುತ್ರರಿಲ್ಲದವನಿಗೆ ಲೋಕವಿಲ್ಲ' ಎಂದು ಹೇಳುವ ಶ್ರುತಿಯಲ್ಲಿರುವ ಲೋಕವು ಯಾವದು ? ಮೋಕ್ಷವೊ ? ಸಂಸಾರವೊ ? ಅಥವಾ ಅದಕ್ಕೂ ಬೇರೆಯಾದ ಲೋಕವೊ ? ಮೊದಲನೆಯದಂತೂ ಅಲ್ಲ. (ಏಕೆಂದರೆ) ಎಲ್ಲರೂ ಪುತ್ರರನ್ನು ಪಡೆದುಕೊಂಡು ಮುಕ್ತರಾಗಿದ್ದರೂ ಸಂಸಾರವು ಇದ್ದು ಕೊಂಡೇ ಇದೆಯಷ್ಟೆ ! (ಮತ್ತು ಎಲ್ಲರೂ ಮುಕ್ತರೆಂದಾದರೆ) ಶ್ರವಣವೇ ಮುಂತಾದ

(ಶ್ರುತಿಯಲ್ಲಿ ಹೇಳಿರುವ) ಉಪಾಯಗಳೂ ವ್ಯರ್ಥವಾಗುವವು. ಇನ್ನು ಮೂರನೆಯ ಪಕ್ಷವೂ ಹೊಂದುವದಿಲ್ಲ. ಹೇಗೆಂದರೆ :

**ತತ್ರಾಪ್ಯುಪಾಯಸತ್ತ್ವಾತ್ ದ್ವಿತೀಯಪಕ್ಷೇಽಪ್ಯಪುತ್ರಸ್ಯ ।**
**ಪುತ್ರೇಷ್ಟ್ಯಾದಿಕಯಾಗಪ್ರವೃತ್ತಯೇ ವೇದವಾದೋಽಯಮ್ ॥ ೩೭ ॥**

೩೭. (ಬೇರೆಯ ಲೋಕವನ್ನು) ಪಡೆಯುವ ಉಪಾಯಾಂತರವಿರುವದರಿಂದ (ಪುತ್ರನೇ ಆಗಬೇಕೆಂಬ ನಿಯಮವಿಲ್ಲ). (ಸಂಸಾರವೆಂಬ) ಎರಡನೆಯ ಪಕ್ಷದಲ್ಲಿ ಯಾದರೆ ಪುತ್ರನಿಲ್ಲದವನಿಗೆ ಪುತ್ರಕಾಮೇಷ್ಟ್ಯಾದಿಯಾಗಗಳನ್ನು ಹೇಳಿದೆ. ಆದ್ದರಿಂದ ಈ ವೇದವಾದವು (ಸಂಸಾರಫಲವನ್ನೇ) ಹೇಳುವದಕ್ಕೆ ಹೊರಟಿದೆ (ಯೆನ್ನಬೇಕು.)

**ನಾನಾಶರೀರಕಷ್ಟೈರ್ಧನವ್ಯಯೈಃ ಸಾಧ್ಯತೇ ಪುತ್ರಃ ।**
**ಉತ್ಪನ್ನ ಮಾತ್ರ ಪುತ್ರೇ ಜೀವಿತಚಿನ್ತಾ ಗರೀಯಸೀ ತಸ್ಯ ॥ ೩೮ ॥**

೩೮. ಶರೀರದ ಅನೇಕಕಷ್ಟಗಳಿಂದಲೂ ಹಣವನ್ನು ಖರ್ಚುಮಾಡುವದ ರಿಂದಲೂ ಮಗನನ್ನು ಪಡೆಯಬೇಕಾಗಿದೆ. ಪುತ್ರನು ಹುಟ್ಟಿದನೆಂದಕೂಡಲೆ ಅವನ ಆಯುಷ್ಯವು ಎಷ್ಟು? ಎಂಬ ಬಲವಾದ ಚಿಂತೆಯು ಎದ್ದುಕೊಳ್ಳುವದು.

**ಜೀವನ್ನಪಿ ಕಿಂ ಮೂರ್ಖಃ ಪ್ರಾಜ್ಞಃ ಕಿಂ ವಾ ಸುಶೀಲಭಾಗ್ ಭವಿತಾ ।**
**ಜಾರಶ್ಚೌರಃ ಪಿಶುನಃ ಪತಿತೋ ದ್ಯೂತಪ್ರಿಯಃ ಕ್ರೂರಃ ॥ ೩೯ ॥**

೩೯.(ಆಯುಷ್ಮಂತನಾಗಿ)ಬದುಕಿದರೂ ಅವಿವೇಕಿಯಾಗುವನೊ ಜಾಣನಾಗು ವನೊ, ಒಳ್ಳೆಯ ನಡತೆಯುಳ್ಳವನಾಗುವನೊ, ಅಥವಾ ವ್ಯಭಿಚಾರಿಯೊ, ಕಳ್ಳನೊ, ಚಾಡಿಕೋರನೊ, ಪತಿತನೊ, ಜೂಜುಗಾರನೊ, ಕೆಟ್ಟವನೊ ಏನಾಗುವನೋ ಎಂಬ (ಚಿಂತೆಯುಂಟಾಗುವದು).

**ಪಿತೃಮಾತೃಬನ್ಧುಘಾತೀ ಮನಸಃ ಖೇದಾಯ ಜಾಯತೇ ಪುತ್ರಃ ।**
**ಚಿನ್ತಯತಿ ತಾತನಿಧನಂ ಪುತ್ರೋ ದ್ರವ್ಯಾದ್ಯಧೀಶತಾಹೇತೋಃ ॥ ೪೦ ॥**

೪೦. ತಂದೆ, ತಾಯಿ, ಬಂಧುಗಳನ್ನೇ ಕೊಂದವನಾದರೆ ಪುತ್ರನು ಮನಸ್ಸಿನ ಸಂಕಟಕ್ಕೆ ಕಾರಣನಾಗುವನು. ಮಗನೇ (ಕೆಲವು ವೇಳೆ) ಹಣವೇ ಮುಂತಾದ (ಆಸ್ತಿಗೆ) ಒಡೆಯನಾಗಬೇಕೆಂಬ ಕಾರಣದಿಂದ ತಂದೆಯ ಸಾವನ್ನು ಚಿಂತಿಸುತ್ತಾನೆ. [1]

**ಸರ್ವಗುಣೈರುಪಪನ್ನಃ ಪುತ್ರಃ ಕಸ್ಯಾಪಿ ಕುತ್ರಚಿದ್ ಭವತಿ ।**
**ಸೋಽಲ್ಪಾಯುಷ್ಯೋ ರುಗ್ಣೋ ವಾ ಹ್ಯನಪತ್ಯೋ ವಾ ತಥಾಪಿ ಖೇದಾಯ ॥ ೪೧ ॥**

೪೧. ಎಲ್ಲಾ (ಉತ್ತಮ) ಗುಣಗಳಿಂದಲೂ ಕೂಡಿದ ಮಗನು ಯಾವನೋ ಒಬ್ಬನಿಗೆ ಎಲ್ಲಿಯೋ ಒಂದುಕಡೆ ಇರಬಹುದು. ಆದರೂ ಅವನು ಅಲ್ಪಾಯುಷ್ಯ

---

1. ಪುತ್ರನಿದ್ದರೆ ಸುಖವುಂಟಾದೀತೆಂಬ ಭ್ರಾಂತಿಯನ್ನು ಕಳೆಯಲು ಮತ್ತು ವೈರಾಗ್ಯವುಂಟಾಗುವದಕ್ಕಾಗಿ ಈ ಉಪದೇಶವನ್ನು ಮಾಡಿದೆ.

ವುಳ್ಳವನೋ ರೋಗಿಯೋ, ಮಕ್ಕಳಿಲ್ಲದವನೋ. ಆಗಿದ್ದರೆ ದುಃಖಕ್ಕೇ ಕಾರಣ ನಾಗುವನು.

**ಪುತ್ರಾತ್ ಸದ್ಗತಿರಿತಿ ಚೇತ್ ತದಪಿ ಪ್ರಾಯೋಽಸ್ತಿ ಯುಕ್ತ್ಯಸಹಮ್ ।**
**ಇತ್ಥಂ ಶರೀರಕಷ್ಟೈಃ ದುಃಖಂ ಸಂಪ್ರಾರ್ಥ್ಯತೇ ಮೂಢೈಃ ॥ ೪೨ ॥**

೪೨. ಮಗನಿಂದ ಸದ್ಗತಿಯುಂಟಾಗುವದೆಂದು (ತಿಳಿಯುವದಾದರೆ) ಅದೂ ಸಹ ಯುಕ್ತಿಗೆ ಹೊಂದದೆ ಇರುವದು. ಹೀಗೆ ಮೂಢರು ಶರೀರದ ಕ್ಲೇಶಗಳ ಮೂಲಕ ದುಃಖವನ್ನೇ ಕೇಳಿಕೊಂಡಿರುತ್ತಾರೆ.

**ಪಿತೃಮಾತೃಭನ್ಧುಭಗಿನೀ ಪಿತೃವ್ಯಜಾಮಾತೃಮುಖ್ಯಾನಾಮ್ ।**
**ಮಾರ್ಗಸ್ಥಾನಾಮಿವ ಯುತಿರನೇಕಯೋನಿಭ್ರಮಾತ್ ಕ್ಷಣಿಕಾ ॥ ೪೩ ॥**

೪೩. ತಂದೆ, ತಾಯಿ, ನೆಂಟರು, ಸೋದರಿ, ಚಿಕ್ಕಪ್ಪ, ಅಳಿಯ- ಮುಂತಾದವರ ಸಂಬಂಧವು (ನಾವು) ಅನೇಕಜನ್ಮಗಳಲ್ಲಿ ತಿರುಗುವಾಗ ದಾರಿಹೋಕರು ಒಬ್ಬರೊಡ ನೊಬ್ಬರು ಕಲೆಯುವಂತೆ-ಸೇರುವ ಕ್ಷಣಿಕ (ಸಂಬಂಧವೇ) ಆಗಿರುವದು.

**ದೈವಂ ಯಾವದ್ವಿಪುಲಂ ಯಾವತ್ಪಚುರಃ ಪರೋಪಕಾರಶ್ಚ ।**
**ತಾವತ್ ಸರ್ವೇ ಸುಹೃದೋ ವ್ಯತ್ಯಯತಃ ಶತ್ರವಃ ಸರ್ವೇ ॥ ೪೪ ॥**

೪೪. ಎಲ್ಲಿಯವರೆಗೆ ದೈವಬಲವು ಚೆನ್ನಾಗಿರುವದೋ, ಎಲ್ಲಿಯವರೆಗೆ ನಾವು ಹೆಚ್ಚಾಗಿ ಪರೋಪಕಾರವನ್ನು ಮಾಡಲು ಸಮರ್ಥರಾಗಿರುವೆವೋ ಅಲ್ಲಿಯವರೆಗೆ ಎಲ್ಲರೂ ಸ್ನೇಹಿತರೇ ಆಗಿರುವರು. (ಅದು)ಬದಲಾದರೆ ಎಲ್ಲರೂ ಶತ್ರುಗಳೇ (ಆಗುವರು)

**ಅಶ್ನನ್ತಿ ಚೇದನುದಿನಂ ವನ್ದಿನ ಇವ ವರ್ಣಯನ್ತಿ ಸಂತೃಪ್ತಾಃ ।**
**ತಚ್ಛೇದ್ ದ್ವಿತ್ರದಿನಾನ್ತರಮಭಿನಿನ್ದನ್ತಃ ಪ್ರಕುಪ್ಯನ್ತಿ ॥ ೪೫ ॥**

೪೫. ಪ್ರತಿದಿನವೂ ಅವರು ನಮ್ಮಲ್ಲಿ ಊಟಮಾಡುತ್ತಿದ್ದರೆ ತೃಪ್ತರಾಗಿದ್ದು, ಹೊಗಳುಭಟ್ಟರಂತೆ ವರ್ಣಿಸುತ್ತಾರೆ. ಎರಡುಮೂರು ದಿನಗಳು ನಡುವೆ ಬಿಟ್ಟು ಹೋದರೆ ಬಯ್ಯುತ್ತಾ ಸಿಟ್ಟುಗೊಳ್ಳುತ್ತಾರೆ.

**ದುರ್ಭರಜಠರನಿಮಿತ್ತಂ ಸಮುಪಾರ್ಜಯಿತುಂ ಪ್ರವರ್ತತೇ ಚಿತ್ತಮ್ ।**
**ಲಕ್ಷಾವಧಿ ಬಹುವಿತ್ತಂ ತಥಾಪ್ಯಲಭ್ಯಂ ಕಪರ್ದಿಕಾಮಾತ್ರಮ್ ॥ ೪೬ ॥**

೪೬. ತುಂಬಲು ಕಷ್ಟಸಾಧ್ಯವಾದ ಹೊಟ್ಟೆಯ ನಿಮಿತ್ತದಿಂದ ನಮ್ಮ ಮನಸ್ಸು ಸಂಪಾದನೆಮಾಡಲು ತೊಡಗುವದು. ಲಕ್ಷಸಂಖ್ಯೆಯವರೆಗಿನ ಬಹಳವಾದ ಧನವನ್ನು ಅದು ಮುಟ್ಟಬಹುದಾದರೂ ಕವಡೆಯಷ್ಟು ಸಿಗದೆ ಇರುವದರಿಂದ (ತೃಪ್ತಿಯಿಲ್ಲದೆಯೇ ಇರುವದು).[1]

---

1. ಒಂದು ಲಕ್ಷಕ್ಕೆ ಒಂದು ರೂಪಾಯಿ ಕೊರತೆಯಾದರೂ ಸಿಕ್ಕಿರುವಷ್ಟು ಭಾಗಕ್ಕೆ ಸಂತೋಷಪಡದೆ ಕಡಮೆಯಾದ ಭಾಗಕ್ಕಾಗಿಯೇ ಮನಸ್ಸು ಕಳವಳಗೊಳ್ಳುವದು. ಎಷ್ಟೇ ದೊರೆತರೂ ತೃಪ್ತಿಯಿಲ್ಲವೆಂದರ್ಥ.

**ಲಬ್ಧಶ್ಚೇದಧಿಕೋಽರ್ಥಃ ಪತ್ನ್ಯಾದೀನಾಂ ಭವೇತ್ ಸ್ವಾರ್ಥಃ ।**
**ನೃಪಚೌರತೋಽಪ್ಯನರ್ಥಃ ತಸ್ಮಾತ್ ದ್ರವ್ಯೋದ್ಯಮೋ ವ್ಯರ್ಥಃ ॥ ೪೭ ॥**

೪೭. ಹೆಚ್ಚಾಗಿಯೇ ಹಣವು ದೊರೆತುದೇ ಆದರೂ (ಅದು) ಹೆಂಡತಿಯೇ ಮೊದಲಾದವರ ವಶವಾಗಿ ಅವರ ಸ್ವಂತದ್ದಾಗಿಬಿಡುವದು. ಮತ್ತು ರಾಜ, ಕಳ್ಳರುಗಳಿಂದಲೂ (ಭಯವುಂಟಾಗಿ) ಅನರ್ಥವೇ ಆದೀತು. ಆದ್ದರಿಂದ (ಹೆಚ್ಚಿನ) ಹಣಕ್ಕಾಗಿ ಆಸೆಪಡುವದು ವ್ಯರ್ಥವೇ.

**ಅನ್ಯಾಯಮರ್ಥಭಾಜಂ ಪಶ್ಯತಿ ಭೂಪೋಽಧ್ವಗಾಮಿನಂ ಚೌರಃ ।**
**ಪಿಶುನೋ ವ್ಯಸನಪ್ರಾಪ್ತಿಂ ದಾಯಾದಾನಾಂ ಗಣಃ ಕಲಹಮ್ ॥ ೪೮ ॥**

೪೮. ಅನ್ಯಾಯವಾಗಿ ಹಣವನ್ನು ಹೊಂದಿರುವವನನ್ನು ರಾಜನು ಕಣ್ಣಿಡುವನು. (ಅವನು) ದಾರಿಯಲ್ಲಿ ಹೋಗುತ್ತಿದ್ದರೆ ಕಳ್ಳನು (ನೋಡುತ್ತಾ ಹೊಂಚುಹಾಕುತ್ತಿರುವನು). (ಅವನಿಗೆ) ಕಷ್ಟವುಂಟಾಗಲೆಂದು ಚಾಡಿಕೋರನು ಕಾಯುತ್ತಿರುವನು. ದಾಯಾದಿಗಳ ಗುಂಪು ಅವನೊಡನೆ ಜಗಳಕ್ಕೇ (ಸಿದ್ಧರಾಗಿರುವರು).

**ಪಾತಕಭರ್ರೈರನೇಕೈರರ್ಥಂ ಸಮುಪಾರ್ಜಯನ್ತಿ ರಾಜಾನಃ ।**
**ಅಶ್ವಮತಙ್ಗ ಹೇತೋಃ ಪ್ರತಿಕ್ಷಣಂ ನಾಶ್ಯತೇ ಸೋಽರ್ಥಃ ॥ ೪೯ ॥**

೪೯. ರಾಜರುಗಳು ಪಾಪಗಳಿಂದ ತುಂಬಿದ ಅನೇಕ (ರೀತಿ)ಗಳಿಂದ ಹಣವನ್ನು ಸಂಪಾದಿಸುತ್ತಾರೆ. (ಆದರೆ) ಅದು ಕುದರೆ, ಆನೆ-ಮುಂತಾದ (ಸೈನ್ಯದ ವೆಚ್ಚಕ್ಕಾಗಿ) ಪ್ರತಿಕ್ಷಣವೂ ಕರಗಿ ನಾಶವಾಗುತ್ತಿರುವದು.

**ರಾಜ್ಯಾನ್ತರಾಭಿಗಮನಾತ್ ರಣಭಙ್ಗಾನ್ಮನ್ತ್ರಿಭೃತ್ಯದೋಷಾದ್ವಾ ।**
**ವಿಷಶಸ್ತ್ರಗುಪ್ತಘಾತಾನ್ಮಗ್ನಾಶ್ಚಿನ್ತಾರ್ಣವೇ ಭೂಪಾಃ ॥ ೫೦ ॥**

೫೦. ಬೇರೊಂದು ರಾಜ್ಯಕ್ಕೆ (ದಂಡೆತ್ತಿ) ಹೋಗಬೇಕೆಂದೊ, ಯುದ್ಧದಲ್ಲಿ ಪರಾಜಯವಾಗುವದೆಂದೊ, ಮಂತ್ರಿ ಅಥವಾ ಸೇವಕರ ದೋಷದಿಂದ ಕೇಡು ಕಾದೀತೆಂದೋ, ವಿಷ, ಶಸ್ತ್ರ, ಗುಟ್ಟಿನಲ್ಲಿ ಸಾಯಿಸುವದು- (ಮುಂತಾದ ಭಯದಿಂದಲೋ) ರಾಜರು ಯಾವಾಗಲೂ ಚಿಂತೆಯೆಂಬ ಸಮುದ್ರದಲ್ಲಿಯೇ ಮುಳುಗಿರುವರು.

## ಮನಸ್ಸಿನ ನಿಂದೆ

**ಹಸತಿ ಕದಾಚಿತ್ ರೌತಿ ಭ್ರಾನ್ತಂ ಸದ್ದಶದಿಶೋ ಭ್ರಮತಿ ।**
**ಹೃಷ್ಟಂ ಕದಾಪಿ ರುಷ್ಟಂ ಶಿಷ್ಟಂ ದುಷ್ಟಂ ಚ ನಿನ್ದತಿ ಸ್ತೌತಿ ॥ ೫೧ ॥**

೫೧. (ಈ ಮನಸ್ಸು) ಕೆಲವುವೇಳೆ ನಗುವದು, ಅಳುವದು, ಹೀಗೆಯೇ ಹುಚ್ಚೆದ್ದು ಎಲ್ಲಾ ಹತ್ತುದಿಕ್ಕುಗಳಲ್ಲಿಯೂ ಅಲೆಯುವದು. ಕೆಲವುವೇಳೆ ಸಂತೋಷವಾಗಿರುವದು, ಯಾವಾಗಲೋ ಸಿಟ್ಟಾಗಿರುವದು. ಸಾಧುವನ್ನು ಹೊಗಳುವದು. ಪಾಪಿಯನ್ನು ಬೈಯುವದು.

**ಕಿಮಪಿ ದ್ವೇಷ್ಟಿ ಸರೋಷಂ ಹ್ಯಾತ್ಮಾನಂ ಶ್ಲಾಘತೇ ಕದಾಚಿದಪಿ ।**
**ಚಿತ್ತಂ ಪಿಶಾಚಮಭವದ್. ರಾಕ್ಷಸ್ಯಾ ತೃಷ್ಣಯಾ ವ್ಯಾಪ್ತಮ್ ॥ ೫೨ ॥**

೫೨. ಸಿಟ್ಟಿನಿಂದ ಕೂಡಿ ಏನನ್ನೋ ಹಗೆಮಾಡುವದು ; ಯಾವಾಗಲೋ ತನ್ನನ್ನೇ ಹೊಗಳಿಕೊಳ್ಳುವದು. ದುರಾಶೆಯೆಂಬ ರಾಕ್ಷಸಿಯಿಂದ ಆಕ್ರಮಿಸಲ್ಪಟ್ಟ ಈ ಮನಸ್ಸು ಪಿಶಾಚಿಯಾಗಿಬಿಟ್ಟಿತು.

**ದಮ್ಭಾಭಿಮಾನಲೋಭೈಃ ಕಾಮಕ್ರೋಧೋರುಮತ್ಸರೈಶ್ಚೇತಃ ।**
**ಆಕೃಷ್ಯತೇ ಸಮನ್ತಾತ್ ಶ್ವಭಿರಿವ ಪತಿತಾಸ್ಥಿವನ್ಮಾರ್ಗೇ ॥ ೫೩ ॥**

೫೩. ಚಿತ್ತವು ಜಂಭ, ಅಹಂಕಾರ, ಜಿಪುಣತನ, ಆಶೆ, ಸಿಟ್ಟು, ಹೆಚ್ಚಿನ ಹೊಟ್ಟೆ ಕಿಚ್ಚು- ಮುಂತಾದ (ದೋಷಗಳಿಂದ)- ಕೆಳಗೆ ಬಿದ್ದಿರುವ ಎಲುಬುಗಳಿಂದ ಕೂಡಿದ ಹಾದಿಯಲ್ಲಿ ನಾಯಿಗಳಿಂದ ಹೇಗೋ ಹಾಗೆ- ಸುತ್ತಲೂ ಎಳೆಯಲ್ಪಡುತ್ತದೆ.

**ತಸ್ಮಾಚ್ಛುದ್ಧವಿರಾಗೋ ಮನೋಽಭಿಲಷಿತಂ ತ್ಯಜೇದರ್ಥಮ್ ।**
**ತದನಭಿಲಷಿತಂ ಕುರ್ಯಾನ್ನಿರ್ವ್ಯಾಪಾರಂ ತತೋ ಭವತಿ ॥ ೫೪ ॥**

೫೪. ಆದ್ದರಿಂದ ಶುದ್ಧವೈರಾಗ್ಯವನ್ನು (ಬಯಸುವವನು) ಮನಸ್ಸು ಬಯಸಿದಂಥ ವಿಷಯಗಳನ್ನು ಕೈಬಿಡಬೇಕು. ಅದು ಬಯಸದೆ ಇರುವಂತೆ ಮಾಡಬೇಕು. ಅನಂತರ ಅದು ಚಾಂಚಲ್ಯವಿಲ್ಲದ್ದಾಗುವದು.

## ವಿಷಯಗಳನ್ನು ಗೆಲ್ಲುವಿಕೆ

**ಸಂಸೃತಿಪಾರಾವಾರೇ ಹ್ಯಗಾಧವಿಷಯೋದಕೇನ ಸಂಪೂರ್ಣೇ ।**
**ನೃಶರೀರಮಮ್ಬುತರಣಂ ಕರ್ಮಸಮೀರೈರಿತಸ್ತತಶ್ಚಲತಿ ॥ ೫೫ ॥**

೫೫. ವಿಷಯಗಳೆಂಬ ಅಳವಾದ ನೀರಿನಿಂದ ತುಂಬಿದ ಸಂಸಾರವೆಂಬ ಸಮುದ್ರದಲ್ಲಿ ಮನುಷ್ಯನ ಶರೀರವೆಂಬ ಹಡಗು ಕರ್ಮಗಳೆಂಬ ಗಾಳಿಗಳಿಂದ ಅಲ್ಲಿಂದಿಲ್ಲಿಗೆ ಓಡಾಡುತ್ತದೆ.

**ಛಿದ್ರೈರ್ನವಭಿರುಪೇತಂ ಜೀವೋ ನೌಕಾಪತಿರ್ಮಹಾನಲಸಃ ।**
**ಛಿದ್ರಾಣಾಮನಿರೋಧಾತ್ ಜಲಪರಿಪೂರ್ಣಂ ಪತತ್ಯಧಃ ಸತತಮ್ ॥ ೫೬ ॥**

೫೬. (ಈ ಹಡಗು) ಒಂಭತ್ತು ತೂತುಗಳಿಂದ ಕೂಡಿದ್ದಾಗಿದೆ. ಈ ನೌಕೆಯ ಯಜಮಾನನಾದ ಜೀವನು ಬಹಳ ಸೋಮಾರಿಯು. ಈ ತೂತುಗಳನ್ನು ಮುಚ್ಚದೆ ಇರುವದರಿಂದ ನೀರಿನಿಂದ ತುಂಬಿಹೋಗಿ ಯಾವಾಗಲೂ ಕೆಳಕ್ಕೇ ಬೀಳುತ್ತಿರುತ್ತದೆ.

**ಛಿದ್ರಾಣಾಂ ತು ನಿರೋಧಾತ್ ಸುಖೇನ ಪಾರಂ ಪರಂ ಯಾತಿ ।**
**ತಸ್ಮಾದಿನ್ದ್ರಿಯನಿಗ್ರಹಮೃತೇ ನ ಕಶ್ಚಿತ್ ತರತ್ಯನೃತಮ್ ॥ ೫೭ ॥**

೫೭. ತೂತುಗಳನ್ನು ಮುಚ್ಚುವದರಿಂದ ಸುಖವಾಗಿ ಆಚೆಯ ದಡವನ್ನು ಸೇರುತ್ತಾನೆ. ಆದ್ದರಿಂದ ಇಂದ್ರಿಯಗಳ ಹಿಡಿತವಿಲ್ಲದೆ ಯಾವನೊಬ್ಬನೂ ಅನೃತವಾದ (ಸಂಸಾರವನ್ನು) ದಾಟಲಾರನು.

**ಪಶ್ಯತಿ ಪರಸ್ಯ ಯುವತಿಂ ಸಕಾಮಮಪಿ ತನ್ಮನೋರಥಂ ಕುರುತೇ ।**
**ಜ್ಞಾತ್ವೈವ ತದಪ್ರಾಪ್ತಿಂ ವ್ಯರ್ಥಂ ಮನುಜೋಽತಿಪಾಪಭಾಗ್ ಭವತಿ ॥೫೮॥**

೫೮. ಮತ್ತೊಬ್ಬನ ಹೆಂಗಸನ್ನು ಕಾಮದಿಂದ ನೋಡುತ್ತಾನೆ. ಮತ್ತು ಆಕೆಯಲ್ಲಿ ಬಯಕೆಯನ್ನೂ ಮಾಡುತ್ತಾನೆ. ಆಕೆಯು ಸಿಗುವದಿಲ್ಲವೆಂತ ತಿಳಿದಿದ್ದರೂ ವ್ಯರ್ಥವಾಗಿ ಮನುಷ್ಯನು ಹೆಚ್ಚಿನ ಪಾಪಿಯಾಗುತ್ತಾನೆ.

**ಪಿಶುನೈಃ ಪ್ರಕಾಮಮುದಿತಾಂ ಪರಸ್ಯ ನಿನ್ದಾಂ ಶೃಣೋತಿ ಕರ್ಣಾಭ್ಯಾಮ್ ।**
**ತೇನ ಪರಃ ಕಿಂ ಮ್ರಿಯತೇ ವ್ಯರ್ಥಂ ಮನುಜೋಽತಿಪಾಪಭಾಗ್ಭವತಿ ॥೫೯॥**

೫೯. ಚಾಡಿಕೋರರು ಸ್ವೇಚ್ಛೆಯಾಗಿ ಹೇಳಿದಂಥ ಪರರ ನಿಂದೆಯನ್ನು ಎರಡು ಕಿವಿಗಳಿಂದಲೂ ಕೇಳುತ್ತಾನೆ. ಅದರಿಂದ (ನಿಂದಿಸಲ್ಪಟ್ಟ) ಮತ್ತೊಬ್ಬನು ಸಾಯುತ್ತಾನೇನು? ಮನುಷ್ಯನು (ಹೀಗೆ ಪರನಿಂದೆಯನ್ನು ಕೇಳುವದರಿಂದ) ಹೆಚ್ಚಿನ ಪಾಪಗಳಿಗೆ ಗುರಿಯಾಗುತ್ತಾನೆ.

**ಅನೃತಂ ಪರಾಪವಾದಂ ರಸನಾ ವದತಿ ಪ್ರತಿಕ್ಷಣಂ ತೇನ ।**
**ಪರಹಾನಿರ್ಲಾಭಃ ಕಾ ವ್ಯರ್ಥಂ ಮನುಜೋಽತಿಪಾಪಭಾಗ್ ಭವತಿ ॥೬೦॥**

೬೦. ಪ್ರತಿಕ್ಷಣವೂ ನಾಲಗೆಯು ಸುಳ್ಳನ್ನೂ ಮತ್ತೊಬ್ಬರ ನಿಂದೆಯನ್ನೂ ನುಡಿಯುತ್ತದೆ. ಅದರಿಂದ ಮತ್ತೊಬ್ಬನಿಗಾಗುವ ಹಾನಿಯಾಗಲಿ, ಲಾಭವಾಗಲಿ, ಏನಿದ್ದೀತು? ಮನುಷ್ಯನು ವ್ಯರ್ಥವಾಗಿ ಹೆಚ್ಚಿನ ಪಾಪಗಳಿಗೆ ಗುರಿಯಾಗುತ್ತಾನೆ.

**ವಿಷಯೇನ್ದ್ರಿಯಯೋರ್ಯೋಗೇ ನಿಮೇಷಸಮಯೇನ ಯತ್ಸುಖಂ ಭವತಿ ।**
**ವಿಷಯೇ ನಷ್ಟೇ ದುಃಖಂ ಯಾವಜ್ಜೀವಂ ಚ ತತ್ತಯೋರ್ಮಧ್ಯೇ ॥೬೧॥**

೬೧. ಇಂದ್ರಿಯಗಳು ಮತ್ತು ವಿಷಯಗಳ ಸಂಬಂಧವುಂಟಾಗಲು ಕ್ಷಣಮಾತ್ರಕಾಲ ಯಾವ ಸುಖವುಂಟಾಗುವದೋ (ಅದು) ವಿಷಯವು ಕಣ್ಮರೆಯಾಗಲಾಗಿ ಬದುಕಿರುವವರೆಗೂ ಅವುಗಳ ನಡುವೆ ದುಃಖವು ಆಗುತ್ತಿರುವದು.[1]

**ಹೇಯಮುಪಾದೇಯಂ ವಾ ಪ್ರವಿಚಾರ್ಯ ಸುನಿಶ್ಚಿತಂ ತಸ್ಮಾತ್ ।**
**ಅಲ್ಪಸುಖಸ್ಯ ತ್ಯಾಗಾದನಲ್ಪದುಃಖಂ ಜಹಾತಿ ಸುಧೀಃ ॥೬೨॥**

೬೨. ಆದ್ದರಿಂದ ಬಿಡತಕ್ಕದ್ದನ್ನೂ ಸ್ವೀಕರಿಸತಕ್ಕದ್ದನ್ನೂ ಚೆನ್ನಾಗಿ ವಿಚಾರಮಾಡಿ ಅಲ್ಪವಾದ (ವಿಷಯ)ಸುಖವನ್ನು ಬಿಡುವದರಿಂದ ಜಾಣನು ಹೆಚ್ಚಿನದಾದ ದುಃಖವನ್ನು ದಾಟುವನು.

---

1. ಸುಖಾನುಭವದ ಅನಂತರ ಆದರ ಸ್ಮರಣೆಯು ಎಂದೆಂದಿಗೂ ದುಃಖವನ್ನೇ ಉಂಟುಮಾಡುತ್ತಿರುವದು.

**ಧೀವರದತ್ತಮಹಾಮಿಷಮಶ್ನನ್ ವೈ ಸಾರಣೋ ಮ್ರಿಯತೇ ।**
**ತದ್ವದ್ ವಿಷಯಾನ್ ಭುಂಜನ್ ಕಾಲಾಕೃಷ್ಟೋ ನರಃ ಪತತಿ ॥ ೬೩ ॥**

೬೩. ಬೇಡರವನು ಕೊಟ್ಟ ಮಾಂಸವನ್ನು ತಿನ್ನುತ್ತಾ ಸಾರಣ (ವೆಂಬ) ಪಕ್ಷಿಯು ಸಾಯುವದು. ಹಾಗೆಯೇ ವಿಷಯಗಳನ್ನು ಅನುಭವಿಸುತ್ತಾ ಮನುಷ್ಯನು ಯಮನಿಂದ ಎಳೆಯಲ್ಪಟ್ಟವನಾಗಿ ಬೀಳುವನು.

**ಉರಗಗ್ರಸ್ತಾರ್ಧತನುರ್ಭೇಕೋಽಶ್ನಾತೀಹ ಮಕ್ಷಿಕಾಃ ಶತಶಃ ।**
**ಏವಂ ಗತಾಯುರಪಿ ಸನ್ ವಿಷಯಾನ್ ಸಮುಪಾರ್ಜಯತ್ಯಂಧಃ ॥ ೬೪ ॥**

೬೪. ಹಾವಿನಿಂದ ನುಂಗಲ್ಪಟ್ಟ ಅರ್ಧಶರೀರವುಳ್ಳಂಥ (ಸ್ಥಿತಿಯಲ್ಲಿಯೂ) ಕಪ್ಪೆಯು ನೂರಾರು ನೊಳ್ಳೆಗಳನ್ನು ತಿನ್ನುತ್ತದೆ. ಹೀಗೆ ಆಯುಷ್ಯವು ಮುಗಿದರೂ (ಮನುಷ್ಯನು) ಕುರುಡ (ನಂತೆ) ವಿಷಯಗಳನ್ನು ಸಂಪಾದಿಸುತ್ತಾನೆ.

## ಮನೋನಿಗ್ರಹ

**ಸ್ವೀಯೋದ್ಗಮತೋಽಯವಹಾ ಸಾಗರಮುಪಯಾತಿ ನೀಚಮಾರ್ಗೇಣ ।**
**ಸಾ ಚೇದುದ್ಗಮ ಏವ ಸ್ಥಿರಾ ಸತೀ ಕಿಂ ನ ಯಾತಿ ವಾರ್ಧಿತ್ವಮ್ ॥ ೬೫ ॥**

೬೫. ತನ್ನಿಂದಲೇ ಮೇಲಕ್ಕೆದ್ದಿರುವ ನೀರನ್ನು ಹರಿಯಿಸುತ್ತಾ ತಗ್ಗಾದ ಮಾರ್ಗದಿಂದ (ನದಿಯು) ಸಮುದ್ರವನ್ನು ಸೇರುವದು. ಅದರೆ ಅದೇ (ನೀರಿನ) ಬುಗ್ಗೆಯೇ ನೆಲೆಯಾಗಿ ನಿಂತಲ್ಲಿ ತಾನೇ ಸಮುದ್ರವಾಗಲಾರದೇನು?

**ಏವಂ ಮನಃ ಸ್ವಹೇತುಂ ವಿಚಾರಯತ್ ಸುಸ್ಥಿರಂ ಭವೇದಂತಃ ।**
**ನ ಬಹಿರ್ವ್ರೋದೇತಿ ತದಾ ಕಿಂ ನಾತ್ಮತ್ವಂ ಸ್ವಯಂ ಯಾತಿ ॥ ೬೬ ॥**

೬೬. ಹೀಗೆಯೇ ಮನಸ್ಸು ತಾನು (ಹುಟ್ಟಿರುವ) ಕಾರಣ (ವಸ್ತು)ವನ್ನು ವಿಚರಮಾಡುತ್ತಾ ಒಳಗೇ ಇದ್ದುಕೊಂಡು ಹೊರಕ್ಕೆ ಏಳದೇ ಹೋದಲ್ಲಿ ಅದು ತಾನೇ ಆತ್ಮನಾಗುವಿಕೆಯನ್ನು ಹೊಂದಲಾರದೇನು? [1]

**ವರ್ಷಾಸ್ವಮ್ಬುಃ ಪ್ರಚಯಾತ್ ಕೂಪೇ ಗುರುನಿರ್ಝರೇ ಪಯಃ ಕ್ಷಾರಮ್ ।**
**ಗ್ರೀಷ್ಮೇಽಸ್ವೈವ ತು ಶುಷ್ಕೇ ಮಾಧುರ್ಯಂ ಭಜತಿ ತತ್ರಾಮ್ಬುಃ ॥ ೬೭ ॥**

೬೭. ಮಳೆಗಾಲದಲ್ಲಿ ನೀರು ಹೆಚ್ಚುವದರಿಂದ ಭಾವಿಯಲ್ಲಿಯೂ ಬೆಟ್ಟದ ಝುರಿಯಲ್ಲಿಯೂ ನೀರು ಉಪ್ಪಾಗಿಬಿಡುವದು. ಬೇಸಿಗೆಯಲ್ಲಿ (ಹೆಚ್ಚಿನ) ನೀರು ಒಣಗಿದರೆ (ಉಳಿದ) ನೀರು ಸಿಹಿಯಾಗುವದು.

---

1. ನೀರು ತನ್ನ ಮೂಲವಾದ ಬುಗ್ಗೆಯ ಕಡೆಗೇ ಹರಿದಿದ್ದಲ್ಲಿ ತಾನೇ ಸಮುದ್ರವಾಗಿಬಿಡುತ್ತಿತ್ತು. ಹಾಗೆಯೇ ಮನಸ್ಸು ತನ್ನ ಮೂಲವಾದ ಆತ್ಮನನ್ನೇ ಆಶ್ರಯಿಸಿಕೊಂಡಿದ್ದು ಬಹಿರ್ಮುಖವಾಗದೇ ಇದ್ದಲ್ಲಿ ತಾನೇ ಆತ್ಮನಾಗಲಾರದೇನು ? ಎಂದು ಅಭಿಪ್ರಾಯ.

**ತದ್ವದ್ ವಿಷಯೋದ್ರಿಕ್ತಂ ತಮಃ ಪ್ರಧಾನಂ ಮನಃ ಕಲುಷಮ್ ।**
**ತಸ್ಮಿನ್ ವಿರಾಗಶುಷ್ಕೇ ಶನಕೈರಾವಿರ್ಭವೇತ್ ಸತ್ತ್ವಮ್ ॥ ೬೮ ॥**

೬೮. ಅದರಂತೆ ವಿಷಯಗಳ (ಸನ್ನಿಧಿಯಿಂದ) ಉಕ್ಕಿದ, ತಮೋಗುಣವೇ ಪ್ರಧಾನವಾಗಿ ಉಳ್ಳ ಮನಸ್ಸು ಕಲುಷಿತವಾಗಿರುವದು. ಅದು ವೈರಾಗ್ಯದಿಂದ ಒಣಗಲಾಗಿ ಮೆಲ್ಲಮೆಲ್ಲನೆ ಸತ್ತ್ವಗುಣವು ಎದ್ದು ಕೊಳ್ಳುವದು.

**ಯಂ ವಿಷಯಮಪಿ ಲಷಿತ್ವಾ ಧಾವತಿ ಬಾಹ್ಯೇನ್ದ್ರಿಯದ್ವಾರಾ ।**
**ತಸ್ಯಾಪ್ರಾಪ್ತೌ ಖಿದ್ಯತಿ ಯಥಾ ಸ್ವಂ ಗತಂ ಕಿಞ್ಚಿತ್ ॥ ೬೯ ॥**

೬೯. (ಮನಸ್ಸು) ಯಾವದಾದರೊಂದು ವಿಷಯವನ್ನು ಬಯಸಿ ಹೊರಗಿನ ಇಂದ್ರಿಯಗಳ ಮೂಲಕ ಪ್ರವರ್ತಿಸುವದು. ಅದು ಸಿಗದೆ ಇದ್ದಾಗ ತನ್ನದೇ ಏನಾದರೊಂದು ವಸ್ತುವು (ಹೋದರೆ ಹೇಗೋ ಹಾಗೆ) ದುಃಖಿಸುತ್ತದೆ.

**ನಗ-ನಗರ-ದುರ್ಗ-ದುರ್ಗಮಸರಿತಃ ಪರಿತಃ ಪರಿಭ್ರಮಚ್ಚೇತಃ ।**
**ಯದಿ ನೋ ಲಭತೇ ವಿಷಯಂ ವಿಷಯನ್ತ್ರಿತಮಿವ ಖಿನ್ನಮಾಯಾತಿ ॥ ೭೦ ॥**

೭೦. ಬೆಟ್ಟ, ಪಟ್ಟಣ, ಕೋಟೆ, ದಾಟಲಸಾಧ್ಯವಾದ ನದಿ-ಇವುಗಳನ್ನೆಲ್ಲ ಅಲೆಯುತ್ತಾ ಮನಸ್ಸು (ತನಗೆ ಬೇಕಾದ) ವಿಷಯವನ್ನು ಒಂದುವೇಳೆ ಪಡೆಯದೆ ಹೋದರೆ ವಿಷದಿಂದ ಆವರಿಸಲ್ಪಟ್ಟಂತೆ ಖೇದವನ್ನು ಹೊಂದುವದು.

**ತುಮ್ಬೀಫಲಂ ಜಲಾನ್ತರ್ಜಲಾದಧಃ ಕ್ಷಿಪ್ತಮಪ್ಯುಪೈತ್ಯೂರ್ಧ್ವಮ್ ।**
**ತದ್ವನ್ಮನಃ ಸ್ವರೂಪೇ ನಿಹಿತಂ ಯತ್ನಾದ್ ಬಹಿರ್ಯಾತಿ ॥ ೭೧ ॥**

೭೧. ಸೋರೆಕಾಯಿಯು ಬಲವಂತದಿಂದ ನೀರಿನೊಳಕ್ಕೆ ತಳ್ಳಿ ಮುಳುಗಿಸಲ್ಪಟ್ಟರೂ ಮತ್ತೆ ಮೇಲಕ್ಕೇ ಬರುವದು. ಹಾಗೆಯೇ ಮನಸ್ಸು ಪ್ರಯತ್ನದಿಂದ (ಆತ್ಮ) ಸ್ವರೂಪದಲ್ಲಿ ನಿಲ್ಲಿಸಲ್ಪಟ್ಟರೂ ಹೊರಕ್ಕೆ ಬರುವದಾಗಿದೆ.

**ಇಹ ವಾ ಪೂರ್ವ ಪೂರ್ವಭವೇ ವಾ ಸ್ವಕರ್ಮಣೈವಾರ್ಜಿತಂ ಫಲಂ ಯದ್ಯತ್ ।**
**ಶುಭಮಶುಭಂ ವಾ ತತ್ತದ್ಭೋಗೋಽಪ್ಯಪ್ರಾರ್ಥಿತೋ ಭವತಿ ॥ ೭೨ ॥**

೭೨. ಈ ಜನ್ಮದಲ್ಲಾಗಲೀ ಹಿಂದಿನ ಜನ್ಮದಲ್ಲಾಗಲೀ ಯಾವಯಾವ ಫಲವು ತನ್ನ ಕರ್ಮದಿಂದ ಸಂಪಾದಿಸಲ್ಪಟ್ಟಿರುವದೋ ಒಳ್ಳೆಯದಾಗಲಿ, ಕೆಟ್ಟದ್ದಾಗಲಿ ಅದರದರ ಫಲದ ಅನುಭವವು (ನಾವು) ಬಯಸದೇ ಇದ್ದರೂ ಉಂಟಾಗುವದು.

**ಚೇತಃ ಪಶುಮಶುಭಪಥಂ ಪ್ರಧಾವಮಾನಂ ನಿರಾಕರ್ತುಮ್ ।**
**ವೈರಾಗ್ಯಮೇಕಮುಚಿತಂ ಗಲಕಾಷ್ಠಂ ನಿರ್ಮಿತಂ ಧಾತ್ರಾ ॥ ೭೩ ॥**

೭೩. ಕೆಟ್ಟದಾರಿಯಲ್ಲಿ ಮುಂದೋಡುತ್ತಿರುವ ಮನಸ್ಸೆಂಬ ದನವನ್ನು ತಡೆಯುವದಕ್ಕೆ ತಕ್ಕ, ಕುತ್ತಿಗೆಯಲ್ಲಿ ನೇತಾಡುವ ಮರವು ಯಾವದೆಂದರೆ ಬ್ರಹ್ಮನು ನಿರ್ಮಿಸಿರುವ ವೈರಾಗ್ಯವೆಂಬ ಒಂದೇ ಯೋಗ್ಯವಾಗಿರುತ್ತದೆ.

**ನಿದ್ರಾವಸರೇ ಯತ್ಸುಖಮೇತತ್ ಕಿಂ ವಿಷಯಜಂ ಯಸ್ಮಾತ್ ।**
**ನ ಹಿ ಚೇನ್ದ್ರಿಯಪ್ರದೇಶಾವಸ್ಥಾನಂ ಚೇತಸೋ ನಿದ್ರಾ ॥ ೭೪ ॥**

೭೪. ನಿದ್ರೆಯ ಕಾಲದಲ್ಲಿ ಯಾವ ಸುಖವುಂಟಾಗುವದೋ ಅದು ವಿಷಯಗಳಿಂದ ಉಂಟಾದದ್ದೇನು ? (ಅಲ್ಲ). ಏಕೆಂದರೆ ಮನಸ್ಸು ಇಂದ್ರಿಯಪ್ರದೇಶದಲ್ಲಿರುವದೆಂಬುದು ನಿದ್ರೆಯಾಗಲಾರದು.

**ಅದ್ವಾರತುಙ್ಗಕುಡ್ಯೇ ಗೃಹೇಽವರುದ್ಧೋ ಯಥಾ ವ್ಯಾಘ್ರಃ ।**
**ಬಹುನಿರ್ಗಮಪ್ರಯತ್ನೈಃ ಶ್ರಾನ್ತಸ್ತಿಷ್ಠತಿ ಪತನ್ ಶ್ವಸಂಶ್ಚ ತಥಾ ॥ ೭೫ ॥**

೭೫. ಬಾಗಿಲಿಲ್ಲದ ಎತ್ತರವಾದ ಗೋಡೆಗಳುಳ್ಳ ಮನೆಯಲ್ಲಿ ಕೂಡಿ ಹಾಕಲ್ಪಟ್ಟ ಹುಲಿಯು ಹೊರಕ್ಕೆ ಬರಲು ಬಹಳ ಪ್ರಯತ್ನಪಟ್ಟು (ಸಾಧ್ಯವಾಗದೆ) ಬಳಲಿ ಬೀಳುತ್ತಾ ನಿಟ್ಟುಸಿರುಬಿಡುತ್ತಾ ಹೇಗೆ ನಿಲ್ಲುವದೋ ಹಾಗೆಯೇ (ಮನಸ್ಸೂ ಶಾಂತವಾಗುವದು.)

**ಸರ್ವೇನ್ದ್ರಿಯಾವರೋಧಾದುದ್ಯೋಗಶತೈರನಿರ್ಗಮಂ ವೀಕ್ಷ್ಯ ।**
**ಶಾನ್ತಂ ತಿಷ್ಠತಿ ಚೇತೋ ನಿರುದ್ಧಮತ್ವಂ ತದಾ ಯಾತಿ ॥ ೭೬ ॥**

೭೬. ಎಲ್ಲಾ ಇಂದ್ರಿಯಗಳನ್ನೂ ತಡೆದು ಮುಚ್ಚಿದ್ದರಿಂದ ನೂರಾರು ಪ್ರಯತ್ನಗಳಿಂದಲೂ ಹೊರಗೆ ಬರಲು ಸಾಧ್ಯವಾಗದೆ ಇರುವದನ್ನು ಕಂಡು ಮನಸ್ಸು ಶಾಂತವಾಗಿ ನಿಂತುಬಿಡುವದು. ಆಗ ಏನೊಂದೂ ವ್ಯಾಪಾರವಿಲ್ಲದ್ದಾಗುವದು.

**ಪ್ರಾಣಸ್ಪನ್ದನಿರೋಧಾತ್ ಸತ್ಸಙ್ಗಾದ್ವಾಸನಾತ್ಯಾಗಾತ್ ।**
**ಹರಿಚರಣಭಕ್ತಿಯೋಗಾನ್ಮನಃ ಸ್ವವೇಗಂ ಜಹಾತಿ ಶನೈಃ ॥ ೭೭ ॥**

೭೭. ಪ್ರಾಣಗಳ ವ್ಯಾಪಾರವನ್ನು ತಡೆಯುವದರಿಂದಲೂ ಸತ್ಪುರುಷರ ಸಹವಾಸದಿಂದಲೂ ವಾಸನೆಗಳನ್ನು ಬಿಡುವದರಿಂದಲೂ ವಿಷ್ಣುವಿನ ಪಾದಗಳಲ್ಲಿ ಭಕ್ತಿಯನ್ನು ಮಾಡುವದರಿಂದಲೂ ಮನಸ್ಸು ತನ್ನ ಚಾಂಚಲ್ಯವನ್ನು ಮೆಲ್ಲಮೆಲ್ಲಗೆ ಬಿಡುವದು.

## ವೈರಾಗ್ಯ

**ಪರಗೃಹಗೃಹಿಣೀ ಪುತ್ರದ್ರವಿಣಾನಾಮಾಗಮೇ ವಿನಾಶೇ ವಾ ।**
**ಕಥಿತೌ ಹರ್ಷವಿಷಾದೌ ಕಿಂ ವಾ ಸ್ಯಾತಾಂ ಕ್ಷಣಂ ಸ್ಥಾತುಃ ॥ ೭೮ ॥**

೭೮. ಮತ್ತೊಬ್ಬರ ಮನೆಯಲ್ಲಿ ಸ್ವಲ್ಪಹೊತ್ತು ಇದ್ದು ಹೋಗುವವನಿಗೆ (ಆ ಮನೆಯ ಯಜಮಾನನ) ಹೆಂಡತಿ, ಮಗ, (ಅವನ) ಹಣ- ಮುಂತಾದವು ಬಂದರಾಗಲಿ, ಹೋದರಾಗಲಿ, ಸಂತೋಷ ಅಥವಾ ದುಃಖಗಳು ಆದಾವೇನು ?

**ದೈವಾತ್ ಸ್ಥಿತಂ ಗತಂ ವಾ ಯಂ ಕಂಚಿದ್ವಿಷಯಮಾಢ್ಯಮಲ್ಪಂ ವಾ ।**
**ನೋ ತುಷ್ಯನ್ ನ ಚ ಸೀದನ್ ವೀಕ್ಷ್ಯ ಗೃಹೇಷ್ವತಿಥಿವನ್ನಿವಸೇತ್ ॥ ೭೯ ॥**

೭೯. ದೈವಯೋಗದಿಂದ ಬಂದೊದಗಿದ ಅಥವಾ ತೊಲಗಿದ ಯಾವದಾದರೊಂದು ಭೋಗವನ್ನು - ಅದು ಹೊಗಳುವಂಥದ್ದಾಗಲಿ, ಸ್ವಲ್ಪವಾಗಿರಲಿ, ಹಿಗ್ಗದೆ ಕುಗ್ಗದೆ ನೋಡುತ್ತಾ ಮನೆಯಲ್ಲಿ ಅತಿಥಿಯಂತೆ ಇದ್ದು ಕೊಂಡಿರಬೇಕು.

**ಮಮತಾಭಿಮಾನಶೂನ್ಯೋ ವಿಷಯೇಷು ಪರಾಙ್ಮುಖಃ ಪುರುಷಃ ।**
**ತಿಷ್ಠನ್ನಪಿ ನಿಜಸದನೇ ನ ಬಾಧ್ಯತೇ [1] ಕರ್ಮಭಿಃ ಕ್ವಾಪಿ ॥ ೮೦ ॥**

೮೦. ನನ್ನದು- ಎಂಬ ಅಭಿಮಾನವಿಲ್ಲದವನಾಗಿ ವಿಷಯಗಳ ಕಡೆಯಿಂದ ಹಿಂದಿರುಗಿದವನಾಗಿರುವ ಮನುಷ್ಯನು ತನ್ನ ಮನೆಯಲ್ಲಿಯೇ ಇದ್ದುಕೊಂಡಿದ್ದರೂ ಯಾವಾಗಲೂ ಕರ್ಮಗಳಿಂದ ಕಟ್ಟಲ್ಪಡುವದಿಲ್ಲ.

**ಕುತ್ರಾಪ್ಯರಣ್ಯದೇಶೇ ಸುನೀಲತೃಣವಾಲುಕೋಪಚಿತೇ ।**
**ಶೀತಲತರುತಲಭೂಮೌ ಸುಖಂ ಶಯಾನಸ್ಯ ಪುರುಷಸ್ಯ ॥ ೮೧ ॥**

೮೧. ಎಲ್ಲಿಯೋ ಒಂದು ಕಾಡಿನ ಪ್ರದೇಶದಲ್ಲಿಯೂ ದಟ್ಟವಾದ ಹಸಿರಾದ ಹುಲ್ಲುಗಳು, ಮರಳು-ತುಂಬಿರುವಲ್ಲಿಯೂ ತಂಪಾದ ನೆರಳುಳ್ಳ ಭೂಮಿಯಲ್ಲಿಯೂ (ಎಲ್ಲಿಯಾದರೂ) ಮಲಗಿರುವ ಪುರುಷನಿಗೂ) ಸುಖವು (ದೊರೆಯುವದು.) [2]

**ತರವಃ ಪತ್ರಫಲಾಢ್ಯಾಃ ಸುಗನ್ಧಶೀತಲಾನಿಲಾಃ ಪರಿತಃ ।**
**ಕಲಕೂಜಿತವರವಿಹಗಾಃ ಸರಿತೋ ಮಿತ್ರಾಣಿ ಕಿಂ ನ ಸ್ಯುಃ ॥ ೮೨ ॥**

೮೨. ಎಲೆಗಳು, ಹಣ್ಣುಗಳಿಂದ ಕೂಡಿದ ಮರಗಳು, ಸುತ್ತಲೂ (ಹರಡಿರುವ) ಸುವಾಸನೆಯಿಂದ ಕೂಡಿದ ತಂಪಾದ ಗಾಳಿ, ಮಧುರವಾಗಿ ಕೂಗುವ ಶ್ರೇಷ್ಠವಾದ ಹಕ್ಕಿಗಳು ಇವು ಸ್ನೇಹಿತರಾಗಲಾರವೇನು?

**ವೈರಾಗ್ಯಭಾಗ್ಯಭಾಜಃ ಪ್ರಸನ್ನಮನಸೋ ನಿರಾಶಸ್ಯ ।**
**ಅಪ್ರಾರ್ಥಿತಫಲಭೋಕ್ತುಃ ಪುಂಸೋ ಜನ್ಮನಿ ಕೃತಾರ್ಥತೇಹ ಸ್ಯಾತ್ ॥ ೮೩ ॥**

೮೩. ವೈರಾಗ್ಯವೆಂಬ ಐಶ್ವರ್ಯವನ್ನು ಹೊಂದಿರುವ, ಪ್ರಸನ್ನವಾದ ಚಿತ್ತವುಳ್ಳ ಆಸೆಗಳಿಲ್ಲದಿರುವ, ಬಯಸದೆ ಬಂದೊದಗಿದ ಫಲಗಳನ್ನು ಅನುಭವಿಸುವ ಮನುಷ್ಯನಿಗೆ ಇದೇ ಜನ್ಮದಲ್ಲಿಯೇ ಕೃತಕೃತ್ಯತೆಯು ಉಂಟಾಗುವದು.

**ದ್ರವ್ಯಂ ಪಲ್ಲವತಶ್ಚ್ಯುತಂ ಯದಿ ಭವೇತ್ ಕ್ವಾಪಿ ಪ್ರಮಾದಾತ್ತದಾ**
**ಶೋಕಾಯಾಥ ತದರ್ಪಿತಂ ಶ್ರುತವತೇ ತೋಷಾಯ ಚ ಶ್ರೇಯಸೇ ।**
**ಸ್ವಾತನ್ತ್ರ್ಯಾದ್ ವಿಷಯಾಃ ಪ್ರಯಾನ್ತಿ ಯದಮೀ ಶೋಕಾಯ ತೇ ಸ್ಯುಶ್ಚಿರಂ**
**ಸಂತ್ಯಕ್ತಾಃ ಸ್ವಯಮೇವ ಚೇತ್ ಸುಖಮಯಂ ನಿಃಶ್ರೇಯಸಂ ತನ್ವತೇ ॥ ೮೪ ॥**

೮೪. ಯಾವಾಗಲಾದರೂ ಒಂದು (ಕಾಯಾಗಿರುವ) ವಸ್ತುವು ಚಿಗುರಾದ (ತೊಟ್ಟನಿಂದ) ಕೈತಪ್ಪಿನಿಂದ ಕಳಚಿಬಿದ್ದರೆ ಆಗ ಅದು ದುಃಖಕ್ಕೆ ಕಾರಣವಾಗುವದು. ಆದರೆ (ಅದು) (ಸಕಾಲದಲ್ಲಿ ಕಳಚಿಕೊಂಡಾಗ) ಯಾರಿಗಾದರೂ ಕೈಯೆತ್ತಿ

1. 'ಬಧ್ಯತೇ' ಎಂಬ ಪಾಠವಿದ್ದರೆ ಚೆನ್ನಾಗಿ ಅರ್ಥವಾಗುತ್ತದೆ.

2. ಸುಖಕ್ಕಾಗಿ ವಿಷಗಳ ರಾಶಿಯೇ ಬೇಕೆಂಬ ನಿಯಮವಿಲ್ಲ.

ಕೊಡಲ್ಪಟ್ಟಿತೆಂತ ಕೇಳಿದರೆ ಸಂತೋಷಕ್ಕೂ ಶ್ರೇಯಸ್ಸಿಗೂ ಕಾರಣವಾಗುವದು.[1] ಹಾಗೆಯೇ ವಿಷಯಗಳೂ ಕೂಡ (ಮನುಷ್ಯನು ಇನ್ನೂ ವೈರಾಗ್ಯದಿಂದ ಪಕ್ವನಾಗದೆ ಇರುವಾಗ) ಸ್ವತಂತ್ರವಾಗಿ (ತಾವಾಗಿಯೇ ನಮ್ಮನ್ನು ಬಿಟ್ಟು) ಹೋದರೆ ಅವು ಬಹಳ ವಾದ ದುಃಖವನ್ನೇ ಉಂಟುಮಾಡುವವು. ಆದಕ್ಕೆ ಬದಲು ನಾವಾಗಿಯೇ ಅವುಗಳನ್ನು ಕೈಬಿಟ್ಟಾಗ ಅವು ಸುಖಕರವಾದ ಮೋಕ್ಷವನ್ನೇ ಕೊಡುವವು.

**ವಿಸ್ಮೃತ್ಯಾತ್ಮನಿವಾಸಮುತ್ಕಟಭವಾಟವ್ಯಾಂ ಚಿರಂ ಪರ್ಯಟನ್-**
**ಸನ್ತಾಪತ್ರಯದೀರ್ಘದಾವದಹನಜ್ವಾಲಾವಲೀವ್ಯಾಕುಲಃ ।**
**ವಲ್ಗನ್ ಫಲ್ಗುಷು ಸುಪ್ರದೀಪ್ತನಯನಶ್ಚೇತಃ ಕುರಙ್ಗೋ ಬಲಾತ್**
**ಆಶಾಪಾಶವಶೀಕೃತೋಽಪಿ ವಿಷಯವ್ಯಾಘ್ರೈರ್ಮೃಷಾ ಹನ್ಯತೇ ॥ ೮೫ ॥**

೮೫. ತಾನಿರುವ ವಾಸಸ್ಥಳವನ್ನು ಮರೆತು ಭಯಂಕರವಾದ ಸಂಸಾರವೆಂಬ ಕಾಡಿನಲ್ಲಿ ಬಹುಕಾಲ ಸುತ್ತಾಡುತ್ತಾ ತಾಪತ್ರಯಗಳೆಂಬ ಉದ್ದವಾದ ಕಾಡುಗಿಚ್ಚಿನ ಬೆಂಕಿಯ ಉರಿಯಿಂದ ಕಳವಳಗೊಂಡದ್ದಾಗಿ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡ ಈ ಮನಸ್ಸೆಂಬ ಜಿಂಕೆಯು ಸಣ್ಣಸಣ್ಣ ಪ್ರದೇಶಗಳಲ್ಲಿ ನೆಗೆಯುತ್ತಾ ವ್ಯರ್ಥವಾಗಿ, ವಿಷಯಗಳೆಂಬ ಹುಲಿಗಳಿಂದ ಕೊಲ್ಲಲ್ಪಡುತ್ತದೆ.

## ಆತ್ಮಸಿದ್ಧಿ

**ಉತ್ಪನ್ನೇಽಪಿ ವಿರಾಗೇ ವಿನಾ ಪ್ರಬೋಧಂ ಸುಖಂ ನ ಸ್ಯಾತ್ ।**
**ಸ ಭವೇದ್ ಗುರೂಪದೇಶಾತ್ತಸ್ಮಾದ್ಗುರುಮಾಶ್ರಯೇತ್ ಪ್ರಥಮಮ್ ॥ ೮೬ ॥**

೮೬. ವೈರಾಗ್ಯವು ಉಂಟಾದರೂ ಜ್ಞಾನವಿಲ್ಲದೆ ಸುಖವು ಲಭಿಸಲಾರದು. (ಆ ಜ್ಞಾನವಾದರೊ,) ಗುರೂಪದೇಶದಿಂದ ಉಂಟಾಗುತ್ತದೆ. ಆದ್ದರಿಂದ ಮೊದಲು ಗುರುವನ್ನು ಆಶ್ರಯಿಸಬೇಕು.

**ಯದ್ಯಪಿ ಜಲಧೇರುದಕಂ ಯದ್ಯಪಿ ವಾ ಪ್ರೇರಕೋಽನಿಲಸ್ತತ್ರ ।**
**ತದಪಿ ಪಿಪಾಸಾಕುಲಿತಃ ಪ್ರತೀಕ್ಷತೇ ಚಾತಕೋ ಮೇಘಮ್ ॥ ೮೭ ॥**

೮೭. ಸಮುದ್ರದಲ್ಲಿ ನೀರು ಇದ್ದುಕೊಂಡೇನೋ ಇದೆ. ಅಲ್ಲಿ ನೀರನ್ನು

---

1. ಉದಾಹರಣೆಗೆ ಒಂದು ತೆಂಗಿನಕಾಯಿಯು ಇನ್ನೂ ಬಲಿಯದೆ ಇರುವಾಗ ಮರದಿಂದ ಕಳ್ಳನು ಕಿತ್ತು ಅಪಹರಿಸಿದರೆ ಯಜಮಾನನಿಗೆ ದುಃಖವಾಗುವದು. ಆದರೆ ಅದೇ ಕಾಯಿಯು ಸಕಾಲದಲ್ಲಿ ಕೀಳಲ್ಪಟ್ಟು ಯಾರಿಗಾದರೂ ದಾನಮಾಡಲ್ಪಟ್ಟರೆ ಯಜಮಾನನಿಗೆ ಸುಖವೇ (ಆನಂದವೇ) ಆಗುವದು. ಹಾಗೆ ವಿಷಯಗಳೂ ಅವೇ ನಮ್ಮನ್ನು ಬಿಡುವದಕ್ಕಿಂತ ನಾವಾಗಿಯೇ ಅವನ್ನು ಕೈಬಿಟ್ಟಲ್ಲಿ ಸುಖವಾಗುತ್ತದೆ.

ಎಚ್ಚಿಸುವ ಗಾಳಿಯೂ ಇದೆ. ಹೀಗಿದ್ದರೂ ಬಾಯಾರಿದ ಚಾತಕಪಕ್ಷಿಯು ಮೋಡವನ್ನು ನಿರೀಕ್ಷಿಸುತ್ತದೆ. [1]

**ತ್ರೇಧಾ ಪ್ರತೀತಿರುಕ್ತಾ ಶಾಸ್ತ್ರಾದ್ ಗುರುತಸ್ತಥಾತ್ಮನಸ್ತತ್ರ ।**
**ಶಾಸ್ತ್ರಪ್ರತೀತಿರಾದೌ ಯದ್ವನ್ಮಧುರೋ ಗುಡೋಽಸ್ತೀತಿ ॥ ೮೮ ॥**

೮೮. ಜ್ಞಾನವು ಮೂರು ಬಗೆಯಿಂದ ಉಂಟಾಗುವದೆನ್ನುವರು. ಶಾಸ್ತ್ರದಿಂದ, ಗುರುವಿನಿಂದ, ಮತ್ತು ತನ್ನ (ಅನುಭವದಿಂದ)-ಇದೇ ಆ ಮೂರು ಬಗೆಗಳು. ಅದರಲ್ಲಿ ಶಾಸ್ತ್ರಜ್ಞಾನವೇ ಮೊದಲನೆಯದು. 'ಬೆಲ್ಲವು ಸಿಹಿಯಾಗಿದೆ' ಎಂಬ ವಾಕ್ಯವು ಹೇಗೋ ಹಾಗೆ.

**ಆಗ್ರೇ ಗುರುಪ್ರತೀತಿರ್ದೂರಾದ್ ಗುಡದರ್ಶನಂ ಯದ್ವತ್ ।**
**ಆತ್ಮಪ್ರತೀತಿರಸ್ಮಾದ್ ಗುಡಭಕ್ಷಣಜಂ ಸುಖಂ ಯದ್ವತ್ ॥ ೮೯ ॥**

೮೯. ಮೊದಲು ಗುರುವಿನಿಂದ ಆಗುವ ಜ್ಞಾನವು ದೂರದಲ್ಲಿ ಬೆಲ್ಲವನ್ನು ನೋಡಿದರೆ ಹೇಗೋ ಹಾಗೆ. ಅಲ್ಲಿಂದ ಮುಂದೆ ತನ್ನಲ್ಲಿಯೇ ಆಗುವ ಅನುಭವವು ಬೆಲ್ಲವನ್ನೇ ತಿಂದರೆ ಸುಖವು ಹೇಗೆ ಉಂಟಾಗುವದೋ ಹಾಗೆ.

**ರಸಗನ್ಧರೂಪಶಬ್ದಸ್ಪರ್ಶಾ ಅನ್ಯೇ ಪದಾರ್ಥಾಶ್ಚ ।**
**ತಸ್ಮಾದನುಭೂಯನ್ತೇ ನೋ ದೇಹಾನ್ನೇನ್ದ್ರಿಯಗ್ರಾಮಾತ್ ॥ ೯೦ ॥**

೯೦. ರುಚಿ, ವಾಸನೆ, ರೂಪ, ಶಬ್ದ, ಸ್ಪರ್ಶ- ಇವುಗಳೂ ಉಳಿದ ಪದಾರ್ಥಗಳೂ ದೇಹದಿಂದಲಾಗಲಿ, ಇಂದ್ರಿಯಗಳ ಸಮೂಹದಿಂದಲಾಗಲಿ ಏಕೆ ಅನುಭವಿಸಲ್ಪಡುವದಿಲ್ಲ? (ಎಂದರೆ ಆತ್ಮನಿಲ್ಲದೆ ಅವುಗಳಿಗೆ ಪ್ರವೃತ್ತಿಯಿಲ್ಲ.)

**ಮೃತದೇಹೇನ್ದ್ರಿಯವರ್ಗೋ ಯತೋ ನ ಜಾನಾತಿ ದಾಹಜಂ ದುಃಖಮ್ ।**
**ಪ್ರಾಣಶ್ಚೇನ್ನಿದ್ರಾಯಾಂ ತಸ್ಕರಬಾಧಾಂ ಸ ಕಿಂ ವೇತ್ತಿ ॥ ೯೧ ॥**

೯೧. ಸತ್ತು ಹೋಗಿರುವವನ ದೇಹ, ಇಂದ್ರಿಯಗಳ ಗುಂಪು ದೇಹವನ್ನು ಸುಡುವದರಿಂದಾಗುವ ದುಃಖವನ್ನು ಅರಿಯುವದಿಲ್ಲ. ಹಾಗೆಯೇ ಪ್ರಾಣನೂ (ಆತ್ಮನಲ್ಲ). ಏಕೆಂದರೆ (ಅವನೇ ಆತ್ಮನಾಗಿದ್ದರೆ) ನಿದ್ರೆಮಾಡುತ್ತಿರುವಾಗ ಸಂಭವಿಸಬಹುದಾದ ಕಳ್ಳರ ಬಾಧೆಯನ್ನು ಏಕೆ ಅರಿಯುವದಿಲ್ಲ? [2]

---

1. ಚಾತಕವೆಂಬ ಪಕ್ಷಿಗೆ ಕುತ್ತಿಗೆಯಲ್ಲಿ ತೂತು ಇರುವದರಿಂದ ಅದು ಬಾಯಿಂದ ನೀರು ಕುಡಿಯಲಾರದು. ಆದ್ದರಿಂದ ಮಳೆಯಿಂದ ಬೀಳುವ ನೀರನ್ನೇ ಅದು ಆಶ್ರಯಿಸಿ ಬಾಯಾರಿಕೆಯನ್ನು ಪರಿಹರಿಸಿಕೊಳ್ಳುತ್ತದೆ. ಬೇರೆಯ ನೀರು ಇದ್ದರೂ ಉಪಯೋಗವಿಲ್ಲ. ಹಾಗೆಯೇ ವೈರಾಗ್ಯವೂ ಶಾಸ್ತ್ರವೂ ಇದ್ದರೂ ಗುರುವಿಲ್ಲದೆ ಜ್ಞಾನವಾಗುವದಿಲ್ಲ. ಮುಮುಕ್ಷುವು ಚಾತಕಪಕ್ಷಿಯಂತೆ ಗುರುವನ್ನೇ ಜ್ಞಾನಕ್ಕಾಗಿ ಬಳಿಸಾರಬೇಕೆಂದು ಅಭಿಪ್ರಾಯ.

2. ಆದ್ದರಿಂದ ದೇಹಾದಿಗಳಾಗಲಿ, ಪ್ರಾಣವಾಗಲಿ ಆತ್ಮನಲ್ಲ; ಜ್ಞಾತೃವಲ್ಲ ವೆಂದಾಯಿತು.

**ಮನಸೋ ಯದಿ ವಾ ವಿಷಯಸ್ತದ್ಯುಗಪತ್ ಕಿಂ ನ ಜಾನಾತಿ ।**
**ತಸ್ಯ ಪರಾಧೀನತ್ವಾದ್ಯತಃ ಪ್ರಮಾದಸ್ಯ ಕಸ್ತ್ರಾತಾ ॥೬೨॥**

೬೨. ಮನಸ್ಸಿಗೆ ಎಲ್ಲವೂ ವಿಷಯವಾಗುವದಾದರೆ ಅದು ಒಂದೇಬಾರಿಗೆ ಏಕೆ ಎಲ್ಲವನ್ನೂ ಅರಿಯುವದಿಲ್ಲ? ಅದು ಪರಾಧೀನವಾಗಿರುವದರಿಂದ- ಎನ್ನುವದಾದರೆ ತಪ್ಪುಗಳಿಂದ ಕಾಪಾಡುವವರು ಯಾರು? [1]

**ಗಾಢಧ್ವಾನ್ತಗೃಹಾನ್ತತಃ ಕ್ಷಿತತಲೇ ದೀಪಂ ನಿಧಾಯೋಜ್ಜ್ವಲಂ**
**ಪಞ್ಚಚ್ಛಿದ್ರಮಧೋಮುಖಂ ಹಿ ಕಲಶಂ ತಸ್ಯೋಪರಿ ಸ್ಥಾಪಯೇತ್ ।**
**ತದ್ಬಾಹ್ಯೇ ಪರಿತೋಽನುರನ್ಧ್ರಮಮಲಾಂ ವೀಣಾಂ ಚ ಕಸ್ತೂರಿಕಾಂ**
**ಸದ್ರತ್ನಂ ವ್ಯಜನಂ ನ್ಯಸೇಚ್ಚ ಕಲಶಚ್ಛಿದ್ರಾದ್ಧ್ವನಿರ್ಗಚ್ಛತಾಮ್ ॥ ೬೩ ॥**

೬೩. ದಟ್ಟವಾದ ಕತ್ತಲೆಯುಳ್ಳ ಮನೆಯೊಳಗೆ ನೆಲದಮೇಲೆ ಪ್ರಕಾಶಮಾನವಾದ ದೀಪವನ್ನಿಟ್ಟು ಅದರಮೇಲೆ ಐದು ತೂತುಗಳುಳ್ಳ ಮಡಕೆಯನ್ನು ತಲೆಕೆಳಗಾಗಿ ಮುಚ್ಚ ಬೇಕು. ಅದರ ಹೊರಭಾಗದಲ್ಲಿ ಸುತ್ತಲೂ ಒಂದೊಂದು ತೂತಿನ ಹತ್ತಿರವೂ ವೀಣೆ, ಕಸ್ತೂರಿ, ಒಳ್ಳೆಯ ರತ್ನ, ಬೀಸಣಿಗೆ ಇವುಗಳನ್ನಿಟ್ಟರೆ ತೂತುಗಳ (ಬೆಳಕು) ಆಯಾ ವಸ್ತು ಗಳನ್ನು ಬೆಳಗುತ್ತದೆ.[2]

**ತೇಜೋಂಽಶೇನ ಪೃಥಕ್ ಪದಾರ್ಥನಿವಹಜ್ಞಾನಂ ಹಿ ಯಜ್ಜಾಯತೇ**
**ತದ್ರನ್ಧ್ರೈಃ ಕಲಶೇನ ವಾ ಕಿಮು ಮೃದೋ ಭಾಣ್ಡೇನ ತೈಲೇನ ವಾ ।**
**ಕಿಂ ಸೂತ್ರೇಣ ನ ಚೈತದಸ್ತಿ ರುಚಿರಂ ಪ್ರತ್ಯಕ್ಷಬಾಧಾದತೋ**
**ದೀಪಜ್ಯೋತಿರಿಹೈಕಮೇವ ಶರಣಂ ದೇಹೇ ತಥಾತ್ಮಾ ಸ್ಥಿತಃ ॥ ೬೪ ॥**

೬೪. ಬೆಳಕಿನ ಅಂಶದಿಂದ ಬೇರೆಬೇರೆಯ ಪದಾರ್ಥಗಳ ಸಮೂಹದ ಯಾವ ಜ್ಞಾನವು ಉಂಟಾಗುವದೋ ಅದು ತೂತುಗಳಿಂದಲಾಗಲಿ, ಕೊಡದಿಂದಲಾಗಲಿ, ಮಣ್ಣಿನ ಮಡಕೆಯಿಂದಾಗಲಿ, ಎಣ್ಣೆಯಿಂದಲಾಗಲಿ, ಬತ್ತಿಯಿಂದಲಾಗಲಿ- ಏತರಿಂದಾ ಗಿದೆ ? ಎಂದರೆ ಯಾವದರಿಂದಲೂ ಅಲ್ಲ. ಏಕೆಂದರೆ ಹಾಗೆ ಒಪ್ಪುವದು ಪ್ರತ್ಯಕ್ಷ ವಿರುದ್ಧವಾಗಿರುತ್ತದೆ. ಆದ್ದರಿಂದ ಇಲ್ಲಿ ದೀಪದ ಬೆಳಕೊಂದೇ ಗತಿ. ಹಾಗೆಯೇ ಆತ್ಮನೂ ದೇಹದಲ್ಲಿದ್ದು ಕೊಂಡಿರುವನು.[3]

---

1. ಮನಸ್ಸಿಗೂ ಯಜಮಾನನಾದ ಬೇರೊಬ್ಬ ಆತ್ಮನಿಲ್ಲದಿದ್ದರೆ ಈ ಆಕ್ಷೇಪಣೆಯು ಹಾಗೆಯೇ ಉಳಿಯುವದು.

2. ಬೆಳಕು ಎಲ್ಲಾ ರಂಧ್ರಗಳಲ್ಲಿಯೂ ತಾನೊಂದೇ ಆಗಿದ್ದು ಹೊರಬಂದು ಆಯಾ ಪದಾರ್ಥ ಗಳನ್ನು ಪ್ರಕಾಶಗೊಳಿಸುತ್ತದೆಯಾದರೂ ಪದಾರ್ಥಗಳ ಸಂಬಂಧವೇನೂ ಬೆಳಕಿಗೆ ಇರುವದಿಲ್ಲ. ಅವುಗಳ ಗುಣದೋಷಗಳೂ ಬೆಳಕಿಗೆ ಇಲ್ಲ.

3. ವಸ್ತುಗಳನ್ನು ಬೆಳಗುವ ಬೆಳಕಿನಂತೆ ಆತ್ಮನು ದೇಹದಲ್ಲಿದ್ದುಕೊಂಡು ಎಲ್ಲಾ ಕರಣವ್ಯಾಪಾರ ಗಳಿಗೂ ಸಾಕ್ಷಿಯಾಗಿರುವನು.

## ಮಾಯಾಸಿದ್ಧಿ

**ಚಿನ್ಮಾತ್ರಃ ಪರಮಾತ್ಮಾ ಹ್ಯಪಶ್ಯದಾತ್ಮಾನಮಾತ್ಮತಯಾ ।**
**ಅಭವತ್ ಸೋಽಹಂ ನಾಮಾ ತಸ್ಮಾದಾಸೀದ್ ಭಿದೋ ಮೂಲಮ್ ॥೯೫॥**

೯೫ ಚೈತನ್ಯಮಾತ್ರಸ್ವರೂಪನಾಗಿರುವ ಪರಮಾತ್ಮನು ತನ್ನನ್ನು ತನ್ನಲ್ಲಿಯೇ ತಾನಾಗಿಯೇ ಕಂಡುಕೊಂಡನು. ಆದರಿಂದ 'ಅಹಂ' ಎಂಬ ಹೆಸರಿನವನಾದನು. ಅದೇ ಈ ಭೇದವು ತೋರುವದಕ್ಕೆ ಮೂಲವಾಗಿರುವದು.

**ದ್ವೇಧೈವ ಭಾತಿ ತಸ್ಮಾತ್ ಪತಿಶ್ಚ ಪತ್ನೀ ಚ ತೌ ಭವೇತಾಂ ವೈ ।**
**ತಸ್ಮಾದಯಮಾಕಾಶಸ್ತ್ರಿಧೈವ ಪರಿಪೂರ್ಯತೇ ಸತತಮ್ ॥ ೯೬ ॥**

೯೬. ಅದರಿಂದಲೇ ಎರಡು ಬಗೆಯಾಗಿರುವ ಪತಿ, ಪತ್ನಿ - ಎಂಬ ಆ ಇಬ್ಬರು ಉಂಟಾಗುವರಷ್ಟೆ! ಆದ್ದರಿಂದ ಈ ಆಕಾಶವು ಯಾವಾಗಲೂ ಮೂರು ರೀತಿಯಿಂದ ತುಂಬಲ್ಪಡುತ್ತದೆ.[1]

**ಸೋಽಯಮಪೀಕ್ಷಾಂಚಕ್ರೇ ತತೋ ಮನುಷ್ಯಾ ಅಜಾಯನ್ತ ।**
**ಇತ್ಯುಪನಿಷದಃ ಪ್ರಾಹುಃ ದಯಿತಾಂ ಪ್ರತಿ ಯಾಜ್ಞವಲ್ಕ್ಯೋಕ್ತ್ಯಾ ॥೯೭॥**

೯೭. ಆ ಇವನು ನೋಡಿದನು. ಅದರಿಂದ ಮನುಷ್ಯರು ಹುಟ್ಟಿದರು. ಹೀಗೆಂದು ಉಪನಿಷತ್ತುಗಳು ಹೇಳುವವು. ಹೆಂಡತಿಯನ್ನು ಕುರಿತು ಯಾಜ್ಞವಲ್ಕ್ಯರು ಹೇಳಿರುವ ಮಾತಿನಿಂದಲೂ ತಿಳಿಯಬರುವದು.[2]

**ಚಿರಮಾನನ್ದಾನುಭವಾತ್ ಸುಷುಪ್ತಿರಿವ ಕಾಪ್ಯವಸ್ಥಾಽಭೂತ್ ।**
**ಪರಮಾತ್ಮನಸ್ತು ತಸ್ಮಾತ್ ಸ್ವಪ್ನವದೇವೋತ್ಥಿತಾ ಮಾಯಾ ॥ ೯೮ ॥**

೯೮. ಬಹಳಕಾಲ ಆನಂದವನ್ನು ಅನುಭವಿಸಿದ್ದರಿಂದ ಗಾಢನಿದ್ರೆಯಂತೆ ಯಾವದೋ ಒಂದವಸ್ಥೆಯು ಇದ್ದಿತು. ಅದರಿಂದ ಎದ್ದುಕೊಂಡ ಕನಸಿನಂತೆಯೇ ಮಾಯೆಯೂ ಪರಮಾತ್ಮನಿಂದ ಎದ್ದು ಕೊಂಡಿರುವದು.

**ಸದಸದ್ವಿಲಕ್ಷಣಾಽಸೌ ಪರಮಾತ್ಮ ಸದಾಶ್ರಯಾಽನಾದಿಃ ।**
**ಸಾ ಚ ಗುಣತ್ರಯರೂಪಾ ಸೂತೇ ಸಚರಾಚರಂ ವಿಶ್ವಮ್ ॥ ೯೯ ॥**

---

1. ಮೂಲಾನುಸಾರಿಯಾದ ಅನುವಾದವಿದು. ಆದರೆ 'ಸ್ತ್ರಿಯೈವ' (ಸ್ತ್ರೀಯಿಂದಲೇ) ಎಂಬ ಪಾಠ ವಿದ್ದರೆ ಬೃಹ. ೧-೪-೩ರ ಶ್ರುತಿಗೆ ಅನುಗುಣವಾಗಿ ಅರ್ಥಮಾಡಬಹುದು. ಪ್ರಕೃತಕ್ಕೆ ಹೊಂದಿಯೂ ಹೊಂದುತ್ತದೆ. ವಿದ್ವಾಂಸರು ಪರ್ಯಾಲೋಚಿಸಬೇಕು.

2. ಮೈತ್ರೇಯೀ ಯಾಜ್ಞವಲ್ಕ್ಯಸಂವಾದದಲ್ಲಿ ಪರಮಾತ್ಮನಿಂದಲೇ ಎಲ್ಲವೂ ಉಂಟಾಯಿತೆಂಬ ವಿಷಯವಿದ್ದರೂ ಪತಿಪತ್ನಿಯರಾಗಿ ವಿಭಾಗವಾದ ವಿಚಾರವಿಲ್ಲ- ಹಾಗೆಂತ ಇಲ್ಲಿ ಹೇಳಿರುವದರ ಅಭಿಪ್ರಾಯವೇನೆಂಬುದು ಗೊತ್ತಾಗಿಲ್ಲ.

೯೯. ಅದು ಸತ್ತಿಗಿಂತಲೂ ಅಸತ್ತಿಗಿಂತಲೂ ವಿಲಕ್ಷಣವಾಗಿರುವದು. ಪರಮಾತ್ಮನೆಂಬ ಸದಾಶ್ರಯವುಳ್ಳದ್ದಾಗಿ ಅನಾದಿಯಾಗಿರುವದು. ಮತ್ತು ಅದು ಮೂರು ಗುಣಗಳ ರೂಪದಲ್ಲಿದ್ದು ಚರಾಚರಾತ್ಮಕವಾದ ಪ್ರಪಂಚವನ್ನೆಲ್ಲ ಹಡೆಯುತ್ತಿರುವದು.

**ಮಾಯಾ ತಾವದದೃಶ್ಯಾ ದೃಶ್ಯಂ ಕಾರ್ಯಂ ಕಥಂ ಜನಯೇತ್ ।**
**ತನ್ತುಭಿರದೃಶ್ಯರೂಪೈಃ ಪಟೋऽತ್ರ ದೃಶ್ಯಃ ಕಥಂ ಭವತಿ ॥ ೧೦೦ ॥**

೧೦೦. (ಆಕ್ಷೇಪ)- ಅದೃಶ್ಯ (ಕಾಣಿಸದಿರುವ) ಮಾಯೆಯು ದೃಶ್ಯವಾದ ಕಾರ್ಯವನ್ನು ಹೇಗೆ ಉಂಟುಮಾಡೀತು? ಅದೃಶ್ಯವಾಗಿರುವ ದಾರಗಳಿಂದಾದ ಬಟ್ಟೆಯು ದೃಶ್ಯವಾಗುವದಾದರೂ ಹೇಗೆ?

**ಸ್ವಪ್ನೇ ಸುರತಾನುಭವಾತ್ ಶುಕ್ರದ್ರಾವೋ ಯಥಾ ಶುಭೇ ವಸನೇ ।**
**ಅನೃತಂ ರತಂ ಪ್ರಬೋಧೇ ವಸನೋಪಹತಿರ್ಭವೇತ್ ಸತ್ಯಾ ॥ ೧೦೧ ॥**

೧೦೧. (ಸಮಾಧಾನ) : ಕನಸಿನಲ್ಲಿ ಸುರತಾನುಭವವಾದಂತೆ ಕಂಡಾಗ ಎಚ್ಚರದಲ್ಲಿ ಹೇಗೆ ಶ್ರುಭ್ರವಾದ ಬಟ್ಟೆಯಲ್ಲಿ ವೀರ್ಯದ ಸ್ಖಲನವು ಕಂಡುಬರುವದೋ ರತಿಯೆಂಬದು ಸುಳ್ಳಾದರೂ ಬಟ್ಟೆಯು ಕೊಳಕಾಗಿರುವದು ನಿಜವೋ ಹಾಗೆಯೇ ಇದು-ಎಂದು ತಿಳಿಯಬೇಕು.

**ಸ್ವಪ್ನೇ ಪುರುಷಃ ಸತ್ಯೋ ಯೋಷಿದಸತ್ಯಾ ತಯೋರ್ಯುತಿಶ್ಚ ಮೃಷಾ**
**ಶುಕ್ರದ್ರಾವಃ ಸತ್ಯಃ ತದ್ವತ್ ಪ್ರಕೃತೇऽಪಿ ಸಂಭವತಿ ॥ ೧೦೨ ॥**

೧೦೨. ಕನಸಿನಲ್ಲಿ (ಕಂಡ) ಪುರುಷನು ಸತ್ಯನು. ಸ್ತ್ರೀಯು ಸುಳ್ಳು; ಮತ್ತು ಅವರಿಬ್ಬರ ಕೂಡುವಿಕೆಯೂ ಮಿಥ್ಯೆಯೇ. ಆದರೆ ಎಚ್ಚರದಲ್ಲಿ ವೀರ್ಯವು ಜಾರಿ ಹೊರಬಂದಿರುವದು ನಿಜವು. ಇಲ್ಲಿಯೂ ಹಾಗೆಯೇ ಸಂಭವಿಸುತ್ತದೆ (ಯೆಂತ ತಿಳಿಯಬೇಕು.)

**ಏವಮದೃಶ್ಯಾ ಮಾಯಾ ತತ್ಕಾರ್ಯಂ ಜಗದಿದಂ ದೃಶ್ಯಮ್ ।**
**ಮಾಯಾ ತಾವದಿಯಂ ಸ್ಯಾದ್ಯಾ ಸ್ವವಿನಾಶೇನ ಹರ್ಷದಾ ಭವತಿ ॥೧೦೩॥**

೧೦೩. ಈ ರೀತಿಯಾಗಿ ಮಾಯೆಯು ಅದೃಶ್ಯವಾಗಿರುತ್ತದೆ. ಅದರ ಕಾರ್ಯವಾದ ಈ ಜಗತ್ತು ದೃಶ್ಯವಾಗಿರುತ್ತದೆ. ಯಾವದು ತನ್ನ ನಾಶದಿಂದ ಸಂತೋಷವನ್ನುಂಟುಮಾಡುತ್ತಿದೆಯೋ ಆ ಇದೇ ಮಾಯೆಯೆನಿಸುವದು.

**ರಜನೀವಾತಿದುರನ್ತಾ ನ ಲಕ್ಷ್ಯತೇऽತ್ರ ಸ್ವಭಾವೋऽಸ್ಯಾಃ ।**
**ಸೌದಾಮಿನೀವ ನಶ್ಯತಿ ಮುನಿಭಿಃ ಸಂಪ್ರೇಕ್ಷ್ಯಮಾಣೈವ ॥ ೧೦೪ ॥**

೧೦೪. ರಾತ್ರಿಯಂತೆ ಇದು ಕಳೆಯಲು ಕಷ್ಟವಾಗಿರುವದು. ಇದರ ಸ್ವಭಾವವು ಚೆನ್ನಾಗಿ (ಸಂಸಾರದಲ್ಲಿ) ತೋರುವದಿಲ್ಲ. ಮುನಿಗಳು ನೋಡುತ್ತಿದ್ದಂತೆಯೇ ಮಿಂಚಿನಂತೆ ನಾಶವಾಗಿಬಿಡುವದು.

**ಮಾಯಾ ಬ್ರಹ್ಮೋಪಗತಾऽವಿದ್ಯಾ ಜೀವಾಶ್ರಯಾ ಪ್ರೋಕ್ತಾ ।**
**ಚಿದಚಿದ್ಗ್ರಂಥಿಶ್ಚೇತಃ ತದಕ್ಷಯಂ ಜ್ಞೇಯಮಾ ಮೋಕ್ಷಾತ್ ॥ ೧೦೫ ॥**

೧೦೫. ಮಾಯೆಯು ಬ್ರಹ್ಮವನ್ನು ಆಶ್ರಯಸಿರುತ್ತದೆ. ಅವಿದ್ಯೆಯು ಜೀವನನ್ನು ಆಶ್ರಯಿಸಿಕೊಂಡಿರುವದೆಂದು ಹೇಳಲ್ಪಟ್ಟಿದೆ. ಚಿತ್ತವೆಂಬುದು ಚಿತ್ತು ಅಚಿತ್ತುಗಳು ಸೇರಿ ಗಂಟಾಗಿರುವದು. ಮೋಕ್ಷವನ್ನು ಪಡೆಯುವವರೆಗೂ (ಅದು) ನಾಶವಾಗದೆ ಇರತಕ್ಕದ್ದೆಂದು ತಿಳಿಯಬೇಕು.

**ಘಟಮಠಕುಡ್ಯೈರಾವೃತಮಾಕಾಶಂ ತತ್ತದಾಹ್ವಯಂ ಭವತಿ ।**
**ತದ್ವದವಿದ್ಯಾ ವೃತಮಿಹ ಚೈತನ್ಯಂ ಜೀವ ಇತ್ಯುಕ್ತಃ ॥ ೧೦೬ ॥**

೧೦೬. ಮಡಕೆ, ಮಠ, ಗೋಡೆ- ಇವುಗಳಿಂದ ಮುಚ್ಚಿದ ಬಯಲು ಆಯಾಯ ಹೆಸರುಳ್ಳದ್ದಾಗಿರುವದು. ಅದರಂತೆ ಚೈತನ್ಯವು ಅವಿದ್ಯೆಯಿಂದ ಆವೃತವಾದಂತೆ ಇದ್ದುಕೊಂಡು ಜೀವನೆನಿಸುವದು.

**ನನು ಕಥಮಾವರಣಂ ಸ್ಯಾದಜ್ಞಾನಂ ಬ್ರಹ್ಮಣೋ ವಿಶುದ್ಧಸ್ಯ ।**
**ಸೂರ್ಯಸ್ಯೇವ ತಮಿಸ್ರಂ ರಾತ್ರಿಭವಂ ಸ್ವಪ್ರಕಾಶಸ್ಯ ॥ ೧೦೭ ॥**

೧೦೭. (ಆಕ್ಷೇಪ) : ಪರಿಶುದ್ಧವಾದ ಬ್ರಹ್ಮಕ್ಕೆ ಅಜ್ಞಾನವು ಹೇಗೆ ಅವರಣವಾಗುವದು ? ಸ್ವಯಂಪ್ರಕಾಶನಾದ ಸೂರ್ಯನಿಗೆ ರಾತ್ರಿಯಲ್ಲಿ ಇದ್ದುಕೊಂಡಿರುವ ಕತ್ತಲೆಯು (ಹೇಗೆ ಅವರಣವಾಗಲಾರದೋ) ಹಾಗೆ.

**ದಿನಕರಕಿರಣೋತ್ಪನ್ನೈರ್ಮೇಘೈರಾಚ್ಛಾದ್ಯತೇ ಯಥಾ ಸೂರ್ಯಃ ।**
**ನ ಖಲು ದಿನಸ್ಯ ದಿನತ್ವಂ ತೈರ್ವಿಕೃತೈಃ ಸಾನ್ದ್ರಸಂಘಾತೈಃ ॥ ೧೦೮ ॥**

**ಅಜ್ಞಾನೇನ ತಥಾತ್ಮಾ ಶುದ್ಧೋऽಪಿ ಛಾದ್ಯತೇ ಸುಚಿರಮ್ ।**
**ನ ಪರಂ ತು ಲೋಕಸಿದ್ಧಾ ಪ್ರಾಣಿಷು ತಚ್ಚೇತನಾಶಕ್ತಿಃ ॥ ೧೦೯ ॥**

೧೦೮-೧೦೯. ಸೂರ್ಯಕಿರಣಗಳಿಂದ ಉಂಟಾದ ಮೋಡಗಳಿಂದಲೇ ಸೂರ್ಯನು ಮುಚ್ಚಲ್ಪಡುವಂತೆ, ಆತ್ಮನು ಪರಿಶುದ್ಧನಾಗಿದ್ದರೂ ಅಜ್ಞಾನದಿಂದ ಮುಚ್ಚಲ್ಪಟ್ಟಿರುತ್ತಾನೆ. ಹಗಲೆಂಬುದು ತಾನೇ ನಿಜವಲ್ಲ. (ಎಂದರೆ ಅದು ಒಂದು ಸ್ವತಂತ್ರವಸ್ತುವಲ್ಲ.) ಆದರೆ ಕಿರಣಗಳು ದಟ್ಟವಾಗಿ ಸೇರಿಕೊಂಡರೆ (ಹಗಲಾಗುವದು. (ಅದರಂತೆ) ಪ್ರಾಣಿಗಳಲ್ಲಿ (ತೋರುವ) ಚೈತನ್ಯಶಕ್ತಿಯು ಲೋಕಸಿದ್ಧವಾದದ್ದಲ್ಲ.

## ಲಿಂಗದೇಹಾದಿಗಳ ನಿರೂಪಣೆ

**ಸ್ಥೂಲಶರೀರಸ್ಯಾನ್ತರ್ಲಿಙ್ಗಶರೀರಂ ಚ ತಸ್ಯಾನ್ತಃ ।**
**ಕಾರಣಮಸ್ಯಾಪ್ಯನ್ತಃ ತತೋ ಮಹಾಕಾರಣಂ ತುರ್ಯಮ್ ॥ ೧೧೦ ॥**

೧೧೦. ಸ್ಥೂಲಶರೀರದ ಒಳಗೆ ಸೂಕ್ಷ್ಮಶರೀರವೂ ಅದರೊಳಗೆ ಕಾರಣ ಶರೀರವೂ ಮತ್ತು ಅದರೊಳಗೆ ಮಹಾಕಾರಣವಾದ ತುರೀಯ (ತತ್ತ್ವವೂ) ಇದ್ದು ಕೊಂಡಿದೆ.

**ಸ್ಥೂಲಂ ನಿರೂಪಿತಂ ಪ್ರಾಗಧುನಾ ಸೂಕ್ಷ್ಮಾದಿತೋ ಬ್ರೂಮಃ ।**
**ಅಙ್ಗುಷ್ಠಮಾತ್ರಃ ಪುರುಷಃ ಶ್ರುತಿರಿತಿ ಯತ್ಪ್ರಾಹ ತತ್ಸೂಕ್ಷ್ಮಮ್ ॥೧೧೧॥**

೧೧೧. ಹಿಂದೆ ಸ್ಥೂಲಶರೀರವನ್ನು ತಿಳಿಯಿಸಿದ್ದಾಗಿದೆ. ಈಗ ಸೂಕ್ಷ್ಮ-ಮುಂತಾದವನ್ನು ಹೇಳುವೆವು. 'ಅಂಗುಷ್ಠಮಾತ್ರನಾದ ಪುರುಷನು' ಎಂದು ಶ್ರುತಿಯು ಯಾವನನ್ನು ತಿಳಿಸುವದೋ ಅದೇ ಸೂಕ್ಷ್ಮಶರೀರವು.

**ಸೂಕ್ಷ್ಮಾಣಿ ಮಹಾಭೂತಾನ್ಯಸವಃ ಪಞ್ಚೇನ್ದ್ರಿಯಾಣಿ ಪಞ್ಚೈವ ।**
**ಷೋಡಶಮನ್ತಃಕರಣಂ ತತ್ಸಙ್ಘಾತೋ ಹಿ ಲಿಙ್ಗತನುಃ ॥ ೧೧೨ ॥**

೧೧೨. ಸೂಕ್ಷ್ಮವಾದ ಮಹಾಭೂತಗಳೂ ಐದು (ಪ್ರಾಣ)ವಾಯುಗಳೂ ಐದು ಇಂದ್ರಿಯಗಳೂ ಹದಿನಾರನೆಯ(ದಾದ) ಅಂತಃಕರಣವೂ ಇವುಗಳ ಗುಂಪೇ ಸೂಕ್ಷ್ಮ ಶರೀರವು.

**ತತ್ಕಾರಣಂ ಸ್ಮೃತಂ ಯತ್ ತಸ್ಯಾನ್ತರ್ವಾಸನಾಜಾಲಮ್ ।**
**ತಸ್ಯ ಪ್ರವೃತ್ತಿಹೇತುರ್ಬುದ್ಧ್ಯಾಶ್ರಯಮತ್ರ ತುರ್ಯಂ ಸ್ಯಾತ್ ॥ ೧೧೩ ॥**

೧೧೩. ಅದರೊಳಗೆ ಇರುವ ಸಂಸ್ಕಾರಗಳ ಗುಂಪೇ ಕಾರಣ (ಶರೀರ) ವೆಂದು ತಿಳಿಸಲ್ಪಟ್ಟಿರುವದು. ಅದರ ಪ್ರವೃತ್ತಿಗೆ ಕಾರಣವಾದ ಮತ್ತು ಬುದ್ಧಿಯನ್ನು ಆಶ್ರಯಿಸಿ ತೋರುತ್ತಿರುವ ತತ್ತ್ವವೇ ತುರ್ಯವೆನಿಸುವದು.

**ತತ್ಸಾರಭೂತಬುದ್ಧೌ ಯತ್ಪ್ರತಿಫಲಿತಂ ತು ಶುದ್ಧ ಚೈತನ್ಯಮ್ ।**
**ಜೀವಃ ಸ ಉಕ್ತ ಆದ್ಯೈರ್ಯೋಽಹಮಿತಿ ಸ್ಫೂರ್ತಿಕೃದ್ವಪುಷಿ ॥ ೧೧೪ ॥**

೧೧೪. ಆದರೆ ಸಾರಭೂತವಾದ[1] ಬುದ್ಧಿಯಲ್ಲಿ ಪ್ರತಿಬಿಂಬಿಸಿರುವ ಯಾವ ಶುದ್ಧ ಚೈತನ್ಯವುಂಟೋ ಅದು ಜೀವವೆನಿಸಿರುವದು (ಎಂದರೆ) ಈ ದೇಹದಲ್ಲಿ ''ನಾನು'' ಎಂದು ಮಾರುಹೊಳೆಯುವ ಸ್ವರೂಪವೇ ಅದು ಎಂದು ಆದ್ಯರಿಂದ [2] ಹೇಳಲ್ಪಟ್ಟಿದೆ.

**ಚರತರತರಙ್ಗಸಙ್ಗಾತ್ ಪ್ರತಿಬಿಮ್ಬಂ ಭಾಸ್ಕರಸ್ಯ ಚ ಚಲಂ ಸ್ಯಾತ್ ।**
**ಅಸ್ತಿ ತಥಾ ಚಞ್ಚಲತಾ ಚೈತನ್ಯೇ ಚಿತ್ತಚಾಞ್ಚಲ್ಯಾತ್ ॥ ೧೧೫ ॥**

೧೧೫. ಸೂರ್ಯನ ಪ್ರತಿಬಿಂಬವು ಅತಿಯಾಗಿ ಚಂಚಲವಾದ ಅಲೆಗಳ ಸಂಬಂಧದಿಂದ ಚಲವಾಗಿ ಕಾಣುತ್ತಿರುವದು. ಹಾಗೆಯೇ ಮನಸ್ಸಿನ ಅಲುಗಾಟದಿಂದ ಚೈತನ್ಯದಲ್ಲಿಯೂ ಚಂಚಲತೆಯು ತೋರುತ್ತಿರುವದು.

---

1. ಕಾರಣಶರೀರಸಾರವಾದ. 2. ಬಲ್ಲವರಿಂದ.

**ನನ್ವರ್ಕಪ್ರತಿಬಿಮ್ಬಃ ಸಲಿಲಾದಿಷು ಯಃ ಸ ಚಾವಭಾಸಯತಿ ।**
**ಕಿಮಿತರಪದಾರ್ಥನಿವಹಂ ಪ್ರತಿಬಿಮ್ಬೋಽಪ್ಯಾತ್ಮನಸ್ತದ್ವತ್ ॥ ೧೧೬ ॥**

೧೧೬. (ಆಕ್ಷೇಪ) : ಸೂರ್ಯನ ಪ್ರತಿಬಿಂಬವು ನೀರು ಮುಂತಾದವುಗಳಲ್ಲಿರುವದು ಯಾವದೋ ಅದು ಬೇರೆಯ ಪದಾರ್ಥಗಳ ಸಮೂಹವನ್ನೂ ಪ್ರಕಾಶಗೊಳಿಸುತ್ತದೆಯೇನು? ಅದರಂತೆ ಆತ್ಮನ ಪ್ರತಿಬಿಂಬವೂ (ಬೇರೆಯ ವಸ್ತುಗಳನ್ನು) ಬೆಳಗಬಲ್ಲದೆ?

**ಪ್ರತಿಫಲಿತಂ ಯತ್ತೇಜಃ ಸವಿತುಃ ಕಾಂಸ್ಯಾದಿಪಾತ್ರೇಷು ।**
**ತದನು ಪ್ರವಿಷ್ಟಮನ್ತರ್ಗೃಹಮನ್ಯಾರ್ಥಾನ್ ಪ್ರಕಾಶಯತಿ ॥ ೧೧೭ ॥**

೧೧೭. (ಸಮಾಧಾನ) : ಸೂರ್ಯನ ಯಾವ ತೇಜಸ್ಸು ಕಂಚು ಮುಂತಾದ ಲೋಹಗಳ ಪಾತ್ರೆಗಳಲ್ಲಿ ಪ್ರತಿಬಿಂಬಿತವಾಗಿದ್ದು ಅದನ್ನು ಅನುಸರಿಸಿ ಮನೆಯ ಒಳಗಿರುವ ಉಳಿದ ವಸ್ತುಗಳನ್ನು ಪ್ರಕಾಶಗೊಳಿಸುವದು (ಸರಿಯಷ್ಟೆ).

**ಚಿತ್ಪ್ರತಿಬಿಮ್ಬಸ್ತದ್ವತ್ ಬುದ್ಧಿಷು ಯೋ ಜೀವತಾಂ ಪ್ರಾಪ್ತಃ ।**
**ನೇತ್ರಾದೀನ್ದ್ರಿಯಮಾರ್ಗೈರ್ಬಹಿರರ್ಥಾನ್ ಸೋಽವಭಾಸಯತಿ ॥ ೧೧೮ ॥**

೧೧೮. ಹಾಗೆಯೇ ಚಿತ್ತಿನ ಪ್ರತಿಬಿಂಬವಾಗಿ ಬುದ್ಧಿಗಳಲ್ಲಿ ತೋರಿ ಜೀವತ್ವವನ್ನು ಹೊಂದಿರುವ (ಚೈತನ್ಯವು) ಕಣ್ಣೇ ಮುಂತಾದ ಇಂದ್ರಿಯದ್ವಾರಗಳಿಂದ ಹೊರಗಿನ ವಸ್ತುಗಳನ್ನು ಅದು ಬೆಳಗುವದು.

## ಅದ್ವೈತಸ್ವರೂಪ

**ತದಿದಂ ಯ ಏವಮಾರ್ಯೋ ವೇದ ಬ್ರಹ್ಮಾಹಮಸ್ಮೀತಿ ।**
**ಸ ಇದಂ ಸರ್ವಂ ಚ ಸ್ಯಾತ್ ತಸ್ಯ ಹಿ ದೇವಾಶ್ಚ ನೇಶತೇ ಭೂತ್ಯಾ ॥ ೧೧೯ ॥**

೧೧೯. ಯಾವ ಆರ್ಯನು ನಾನು ಬ್ರಹ್ಮವಾಗಿರುವೆನು- ಎಂದು ತಿಳಿಯುತ್ತಾನೋ ಅವನು ಇದೆಲ್ಲವೂ ಆಗುವನು. ಅವನ ಐಶ್ವರ್ಯವನ್ನು ದೇವತೆಗಳೂ ಮೀರಲಾರರು.

**ಯೇಷಾಂ ಸ ಭವತ್ಯಾತ್ಮಾ ಯೋಽನ್ಯಾಮಥ ದೇವತಾಮುಪಾಸ್ತೇ ಯಃ ।**
**ಅಹಮನ್ಯೋಽಸಾವನ್ಯಶ್ಚೇತ್ಥಂ ಯೋ ವೇದ ಪಶುವತ್ ಸಃ ॥ ೧೨೦ ॥**

೧೨೦. ಅವನು ಯಾರಿಗೆ ಆತ್ಮನಾಗಿರುವನೋ (ಅವನನ್ನು ಯಾರೂ ಆಳಲಾರರು). ಯಾವನು ಅನ್ಯದೇವತೆಯನ್ನು ಉಪಾಸನೆಮಾಡುತ್ತಾನೋ ಎಂದರೆ ಅದು ಬೇರೆ, ನಾನು ಬೇರೆ- ಎಂದು ತಿಳಿದಿರುತ್ತಾನೋ ಹೀಗೆ ಬಲ್ಲವನು ಪಶುವಿನಂತೆಯೇ ಇರುವನು.

**ಇತ್ಯುಪನಿಷದಾಮುಕ್ತಿಃ ತಥಾ ಶ್ರುತಿರ್ಭಗವದುಕ್ತಿಶ್ಚ ।**
**ಜ್ಞಾನೀ ತ್ವಾತ್ಮೈವೇಯಂ ಮತಿರ್ಮಮೇತ್ಯತ್ರ ಯುಕ್ತಿರಪಿ ॥ ೧೨೧ ॥**

೧೨೧. ಈ ರೀತಿಯಲ್ಲಿ ಉಪನಿಷತ್ತಿನ ಉಕ್ತಿಗಳೂ ವೇದವೂ ''ಜ್ಞಾನಿಯು ನನ್ನ ಆತ್ಮನೇ'' ಎಂಬ ಭಗವಂತನ ಮಾತೂ ಇದ್ದುಕೊಂಡಿರುವವು. ಇದು ನನ್ನ ಅಭಿಪ್ರಾಯವು- ಎಂದು (ಭಗವಂತನು ಹೇಳಿರುವಲ್ಲಿ) ಯುಕ್ತಿಯೂ ಇದ್ದುಕೊಂಡಿರುವದು.

**ಋಜು ವಕ್ರಂ ವಾ ಕಾಷ್ಠಂ ಹುತಾಶದಗ್ಧಂ ಸದಗ್ನಿತಾಂ ಯಾತಿ ।**
**ತತ್ಕಿಂ ಹಸ್ತಗ್ರಾಹ್ಯಂ ಋಜುವಕ್ರಾಕಾರಸತ್ತ್ವೇಽಪಿ ॥ ೧೨೨ ॥**

೧೨೨. ಕಟ್ಟಿಗೆಯು ನೆಟ್ಟಗಿರಲಿ, ಡೊಂಕಾಗಿರಲಿ, ಬೆಂಕಿಯಿಂದ ಸುಡಲ್ಪಟ್ಟರೆ ಅದು ಬೆಂಕಿಯ (ಸ್ವರೂಪ)ವನ್ನೇ ಹೊಂದುವದು. ಆಗ ನೆಟ್ಟಗೆ, ಡೊಂಕು- ಎಂಬ ಆಕಾರಗಳಿದ್ದರೂ ಅವನ್ನು, ಕೈಯಿಂದ ಹಿಡಿಯುವದು ಸಾಧ್ಯವಾದೀತೆ ?

**ಏವಂ ಯ ಆತ್ಮನಿಷ್ಠೋ ಹ್ಯಾತ್ಮಾಕಾರಶ್ಚ ಜಾಯತೇ ಪುರುಷಃ ।**
**ದೇಹೀವ ದೃಶ್ಯತೇಽಸೌ ಪರಂ ತ್ವಸೌ ಕೇವಲೋ ಹ್ಯಾತ್ಮಾ ॥ ೧೨೩ ॥**

೧೨೩. ಹಾಗೆಯೇ ಯಾವನು ಆತ್ಮನಿಷ್ಠನೊ ಆತ್ಮಾಕಾರನಾಗಿಯೂ (ಯಾವ) ಪುರುಷನು ಆಗುವನೋ ಅವನು ದೇಹವುಳ್ಳವನಂತೆ ಕಂಡುಬರುತ್ತಾನೆ. ಆದರೆ ಅವನು ಕೇವಲ ಆತ್ಮನಾಗಿಯೇ ಇರುವನು.

**ಪ್ರತಿಫಲತಿ ಭಾನುರೇಕೋಽನೇಕಶರಾವೋದಕೇಷು ಯಥಾ ।**
**ತದ್ವದಸೌ ಪರಮಾತ್ಮಾ ಹ್ಯೇಕೋಽನೇಕೇಷು ದೇಹೇಷು ॥ ೧೨೪ ॥**

೧೨೪. ಅನೇಕ ಮಣ್ಣಿನ ತಟ್ಟೆಗಳಲ್ಲಿರುವ ನೀರಿನಲ್ಲಿ ಒಬ್ಬನೇ ಸೂರ್ಯನು ಹೇಗೆ ಪ್ರತಿಬಿಂಬವಾಗಿ ತೋರುವನೋ ಹಾಗೆಯೇ ಈ ಪರಮಾತ್ಮನು ಒಬ್ಬನೇ ಅನೇಕಶರೀರಗಳಲ್ಲಿ (ತೋರುತ್ತಿರುವನು).

**ದೈವಾದೇಕಶರಾವೇ ಭಗ್ನೇ ಕಿಂ ವಾ ವಿಲೀಯತೇ ಸೂರ್ಯಃ ।**
**ಪ್ರತಿಬಿಮ್ಬಚಞ್ಚಲತ್ವಾದರ್ಕಃ ಕಿಂ ಚಞ್ಚಲೋ ಭವತಿ ॥ ೧೨೫ ॥**

೧೨೫. ಅಕಸ್ಮಾತ್ತಾಗಿ ಒಂದು ಮಣ್ಣಿನ ತಟ್ಟೆಯು ಒಡೆದುಹೋದರೆ ಸೂರ್ಯನು ನಾಶವಾಗುತ್ತಾನೇನು? ಹಾಗೆಯೇ ಪ್ರತಿಬಿಂಬವು ಅಲುಗಾಡಿದರೆ ಸೂರ್ಯನಾದರೂ ಅಲುಗಾಡುವನೊ? (ಇಲ್ಲ).

**ಸ್ವವ್ಯಾಪಾರಂ ಕುರುತೇ ಯಥೈಕಸವಿತುಃ ಪ್ರಕಾಶೇನ ।**
**ತದ್ವಚ್ಚರಾಚರಮಿದಂ ಹ್ಯೇಕಾತ್ಮಸತ್ತಯಾ ಚಲತಿ ॥ ೧೨೬ ॥**

೧೨೬. ಒಬ್ಬ ಸೂರ್ಯನ ಬೆಳಕಿನಿಂದಲೇ (ಪ್ರತಿಯೊಬ್ಬ ಮನುಷ್ಯನೂ) ಹೇಗೆ ತನ್ನ ವ್ಯವಹಾರಮಾಡುವನೋ ಅದರಂತೆ ಚೇತನಾಚೇತನವಾದ ಇದೆಲ್ಲವೂ ಒಬ್ಬನೇ ಆತ್ಮನ ಇರುವಿಕೆಯಿಂದ ವ್ಯಾಪಾರಮಾಡುತ್ತಿದೆ.

**ಯೇನೋದಕೇನ ಕದಲೀಚಮ್ಪಕಜಾತ್ಯಾದಯಃ ಪ್ರವರ್ಧನ್ತೇ ।**
**ಮೂಲಕಪಲಾಣ್ಡುಲಶುನಾಸ್ತೇನೈವ ತೇ ವಿಭಿನ್ನರಸಗನ್ಧಾಃ ॥ ೧೨೭ ॥**

೧೨೭. ಯಾವ ನೀರಿನಿಂದ ಬಾಳೆ, ಸಂಪಿಗೆ ಮೊದಲಾದ ಜಾತಿಯ ಗಿಡ ಮರಗಳು ಬೆಳೆಯುವವೋ (ಅದೇ ನೀರಿನಿಂದಲೇ ಬೆಳೆದ) ಮೂಲಂಗಿ, ಈರುಳ್ಳಿ, ಬೆಳ್ಳುಳ್ಳಿ- ಇವುಗಳು ಬೇರೆಬೇರೆಯ ರುಚಿ, ವಾಸನೆಗಳುಳ್ಳದ್ದಾಗಿರುವವು.

**ಏಕೋ ಹಿ ಸೂತ್ರಧಾರಃ ಕಾಷ್ಠಪ್ರಕೃತೀರನೇಕಶೋ ಯುಗಪತ್ ।**
**ಸ್ತಮ್ಭಾಗ್ರಪಟ್ಟಿಕಾಯಾಂ ನರ್ತಯತೀಹ ಪ್ರಗೂಢತಯಾ ॥ ೧೨೮ ॥**

೧೨೮. ಒಬ್ಬನೇ ಸೂತ್ರಧಾರನು ಮರದಿಂದ ಮಾಡಿದ ಬೊಂಬೆಗಳನ್ನು ಬಹಳವಾಗಿ ಏಕಕಾಲದಲ್ಲಿ ಕಂಬದ ತುದಿಯ ಹಲಗೆಯಮೇಲೆ ಕುಣಿಸುವಂತೆ ಇಲ್ಲಿ (ಆತ್ಮನು) ಒಳಗೆ ಇದ್ದು ನರ್ತನಮಾಡಿಸುತ್ತಾನೆ.

**ಗುಡಖಣ್ಡಶರ್ಕರಾದ್ಯಾ ಭಿನ್ನಾಃ ಸ್ಯುರ್ವಿಕೃತಯೋ ಯಥೈಕೇಕ್ಷೋಃ ।**
**ಕೇಯೂರಕಙ್ಕಣಾದ್ಯಾ ಯಥೈಕಹೇಮ್ನೋ ಭಿದಾಶ್ಚ ಪೃಥಕ್ ॥ ೧೨೯ ॥**

೧೨೯. ಬೆಲ್ಲದ ಚೂರು, ಸಕ್ಕರೆ- ಮುಂತಾದವು ಹೇಗೆ ಒಂದು ಕಬ್ಬಿನ ಬೇರೆ ಬೇರೆಯ ವಿಕಾರಗಳಾಗಿರುವವೋ, (ಮತ್ತು) ಹೇಗೆ ಭುಜಕೀರ್ತಿ, ಬಳೆ- ಮುಂತಾದವುಗಳು ಒಂದೇ ಚಿನ್ನದ ಬೇರೆಬೇರೆಯ ವಿಕಾರಗಳಾಗಿವೆಯೋ ಹಾಗೆ.

**ಏವಂ ಪೃಥಕ್ ಸ್ವಭಾವಂ ಪೃಥಗಾಕಾರಂ ಪೃಥಗ್ವೃತ್ತಿ ।**
**ಜಗದುಚ್ಚಾವಚಮುಚ್ಚೈರೇಕೇನೈವಾತ್ಮನಾ ಚಲತಿ ॥ ೧೩೦ ॥**

೧೩೦. ಬೇರೆಬೇರೆಯ ಸ್ವಭಾವದ, ಬೇರೆಬೇರೆಯ ಆಕಾರದ, ಬೇರೆ ಬೇರೆಯ ವ್ಯಾಪಾರವುಳ್ಳ ಮೇಲುಕೀಳುಗಳೆಂಬ (ಅಂತಸ್ತುಳ್ಳ) ಪ್ರಪಂಚವು ಒಬ್ಬನೇ ಆತ್ಮನಿಂದಲೇ ವ್ಯಾಪಾರಮಾಡುತ್ತಿದೆ.

**ಸ್ಕನ್ಧಧೃತಸಿದ್ಧಮನ್ನಂ ಯಾವನ್ನಾಶ್ನಾತಿ ಮಾರ್ಗಗಸ್ತಾವತ್ ।**
**ಸ್ಪರ್ಶಭಯಕ್ಷುತ್ಪೀಡೇ ತಸ್ಮಿನ್ ಭುಕ್ತೇ ನ ತೇ ಭವತಃ ॥ ೧೩೧ ॥**

೧೩೧. ದಾರಿಯಲ್ಲಿ ನಡೆಯುವವನು ಹೆಗಲಮೇಲಿರುವ ಸಿದ್ಧವಾದ ಊಟ ವನ್ನು ಎಲ್ಲಿಯವರೆಗೆ ತಿನ್ನುವದಿಲ್ಲವೋ ಅಲ್ಲಿಯವರೆಗೂ (ಅದನ್ನು ಯಾರಾದರೂ) ಮುಟ್ಟಿಯಾರೆಂಬ ಭಯವೂ ಹಸಿವಿನ ಪೀಡೆಯೂ ಇರುವದು. ಅದು ತಿನ್ನಲ್ಪಟ್ಟರೆ ಅವೆರಡೂ ಸಂಭವಿಸಲಾರವು.

**ಮಾನುಷಮತಙ್ಗಮಹಿಷಶ್ವಸೂಕರಾದಿಷ್ವನುಸ್ಯೂತಮ್ ।**
**ಯಃ ಪಶ್ಯತಿ ಜಗದೀಶಂ ಸ ಏವ ಭುಙ್ಕ್ತೇಽದ್ವಯಾನನ್ದಮ್ ॥ ೧೩೨ ॥**

೧೩೨. ಮನುಷ್ಯ, ಆನೆ, ಕೋಣ, ನಾಯಿ, ಹಂದಿ-ಮುಂತಾದವುಗಳಲ್ಲಿ ಅನುಗತವಾಗಿರುವ ಜಗದೀಶ್ವರನನ್ನು ಯಾವನು ಕಾಣುವನೋ ಅವನೇ ಅದ್ವಿತೀಯಾನಂದವನ್ನು ಪಡೆದುಕೊಳ್ಳುತ್ತಾನೆ.

# ಕರ್ತೃತ್ವಭೋಕ್ತೃತ್ವಗಳು

**ಯದ್ವತ್ ಸೂರ್ಯೇಽಭ್ಯುದಿತೇ ಸ್ವವ್ಯವಹಾರಂ ಜನಃ ಕುರುತೇ ।**
**ತಂ ನ ಕರೋತಿ ವಿವಸ್ವಾನ್ ನ ಕಾರಯತಿ ತದ್ವದಾತ್ಮಾಪಿ ॥೧೩೩ ॥**

೧೩೩. ಸೂರ್ಯನು ಹುಟ್ಟಲಾಗಿ ಜನರು ತಮ್ಮ ವ್ಯವಹಾರವನ್ನು ಹೇಗೆ ಮಾಡುವರೋ, ಸೂರ್ಯನೇನೂ ಅದನ್ನು ಮಾಡುವದಾಗಲೀ ಮಾಡಿಸುವದಾಗಲೀ ಇಲ್ಲವೋ ಹಾಗೆಯೇ ಆತ್ಮನೂ (ಕೇವಲ ಸಾಕ್ಷಿಮಾತ್ರನಾಗಿರುವನು).

**ಲೋಹೇ ಹುತಭುಕ್ ವ್ಯಾಪ್ತೇ ಲೋಹಾನ್ತರತಾಡ್ಯಮಾನೇಽಪಿ ।**
**ತಸ್ಯಾನ್ತರ್ಗತವಹ್ನೇಃ ಕಿಂ ಸ್ಯಾನ್ನಿರ್ಘಾತಜಂ ದುಃಖಮ್ ॥ ೧೩೪ ॥**

೧೩೪. ಕಬ್ಬಿಣವನ್ನು ಬೆಂಕಿಯು ವ್ಯಾಪಿಸಿರಲಾಗಿ ಬೇರೊಂದು ಕಬ್ಬಿಣದಿಂದ ಅದನ್ನು ಹೊಡೆದರೂ ಕಬ್ಬಿಣವನ್ನು ಆಶ್ರಯಿಸಿ ತೋರುತ್ತಿರುವ ಬೆಂಕಿಗೆ ಹೊಡೆತದಿಂದ ದುಃಖವೇನಾದರೂ ಆಗುತ್ತದೆಯೇನು?

**ನಿಷ್ಠುರಕುಠಾರಘಾತೈಃ ಕಾಷ್ಠೇ ಸಂಛೇದ್ಯಮಾನೇಽಪಿ ।**
**ಅನ್ತರ್ವರ್ತೀ ವಹ್ನಿಃ ಕಿಂ ಘಾತೈಶ್ಛೇದ್ಯತೇ ತದ್ವತ್ ॥ ೧೩೫ ॥**

೧೩೫. ಕಟ್ಟಿಗೆಯು ಕ್ರೂರವಾದ ಕೊಡಲಿಯ ಏಟುಗಳಿಂದ ಸೀಳಲ್ಪಟ್ಟರೂ ಅದರೊಳಗೆ ಅಡಗಿರುವ ಬೆಂಕಿಯು ಏಟುಗಳಿಂದ ಕತ್ತರಿಸಲ್ಪಡುವದೇನು? ಹಾಗೆಯೇ ಇದು.[1]

**ತನುಸಂಬನ್ಧಾಜ್ಜಾತೈಃ ಸುಖದುಃಖೈರ್ಲಿಪ್ಯತೇ ನಾತ್ಮಾ ।**
**ಬ್ರೂತೇ ಶ್ರುತಿರಪಿ ಭೂಯೋಽನಶ್ನನ್ನನ್ಯೋಽಭಿಚಾಕಶೀತ್ಯಾದಿ ॥ ೧೩೬ ॥**

೧೩೬. ಶರೀರದ ಸಂಬಂಧದಿಂದುಟಾದ ಸುಖದುಃಖಗಳಿಂದ ಆತ್ಮನು ಅಂಟಿಕೊಳ್ಳುವದಿಲ್ಲ. 'ಇನ್ನೊಬ್ಬನು ತಿನ್ನದೆ ನೋಡುತ್ತಿರುವನು' (ಮುಂ. ೩-೧-೧) ಎಂದು ಶ್ರುತಿಯೂ ಮತ್ತೆ ಹೇಳುತ್ತದೆ.

**ನಿಶಿ ವೇಶ್ಮನಿ ಪ್ರದೀಪೇ ದೀಪ್ಯತಿ ಚೌರಸ್ತು ವಿತ್ತಮಪಹರತಿ ।**
**ಈರಯತಿ ವಾರಯತಿ ವಾ ತಂ ದೀಪಃ ಕಿಂ ತಥಾತ್ಮಾಪಿ ॥ ೧೩೭ ॥**

೧೩೭. ಮನೆಯಲ್ಲಿ ಅರ್ಧರಾತ್ರಿಯಲ್ಲಿ ದೀಪವು ಉರಿಯುತ್ತಿರಲಾಗಿ ಕಳ್ಳನು ದ್ರವ್ಯವನ್ನು ಕದಿಯುವನು. (ಆದರೆ) ಆ ದೀಪವು ಅವನನ್ನು ಪ್ರೇರಿಸುವದೂ ಇಲ್ಲ; ತಡೆಯುವದೂ ಇಲ್ಲ. ಆತ್ಮನೂ ಹಾಗೆಯೇ (ಕೇವಲ ಸಾಕ್ಷಿಯಾಗಿರುತ್ತಾನೆ).

**ಗೇಹಾನ್ತೇ ದೈವವಶಾತ್ ಕಸ್ಮಿಂಶ್ಚಿತ್ ಸಮುದಿತೇ ವಿಪನ್ನೇ ವಾ ।**
**ದೀಪಸ್ತುಷ್ಯತ್ಯಥವಾ ಖಿದ್ಯತಿ ಕಿಂ ತದ್ವತ್ ತಥಾತ್ಮಾಪಿ ॥ ೧೩೮ ॥**

---

1. ಆತ್ಮನೂ ದೇಹದೊಳಗೇ ಇದ್ದರೂ ದೇಹಧರ್ಮಗಳಿಂದ ಅಂಟಿಕೊಳ್ಳುವದಿಲ್ಲ.

೧೩೮. ಮನೆಯೊಳಗೆ ದೈವ (ಕಾಲ) ಗತಿಯಿಂದ ಯಾವನಾದರೂ ಹುಟ್ಟಲಿ, ಅಥವಾ ಮರಣಹೊಂದಲಿ, ದೀಪವು ಸಂತೋಷಪಡುವದೂ ಇಲ್ಲ, ದುಃಖ ಪಡುವದೂ ಇಲ್ಲ. ಆದರಂತೆಯೇ ಆತ್ಮನೂ (ಅಸಂಗನಾಗಿರುತ್ತಾನೆ).

## ಸ್ವಪ್ರಕಾಶಸ್ವಭಾವ

**ರವಿಚನ್ದ್ರವಹ್ನಿದೀಪಪ್ರಮುಖಾಃ ಸ್ವಪರಪ್ರಕಾಶಾಃ ಸ್ಯುಃ ।**
**ಯದ್ಯಪಿ ತಥಾಪ್ಯಮೀಭಿಃ ಪ್ರಕಾಶ್ಯತೇ ಕ್ವಾಪಿ ನೈವಾತ್ಮಾ ॥ ೧೩೯ ॥**

೧೩೯. ಸೂರ್ಯ, ಚಂದ್ರ, ಅಗ್ನಿ ದೀಪವೇ ಮುಂತಾದ ತೇಜೋವಸ್ತುಗಳು ತಾವೂ ಬೆಳಗುತ್ತಾ ಮತ್ತೊಂದನ್ನೂ ಬೆಳಗುವವು. ಹಾಗಿದ್ದರೂ ಆತ್ಮನು ಈ ಯಾವದರಿಂದಲೂ ಎಂದೂ ಬೆಳಗಲ್ಪಡುವವನಲ್ಲ.

**ಚಕ್ಷುರ್ದ್ವಾರೈವ ಸ್ಯಾತ್ ಪರಾತ್ಮನಾ ಭಾನಮೇತೇಷಾಮ್ ।**
**ಯದ್ವಾ ತೇಽಪಿ ಪದಾರ್ಥಾ ನ ಜ್ಞಾಯನ್ತೇಽಥ ಕೇವಲಾಲೋಕಾತ್ ॥ ೧೪೦ ॥**

೧೪೦. ಪರಮಾತ್ಮನ (ಚೈತನ್ಯದ ಬೆಳಕಿನಿಂದ) ಕಣ್ಣಿನ ಮೂಲಕವಾಗಿಯೇ ಇವುಗಳಿಗೆ ಪ್ರಕಾಶವುಂಟಾಗಿರುವದು. ಅಥವಾ ಆ ವಸ್ತುಗಳೂ (ಆತ್ಮನ ಬೆಳಕಿಲ್ಲದೆ) ಕೇವಲ ಬೆಳಕಿನಿಂದ ತಿಳಿಯುವದಿಲ್ಲ.

**ತತ್ರಾಪ್ಯಕ್ಷಿದ್ವಾರಾ ಸಹಾಯಭೂತೋ ನ ಚೇದಾತ್ಮಾ ।**
**ನೋ ಚೇತ್ ಸತ್ಯಾಲೋಕೇ ಪಶ್ಯತ್ಯನ್ಧಃ ಕಥಂ ನಾರ್ಥಾನ್ ॥ ೧೪೧ ॥**

೧೪೧. ಅಲ್ಲಿಯೂ ಕಣ್ಣಿನ ಮೂಲಕವಾಗಿ ಆತ್ಮನು ಸಹಾಯಕನಾಗದೆ ಇದ್ದಿದ್ದರೆ (ನೋಡುವದಾಗುತ್ತಿರಲಿಲ್ಲ). ಹಾಗಿಲ್ಲದೆ ಇದ್ದರೆ ಬೆಳಕು ಇದ್ದರೂ ಕುರುಡನು ವಸ್ತುಗಳನ್ನು ನೋಡಲಾರನೆಂಬುದು (ಹೇಗೆ ಸಮಂಜಸವಾಗುತ್ತಿತ್ತು?)

**ಸತ್ಯಾತ್ಮನ್ಯಪಿ ಕಿಂ ನೋ ಜ್ಞಾನಂ ತಚ್ಚೇನ್ದ್ರಿಯಾನ್ತರೇಣ ಸ್ಯಾತ್ ।**
**ಅನ್ಧೇ ದೃಕ್ಪ್ರತಿಬನ್ಧೇ ಕರಸಂಬನ್ಧೇ ಪದಾರ್ಥಭಾನಂ ಹಿ ॥ ೧೪೨ ॥**

೧೪೨. ಆತ್ಮನು ಇದ್ದುಕೊಂಡಿದ್ದರೂ (ಕುರುಡನಿಗೆ) ವಸ್ತುಗಳ ಜ್ಞಾನವಾಗುವದಿಲ್ಲವೇಕೆ? ಎಂದರೆ ಹಾಗಲ್ಲ. ಬೇರೊಂದು ಇಂದ್ರಿಯ (ಕಣ್ಣಿನ) ಸಂಬಂಧದಿಂದ ಅದು ಆಗಬೇಕಾಗಿತ್ತು ; ಹೇಗೆಂದರೆ ಕುರುಡನಿಗೆ ಕಣ್ಣು ಕಾಣದೆ ಇದ್ದರೂ ಕೈಯಿನ ಸಂಬಂಧವಾದಾಗ (ಮುಟ್ಟಿದಾಗ) ವಸ್ತುವಿನ ಜ್ಞಾನವುಂಟಾಗುವದಷ್ಟೆ.

**ಜಾನಾತಿ ಯೇನ ಸರ್ವಂ ಕೇನ ಚ ತಂ ವಾ ವಿಜಾನೀಯಾತ್ ।**
**ಇತ್ಯುಪನಿಷದಾಮುಕ್ತಿರ್ಬುಧ್ಯತ ಆತ್ಮಾತ್ಮನಾ ತಸ್ಮಾತ್ ॥ ೧೪೩ ॥**

೧೪೩. 'ಯಾವ (ಆತ್ಮನಿಂದ) ಇದೆಲ್ಲವನ್ನೂ ತಿಳಿಯುತ್ತಾನೋ ಅವನನ್ನು ಏತರಿಂದ ಅರಿತಾನು?' ಹೀಗೆಂಬ ಉಪನಿಷತ್ತಿನ ಮಾತು ಸಮಂಜಸವೇ ಆಗಿದೆ ಆದ್ದರಿಂದ ಆತ್ಮನು ಆತ್ಮನಿಂದಲೇ (ತಿಳಿಯಬರುತ್ತಾನೆ).

# ನಾದಾನುಸಂಧಾನ

**ಯಾವತ್ ಕ್ಷಣಂ ಕ್ಷಣಾರ್ಧಂ ಸ್ವರೂಪಪರಿಚಿನ್ತನಂ ಕ್ರಿಯತೇ ।**
**ತಾವದ್ದಕ್ಷಿಣಕರ್ಣೇ ತ್ವನಾಹತಃ ಶ್ರೂಯತೇ ಶಬ್ದಃ ॥ ೧೪೪ ॥**

೧೪೪. (ಮನುಷ್ಯನು) ಯಾವಾಗ ಒಂದು ಕ್ಷಣವೋ ಅರ್ಧಕ್ಷಣವೋ ತನ್ನ (ಆತ್ಮ) ಸ್ವರೂಪವನ್ನು (ಒಳಗೇ) ಚಿಂತನಮಾಡುವನೋ ಆ ವೇಳೆಗೆ ಬಲಗಿವಿಯಲ್ಲಿ ಅನಾಹತಶಬ್ದವು ಕೇಳಬರುತ್ತದೆ.

**ಸಿದ್ಧ್ಯಾರಮ್ಭಸ್ಥಿರತಾವಿಶ್ರಮವಿಶ್ವಾಸಬೀಜಶುದ್ಧೀನಾಮ್ ।**
**ಉಪಲಕ್ಷಣಂ ಹಿ ಮನಸಃ ಪರಮಂ ನಾದಾನುಸನ್ಧಾನಮ್ ॥ ೧೪೫ ॥**

೧೪೫. ಮನಸ್ಸಿನಲ್ಲಿ ಆಗುವ ಈ ನಾದಾನುಸಂಧಾನವು ಸಿದ್ಧಿಯ ಆರಂಭ, ಸ್ಥೈರ್ಯ, ವಿಶ್ರಾಂತಿ, ವಿಶ್ವಾಸ, ಬೀಜಶುದ್ಧಿ -ಇವುಗಳಿಗೆ ಗುರುತಾಗಿರುವದು.

**ಭೇರೀಮೃದಙ್ಗಶಙ್ಖಾದ್ಯಾಹತನಾದೇ ಮನಃ ಕ್ಷಣಂ ರಮತೇ ।**
**ಕಿಂ ಪುನರನಾಹತೇಽಸ್ಮಿನ್ ಮಧುಮಧುರೇಽಖಣ್ಡಿತೇ ಸ್ವಚ್ಛೇ ॥ ೧೪೬ ॥**

೧೪೬. ನಗಾರಿ, ತಬಲ, ಶಂಖ- ಮುಂತಾದ(ವುಗಳಲ್ಲಿ) ಘರ್ಷಣೆಯಿಂದುಂಟಾದ ಧ್ವನಿಯಲ್ಲಿಯೇ ಮನಸ್ಸು ಕ್ಷಣಕಾಲ ಆನಂದಪಡುತ್ತದೆ. ಹೀಗಿರುವಲ್ಲಿ ಜೇನಿನಂತೆ ಮಧುರವೂ ನಿರಂತರವೂ ಶುದ್ಧವೂ ಆದ ಈ ಅನಾಹತನಾದದಲ್ಲಿ (ಆನಂದವುಂಟಾಗುವದೆಂತ) ಹೇಳತಕ್ಕದ್ದೇನಿದೆ?

**ಚಿತ್ತಂ ವಿಷಯೋಪರಮಾತ್ ಯಥಾ ಯಥಾ ಯಾತಿ ನೈಶ್ಚಲ್ಯಮ್ ।**
**ವೇಣೋರಿವ ದೀರ್ಘತರಸ್ತಥಾ ತಥಾ ಶ್ರೂಯತೇ ನಾದಃ ॥ ೧೪೭ ॥**

೧೪೭. ವಿಷಯಗಳಿಂದ ಹಿಮ್ಮೆಟ್ಟಿ ಅಂತಃಕರಣವು ಎಷ್ಟೆಷ್ಟುಮಟ್ಟಿಗೆ ನಿಶ್ಚಲತೆಯನ್ನು ಹೊಂದುವದೋ ಅಷ್ಟುಮಟ್ಟಿಗೆ ಕೊಳಲಿನಿಂದ ಬರುವ ದೀರ್ಘವಾದ ಧ್ವನಿಯಂತೆ ನಾದವು ಕೇಳಬರುವದು.

**ನಾದಾಭ್ಯನ್ತರ್ವರ್ತಿ ಜ್ಯೋತಿರ್ಯದ್ವರ್ತತೇ ಹಿ ಚಿರಮ್ ।**
**ತತ್ರ ಮನೋ ಲೀನಂ ಚೇತ್ ನ ಪುನಃ ಸಂಸಾರಬನ್ಧಾಯ ॥ ೧೪೮ ॥**

೧೪೮. ನಾದದೊಳಗೆ ಅಡಗಿಕೊಂಡಿರುವ ಶಾಶ್ವತವಾದ ಯಾವ ಜ್ಯೋತಿಯಂಟೋ ಅದರಲ್ಲಿ ಮನಸ್ಸು ಲಯವಾದರೆ ಮತ್ತೆ ಸಂಸಾರಬಂಧವಿರಲಾರದು.

**ಪರಮಾನನ್ದಾನುಭವಾತ್ ಸುಚಿರಂ ನಾದಾನುಸನ್ಧಾನಾತ್ ।**
**ಶ್ರೇಷ್ಠಶ್ಚಿತ್ತಲಯೋಽಯಂ ಸತ್ಸ್ವನ್ಯಲಯೇಷ್ವನೇಕೇಷು ॥ ೧೪೯ ॥**

೧೪೯. ಅನೇಕ ವಿಧವಾದ ಮನೋಲಯಗಳಿರಲಾಗಿ, ಪರಮಾನಂದದ ಅನುಭವದಿಂದ ಬಹಳಕಾಲ ನಾದವನ್ನು ಅನುಸಂಧಾನಮಾಡುತ್ತಾ ಇರುವದೇ ಶ್ರೇಷ್ಠವಾದ ಚಿತ್ತಲಯವು.

## ಮನೋಲಯ

**ಸಂಸಾರತಾಪತಪ್ತಂ ನಾನಾಯೋನಿಭ್ರಮಾತ್ ಪರಿಶ್ರಾನ್ತಮ್ ।**
**ಲಬ್ಧ್ವಾ ಪರಮಾನನ್ದಂ ನ ಚಲತಿ ಚೇತಃ ಕದಾಚಿತ್ ಕ್ವಾಪಿ ॥ ೧೫೦ ॥**

೧೫೦. ಸಂಸಾರದ ದುಃಖದಿಂದ ಸುಡಲ್ಪಟ್ಟು, ಅನೇಕ ಜನ್ಮಗಳಲ್ಲಿ ಸುತ್ತಾಡಿ ಸೋತುಹೋಗಿರುವ ಚಿತ್ತವು ಪರಮಾನಂದವನ್ನು ಪಡೆದುಕೊಂಡಾಗ ಎಲ್ಲಿಗೂ ಯಾವಾಗಲೂ ಚಲಿಸುವದಿಲ್ಲ.

**ಅದ್ವೈತಾನನ್ದಭರಾತ್ ಕಿಮಿದಂ ಕೋಽಹಂ ಚ ಕಸ್ಯಾಹಮ್ ।**
**ಇತಿ ಮನ್ಥರತಾಂ ಯಾತಂ ಯದಾ ತದಾ ಮೂರ್ಛಿತಂ ಚೇತಃ ॥ ೧೫೧ ॥**

೧೫೧. ಅದ್ವೈತಾನಂದದ ಭರದಿಂದ ಇದು ಏನು? ನಾನು ಯಾರು? ನಾನು ಯಾರವನು? ಎಂಬೀ ರೀತಿಯ (ವಿಚಾರದ) ಕಡೆತಕ್ಕೆ ಯಾವಾಗ ಚಿತ್ತವು ಪಕ್ಕಾಗುವದೋ ಆಗ ಲಯವಾಗುವದು.

**ಚಿರತರಮಾತ್ಮಾನುಭವಾತ್ ಆತ್ಮಾಕಾರಂ ಪ್ರಜಾಯತೇ ಚೇತಃ ।**
**ಸರಿದಿವ ಸಾಗರಯಾತಾ ಸಮುದ್ರಭಾವಂ ಪ್ರಯಾತ್ಯುಚ್ಚೈಃ ॥ ೧೫೨ ॥**

೧೫೨. ಚಿತ್ತವು ಬಹಳಕಾಲದ ಆತ್ಮಾನುಭವದಿಂದ ಯಾವಾಗ ಆತ್ಮಾಕಾರವಾಗಿ ಆಗಿಬಿಡುವುದೋ ಆಗ ಸಮುದ್ರಕ್ಕೆ ಸೇರಿ ಸಮುದ್ರಸ್ವರೂಪವನ್ನೇ ಹೊಂದಿದ ನದಿಯಂತೆ ಹೆಚ್ಚಿನ (ಸ್ಥಾನ)ವನ್ನು ಹೊಂದುವದು.

**ಆತ್ಮನ್ಯನುಪ್ರವಿಷ್ಟಂ ಚಿತ್ತಂ ನಾಪೇಕ್ಷತೇ ಪುನರ್ವಿಷಯಾನ್।**
**ಕ್ಷೀರಾದುದ್ಧೃತಮಾಜ್ಯಂ ಯಥಾ ಪುನಃ ಕ್ಷೀರತಾಂ ನ ಯಾತೀಹ ॥ ೧೫೩ ॥**

೧೫೩. ಆತ್ಮನಲ್ಲಿ ಒಳಹೊಕ್ಕ ಚಿತ್ತವು-ಹಾಲಿನಿಂದ ಮೇಲಕ್ಕೆ ತೆಗೆಯಲ್ಪಟ್ಟ ತುಪ್ಪವು ಹೇಗೆ ಮತ್ತೆ ಹಾಲಾಗಲಾರದೋ ಹಾಗೇ-ವಿಷಯಗಳನ್ನು ಎಂದಿಗೂ ಬಯಸಲಾರದು.

**ದೃಷ್ಟೌ ದ್ರಷ್ಟರಿ ದೃಶ್ಯೇ ಯದನುಸ್ಯೂತಂ ಚ ಭಾವಮಾತ್ರಂ ಸ್ಯಾತ್ ।**
**ತತ್ರೋಪಕ್ಷೀಣಂ ಚೇತ್ ಚಿತ್ತಂ ತನ್ಮೂರ್ಛಿತಂ ಭವತಿ ॥ ೧೫೪ ॥**

೧೫೪. ದೃಷ್ಟಿ, (ನೋಟ) ದ್ರಷ್ಟಾ (ನೋಡುವವನು), ದೃಶ್ಯ (ನೋಡಲ್ಪಡುವ ವಸ್ತು) ಇವುಗಳಲ್ಲಿ ಹಾಸುಹೊಕ್ಕಾಗಿರುವ ಚೈತನ್ಯಮಾತ್ರವಾದ ಯಾವ ವಸ್ತುವುಂಟೋ ಅದರಲ್ಲಿ ಚಿತ್ತವು ಲಯವಾದರೆ ಮುಂದೆ ಕಾಣದೆ ಹೋಗುವದು.

**ಯಾತಿ ಸ್ವಸಂಮುಖತ್ವಂ ದೃಙ್ಮಾತ್ರಂ ವಾ ಯದಾ ತದಾ ಭವತಿ ।**
**ದೃಶ್ಯದ್ರಷ್ಟೃವಿಭೇದೋ ಹ್ಯಸಂಮುಖೇಽಸ್ಮಿನ್ ನ ತದ್ಭವತಿ ॥ ೧೫೫ ॥**

೧೫೫. ಯಾವಾಗ ಚಿತ್ತವು ಆತ್ಮನಕಡೆಗೆ ತಿರುಗುವದೋ ಅಥವಾ ದೃಗ್ರೂಪವಾಗಿಯೇ ಆಗುವದೋ ಆಗ (ವಿಷಯ) ಸಂಮುಖವಾಗದಿರುವ ಇದರಲ್ಲಿ ದೃಶ್ಯ, ದ್ರಷ್ಟೃಭೇದವು ಉಂಟಾಗುವದಿಲ್ಲ.

**ಏಕಸ್ಮಿನ್ ದೃಜ್ಮಾತ್ರೇ ತ್ರೇಧಾ ದ್ರಷ್ಟ್ರಾದಿಕಂ ಹಿ ಸಮುದೇತಿ।**
**ತ್ರಿವಿಧೇ ತಸ್ಮಿಲ್ಲೀನೇ ದೃಜ್ಮಾತ್ರಂ ಶಿಷ್ಯತೇ ಪಶ್ಚಾತ್ ॥೧೫೬॥**

೧೫೬. ಒಂದೇ ಆಗಿರುವ ದೃಕ್‌ನಲ್ಲಿ ದ್ರಷ್ಟೃವೇ ಮುಂತಾದ ಮೂರು ಬಗೆಗಳು ಉಂಟಾಗಿರುತ್ತವೆ. ಈ ಮೂರೂ ಆದರಲ್ಲಿ ಲಯವಾಗಲು ಕೊನೆಗೆ ದೃಕ್ಕೊಂದೇ ಉಳಿದುಕೊಳ್ಳುವದು.

**ದರ್ಪಣತಃ ಪ್ರಾಕ್ ಪಶ್ಚಾದಸ್ತಿ ಮುಖಂ ಪ್ರತಿಮುಖಂ ತದಾಭಾತಿ ।**
**ಆದರ್ಶೇಽಪಿ ಚ ನಷ್ಟೇ ಮುಖಮಸ್ತಿ ಮುಖೇ ತಥೈವಾತ್ಮಾ ॥೧೫೭॥**

೧೫೭. ಕನ್ನಡಿಯ ಮಂದೆ ಮುಖವು ಇದ್ದುಕೊಂಡಿದ್ದರೆ ಅನಂತರ ಪ್ರತಿ ಬಿಂಬವು ಅಲ್ಲಿ ತೋರುವದು. ಕನ್ನಡಿಯು ನಾಶವಾದರೆ (ಪ್ರತಿಬಿಂಬ) ಮುಖವು ಮುಖದಲ್ಲೇ ಇದ್ದುಕೊಂಡಿರುವದು. ಹಾಗೆಯೇ ಆತ್ಮನೂ (ಬುದ್ಧಿಯಿದ್ದರೆ ಪ್ರತಿ ಬಿಂಬಿಸುವನು. ಇಲ್ಲದಿದ್ದರೆ ತಾನು ತಾನಾಗಿಯೇ ಇರುವನು).

## ಪ್ರಬೋಧಸ್ವರೂಪ

**ಮಾಧುರ್ಯಂ ಗುಡಪಿಣ್ಡೇ ಯತ್ತತ್ತಸ್ಯಾಂಶಕೇಽಣುಮಾತ್ರೇಽಪಿ ।**
**ಏವಂ ನ ಪೃಥಗ್ ಭಾವೋ ಗುಡತ್ವಮಧುರತ್ವಯೋರಸ್ತಿ ॥೧೫೮॥**

೧೫೮. ಬೆಲ್ಲದ ಉಂಡೆಯಲ್ಲಿ ಯಾವ ಸಿಹಿಯಿರುವದೋ ಅದು ಬೆಲ್ಲದ ಚೂರಿನಲ್ಲಿಯೂ ಸಣ್ಣ ಕಣದಲ್ಲಿಯೂ ಇದ್ದೇಇರುವದು. ಹೀಗೆ ಬೆಲ್ಲಕ್ಕೂ ಸಿಹಿಗೂ ಎಂದಿಗೂ ಬೇರೆಯಾಗಿರುವಿಕೆಯೆಂಬುದಿಲ್ಲ.

**ಅಥವಾ ನ ಭಿನ್ನಭಾವಃ ಕರ್ಪೂರಾಮೋದಯೋರೇವಮ್ ।**
**ಆತ್ಮಸ್ವರೂಪಮನಸಾಂ ಪುಂಸಾಂ ಜಗದಾತ್ಮತಾಂ ಯಾತಿ ॥೧೫೯॥**

೧೫೯. ಅಥವಾ ಕರ್ಪೂರಕ್ಕೂ ಅದರ ವಾಸನೆಗೂ ಹೇಗೆ ಭೇದವಿರುವ ದಿಲ್ಲವೋ ಹಾಗೆ ಆತ್ಮಸ್ವರೂಪದಲ್ಲಿಯೇ ಮನಸ್ಸನ್ನು ನೆಲೆಗೊಳಿಸಿರುವ ಮನುಷ್ಯರಿಗೆ ಪ್ರಪಂಚವು ಆತ್ಮನೇ ಆಗಿಬಿಡುವದು.

**ಯದ್ಭಾವಾನುಭವಃ ಸ್ಯಾತ್ ನಿದ್ರಾದೌ ಜಾಗರಸ್ಯಾನ್ತೇ ॥**
**ಅನ್ತಃ ಸ ಚೇತ್ ಸ್ಥಿರಃ ಸ್ಯಾತ್ ಲಭತೇ ಹಿ ತದಾಽದ್ವಯಾನನ್ದಮ್ ॥೧೬೦॥**

೧೬೦. ನಿದ್ರೆಯ ಪ್ರಾರಂಭದಲ್ಲಿಯೂ ಜಾಗರಣೆಯ ಕೊನೆಯಲ್ಲಿಯೂ ಯಾವ ಅನುಭವವಿರುವದೋ ಅದು ಕೊನೆಯವರೆಗೂ ಸ್ಥಿರವಾಗಿರುವದೇ ಆದರೆ ಆಗ ಅದ್ವಿತೀಯವಾದ ಆನಂದವನ್ನು ಪಡೆಯುವನು.

**ಅತಿಗಮ್ಭೀರೇಽಪಾರೇ ಜ್ಞಾನಚಿದಾನನ್ದಸಾಗರೇ ಸ್ಫಾರೇ ।**
**ಕರ್ಮಸಮೀರಣತರಲಾ ಜೀವತರಙ್ಗಾವಲಿಃ ಸ್ಫುರತಿ ॥೧೬೧॥**

೧೬೧. ಅತ್ಯಂತ ಆಳವಾಗಿಯೂ ದಾಟಲಶಕ್ಯವಾಗಿಯೂ ವಿಶಾಲವಾಗಿಯೂ ಇರುವ ಜ್ಞಾನಚಿದಾನಂದವೆಂಬ ಸಾಗರದಲ್ಲಿ ಕರ್ಮವೆಂಬ ಗಾಳಿಯಿಂದ ಚಂಚಲವಾದ ಜೀವರುಗಳೆಂಬ ಅಲೆಗಳ ಸಾಲು ತೋರಿಕೊಳ್ಳುತ್ತಿರುವದು.

**ಖರತರಕರ್ರೈಃ ಪ್ರದೀಪ್ತೇಽ ಭ್ಯುದಿತೇ ಚೈತನ್ಯತಿಗ್ಮಾಂಶೌ ।**
**ಸ್ಫುರತಿ ಮೃಷೈವ ಸಮನ್ತಾದನೇಕ ಜೀವವಿಧಮೃಗತೃಷ್ಣಾ ॥೧೬೨॥**

೧೬೨. ಚೈತನ್ಯವೆಂಬ ಸೂರ್ಯನು ಉದಯಿಸಿ ತೀಕ್ಷ್ಣವಾದ ಕಿರಣಗಳಿಂದ ಬೆಳಗುತ್ತಿರಲು ಸುತ್ತಲೂ ನಾನಾವಿಧವಾದ ಜೀವರೆಂಬ ಬಿಸಿಲುಕುದುರೆಗಳು ಸುಳ್ಳು ಸುಳ್ಳಾಗಿಯೇ ಹೊರತೋರುತ್ತಿರುವವು.

**ಅನ್ತರದೃಷ್ಟೇ ಯಸ್ಮಿನ್ ಜಗದಿದಮಾರಾತ್ ಪರಿಸ್ಫುರತಿ ।**
**ದೃಷ್ಟೇ ಯಸ್ಮಿನ್ ಸಕೃದಪಿ ವಿಲೀಯತೇ ಕ್ವಾಪ್ಯಸದ್ರೂಪಮ್ ॥೧೬೩॥**

೧೬೩. ಯಾವದು ಒಳಗೆ ಕಾಣಿಸದೆ ಇರಲಾಗಿ ಈ ಜಗತ್ತೆಲ್ಲವೂ ಸುತ್ತಲೂ ಹೊಳೆದು ತೋರುವದೋ, (ಆದರೆ) ಯಾವದನ್ನು (ಒಳಗೆ) ಒಂದು ಬಾರಿಗಾದರೂ ಕಂಡುಕೊಳ್ಳಲಾಗಿ ಈ ಅಸದ್ರೂಪವು ಎಲ್ಲಿಯೂ ಕಾಣದ್ದಾಗಿ ಲಯವಾಗುವದೋ (ಆ ಬ್ರಹ್ಮವು ಒಂದೇ ಆಗಿರುವದು).

**ಬಾಹ್ಯಾಭ್ಯನ್ತರಪೂರ್ಣಃ ಪರಮಾನನ್ದಾರ್ಣವೇ ನಿಮಗ್ನೋ ಯಃ ।**
**ಚಿರಮಾಪ್ಲುತ ಇವ ಕಲಶೋ ಮಹಾಹ್ರದೇ ಜಹ್ನುತನಯಾಯಾಃ ॥೧೬೪॥**

೧೬೪. ಯಾವನು ಒಳಗೂ ಹೊರಗೂ ಪೂರ್ಣನಾಗಿ ಪರಮಾನಂದವೆಂಬ ಸಮುದ್ರದಲ್ಲಿ ಮುಳುಗಿರುವನೋ ಅವನು ಮಹಾನದಿಯಾದ ಗಂಗೆಯಲ್ಲಿ ಮುಳುಗಿರುವ ಕೊಡದಂತೆ ಯಾವಾಗಲೂ (ಬ್ರಹ್ಮದಲ್ಲಿದ್ದುಕೊಂಡಿರುವನು.)

**ಪೂರ್ಣಾತ್ಪೂರ್ಣತರೇ ಪರಾತ್ಪರತರೇಽಪ್ಯಜ್ಞಾತಪಾರೇ ಹರೌ ।**
**ಸಂವಿತ್‌ಸ್ಫಾರಸುಧಾರ್ಣವೇ ವಿರಹಿತೇ ವೀಚೀತರಙ್ಗಾದಿಭಿಃ ॥**
**ಭಾಸ್ವತ್ ಕೋಟಿವಿಕಾಸಿತೋಜ್ಜ್ವಲದಿಗಾಕಾಶಪ್ರಕಾಶೇ ಪರೇ ।**
**ಸ್ವಾನನ್ದೈಕರಸೇ ನಿಮಗ್ನಮನಸಾಂ ನ ತ್ವಂ ನ ಚಾಹಂ ಜಗತ್ ॥೧೬೫॥**

೧೬೫. ಪೂರ್ಣವೂ ಆಗಿದ್ದು ಅದನ್ನು ವ್ಯಾಪಿಸಿರುವ ಎಲ್ಲ ಹೆಚ್ಚಿನ ವಸ್ತುವಿಗಿಂತಲೂ ಹೆಚ್ಚಿನದಾದ, ತಿಳಿಯಲಾರದ ದಡವುಳ್ಳ, ಅಲೆಗಳು ತೆರೆಗಳೆಂಬ (ಭೇದ) ರಹಿತವಾದ, ಜ್ಞಾನವೆಂಬ ಪ್ರಕಾಶರೂಪವಾದ ಅಮೃತದ ಸಮುದ್ರವಾಗಿರುವ, ಮತ್ತು ಕೋಟಿಸೂರ್ಯರ ಪ್ರಕಾಶದಿಂದ ಹೊಳೆಯುತ್ತಿರುವ ದಿಕ್ಕುಗಳ ಆಕಾಶವನ್ನೆಲ್ಲ ಬೆಳಗುತ್ತಿರುವ, ಪರಮನಾದ ಆನಂದೈಕರಸನಾದ ಶ್ರೀಹರಿಯಲ್ಲಿ ಮುಳುಗಿದ ಮನಸ್ಸುಳ್ಳವರಿಗೆ ನೀನು, ನಾನು, ಪ್ರಪಂಚಗಳೆಂಬ ಭೇದವೇ ಇರುವದಿಲ್ಲ.

# ಎರಡು ವಿಧವಾದ ಭಕ್ತಿಗಳು

**ಚಿತ್ತೇ ಸತ್ತ್ವೋತ್ಪತ್ತೌ ತಟಿದಿವ ಬೋಧೋದಯೋ ಭವತಿ ।**
**ತರ್ಹ್ಯೇವ ಸ ಸ್ಥಿರಃ ಸ್ಯಾದ್ಯದಿ ಚಿತ್ತಂ ಶುದ್ಧಿಮುಪಯಾತಿ ॥೧೬೬॥**

೧೬೬. ಅಂತಃಕರಣದಲ್ಲಿ ಸತ್ತ್ವಗುಣವು ಹುಟ್ಟಿದ್ದೇ ಆದರೆ ಮಿಂಚಿನಂತೆ ಜ್ಞಾನವು ಹುಟ್ಟುವದು. ಒಂದುವೇಳೆ ಮನಸ್ಸು ಶುದ್ಧಿಯನ್ನು ಹೊಂದಿದ್ದರೆ ಆಗಲೇ ಅದು (ಜ್ಞಾನವು) ಸ್ಥಿರವಾಗಿ ನಿಲ್ಲುವದು.

**ಶುಧ್ಯತಿ ಹಿ ನಾನ್ತರಾತ್ಮಾ ಕೃಷ್ಣಪದಾಂಭೋಜಭಕ್ತಿಮೃತೇ ।**
**ವಸನಮಿವ ಕ್ಷಾರೋದ್ಯೈಃ ಭಕ್ತ್ಯಾ ಪ್ರಕ್ಷಾಲ್ಯತೇ ಚೇತಃ ॥೧೬೭॥**

೧೬೭. ಕೃಷ್ಣನ ಪಾದಾರವಿಂದದಲ್ಲಿ ಭಕ್ತಿಯುಂಟಾಗದೆ ಅಂತರಾತ್ಮವು (ಮನಸ್ಸು) ಎಂದಿಗೂ ಶುದ್ಧವಾಗುವದಿಲ್ಲ. ಉಪ್ಪುನೀರುಗಳಿಂದ ಬಟ್ಟೆಯು ಮಡಿ ಮಾಡಲ್ಪಟ್ಟಂತೆ ಮನಸ್ಸು ಭಕ್ತಿಯಿಂದ ತೊಳೆಯಲ್ಪಡುತ್ತದೆ.

**ಯದ್ವತ್ ಸಮಲಾದರ್ಶೇ ಸುಚಿರಂ ಭಸ್ಮಾದಿನಾ ಶುದ್ಧೇ ।**
**ಪ್ರತಿಫಲತಿ ವಕ್ತ್ರಮುಚ್ಚೈಃ ಶುದ್ಧೇ ಚಿತ್ತೇ ತಥಾ ಜ್ಞಾನಮ್ ॥೧೬೮॥**

೧೬೮. ಕೊಳೆಯಿಂದ ಕೂಡಿರುವ ಕನ್ನಡಿಯು ಬೂದಿಯೇ ಮುಂತಾದವುಗಳಿಂದ (ತಿಕ್ಕಿ ತೊಳೆಯಲ್ಪಟ್ಟು) ಶುದ್ಧವಾಗಲು ಅದರಲ್ಲಿ ಹೇಗೆ ಮುಖವು ಚೆನ್ನಾಗಿ ಪ್ರತಿಬಿಂಬಿಸುವದೋ ಹಾಗೆ ಶುದ್ಧವಾದ ಅಂತಃಕರಣದಲ್ಲಿ ಜ್ಞಾನವೂ ಮಾರು ಹೊಳೆಯುವದು.

**ಜಾನನ್ತು ತತ್ರ ಬೀಜಂ ಹರಿಭಕ್ತ್ಯಾ ಜ್ಞಾನಿನೋ ಯೇ ಸ್ಯುಃ ।**
**ಮೂರ್ತಂ ಚೈವಾಮೂರ್ತಂ ದ್ವೇ ಏವ ಬ್ರಹ್ಮಣೋ ರೂಪೇ ॥೧೬೯॥**

**ಇತ್ಯುಪನಿಷತ್ ತಯೋರ್ವಾ ದ್ವೌ ಭಕ್ತೌ ಭಗವದುಪದಿಷ್ಟೌ ॥**
**ಕ್ಲೇಶಾದಕ್ಲೇಶಾದ್ವಾ ಮುಕ್ತಿಃ ಸ್ಯಾದೇತಯೋರ್ಮಧ್ಯೇ ॥ ೧೭೦ ॥**

೧೬೯-೧೭೦. ಹರಿಭಕ್ತಿಯಿಂದ ಯಾರು ಜ್ಞಾನಿಗಳಾಗಿರುವರೋ ಅವರಿಂದ ಅದರ ಕಾರಣವನ್ನು ತಿಳಿದುಕೊಳ್ಳಿರಿ. ಮೂರ್ತವೆಂದೂ ಅಮೂರ್ತವೆಂದೂ ಬ್ರಹ್ಮಕ್ಕೆ ಎರಡೇ ರೂಪಗಳು. ಹೀಗೆಂದು ಉಪನಿಷತ್ತಿನಲ್ಲಿದೆ. ಅವುಗಳಲ್ಲಿ ಭಕ್ತಿಯುಳ್ಳವರು ಇಬ್ಬರೆಂದು ಭಗವಂತನಿಂದ ಉಪದೇಶಿಸಲ್ಪಟ್ಟಿದೆ. ಇವರುಗಳ ನಡುವೆ ಅಮೂರ್ತ ಭಕ್ತರಿಗೆ ಕ್ಲೇಶದಿಂದಲೂ ಮೂರ್ತಭಕ್ತರಿಗೆ ಕ್ಲೇಶವಿಲ್ಲದೆಯೂ ಮುಕ್ತಿಯಾಗುವದು.

**ಸ್ಥೂಲಾ ಸೂಕ್ಷ್ಮಾ ಚೇತಿ ದ್ವೇಧಾ ಹರಿಭಕ್ತಿರುದ್ದಿಷ್ಟಾ ।**
**ಪ್ರಾರಂಭೇ ಸ್ಥೂಲಾ ಸ್ಯಾತ್ ಸೂಕ್ಷ್ಮಾ ತಸ್ಯಾಃ ಸಕಾಶಾಚ್ಚ ॥೧೭೧॥**

೧೭೧. ಹರಿಭಕ್ತಿಯು ಸ್ಥೂಲವೆಂದೂ ಸೂಕ್ಷ್ಮವೆಂದೂ ಎರಡು ವಿಧವಾಗಿರುವದು. ಆರಂಭದಲ್ಲಿ ಸ್ಥೂಲವಾಗಿಯೂ ಅದರಿಂದ ಮುಂದೆ ಸೂಕ್ಷ್ಮವಾಗಿಯೂ ಇರುವದು.

**ಸ್ವಾಶ್ರಮಧರ್ಮಾಚರಣಂ ಕೃಷ್ಣ ಪ್ರತಿಮಾರ್ಚನೋತ್ಸವೋ ನಿತ್ಯಮ್ ।**
**ವಿವಿಧೋಪಚಾರಕರಣೈಃ ಹರಿದಾಸೈಃ ಸಂಗಮಃ ಶಶ್ವತ್ ॥೧೭೨॥**

೧೭೨. ತನ್ನ ವರ್ಣಾಶ್ರಮೋಚಿತವಾದ ಧರ್ಮವನ್ನು ಅನುಷ್ಠಾನ ಮಾಡುವದು, ನಾನಾವಿಧವಾದ ಉಪಚಾರ, ಸೇವಾದಿಗಳಿಂದ ಕೃಷ್ಣನ ವಿಗ್ರಹವನ್ನು ಯಾವಾಗಲೂ ಅರ್ಚಿಸುವದು, ಉತ್ಸವವನ್ನಾಚರಿಸುವದು, ಭಗವದ್ಭಕ್ತರೊಡನೆ ಎಂದೆಂದೂ ಸಂಗ ಮಾಡುವದು- (ಇವು ಸ್ಥೂಲಭಕ್ತಿಗಳು.)

**ಕೃಷ್ಣಕಥಾಸಂಶ್ರವಣೇ ಮಹೋತ್ಸವಃ ಸತ್ಯವಾದಶ್ಚ ।**
**ಪರಯುವತೌ ದ್ರವಿಣೇ ವಾ ಪರಾಪವಾದೇ ಪರಾಙ್ಮುಖತಾ ॥೧೭೩॥**

೧೭೩. ಕೃಷ್ಣನ ಕಥೆಯನ್ನು ಕೇಳುವ ವಿಷಯದಲ್ಲಿ ಹೆಚ್ಚಿನ ಆನಂದವೂ ಸತ್ಯವನ್ನೇ ನುಡಿಯುವಿಕೆಯೂ ಪರಸ್ತ್ರೀ, ಪರದ್ರವ್ಯ, ಮತ್ತೊಬ್ಬರ ನಿಂದೆ- ಇವುಗಳಲ್ಲಿ ವಿಮುಖನಾಗಿರುವದೂ (ಸ್ಥೂಲಭಕ್ತಿಯು).

**ಗ್ರಾಮ್ಯಕಥಾಸೂದ್ವೇಗಃ ಸುತೀರ್ಥಗಮನೇಷು ತಾತ್ಪರ್ಯಮ್ ।**
**ಯದುಪತಿಕಥಾವಿಯೋಗೇ ವ್ಯರ್ಥಂ ಗತಮಾಯುರಿತಿ ಚಿನ್ತಾ ॥೧೭೪॥**

೧೭೪. ಪ್ರಾಕೃತವಾದ (ಲೌಕಿಕ) ವಿಚಾರಗಳಲ್ಲಿ ಬೇಸರಿಕೆ, ಒಳ್ಳೆಯ ತೀರ್ಥಗಳಿಗೆ (ಯಾತ್ರೆ) ಹೋಗುವದರಲ್ಲಿ ತತ್ಪರತೆ, ಕೃಷ್ಣನ ಕಥೆಯನ್ನು ಕೇಳುವದು ತಪ್ಪಿದಾಗ ಆಯುಸ್ಸು ವ್ಯರ್ಥವಾಯಿತಲ್ಲ, ಎಂಬ ಚಿಂತೆ-ಇವುಗಳೂ (ಸ್ಥೂಲಭಕ್ತಿಯು).

**ಏವಂ ಕುರ್ವತಿ ಭಕ್ತಿಂ ಕೃಷ್ಣಕಥಾನುಗ್ರಹೋತ್ಪನ್ನಾ ।**
**ಸಮುದೇತಿ ಸೂಕ್ಷ್ಮಭಕ್ತಿರ್ಯಸ್ಯಾ ಹರಿರನ್ತರಾವಿಶತಿ ॥೧೭೫॥**

೧೭೫. ಈ ರೀತಿಯಾಗಿ ಭಕ್ತಿಯನ್ನು ಮಾಡುತ್ತಿರಲಾಗಿ ಕೃಷ್ಣನ ಕಥೆಯನ್ನು (ಶ್ರವಣಮಾಡಿದ್ದರ) ಫಲವಾಗಿ ಉಂಟಾದ ಸೂಕ್ಷ್ಮಭಕ್ತಿಯು-ಎಂದರೆ ಯಾವ (ಆ ಸೂಕ್ಷ್ಮಭಕ್ತಿಯಿಂದ) ಶ್ರೀ ಹರಿಯು (ಹೃದಯದೊಳಗೆ) ಪ್ರವೇಶಿಸಿ (ಕಾಣಿಸಿ ಕೊಳ್ಳುವನೋ) ಆ ಭಕ್ತಿಯು ಉಂಟಾಗುವದು.

**ಸ್ಮೃತಿಸತ್ಪುರಾಣವಾಕ್ಯೈರ್ಯಥಾಶ್ರುತಾಯಾಂ ಹರೇರ್ಮೂರ್ತೌ ।**
**ಮಾನಸಪೂಜಾಭ್ಯಾಸೋ ವಿಜನನಿವಾಸೇಽಪಿ ತಾತ್ಪರ್ಯಮ್ ॥೧೭೬॥**

೧೭೬. ಸ್ಮೃತಿಗಳು, ಸತ್ಪುರುಷರ ಹಾಗೂ ಪುರಾಣವಾಕ್ಯಗಳು-ಇವುಗಳಲ್ಲಿ ಕೇಳಿದ ರೀತಿಯಿಂದ ಶ್ರೀ ಹರಿಯ ಆಕಾರದಲ್ಲಿ (ಮನಸ್ಸನ್ನು ನೆಲೆಗೊಳಿಸಿ) ಮಾನಸಪೂಜೆಯನ್ನು ಅಭ್ಯಾಸಮಾಡುವದು ಜನರಹಿತವಾದ ಸ್ಥಳದಲ್ಲಿ ಇರಲು ತತ್ಪರ ನಾಗಿರುವದು (ಇವು-).

**ಸತ್ಯಂ ಸಮಸ್ತ ಜನ್ತುಷು ಕೃಷ್ಣಸ್ಯಾವಸ್ಥಿತೇರ್ಜ್ಞಾನಮ್ ।**
**ಅದ್ರೋಹೋ ಭೂತಗಣೇ ತತಸ್ತು ಭೂತಾನುಕಂಪಾ ಸ್ಯಾತ್ ॥೧೭೭॥**

೧೭೭. ಸತ್ಯವನ್ನು ನುಡಿಯುವದು, ಎಲ್ಲಾ ಪ್ರಾಣಿಗಳಲ್ಲಿಯೂ ಕೃಷ್ಣನ ಇರುವಿಕೆಯನ್ನು ಅರಿತುಕೊಳ್ಳುವದು, ಭೂತಗಳಿಗೆ ಕೇಡನ್ನು ಬಯಸದಿರುವದು, ಮತ್ತು ಪ್ರಾಣಿಗಳಲ್ಲಿ ದಯೆಯನ್ನಿಡುವಿಕೆ (ಇವು-)

**ಪ್ರಮಿತಯದೃಚ್ಛಾಲಾಭೇ ಸಂತುಷ್ಟಿರ್ದಾರಪುತ್ರಾದೌ ।**
**ಮಮತಾಶೂನ್ಯತ್ವಮತೋ ನಿರಹಂಕಾರತ್ವಮಕ್ರೋಧಃ ॥೧೭೮॥**

೧೭೮. ಮಿತವಾಗಿ ಬಂದದ್ದರಲ್ಲೂ ಅಕಸ್ಮಾತ್ತಾಗಿ ಒದಗಿದ್ದರಲ್ಲಿಯೂ ತೃಪ್ತಿ ಪಟ್ಟುಕೊಳ್ಳುವದು, ಹೆಂಡತಿ, ಮಕ್ಕಳು ತನ್ನದೆಂಬ ಅಭಿಮಾನವಿಲ್ಲದಿರುವದು, ಹಾಗೂ ಅಹಂಕಾರವಿಲ್ಲದಿರುವಿಕೆ, ಕ್ರೋಧವಿಲ್ಲದಿರುವಿಕೆ (ಇವು)

**ಮೃದುಭಾಷಿತಾ ಪ್ರಸಾದೋ ನಿಜನಿಂದಾಯಾಂ ಸ್ತುತೌ ಸಮತಾ ।**
**ಸುಖದುಃಖಶೀತೋಷ್ಣದ್ವನ್ದ್ವಸಹಿಷ್ಣುತ್ವಮಾಪದೋ ನ ಭಯಮ್ ॥೧೭೯॥**

೧೭೯. ಮೆದುವಾದ ಮಾತನ್ನಾಡುವದು, (ಮನಸ್ಸನ್ನು) ಪ್ರಸನ್ನವಾಗಿಟ್ಟು ಕೊಳ್ಳುವದು, ತನ್ನನ್ನು ನಿಂದೆಮಾಡಲಿ, ಹೊಗಳಲಿ, ಸಮನಾಗಿರುವದು, ಸುಖ, ದುಃಖ, ಶೀತ, ಉಷ್ಣ - ಮುಂತಾದ ದ್ವಂದ್ವಗಳನ್ನು ಸಹಿಸಿಕೊಳ್ಳುವದು, ಸಂಕಟಗಳಿಗೆ ಹೆದರದೆ ಇರುವದು. (ಇವು-)

**ನಿದ್ರಾಹಾರವಿಹಾರೇಷ್ವನಾದರಃ ಸಙ್ಗರಾಹಿತ್ಯಮ್ ।**
**ವಚನೇ ಚಾನವಕಾಶಃ ಕೃಷ್ಣಸ್ಮರಣೇನ ಶಾಶ್ವತೀ ಶಾನ್ತಿಃ ॥೧೮೦॥**

೧೮೦. ನಿದ್ರೆಮಾಡುವದು, ಆಹಾರವನ್ನು ತೆಗೆದುಕೊಳ್ಳುವದು, ಆಟ ವಾಡುವದು- ಇವುಗಳಲ್ಲಿ ಉದಾಸೀನತೆ, ವಿಷಯಗಳಿಗೆ ಅಂಟಿಕೊಳ್ಳದೆ ಇರುವದು, ಬಿಡಿ ಮಾತುಗಳಿಗೆ ಅವಕಾಶವನ್ನು ಕೊಡದಿರುವದು, ಕೃಷ್ಣನ ಚಿಂತೆಯಿಂದ ಶಾಶ್ವತವಾದ ಶಾಂತಿಯನ್ನು ಹೊಂದುವದು- (ಇವು)

**ಕೇನಾಪಿ ಗೀಯಮಾನೇ ಹರಿಗೀತೇ ವೇಣುನಾದೇ ವಾ ।**
**ಆನನ್ದಾವಿರ್ಭಾವೋ ಯುಗಪತ್ ಸ್ಯಾತ್ ಹೃಷ್ಟಸಾತ್ವಿಕೋದ್ರೇಕಃ ॥೧೮೧॥**

೧೮೧. ಯಾವನಾದರೂ ಹರಿಯ ಸ್ತುತಿಗಳನ್ನು ಹಾಡುತ್ತಿರಲು ಅಥವಾ ಕೊಳಲಿನ ಧ್ವನಿಮಾಡುತ್ತಿರಲಾಗಿ ಆನಂದವು ಹೊರಹೊಮ್ಮುವದೂ ಸತ್ತ್ವಗುಣವು ಹೆಚ್ಚಾಗಿ ಉಕ್ಕುವದೂ ಏಕಕಾಲದಲ್ಲಿ ಆಗುವಿಕೆ (ಇವು-ಸೂಕ್ಷ್ಮ ಭಕ್ತಿಗಳು).

**ತಸ್ಮಿನ್ನನುಭವತಿ ಮನಃ ಪ್ರಗೃಹ್ಯಮಾಣಂ ಪರಾತ್ಮಸುಖಮ್ ।**
**ಸ್ಥಿರತಾಂ ಯಾತೇ ತಸ್ಮಿನ್ ಯಾತಿ ಮದೋನ್ಮತ್ತದನ್ತಿದಶಾಮ್ ॥೧೮೨॥**

೧೮೨. ಮನಸ್ಸು ಹೀಗೆ ವಶಗೊಳಿಸಲ್ಪಟ್ಟದ್ದಾಗಿ ಪರಮವಾದ ಆತ್ಮಸುಖವನ್ನು ಆ (ಭಗವಂತನಲ್ಲಿ) ಅನುಭವಿಸುತ್ತಿರಲಾಗಿ ಅದು ಆತ್ಮನಲ್ಲಿಯೇ ನಿಶ್ಚಲವಾಗಿ ನಿಂತು ಬಿಟ್ಟರೆ (ಸಾಧಕನು) ಮದವೇರಿ ಸ್ವೇಚ್ಛೆಯಿಂದ ತಿರುಗುವ ಆನೆಯಂತೆ ಸ್ವತಂತ್ರನಾಗಿ ಬಿಡುವನು.

**ಜನ್ತುಷು ಭಗವದ್ಭಾವಂ ಭಗವತಿ ಭೂತಾನಿ ಪಶ್ಯತಿ ಕ್ರಮಶಃ ।**
**ಏತಾದೃಶೀ ದಶಾ ಚೇತ್ ತದೈವ ಹರಿದಾಸವರ್ಯಃ ಸ್ಯಾತ್ ॥೧೮೩॥**

೧೮೩. ಪ್ರಾಣಿಗಳಲ್ಲಿ ಭಗವದ್‌ಬುದ್ಧಿಯನ್ನೂ ಭಗವಂತನಲ್ಲೇ ಎಲ್ಲಾ ಭೂತಗಳನ್ನೂ (ಸಾಧಕನು) ಕ್ರಮವಾಗಿ ಕಾಣುತ್ತಾನೆ. ಈ ರೀತಿಯಾದ ಮನಃಸ್ಥಿತಿಯು ಉಂಟಾದದ್ದೇ ಆದರೆ ಆಗಲೇ ಹರಿದಾಸಶ್ರೇಷ್ಠನಾಗುವನು.

## ಧ್ಯಾನವಿಧಿ

**ಯಮುನಾತಟನಿಕಟಸ್ಥಿತವೃನ್ದಾವನಕಾನನೇ ಮಹಾರಮ್ಯೇ ।**
**ಕಲ್ಪದ್ರುಮತಲಭೂಮೌ ಚರಣಂ ಚರಣೋಪರಿ ಸ್ಥಾಪ್ಯ ॥೧೮೪॥**

೧೮೪. ಯಮುನಾನದಿಯ ದಡದ ಹತ್ತಿರದಲ್ಲಿರುವ ತುಂಬ ರಮಣೀಯವಾದ ವೃಂದಾವನದ ಉಪವನದಲ್ಲಿ ಕಲ್ಪವೃಕ್ಷದ ಬುಡದ ಭೂಮಿಯಲ್ಲಿ ಕಾಲಿನ ಮೇಲೆ ಕಾಲನ್ನು ಇರಿಸಿಕೊಂಡು-

**ತಿಷ್ಠನ್ತಂ ಘನನೀಲಂ ಸ್ವತೇಜಸಾ ಭಾಸಯನ್ತಮಿಹ ವಿಶ್ವಮ್ ।**
**ಪೀತಾಂಬರಪರಿಧಾನಂ ಚನ್ದನಕರ್ಪೂರಲಿಪ್ತಸರ್ವಾಙ್ಗಮ್ ॥೧೮೫॥**

೧೮೫. ನಿಂತಿರುವ, ಅಚ್ಚನೀಲಿಯ ಬಣ್ಣವುಳ್ಳ, ತನ್ನ ತೇಜಸ್ಸಿನಿಂದ ಜಗತ್ತೆಲ್ಲವನ್ನೂ ಬೆಳಗುತ್ತಿರುವ, ಪೀತಾಂಬರವನ್ನುಟ್ಟಿರುವ, ಚಂದನ, ಕರ್ಪೂರಗಳಿಂದ ಲೇಪಿಸಲ್ಪಟ್ಟ ಸರ್ವಾಂಗಗಳುಳ್ಳ-

**ಆಕರ್ಣಪೂರ್ಣನೇತ್ರಂ ಕುಣ್ಡಲಯುಗಮಣ್ಡಿತಶ್ರವಣಮ್ ।**
**ಮಂದಸ್ಮಿತಮುಖಕಮಲಂ ಸುಕೌಸ್ತುಭೋದಾರಮಣಿಹಾರಮ್ ॥೧೮೬॥**

೧೮೬. ಕಿವಿಯವರೆಗೂ ಹರಡಿದ ಕಣ್ಣುಳ್ಳವನಾದ ಎರಡು ಓಲೆಗಳಿಂದ ಅಲಂಕೃತವಾದ ಕಿವಿಗಳುಳ್ಳ ಮುಗುಳುನಗೆಯಿಂದ ಕೂಡಿದ ಮುಖಕಮಲವುಳ್ಳ ಉತ್ತಮವಾದ ಕೌಸ್ತುಭವೆಂಬ ರತ್ನದ ಹಾರದಿಂದ ಅಲಂಕೃತನಾಗಿರುವ-

**ವಲಯಾಙ್ಗುಲೀಯಕಾದ್ಯಾನುಜ್ವಲಯನ್ತಂ ಸ್ವಲಂಕಾರಾನ್ ।**
**ಗಲವಿಲುಲಿತವನಮಾಲಂ ಸ್ವತೇಜಸಾಪಾಸ್ತಕಲಿಕಾಲಮ್ ॥೧೮೭॥**

೧೮೭. ಬಳೆಗಳು, ಉಂಗುರ-ಮುಂತಾದ ತನ್ನ ಒಡವೆಗಳನ್ನು ಕಾಂತಿಯುಕ್ತವಾಗಿ ಮಾಡುತ್ತಾ ಕಂಠದಲ್ಲಿ ನಲಿದಾಡುವ ವನಮಾಲೆಯುಳ್ಳವನಾದ, (ಮತ್ತು) ತನ್ನ ಕಾಂತಿಯಿಂದ ನಾಶಗೊಳಿಸಲ್ಪಟ್ಟ ಕಲಿಯೆಂಬ ಕಾಲವುಳ್ಳಂಥ-

**ಗುಂಜಾರವಾಲಿಕಲಿತಂ ಗುಂಜಾಪುಂಜಾನ್ವಿತೇ ಶಿರಸಿ ।**
**ಭುಂಜಾನಂ ಸಹ ಗೋಪೈಃ ಕುಂಜಾಂತರವರ್ತಿನಂ ಹರಿಂ ಸ್ಮರತ ॥೧೮೮॥**

೧೮೮. ಗುಲುಗಂಜಿಗಳ ಸಮೂಹದಿಂದ ಅಲಂಕೃತವಾದ ತಲೆಯಲ್ಲಿ (ಮುಡಿದಿರುವ ಹೂಗಳ ಸುವಾಸನೆಗಾಗಿ ಮುತ್ತಿರುವ) ದುಂಬಿಗಳ ಝೇಂಕಾರ

ನಾದದಿಂದ ಕೂಡಿರುವ, ಲತಾಮಂಟಪದೊಳಗೆ ಗೋಪರುಗಳೊಡನೆ ಊಟ ಮಾಡುತ್ತಿರುವ ಶ್ರೀಹರಿಯನ್ನು ಸ್ಮರಿಸಿಕೊಳ್ಳಿರಿ.

**ಮನ್ದಾರಪುಷ್ಪವಾಸಿತಮನ್ದಾನಿಲಸೇವಿತಂ ಪರಾನನ್ದಮ್ ।**
**ಮನ್ದಾಕಿನೀಯುತಪದಂ ನಮತ ಮಹಾನನ್ದದಂ ಪುರುಷಮ್ ॥೧೮೯॥**

೧೮೯. ಮಂದಾರದ ಹೂಗಳಿಂದ ಸುವಾಸಿತವಾದ ತಿಳಿಗಾಳಿಯಿಂದ ಸೇವಿತನಾದ, ಪರಮಾನಂದರೂಪನಾದ, ಗಂಗಾನದಿಗೆ ಚಾಚಿದ ಕಾಲುಗಳುಳ್ಳ ಮಹಾ ಆನಂದವನ್ನು ಕೊಡುವ ಪುರುಷನನ್ನು ನಮಸ್ಕರಿಸಿರಿ.

**ಸುರಭೀಕೃತದಿಗ್ವಲಯಂ ಸುರಭಿಶತೈರಾವೃತಂ ಸದಾ ಪರಿತಃ ।**
**ಸುರಭೀತಿಕ್ಷಪಣಮಹಾಸುರಭೀಮಂ ಯಾದವಂ ನಮತ ॥ ೧೯೦ ॥**

೧೯೦. ಸುವಾಸನೆಯಾಗಿ ಮಾಡಲ್ಪಟ್ಟ ದಿಙ್ಮಂಡಲವುಳ್ಳ, ನೂರಾರು ಗೋವುಗಳಿಂದ ಯಾವಾಗಲೂ ಸುತ್ತವರೆಯಲ್ಪಟ್ಟಿರುವ, ದೇವತೆಗಳ ಭಯವನ್ನು ಹೋಗಲಾಡಿಸುವ ರಾಕ್ಷಸಭಯಂಕರನಾದ ಯಾದವನನ್ನು ನಮಸ್ಕರಿಸಿರಿ.

**ಕಂದರ್ಪಕೋಟಿಸುಭಗಂ ವಾಂಛಿತಫಲದಂ ದಯಾರ್ಣವಂ ಕೃಷ್ಣಮ್ ।**
**ತ್ಯಕ್ತ್ವಾ ಕಮನ್ಯವಿಷಯಂ ನೇತ್ರಯುಗಂ ದ್ರಷ್ಟುಮುತ್ಸಹತೇ ॥೧೯೧ ॥**

೧೯೧. ಕೋಟಿ ಮನ್ಮಥರಿಗೆ ಸಮಾನವಾದ ಸೌಂದರ್ಯವುಳ್ಳ, ಇಷ್ಟಾರ್ಥಗಳನ್ನು ನೀಡುವ, ದಯಾಸಮುದ್ರನಾದ ಕೃಷ್ಣನನ್ನು ಹೊರತು ಬೇರೆ ಯಾವ ವಿಷಯವನ್ನು ತಾನೆ ನೋಡುವದಕ್ಕೆ (ನನ್ನ) ಎರಡು ಕಣ್ಣುಗಳು ಉತ್ಸಾಹಪಟ್ಟಾವು?

**ಪುಣ್ಯತಮಾಮತಿಸುರಸಾಂ ಮನೋಽಭಿರಾಮಾಂ ಹರೇಃ ಕಥಾಂ ತ್ಯಕ್ತ್ವಾ ।**
**ಶ್ರೋತುಂ ಶ್ರವಣದ್ವಂದ್ವಂ ಗ್ರಾಮ್ಯಂ ಕಥಮಾದರಂ ಭವತಿ ॥೧೯೨ ॥**

೧೯೨. ಹೆಚ್ಚಿನ ರುಚಿಕರವಾದ, ಮನಸ್ಸಿಗೆ ಹರ್ಷದಾಯಕವಾದ ಪುಣ್ಯಕರವಾದ ಹರಿಯ ಕಥೆಯನ್ನು ಬಿಟ್ಟು ಎರಡು ಕಿವಿಗಳು ಗ್ರಾಮ್ಯವಾದ (ವಿಷಯಗಳನ್ನು) ಕೇಳುವದಕ್ಕೆ ಹೇಗೆ ತಾನೆ ಆದರವನ್ನು ಹೊಂದಿಯಾವು?

**ದೌರ್ಭಾಗ್ಯಮಿನ್ದ್ರಿಯಾಣಾಂ ಕೃಷ್ಣೇ ವಿಷಯೇ ಹಿ ಶಾಶ್ವತಿಕೇ ।**
**ಕ್ಷಣಿಕೇಷು ಪಾಪಕರಣೇಷ್ವಪಿ ಸಜ್ಜನ್ತೇ ಯದನ್ಯವಿಷಯೇಷು ॥೧೯೩ ॥**

೧೯೩. ಕೃಷ್ಣನೆಂಬ ಶಾಶ್ವತವಾದ ವಿಷಯವು ಇದ್ದುಕೊಂಡಿರಲಾಗಿ ಕ್ಷಣಿಕವಾದ, ಮತ್ತು ಪಾಪಗಳಿಗೆ ದಾರಿಯಾಗಿರುವ ಅನ್ಯವಾದ ಲೌಕಿಕವಿಷಯಗಳಲ್ಲಿ (ಜನರು) ಆಸಕ್ತರಾಗುವದು ಇಂದ್ರಿಯಗಳ ದೌರ್ಭಾಗ್ಯವೇ ಸರಿ.

## ಸಗುಣನಿರ್ಗುಣಗಳ ಐಕ್ಯ

**ಶ್ರುತಿಭಿರ್ಮಹಾಪುರಾಣೈಃ ಸಗುಣಗುಣಾತೀತಯೋರೈಕ್ಯಮ್ ।**
**ಯತ್ಪ್ರೋಕ್ತಂ ಗೂಢತಯಾ ತದಹಂ ವಕ್ಷ್ಯೇಽತಿವಿಶದಾರ್ಥಮ್ ॥ ೧೯೪ ॥**

೧೯೪. ಶ್ರುತಿಗಳಿಂದಲೂ ಮಹಾಪುರಾಣಗಳಿಂದಲೂ ಸಗುಣ ಮತ್ತು ನಿರ್ಗುಣಗಳ ಐಕ್ಯವು ರಹಸ್ಯವಾಗಿ ತಿಳಿಸಲ್ಪಟ್ಟೇ ಇರುವದು. ಅದನ್ನು ನಾನು ಅತಿ ಸ್ಪಷ್ಟವಾದ ರೀತಿಯಲ್ಲಿ (ಮುಂದೆ) ಹೇಳುವೆನು.

**ಭೂತೇಷ್ವನ್ತರ್ಯಾಮೀ ಜ್ಞಾನಮಯಃ ಸಚ್ಚಿದಾನನ್ದಃ ।**
**ಪ್ರಕೃತೇಃ ಪರಃ ಪರಾತ್ಮಾ ಯದುಕುಲತಿಲಕಃ ಸ ಏವಾಯಮ್ ॥೧೯೫॥**

೧೯೫. ಎಲ್ಲಾ ಭೂತಗಳಲ್ಲಿಯೂ ಅಂತರ್ಯಾಮಿಯಾಗಿರುವ, ಜ್ಞಾನಸ್ವರೂಪನೂ ಸಚ್ಚಿದಾನಂದನೂ ಪ್ರಕೃತಿಗಿಂತ ಉತ್ಕೃಷ್ಟನೂ ಪರಾತ್ಮನೂ ಆಗಿರುವ ಆತ್ಮನು ಯದುಕುಲಶ್ರೇಷ್ಠನಾದ ಕೃಷ್ಣನೇ ಆಗಿರುವನು.

**ನನು ಸಗುಣೋ ದೃಶ್ಯತನುಃ ತತ್ರೈಕದೇಶಾಧಿವಾಸಶ್ಚ ।**
**ಸ ಕಥಂ ಭವೇತ್ ಪರಾತ್ಮಾ ಪ್ರಾಕೃತವದ್ರಾಗರೋಷಯುತಃ ॥೧೯೬॥**

೧೯೬. ಗುಣಗಳಿಂದ ಕೂಡಿದವನಾದರೆ ಕಣ್ಣಿಗೆ ಗೋಚರವಾಗುವ ಶರೀರವುಳ್ಳವನೂ ಒಂದು ಜಾಗದಲ್ಲಿದ್ದುಕೊಂಡಿರುವವನೂ ಆಗುವನಾದ್ದರಿಂದ ಸಾಮಾನ್ಯ ಮನುಷ್ಯನಂತೆ ರಾಗದ್ವೇಷಗಳಿಂದ ಕೂಡಿದವನಾದ ಆತನು ಪರಮಾತ್ಮನು ಹೇಗಾದಾನು?

**ಇತರೇ ದೃಶ್ಯಪದಾರ್ಥಾ ಲಕ್ಷ್ಯನ್ತೇಽನೇನ ಚಕ್ಷುಷಾ ಸರ್ವೇ ।**
**ಭಗವಾನನಯಾ ದೃಷ್ಟ್ಯಾ ನ ಲಕ್ಷ್ಯತೇ ಜ್ಞಾನದೃಗ್ಗಮ್ಯಃ ॥೧೯೭॥**

೧೯೭. ಉಳಿದ ದೃಶ್ಯಪದಾರ್ಥಗಳು ಎಲ್ಲವೂ ಈ (ಚರ್ಮ) ಚಕ್ಷುಸ್ಸಿನಿಂದಲೇ ನೋಡಲ್ಪಡುತ್ತವೆ. ಆದರೆ ಭಗವಂತನಾದರೊ, ಈ ದೃಷ್ಟಿಗೆ ಗೋಚರನಾಗುವದಿಲ್ಲ. (ಆದರೆ) ಜ್ಞಾನದೃಷ್ಟಿಗೆ ಗೋಚರನಾಗುವನು.

**ಯದ್ವಿಶ್ವರೂಪದರ್ಶನಸಮಯೇ ಪಾರ್ಥಾಯ ದತ್ತವಾನ್ ಭಗವಾನ್ ।**
**ದಿವ್ಯಂ ಚಕ್ಷುಃ ತಸ್ಮಾದ್ ಅದೃಶ್ಯತಾ ಯುಜ್ಯತೇ ನೃಹರೌ ॥೧೯೮॥**

೧೯೮. ವಿಶ್ವರೂಪವನ್ನು ತೋರಿಸುವ ಸಂದರ್ಭದಲ್ಲಿ ಭಗವಂತನು ಅರ್ಜುನನಿಗೆ ದಿವ್ಯಚಕ್ಷುಸ್ಸನ್ನು ಕೊಟ್ಟನು. ಆದ್ದರಿಂದ ನರಹರಿಯು ಅದೃಶ್ಯನಾಗಿರುವದು ಸೂಕ್ತವಾಗಿದೆ.

**ಸಾಕ್ಷಾದ್ ಯತ್ರೈಕದೇಶೇ ವರ್ತುಲಮುಪಲಭ್ಯತೇ ರವೇರ್ಬಿಮ್ಬಮ್**
**ವಿಶ್ವಂ ಪ್ರಕಾಶಯತಿ ತತ್ ಸರ್ವೈಃ ಸರ್ವತ್ರ ದೃಶ್ಯತೇ ಯುಗಪತ್ ॥೧೯೯॥**

೧೯೯. ಹೇಗೆ ಒಂದು ಜಾಗದಲ್ಲಿ ಸೂರ್ಯನ ಬಿಂಬವು ದುಂಡಾಗಿ ಕಂಡು ಬರುವದೋ, ಆದರೆ ಅದು ಜಗತ್ತೆಲ್ಲವನ್ನೂ ಬೆಳಗುತ್ತಿರುವದೋ ಎಲ್ಲಾ ಕಡೆಯಲ್ಲಿಯೂ ಎಲ್ಲರಿಂದಲೂ ಏಕಕಾಲದಲ್ಲಿ ನೋಡಲ್ಪಡುವದೋ ಹಾಗೆಯೇ (ಇದು).

**ಯದ್ಯಪಿ ಸಾಕಾರೋಽಯಂ ತಥೈಕದೇಶೀ ವಿಭಾತಿ ಯದುನಾಥಃ ।**
**ಸರ್ವಗತಃ ಸರ್ವಾತ್ಮಾ ತಥಾಽಪ್ಯಯಂ ಸಚ್ಚಿದಾನನ್ದಃ ॥ ೨೦೦ ॥**

೨೦೦. ಯದುನಾಥನು ಸಾಕಾರನೂ ಒಂದು ಪ್ರದೇಶದಲ್ಲಿ ತೋರಿ ಕೊಳ್ಳುವವನೂ ಆಗಿದ್ದರೂ ಇವನು ಸರ್ವಗತನೂ ಸರ್ವರ ಆತ್ಮನೂ ಸಚ್ಚಿದಾನಂದನೂ ಆಗಿರುವನು.

**ಏಕೋ ಭಗವಾನ್ ರೇಮೇ ಯುಗಪದ್ ಗೋಪೀಷ್ವನೇಕಾಸು ।**
**ಅಥವಾ ವಿದೇಹಜನಕಶ್ರುತದೇವಯೋರ್ಹರಿರ್ಯುಗಪತ್ ॥ ೨೦೧ ॥**

೨೦೧. ಒಬ್ಬನೇ ಭಗವಂತನು ಏಕಕಾಲದಲ್ಲಿ ಅನೇಕ ಗೋಪಿಯರುಗಳಲ್ಲಿ ವಿಹಾರಮಾಡಿದನು. ಅಥವಾ ವಿದೇಹರಾಜನಾದ ಜನಕ ಮತ್ತು ಶ್ರುತದೇವ ಎಂಬ ಭೂಪತಿಗಳಿಗೆ ಹರಿಯು ಏಕಕಾಲದಲ್ಲಿ ಪ್ರತ್ಯಕ್ಷನಾದನು.

**ಅಥವಾ ಕೃಷ್ಣಾಕಾರಾಂ ಸ್ವಚಮೂಂ ದುರ್ಯೋಧನೋಽಪಶ್ಯತ್ ।**
**ತಸ್ಮಾದ್ ವ್ಯಾಪಕ ಆತ್ಮಾ ಭಗವಾನ್ ಹರಿರೀಶ್ವರಃ ಕೃಷ್ಣಃ ॥ ೨೦೨ ॥**

೨೦೨. ಅಥವಾ ದುರ್ಯೋಧನನು ತನ್ನ ಸೈನ್ಯವನ್ನು ಪೂರ ಕೃಷ್ಣರೂಪದಿಂದಲೇ ಕಂಡನು. ಆದ್ದರಿಂದ ಪೂಜ್ಯನಾದ ಶ್ರೀಹರಿಯು ಎಲ್ಲಕ್ಕೂ ಒಡೆಯನೂ ವ್ಯಾಪಕನೂ ಎಲ್ಲರ ಆತ್ಮನೂ ಆಗಿರುವ ಕೃಷ್ಣನಾಗಿರುವನು.

**ವಕ್ಷಸಿ ಯದಾ ಜಘಾನ ಶ್ರೀವತ್ಸಃ ಶ್ರೀಪತೇಃ ಸ ಕಿಂ ದ್ವೇಷ್ಯಃ ।**
**ಭಕ್ತಾನಾಮಸುರಾಣಾಮನ್ಯೇಷಾಂ ವಾ ಫಲಂ ಸದೃಶಮ್ ॥ ೨೦೩ ॥**

೨೦೩. ಶ್ರೀವತ್ಸ (ನೆಂಬುವನು) ಯಾವಾಗ ಶ್ರೀಹರಿಯ ಎದೆಗೆ ಹೊಡೆದನೋ ಆಗ ಅವನು ಶತ್ರುವಾದನೇನು? ಭಕ್ತರಿಗೂ ರಾಕ್ಷಸರಿಗೂ ಉಳಿದವರಿಗೂ (ಸ್ವಾಮಿಯ ದೃಷ್ಟಿಯಿಂದ) ಫಲವು ಸಮನಾಗಿಯೇ ಆಗುವದು.

**ತಸ್ಮಾನ್ನ ಕೋಽಪಿ ಶತ್ರುಃ ನೋ ಮಿತ್ರಂ ನಾಪ್ಯುದಾಸೀನಃ ।**
**ನೃಹರಿಃ ಸನ್ಮಾರ್ಗಸ್ಥಃ ಸಫಲಃ ಶಾಖೀವ ಯದುನಾಥಃ ॥ ೨೦೪ ॥**

೨೦೪. ಆದ್ದರಿಂದ ಒಳ್ಳೆಯ (ರಾಜ) ಮಾರ್ಗದಲ್ಲಿರುವ, ಹಣ್ಣುಗಳಿಂದ ಕೂಡಿರುವ ಮರದಂತೆ ಯದುನಾಥನಾದ ನರಹರಿಯು ಯಾವನೊಬ್ಬ ಶತ್ರುವಿಲ್ಲದವನು, ಮಿತ್ರನಾಗಲೀ ಉದಾಸೀನನಾಗಲೀ ಇಲ್ಲದವನು.

**ಲೋಹಶಲಾಕಾನಿವಹೈಃ ಸ್ಪರ್ಶಾಶ್ಮನಿ ಭಿದ್ಯಮಾನೇಽಪಿ ।**
**ಸ್ವರ್ಣತ್ವಮೇತಿ ಲೌಹಂ ದ್ವೇಷಾದಪಿ ವಿದ್ವಿಷಾಂ ತಥಾ ಪ್ರಾಪ್ತಿಃ ॥ ೨೦೫ ॥**

೨೦೫. ಕಬ್ಬಿಣದ ಮೊಳೆಗಳ ಸಮೂಹದಿಂದ ಸ್ಪರ್ಶಮಣಿಯು ತುಂಡು ಮಾಡಲ್ಪಟ್ಟರೂ ಕಬ್ಬಿಣವು ಚಿನ್ನವಾಗುವದು. ಹಾಗೆಯೇ ಶ್ರೀ ಹರಿಯನ್ನು ದ್ವೇಷ ಮಾಡಿದವರಿಗೂ (ಭಗವಂತನ) ಪ್ರಾಪ್ತಿಯಾಗುವದು.

**ನನ್ವಾತ್ಮನಃ ಸಕಾಶಾದುತ್ಪನ್ನಾ ಜೀವಸಂತತಿಶ್ಚೇಯಮ್ ।**
**ಜಗತಃ ಪ್ರಿಯತರ ಆತ್ಮಾ ತತ್ಪ್ರಕೃತೇ ನೈವ ಸಂಭವತಿ ॥ ೨೦೬ ॥**

೨೦೬. ಆತ್ಮನಿಂದಲೇ ಈ ಜೀವರುಗಳ ಪರಂಪರೆಯೆಲ್ಲವೂ ಹುಟ್ಟಿರುವದಲ್ಲವೆ? ಆತ್ಮನು ಜಗತ್ತಿಗೆ ಪ್ರಿಯತರನೂ ಆಗಿದ್ದಾನಲ್ಲವೆ? (ದ್ವೇಷಾದಿಗಳೆಲ್ಲಿ ಬಂತು?) ಎಂಬಿದು ಇಲ್ಲಿ ಹೊಂದುವಹಾಗಿಲ್ಲ.

**ವತ್ಸಾಹರಣಾವಸರೇ ಪೃಥಗ್ ವಯೋರೂಪವಾಸನಾಭೂಷಾನ್ ।**
**ಹರಿರಜಮೋಹಂ ಕರ್ತುಂ ಸವತ್ಸ ಗೋಪಾನ್ ವಿನಿರ್ಮಮೇ ಸ್ವಸ್ಮಾತ್ ॥ ೨೦೭ ॥**

೨೦೭. ವತ್ಸಾಪಹರಣ (ಲೀಲೆ)ಯ ಸಮಯದಲ್ಲಿ ಬೇರೆಬೇರೆಯ ವಯಸ್ಸು ರೂಪ, ಸಂಸ್ಕಾರ, ವೇಷಗಳಿಂದ ಕೂಡಿದ ಕರುಗಳು ಹಾಗೂ ಗೋಪಾಲಕರುಗಳನ್ನು ಹರಿಯು ಬ್ರಹ್ಮನನ್ನು ಮೋಹಗೊಳಿಸುವದಕ್ಕಾಗಿ ತನ್ನ (ಶರೀರದಿಂದಲೇ) ನಿರ್ಮಿಸಿದನು.

**ಅಗ್ನೇರ್ಯಥಾ ವಿಸ್ಫುಲಿಂಗಾಃ ಕ್ಷುದ್ರಾಸ್ತು ವ್ಯುಚ್ಚರನ್ತೀತಿ ।**
**ಶ್ರುತ್ಯರ್ಥಂ ದರ್ಶಯಿತುಂ ಸ್ವತನೋರತನೋತ್ ಸ ಜೀವಸಂದೋಹಮ್ ॥ ೨೦೮ ॥**

೨೦೮. ಬೆಂಕಿಯಿಂದ ಹೇಗೆ ಸಣ್ಣ ಕಿಡಿಗಳು ಸಿಡಿದುಬರುವವವೋ (ಹಾಗೆ ಜೀವರುಗಳು ಪರಮಾತ್ಮನಿಂದ ಹುಟ್ಟುವರು-) ಎಂಬ ವೇದದ ಅರ್ಥವನ್ನು ನಿಜಗೊಳಿಸಿ ತೋರಿಸುವದಕ್ಕಾಗಿ ಆತನು ತನ್ನ ಶರೀರದಿಂದಲೇ ಜೀವರುಗಳ ಗುಂಪನ್ನು ಉಂಟುಮಾಡಿದನು.

**ಯಮುನಾತೀರನಿಕುಂಜೇ ಕದಾಚಿದಪಿ ವತ್ಸಕಾಂಶ್ಚ ಚಾರಯತಿ ।**
**ಕೃಷ್ಣೇ ತಥಾರ್ಯಗೋಪೇಷು ಚ ವರಗೋಷ್ಠೇಷು ಚಾರಯತ್ಸ್ವಾರಾತ್ ॥ ೨೦೯ ॥**

೨೦೯. ಯಮುನಾನದಿಯ ತೀರದ ಪೊದೆಗಳಲ್ಲಿ ಒಮ್ಮೆ (ಕೃಷ್ಣನು) ಕರುಗಳನ್ನು ಮೇಯಿಸುತ್ತಿರಲಾಗಿ ಪೂಜ್ಯರಾದ ಗೋಪರುಗಳು ಕೊಟ್ಟಿಗೆಗಳ ಹತ್ತಿರದಲ್ಲಿಯೇ (ಹಸುಗಳನ್ನು) ಮೇಯಿಸುತ್ತಿರಲಾಗಿ-

**ವತ್ಸಂ ನಿರೀಕ್ಷ್ಯ ದೂರಾದ್ ಗಾವಃ ಸ್ನೇಹೇನ ಸಂಭ್ರಾನ್ತಾಃ ।**
**ತದಭಿಮುಖಂ ಧಾವನ್ತ್ಯಃ ಪ್ರಯಯುರ್ಗೋಪೈಶ್ಚ ದುರ್ವಾರಾಃ ॥ ೨೧೦ ॥**

೨೧೦. ದೂರದಲ್ಲಿರುವ ಕರುವನ್ನು ನೋಡಿ ಗೋವುಗಳು ಬೆದರಿ ವಾತ್ಸಲ್ಯದಿಂದ ಕರುಗಳಿಗೆ ಎದುರಾಗಿ ಓಡಿದವು. ಗೋಪರುಗಳಿಂದ ತಡೆಯಲಾಗಲಿಲ್ಲ.

**ಪ್ರಸ್ರವಭರೇಣ ಭೂಯಃ ಸ್ರುತಸ್ತನಾಃ ಪ್ರಾಪ್ಯ ಪೂರ್ವವದ್ ವತ್ಸಾನ್ ।**
**ಪೃಥುರಸನಯಾ ಲಿಹನ್ತ್ಯಃ ತರ್ಣಕವತ್ಯಃ ಪ್ರಪಾಯಯನ್ ಪ್ರಮುದಾ ॥ ೨೧೧ ॥**

೨೧೧. ಕೆಚ್ಚಲು ಬಹುವಾಗಿ ಭಾರೈಸಿ ಹಾಲನ್ನು ಸುರಿಸಿದವುಗಳಾಗಿ ಕರುಗಳಿಗೆ ಪ್ರೀತಿಯಿಂದ ಹಾಲುಣಿಸಿ ಹಿಂದಿನಂತೆಯೇ ದಪ್ಪವಾದ ನಾಲಿಗೆಯಿಂದ ಆಗತಾನೆ ಹುಟ್ಟಿದ ಕರುಗಳನ್ನೂ ನೆಕ್ಕುತ್ತಾ ಇದ್ದವು.

**ಗೋಪಾ ಅಪಿ ನಿಜಬಾಲಾನ್ ಜಗೃಹುರ್ಮೂರ್ಧಾನಮಾಘ್ರಾಯ ।**
**ಇತ್ಥಮಲೌಕಿಕಲಾಭಸ್ತೇಷಾಂ ತತ್ರ ಕ್ಷಣಂ ವವೃಧೇ ॥ ೨೧೨ ॥**

೨೧೨. ಗೋಪಾಲಕರೂ ತಮ್ಮ ಮಕ್ಕಳನ್ನು ಸ್ವೀಕರಿಸಿ ನೆತ್ತಿಯಲ್ಲಿ ಮೂಸಿನೋಡಿದರು. ಹೀಗೆ ಅಲ್ಲಿ ಅಲೌಕಿಕವಾದ (ಆನಂದದ) ಲಾಭವು ಅವರಿಗೆ ಒಂದು ಕ್ಷಣಕಾಲ ಬೆಳೆದಿತ್ತು.

**ಗೋಪಾ ವತ್ಸಾಶ್ಚಾನ್ಯಾ ಪೂರ್ವಂ ಕೃಷ್ಣಾತ್ಮಕಾ ಹ್ಯಭವನ್ ।**
**ತೇನಾತ್ಮನಃ ಪ್ರಿಯತ್ವಂ ದರ್ಶಿತಮೇತೇಷು ಕೃಷ್ಣೇನ ॥ ೨೧೩ ॥**

೨೧೩. ಬೇರೆಬೇರೆಯಾಗಿ ಸೃಷ್ಟಿ ಮಾಡಲ್ಪಟ್ಟಿದ್ದ ಗೋಪರೂ ಕರುಗಳೂ ಕೃಷ್ಣಾತ್ಮಕರಾಗಿಯೇ ಇದ್ದರು. ಆದರಿಂದ ಆತ್ಮನು ಪ್ರಿಯನೆಂಬುದನ್ನು ಇವರಲ್ಲಿ ಕೃಷ್ಣನು ತೋರಿಸಿಕೊಟ್ಟಂತಾಯಿತು.

**ಪ್ರೇಯಃ ಪುತ್ರಾದ್ ವಿತ್ತಾದ್ ಪ್ರೇಯೋಽನ್ಯಸ್ಮಾಚ್ಚ ಸರ್ವಸ್ಮಾತ್ ।**
**ಅನ್ತರತರಂ ಯದಾತ್ಮೇತ್ಯುಪನಿಷದಃ ಸತ್ಯತಾಭಿಹಿತಾ ॥ ೨೧೪ ॥**

೨೧೪. ಪುತ್ರನಿಗಿಂತಲೂ ಹಣಕ್ಕಿಂತಲೂ ಉಳಿದ ಎಲ್ಲಾ ವಸ್ತುಗಳಿಗಿಂತಲೂ (ಆತ್ಮನು) ಪ್ರಿಯನು ; ಆತ್ಮನು ಎಲ್ಲಕ್ಕಿಂತಲೂ ಒಳಗಿರುವವನು- ಎಂದು ಉಪನಿಷತ್ತು ಹೇಳುತ್ತಿರುವದು ಸತ್ಯವೆಂದಂತಾಯಿತು.

**ನನ್ವುಚ್ಚಾವಚಭೂತೇಷ್ವಾತ್ಮಾ ಸಮ ಏವ ವರ್ತತೇಽಥ ಹರಿಃ ।**
**ದುರ್ಯೋಧನೇಽರ್ಜುನೇ ವಾ ತರತಮಭಾವಂ ಕಥಂ ನು ಗತವಾನ್ ಸಃ ॥ ೨೧೫ ॥**

೨೧೫. ಇನ್ನು ಹರಿಯು ಮೇಲುಕೀಳುತರಗತಿಗಳ ಪ್ರಾಣಿಗಳಲ್ಲಿ ಸಮನಾಗಿ ಆತ್ಮನಾಗಿಯೇ ಇದ್ದು ಕೊಂಡಿರುವನು. ಹಾಗಾದರೆ ದುರ್ಯೋಧನನಲ್ಲಾಗಲೀ ಅರ್ಜುನನಲ್ಲಾಗಲೀ ಮೇಲುಕೀಳುಭಾವಗಳನ್ನು ಅವನು ಹೊಂದಿದ್ದು ಹೇಗೆ ಸರಿ?

**ಬಧಿರಾನ್ಧಪಙ್ಗುಮೂಕಾ ದೀರ್ಘಾಃ ಖರ್ವಾಃ ಸರೂಪಾಶ್ಚ ।**
**ಸರ್ವೇ ವಿಧಿನಾ ದೃಷ್ಟಾಃ ಸವತ್ಸಗೋಪಾಶ್ಚ ತುರ್ಭುಜಾಸ್ತೇನ ॥ ೨೧೬ ॥**

೨೧೬. ಬ್ರಹ್ಮನು ನೋಡಿದ ಕಿವುಡ, ಕುರುಡ, ಹೆಳವ, ಮೂಕ, ಉದ್ದನೆಯವ, ಮೋಟ- ಎಲ್ಲ ಗೋಪರುಗಳೂ ಕರುಗಳ ಸಮೇತರಾಗಿ ಸಮಾನರೂಪರಾಗಿಯೇ ಚತುರ್ಭುಜರಾಗಿಯೇ ಕಂಡರು.

**ಭೂತಸಮತ್ವಂ ನೃಹರೇಃ ಸಮೋ ಹಿ ಮಶಕೇನ ನಾಗೇನ ।**
**ಲೋಕೈಸ್ತ್ರಿಭಿರ್ವೇತ್ಯುಪನಿಷದಾ ಭಾಷಿತಃ ಸಾಕ್ಷಾತ್ ॥ ೨೧೭ ॥**

೨೧೭. ನರಹರಿಯಾದ ಕೃಷ್ಣನು ಎಲ್ಲಾ ಭೂತಗಳಲ್ಲಿಯೂ ಸಮನಾಗಿರುವನು. ಆದ್ದರಿಂದಲೇ 'ಸೊಳ್ಳೆಗೆ ಸಮನು, ಆನೆಗ ಸಮನು, ಮೂರುಲೋಕಗಳಿಗೂ ಸಮನು' ಹೀಗೆಂದು ಉಪನಿಷತ್ತುಗಳಿಂದ ಸ್ತುತಿಸಲ್ಪಟ್ಟಿರುವನು.

**ಆತ್ಮಾ ತಾವದಭೋಕ್ತಾ ತಥೈವ ನನು ವಾಸುದೇವಶ್ಚೇತ್ ।**
**ನಾನಾಕೈತವಯತ್ನೈಃ ಪರರಮಣೀಭಿಃ ಕಥಂ ರಮತೇ ॥ ೨೧೮ ॥**

೨೧೮. ಆತ್ಮನು ಭೋಕ್ತೃವಲ್ಲವಷ್ಟೆ! ಹಾಗೆಯೇ ಅವನು ವಾಸುದೇವನೂ ಆಗಿದ್ದರೆ ಅನೇಕವಿಧವಾದ ಕಪಟಪ್ರಯತ್ನಗಳಿಂದ ಅತಿ ಸುಂದರಿಯರೊಡನೆ ಹೇಗೆ ನಲಿದಾಡುವನು ?

**ಸುನ್ದರಮಭಿನವರೂಪಂ ಕೃಷ್ಣಂ ದೃಷ್ಟ್ವಾ ವಿಮೋಹಿತಾ ಗೋಪ್ಯಃ ।**
**ತಮಭಿಲಷಂತ್ಯೋ ಮನಸಾ ಕಾಮಾದ್ ವಿರಹವ್ಯಥಾಂ ಪ್ರಾಪುಃ ॥ ೨೧೯ ॥**

೨೧೯. ಸುಂದರವೂ ಹೊಸತೂ ಆದ ರೂಪವುಳ್ಳ ಕೃಷ್ಣನನ್ನು ನೋಡಿ ಮೋಹಿತರಾದ ಗೋಪಿಯರು ಮನಸ್ಸಿನಿಂದ ಅವನನ್ನು ಬಯಸುತ್ತಾ ಕಾಮಗಿಂದ ವಿರಹದುಃಖವನ್ನು ಹೊಂದಿದವರಾದರು.

**ಗಚ್ಛನ್ತ್ಯಸ್ತಿಷ್ಠನ್ತ್ಯೋ ಗೃಹಕೃತ್ಯ ಪರಾಶ್ಚ ಭುಂಜಾನಾಃ ।**
**ಕೃಷ್ಣಂ ವಿನಾಽನ್ಯವಿಷಯಂ ಸಮಕ್ಷಮಪಿ ಜಾತು ನಾವಿನ್ದನ್ ॥ ೨೨೦॥**

೨೨೦. (ಗೋಪಿಯರು) ಓಡಾಡುತ್ತಾ, ನಿಲ್ಲುತ್ತಾ, ಮನೆಗೆಲಸಗಳಲ್ಲಿ ತೊಡಗುತ್ತಾ ಊಟಮಾಡುತ್ತಾ ಇದ್ದಾಗಲೂ ಕೃಷ್ಣನ ಹೊರತು ಬೇರೊಂದು ವಿಷಯವನ್ನು ಎದುರಿಗೆ ಇರುವದನ್ನು ಕೂಡ ಎಂದಿಗೂ ಅರಿಯುತ್ತಿರಲಿಲ್ಲ.

**ದುಸ್ಸಹವಿರಹಭ್ರಾನ್ತ್ಯಾ ಸ್ವಪತೀನ್ ದದೃಶುಸ್ತರೂನ್ ನರಾಂಶ್ಚ ಪಶೂನ್ ।**
**ಹರಿರಯಮಿತಿ ಸುಪ್ರೀತಾಃ ಸರಭಸಮಾಲಿಂಗಯಾಂಚಕ್ರುಃ ॥ ೨೨೧ ॥**

೨೨೧. ತಡೆಯಲಾರದ ವಿರಹದಿಂದ ಮರಗಳನ್ನೂ, ಮನುಷ್ಯರನ್ನೂ ಪಶುಗಳನ್ನೂ, ತಮ್ಮ ಗಂಡಂದಿರನ್ನೂ, ಇವನೇ ಶ್ರೀಹರಿಯು ಎಂಬ ಭ್ರಾಂತಿಯಿಂದ ಕೂಡಿ ಪ್ರೀತಿಯಿಂದ ವೇಗವಾಗಿ ಆಲಿಂಗನಮಾಡಿಕೊಂಡರು.

**ಕಾಪಿ ಚ ಕೃಷ್ಣಾಯನ್ತೀ ಕಸ್ಯಾಶ್ಚಿತ್ ಪೂತನಾಯನ್ತ್ಯಾಃ ।**
**ಅಪಿಬತ್ ಸ್ತನಮಿತಿ ಸಾಕ್ಷಾದ್ ವ್ಯಾಸೋ ನಾರಾಯಣಃ ಪ್ರಾಹ ॥ ೨೨೨ ॥**

೨೨೨. ಒಬ್ಬಳು ತಾನು ಕೃಷ್ಣನಾಗಿದೇನೆಂಬ ಭ್ರಾಂತಿಯಿಂದ ಪೂತನಿಯಂತೆ ಕಂಡ ಮತ್ತೊಬ್ಬಳ ಸ್ತನವನ್ನು ಕುಡಿದಳು - ಎಂದು ಸಾಕ್ಷಾತ್ ನಾರಾಯಣನ ಅವತಾರರಾದ ವ್ಯಾಸರು ಹೇಳಿದ್ದಾರೆ.

**ತಸ್ಮಾನ್ನಿಜನಿಜದಯಿತಾನ್ ಕೃಷ್ಣಾಕಾರಾನ್ ವ್ರಜಸ್ತ್ರಿಯೋ ವೀಕ್ಷ್ಯ ।**
**ಸ್ವಪರನೃಪತಿಪತ್ನೀನಾಮನ್ತರ್ಯಾಮೀ ಹರಿಃ ಸಾಕ್ಷಾತ್ ॥ ೨೨೩ ॥**

೨೨೩. ಆದ್ದರಿಂದ ತನ್ನನ್ನೂ ತನ್ನ ಪತಿಯನ್ನೂ ಕೃಷ್ಣನ ಸ್ವರೂಪವೆಂದೇ ತಿಳಿದಂಥ ಗೋಪಿಕಾಸ್ತ್ರೀಯರನ್ನು ನೋಡಿ ತನ್ನ, ಮತ್ತೊಬ್ಬರ, ರಾಜಪತ್ನಿಯರ ಹಾಗೂ ಎಲ್ಲರ ಅಂತರ್ಯಾಮಿಯೂ ಸಾಕ್ಷಾತ್ ಶ್ರೀಹರಿಯೇ ಎಂದು (ತಿಳಿಯಬೇಕು).

**ಪರಮಾರ್ಥತೋ ವಿಚಾರೇ ಗುಡತನ್ಮಧುರತ್ವದೃಷ್ಟಾಂತಾತ್ ।**
**ನಶ್ವರಮಪಿ ನರದೇಹಂ ಪರಮಾತ್ಮಾಕಾರತಾಂ ಯಾತಿ ॥ ೨೨೪ ॥**

೨೨೪. ನಿಜವಾಗಿ ವಿಚಾರಮಾಡಿದರೆ ಬೆಲ್ಲವೂ ಸಿಹಿಯೂ ಒಂದೇ ಆಗಿದ್ದು ಸಿಹಿಗಿಂತ ಬೇರೆಯಾದ ಬೆಲ್ಲವೆಂಬುದು ಹೇಗೆ ಇಲ್ಲವೋ ಹಾಗೆ ನಾಶವನ್ನು ಹೊಂದುವಂಥ ಮನುಷ್ಯ ಶರೀರವೂ ಪರಮಾತ್ಮನ ಆಕಾರವನ್ನೇ ಹೊಂದುತ್ತದೆ.

**ಕಿಂಪುನರನಂತ ಶಕ್ತೇರ್ಲೀಲಾವಪುರೀಶ್ವರಸ್ಯೇಹ ।**
**ಕರ್ಮಾಣ್ಯಲೌಕಿಕಾನಿ ಸ್ವಮಾಯಯಾ ವಿದಧತೋ ನೃಹರೇಃ ॥ ೨೨೫ ॥**

೨೨೫. ಹೀಗಿರುವಲ್ಲಿ ಅನಂತವಾದ ಶಕ್ತಿಯುಳ್ಳವನೂ ಲೀಲಾ ವಿಗ್ರಹಧಾರಿಯೂ ಆದ ನರಹರಿಯು ಈ ಲೋಕದಲ್ಲಿ ಅಲೌಕಿಕವಾದ ಕರ್ಮಗಳನ್ನು ತನ್ನ ಮಾಯೆಯಿಂದ ಮಾಡುತ್ತಿರುವಲ್ಲಿ (ಅವನ ಶರೀರವು ಚಿದ್ರೂಪವೆಂದು) ಹೇಳತಕ್ಕದ್ದೇನಿದೆ?

**ಮೃದ್ಭಕ್ಷಣೇನ ಕುಪಿತಾಂ ವಿಕಸಿತವದನಾಂ ಸ್ವಮಾತರಂ ವಕ್ತ್ರೇ ।**
**ವಿಶ್ವಮದರ್ಶಯದಖಿಲಂ ಕಿಂ ಪುನರಥ ವಿಶ್ವರೂಪೋಽಸೌ ॥ ೨೨೬ ॥**

೨೨೬. ಮಣ್ಣನ್ನು ತಿಂದದ್ದರಿಂದ ಸಿಟ್ಟುಗೊಂಡು ಅಗಲವಾದ ಮುಖವನ್ನು ಮಾಡಿದ ತನ್ನ ತಾಯಿಯನ್ನು ಕಂಡು ಬಾಯಿಯಲ್ಲಿ ಇಡಿಯ ಪ್ರಪಂಚವನ್ನೇ ತೋರಿಸಿದನು. ಇನ್ನು ವಿಶ್ವರೂಪನಾದ ಇವನನ್ನು ಏನೆಂದು (ತಿಳಿಯಬೇಕು?)

## ಭಕ್ತರಿಗೆ ಅನುಗ್ರಹ

**ವಿಷವಿಷಮಸ್ತನಯುಗಳಂ ಪಾಯಯಿತುಂ ಪೂತನಾ ಗೃಹಂ ಪ್ರಾಪ್ತಾ**
**ತಸ್ಯಾಃ ಪೃಥುಭಾಗ್ಯಾಯಾಃ ಆಸೀತ್ ಕೃಷ್ಣಾರ್ಪಣೋ ದೇಹಃ ॥ ೨೨೭ ॥**

೨೨೭. ಪೂತನಿಯು ವಿಷದಿಂದ ಉಗ್ರವಾದ ತನ್ನ ಎರಡು ಸ್ತನಗಳನ್ನು ಕುಡಿಸುವದಕ್ಕಾಗಿ (ಕೃಷ್ಣನಿರುವ) ಮನೆಗೆ ಬಂದಳು. ಬಹಳ ಭಾಗ್ಯಶಾಲಿನಿಯಾದ ಆಕೆಯ ದೇಹವು ಕೃಷ್ಣನಿಗೇ ಅರ್ಪಿತವಾಯಿತು.

**ಅನಯತ್ ಪೃಥುತರಶಕಟಂ ನಿಜನಿಕಟಂ ವಾ ಕೃತಾಪರಾಧಮಪಿ ।**
**ಕಂಠಾಶ್ಲೇಷವಿಶೇಷಾದವಧೀತ್ ಬಾಲ್ಯೇಽಸುರಂ ಕೃಷ್ಣಃ ॥ ೨೨೮॥**

೨೨೮. ತನ್ನ ಹತ್ತಿರದಲ್ಲೇ ಇದ್ದುಕೊಂಡು ಕುತ್ತಿಗೆಯಲ್ಲಿ ಆಲಿಂಗನಮಾಡಿಕೊಳ್ಳುವ (ನೆಪದಿಂದ) ಅಪರಾಧಮಾಡಿದವನಾದರೂ ದೊಡ್ಡ ಗಾಡಿಯ ರೂಪದಲ್ಲಿದ್ದ (ಶಕಟನೆಂಬ) ಅಸುರನನ್ನು ಕೃಷ್ಣನು ಬಾಲ್ಯದಲ್ಲಿಯೇ ಸಂಹಾರಮಾಡಿ ಅವನನ್ನು ಮುಕ್ತನನ್ನಾಗಿ ಮಾಡಿದನು.

**ಯಮಲಾರ್ಜುನೌ ತರೂ ಉನ್ಮೂಲ್ಯೋಲೂಖಲಗತಿತಶ್ಚಿರಂ ಖಿನ್ನೌ ।**
**ರಿಂಗನ್ ಅಂಗಣಭೂಮೌ ಸ್ವಮಾಲಯಂ ಪ್ರಾಪಯನ್ನೃಹರಿಃ ॥ ೨೨೯ ॥**

೨೨೯. ಜೋಡಿಯಾಗಿ ಬೆಳೆದಿದ್ದ ಎರಡು ಅರ್ಜುನವೃಕ್ಷಗಳಾಗಿ ಬಹಳಕಾಲ ದಿಂದ ದುಃಖಿತರಾಗಿದ್ದ (ಕುಬೇರನ ಪುತ್ರರಿಬ್ಬರನ್ನು) ಅಂಗಳದತ್ತ ಅಂಬೆಗಾಲಿಡುತ್ತಾ ಬಂದ ನರಹರಿಯು ತನ್ನ ಆಲಯವಾದ (ವೈಕುಂಠಕ್ಕೆ) ಕಳುಹಿಸಿದನು.

**ನಿತ್ಯಂ ತ್ರಿದಶದ್ವೇಷೀ ಯೇನ ಚ ಮೃತ್ಯೋರ್ವಶೀಕೃತಃ ಕೇಶೀ ।**
**ಕಾಕಃ ಕೋಽಪಿ ವರಾಕೋ ಬಕೋಽಪ್ಯಶೋಕಂ ಗತೋ ಲೋಕಮ್ ॥ ೨೩೦ ॥**

೨೩೦. ಸದಾ ದೇವತೆಗಳನ್ನು ಹಗೆಮಾಡುತ್ತಿದ್ದ ಕೇಶಿಯೆಂಬುವನು ಯಾವ ನಿಂದ ಮೃತ್ಯುವಶನಾಗಿ ಮಾಡಲ್ಪಟ್ಟನೋ ದೀನನಾದ ಒಂದು ಕಾಗೆಯೂ ಬಕವೂ ಶೋಕವಿಲ್ಲದ ಲೋಕವನ್ನು ಪಡೆದರೋ (ಅದು ಕೃಷ್ಣನ ಪ್ರಸಾದದಿಂದಲೇ.)

**ಗೋಗೋಪಿಗೋಪಾನಾಂ ನಿಕರಮಹಿಂ ಪೀಡಯನ್ತಮತಿವೇಗಾತ್ ।**
**ಅನಘಮಘಾಸುರಮಕರೋತ್ ಪೃಥುತರಮುರಗೇಶ್ವರಂ ಭಗವಾನ್ ॥ ೨೩೧ ॥**

೨೩೧. ಗೋವುಗಳು, ಗೋಪಿಯರು, ಗೋಪಾಲಕರು-ಇವರುಗಳ ಸಮೂಹ ವನ್ನು ಪೀಡಿಸುತ್ತಿದ್ದ ಅಘಾಸುರನೆಂಬ (ಹೆಸರಿನ) ದಪ್ಪನಾದ ಹಾವಿನ ಒಡೆಯನಾದ (ಕಾಳಿಂಗ)ನನ್ನು ಅತಿವೇಗದಿಂದ ಭಗವಂತನು ಪಾಪವಿಲ್ಲದವನನ್ನಾಗಿ ಮಾಡಿದನು.

**ಪೀತಾರಣ್ಯಹುತಾಶನಮಸಹ್ಯ ತತ್ತೇಜಸೋ ಹೇತೋಃ ।**
**ದಗ್ಧಾನ್ ಮುಗ್ಧಾನಖಿಲಾನ್ ಜುಗೋಪ ಗೋಪಾನ್ ಕೃಪಾಸಿನ್ಧುಃ ॥ ೨೩೨ ॥**

೨೩೨. ಕೃಪಾಸಾಗರನಾದ (ಭಗವಂತನು) ತಡೆಯಲಾರದ ತಾಪದ ಕಾರಣ ದಿಂದ ಸುಟ್ಟುಹೋಗಿ ಮೂರ್ಛೆಹೊಂದಿದ್ದ ಎಲ್ಲಾ ಗೋಪಾಲಕರುಗಳನ್ನೂ ಕಾಡುಗಿಚ್ಚನ್ನು ಕುಡಿದು ರಕ್ಷಿಸಿದನು.

**ಪಾತುಂ ಗೋಕುಲಮಾಕುಲಮಶನಿತಟದ್ವರ್ಷಣೈಃ ಕೃಷ್ಣಃ ।**
**ಅಸಹಾಯ ಏಕಹಸ್ತೇ ಗೋವರ್ಧನಮುದ್ಧಧಾರೋಚ್ಚೈಃ ॥ ೨೩೩ ॥**

೨೩೩. ಸಿಡಿಲು, ಮಿಂಚುಗಳಿಂದ ವ್ಯಾಕುಲಗೊಂಡ ಗೋಕುಲವನ್ನು ಕಾಪಾಡು ವದಕ್ಕಾಗಿ ಕೃಷ್ಣನು ಯಾರ ಸಹಾಯವೂ ಇಲ್ಲದೆ ಒಂದೇ ಕೈಯಲ್ಲಿ ಗೋವರ್ದನಪರ್ವತ ವನ್ನು ಮೇಲಕ್ಕೆ ಎತ್ತಿಹಿಡಿದನು.

**ವಾಸೋ ಲೋಭಾಕಲಿತಂ ಧಾವದ್ರಜಕಂ ಶಿಲಾತಲೈರ್ಹತ್ವಾ ।**
**ವಿಸ್ಮೃತ್ಯ ತದಪರಾಧಂ ವಿಕುಣ್ಠವಾಸೋಽರ್ಪಿತಸ್ತಸ್ಮೈ ॥ ೨೩೪ ॥**

೨೩೪. ಬಟ್ಟೆಯ ಮೇಲಿನ ಮೋಹದಿಂದಕೂಡಿ ಕಲ್ಲುಗಳಿಂದ ಹೊಡೆದು ಓಡಿ ಹೋಗುತ್ತಿದ್ದ ಅಗಸನನ್ನು ಅವನ ಅಪರಾಧವನ್ನು ಮರೆತು (ಕೃಷ್ಣನು) ವೈಕುಂಠ ವಾಸವನ್ನು ಅವನಿಗೆ ಕರುಣಿಸಿದನು

**ತ್ರೇಧಾ ವಕ್ರಶರೀರಾಮತಿಲಮ್ಬೋಷ್ಠೀಂ ಸ್ಖಲದ್ವಪುರ್ವಚನಾತ್ ।**
**ಸ್ರಕ್ಚನ್ದನಪರಿತೋಷಾತ್ ಕುಬ್ಜಾಮೃಜ್ವಾನನಾಮಕರೋತ್ ॥ ೨೩೫ ॥**

೨೩೫. ಮೂರು ರೀತಿಯಿಂದ ಡೊಂಕಾದ ಶರೀರವುಳ್ಳವಳೂ ಆದ ಕುಬ್ಜೆಯನ್ನು ಆಕೆಯು ಕೊಟ್ಟ ಹೂಮಾಲೆ, ಚಂದನಗಂಧಗಳಿಂದ ಸಂತುಷ್ಟನಾದ ಕೃಷ್ಣನು ನೆಟ್ಟನೆಯ ಮುಖವುಳ್ಳವಳನ್ನಾಗಿ ಮಾಡಿದನು.

**ನಿಹತಃ ಪಪಾತ ಹರಿಣಾ ಹರಿಚರಣಾಗ್ರೇಣ ಕುವಲಯಾಪೀಡಃ ।**
**ತುಙ್ಗೋನ್ಮತ್ತಮತಙ್ಗಃ ಪತಙ್ಗವದ್ದೀಪಕಸ್ಯಾಗ್ರೇ ॥ ೨೩೬ ॥**

೨೩೬. ಎತ್ತರವಾದ ಮತ್ತು ಕೊಬ್ಬಿದ ಆನೆಯಾದ ಕುವಲಯಾಪೀಡವು ಹರಿಯ ಕಾಲಿನ ತುದಿಯಿಂದ ದೀಪದ ಮುಂದೆ ಪತಂಗದ ಹುಳುವು ಬೀಳುವಂತೆ ಕೃಷ್ಣನಿಂದ ಕೊಲ್ಲಲ್ಪಟ್ಟು ಬಿದ್ದುಹೋಯಿತು.

**ಯುದ್ಧಮಿಷಾತ್ ಸಹ ರಂಗೇ ಶ್ರೀರಂಗೇನಾಂಗಸಂಗಮಂ ಪ್ರಾಪ್ಯ ।**
**ಮುಷ್ಟಿಕಚಾಣೂರಾಖ್ಯೌ ಯಯತುಃ ನಿಶ್ಶ್ರೇಯಸಂ ಸಪದಿ ॥ ೨೩೭॥**

೨೩೭. ಯುದ್ಧದ ನೆಪದಿಂದ ರಂಗಸ್ಥಲದಲ್ಲಿ ಶ್ರೀರಂಗನೊಡನೆ ದೇಹ ಸಂಬಂಧವನ್ನು ಹೊಂದಿದ್ದ ಮುಷ್ಟಿಕ-ಚಾಣೂರರೆಂಬುವರು ಕೊಡಲೇ ಮೋಕ್ಷವನ್ನು ಪಡೆದರು.

**ದೇಹಕೃತಾದಪರಾಧಾತ್ ವೈಕುಂಠೋತ್ಕಂಠಿತಾನ್ತರಾತ್ಮಾನಮ್ ।**
**ಯದುವರಕುಲಾವತಂಸಃ ಕಂಸಂ ವಿಧ್ವಂಸಯಾಮಾಸ ॥ ೨೩೮ ॥**

೨೩೮. ಶ್ರೇಷ್ಠನಾದ ಯದುಕುಲತಿಲಕನು (ತನ್ನ ಮಾವನಾದ) ದೇಹಾಭಿಮಾನ ನಿಮಿತ್ತವಾಗಿ ಮಾಡಿದ ಅಪರಾಧವುಳ್ಳ ಹಾಗೂ ವೈಕುಂಠವನ್ನು ಸೇರಲು ತೀವ್ರವಾದ ಇಚ್ಛೆಯನ್ನು ಹೊಂದಿದ್ದ ಕಂಸನನ್ನು ನಾಶಗೊಳಿಸಿದನು.

**ಹರಿಸಂದರ್ಶನಯೋಗಾತ್ ಪೃಥುರಣತೀರ್ಥೇ ನಿಮಜ್ಜತೇ ತಸ್ಮೈ ।**
**ಭಗವಾನ್ ನು ಪ್ರದದಾದ್ಯಃ ಸದ್ಯಶ್ಚೈದ್ಯಾಯ ಸಾಯುಜ್ಯಮ್ ॥೨೩೯॥**

೨೩೯. ದೊಡ್ಡದಾದ ಯುದ್ಧವೆಂಬ ಜಲದಲ್ಲಿ ಮುಳುಗುತ್ತಿದ್ದ ಆ ಶಿಶುಪಾಲನಿಗೆ ಹರಿಯನ್ನು ಕಂಡದ್ದರ ಫಲವಾಗಿ ಭಗವಂತನು ಕೂಡಲೆ ಸಾಯುಜ್ಯವನ್ನು ಅನುಗ್ರಹಿಸಿದನು.

**ಮೀನಾದಿಭಿರವತಾರೈಃ ನಿಹತಾಃ ಸುರವಿದ್ವಿಷೋ ಬಹವಃ ।**
**ನೀತಾಸ್ತೇ ನಿಜರೂಪಂ ತತ್ರ ಚ ಮೋಕ್ಷಸ್ಯ ಕಾ ವಾರ್ತಾ ॥ ೨೪೦ ॥**

೨೪೦. ಮೀನು ಮುಂತಾದ ಅವತಾರಗಳನ್ನು ಧರಿಸಿ ಅನೇಕ ದೇವ ದ್ವೇಷಿಗಳು (ರಾಕ್ಷಸರು) ಕೊಲ್ಲಲ್ಪಟ್ಟವರಾಗಿ ತಮ್ಮ ನಿಜರೂಪವನ್ನು (ಎಂದರೆ ಹಿಂದಿನ ದೇವತಾದಿ ರೂಪಗಳನ್ನು) ಪಡೆದುಕೊಂಡರು. ಹೀಗಿರುವಲ್ಲಿ ಅಂಥವರಿಗೆ ಮೋಕ್ಷ (ಪ್ರಾಪ್ತಿ) ಯಾಗುವದೆಂದು ಹೇಳತಕ್ಕದ್ದೇನಿದೆ?

**ಯೇ ಯದುನನ್ದನನಿಹತಾಃ ತೇ ತು ನ ಭೂಯಃ ಪುನರ್ಭವಂ ಪ್ರಾಪುಃ।**
**ತಸ್ಮಾದವತಾರಾಣಾಮನ್ತರ್ಯಾಮೀ ಪ್ರವರ್ತಕಃ ಕೃಷ್ಣಃ ॥ ೨೪೧ ॥**

೨೪೧. ಯದುನಂದನನಾದ ಕೃಷ್ಣನಿಂದ ಯಾರು ಕೊಲ್ಲಲ್ಪಟ್ಟರೋ ಅವರು ಮತ್ತೆ ಎಂದಿಗೂ ಪುನರ್ಜನ್ಮವನ್ನು ಪಡೆಯಲಿಲ್ಲ. ಆದ್ದರಿಂದ ಅವತಾರ(ಪುರುಷರ) ಅಂತರ್ಯಾಮಿಯಾಗಿರುವವನು ಲೋಕಪ್ರವರ್ತಕನಾದ ಕೃಷ್ಣನೇ.

**ಬ್ರಹ್ಮಾಂಡಾನಿ ಬಹೂನಿ ಪಂಕಜಭವಾನ್ ಪ್ರತ್ಯಣ್ಡಮತ್ಯದ್ಭುತಾನ್**
**ಗೋಪಾನ್ ವತ್ಸಯುತಾನದರ್ಶಯದಜಂ ವಿಷ್ಣೂನಶೇಷಾಂಶ್ಚ ಯಃ ।**
**ಶಂಭೂರ್ಯಚ್ಚರಣೋದಕಂ ಸ್ವಶಿರಸಾ ಧತ್ತೇ ಚ ಮೂರ್ತಿತ್ರಯಾತ್**
**ಕೃಷ್ಣೋ ವೈ ಪೃಥಗಸ್ತಿ ಕೋಽಪ್ಯವಿಕೃತಃ ಸಚ್ಚಿನ್ಮಯೋ ನೀಲಿಮಾ ॥ ೨೪೨ ॥**

೨೪೨. ಯಾವನು ಅನೇಕ ಬ್ರಹ್ಮಾಂಡಗಳನ್ನೂ ಒಂದೊಂದು ಬ್ರಹ್ಮಾಂಡಕ್ಕೂ ಅಸಾಧಾರಣರಾದ ಚತುರ್ಮುಖಬ್ರಹ್ಮರನ್ನೂ ಅವುಗಳಲ್ಲಿಯೇ ಕರುಗಳಿಂದ ಕೂಡಿದ ಗೋಪಾಲರನ್ನೂ ಎಲ್ಲರನ್ನೂ ವಿಷ್ಣುಸ್ವರೂಪರನ್ನಾಗಿಯೂ ಬ್ರಹ್ಮನಿಗೆ ತೋರಿಸಿದನೋ ಯಾವನ ಪಾದೋದಕವಾದ (ಗಂಗೆಯನ್ನು) ಪರಮೇಶ್ವರನು ತನ್ನ ತಲೆಯಲ್ಲಿ ಧರಿಸಿರುವನೋ ಆ ನೀಲವರ್ಣನಾದ ಕೃಷ್ಣನು ತ್ರಿಮೂರ್ತಿಗಳಿಗಿಂತ ಬೇರೆಯಾಗಿ ಸಚ್ಚಿನ್ಮಯನಾಗಿ ವಿಕಾರವಿಲ್ಲದೆ ತಾನೊಬ್ಬನೇ ಇದ್ದುಕೊಂಡಿರುವನು.

**ಕೃಪಾಪಾತ್ರಂ ಯಸ್ಯ ತ್ರಿಪುರರಿಪುರಂಭೋಜವಸತಿಃ ।**
**ಸುತಾ ಜಹ್ನೋಃ ಪೂತಾ ಚರಣನಖನಿರ್ಣೇಜನಜಲಮ್ ।**
**ಪ್ರದಾನಂ ವಾ ಯಸ್ಯ ತ್ರಿಭುವನಪತಿತ್ವಂ ವಿಭುರಹಿ ।**
**ನಿದಾನಂ ಸೋಽಸ್ಮಾಕಂ ಜಯತಿ ಕುಲದೇವೋ ಯದುಪತಿಃ ॥ ೨೪೩ ॥**

೨೪೩. ತ್ರಿಪುರಾಂತಕನಾದ ರುದ್ರನು (ಮತ್ತು) ಕಮಲವಾಸಿಯಾದ ಬ್ರಹ್ಮನು ಯಾವನ ಕೃಪೆಗೆ ಪಾತ್ರರಾಗಿ (ತಮ್ಮ ಕರ್ತವ್ಯನಿರ್ವಹಣೆಯನ್ನು ಮಾಡುತ್ತಿರುವರೋ) ಪವಿತ್ರಳಾದ ಜಹ್ನುಋಷಿಯ ಮಗಳಾದ (ಜಾಹ್ನವಿಯು) (ಯಾವನ) ಪಾದಗಳ ಉಗುರುಗಳನ್ನು ತೊಳೆಯುವ ನೀರಾಗಿರುವಳೋ, ವಿಭು (ವ್ಯಾಪಕ) ನಾಗಿದ್ದರೂ ಯಾವನ ಕೊಡುಗೆಯು ತ್ರೈಲೋಕ್ಯದ ಯಜಮಾನಿಕೆಯಾಗಿರುವದೋ, ಎಲ್ಲಕ್ಕೂ ಕಾರಣನಾದ ನಮ್ಮ ಕುಲದೈವವಾದ ಆ ಯದುಪತಿಯು ಯಾವಾಗಲೂ ವಿಜಯಿಯಾಗಿರುವನು.

**ಮಾಯಾಹಸ್ತೇಽರ್ಪಯಿತ್ವಾ ಭರಣಕೃತಿಕೃತೇ ಮೋಹಮೂಲೋದ್ಭವಂ ಮಾಂ**
**ಮಾತಃ ಕೃಷ್ಣಾಭಿಧಾನೇ ಚಿರಸಮಯಮುದಾಸೀನಭಾವಂ ಗತಾಸಿ ।**
**ಕಾರುಣ್ಯೈಕಾಧಿವಾಸೇ ಸಕೃದಪಿ ವದನಂ ನೇಕ್ಷಸೇ ತ್ವಂ ಮದೀಯಂ**
**ತತ್ಸರ್ವಜ್ಞೇ ನ ಕರ್ತುಂ ಪ್ರಭವಸಿ ಭವತೀ ಕಿಂ ನು ಮೂಲಸ್ಯ ಶಾನ್ತಿಮ್ ॥ ೨೪೪ ॥**

೨೪೪. ಕೃಷ್ಣಾ-ಎಂಬ ಹೆಸರುಳ್ಳ ಎಲೌ ತಾಯಿಯೆ, ಮೋಹವೆಂಬ ಬುಡದಿಂದ ಹುಟ್ಟಿದ ನನ್ನನ್ನು ಕಾಪಾಡುವ ಸಲುವಾಗಿ ಮಾಯೆಯ ಕೈಯೊಳಗಿಟ್ಟು ಬಹಳ

ಕಾಲದಿಂದ ನೀನು ಉದಾಸೀನಳಾಗಿರುತ್ತೀಯೆ, ಕರುಣೆಯ ಗನಿಯಾದವಳೆ, ನೀನು ನನ್ನ ಮುಖವನ್ನು ಒಂದು ಬಾರಿಯಾದರೂ ನೋಡದೆ ಇರುವೆಯಲ್ಲ ! ಸರ್ವಜ್ಞಳೆ, ಹಾಗೆ ಮಾಡುವದು ನಿನಗೆ ತರವಲ್ಲ. ಮೂಲವಾದ (ಮೋಹ)ದ ನಾಶವನ್ನು ನೀನು ಮಾಡಲು ಸಮರ್ಥಳಾಗಿಲ್ಲವೆ ?

**ಉದಾಸೀನಃ ಸ್ತಬ್ಧಃ ಸತತಮಗುಣಃ ಸಙ್ಗರಹಿತಃ**
**ಭವಾನ್ ತಾತಃ ಕಾತಃಪರಮಿಹ ಭವೇಜ್ಜೀವನಗತಿಃ ।**
**ಅಕಸ್ಮಾದಸ್ಮಾಕಂ ಯದಿ ನ ಕುರುತೇ ಸ್ನೇಹಮಥ ತದ್**
**ವಸಸ್ವ ಸ್ವೀಯಾನ್ತರ್ವಿಮಲಜಠರೇಽಸ್ಮಿನ್ ಪುನರಪಿ ॥ ೨೪೫ ॥**

೨೪೫. ತಂದೆಯಾದ ನೀನು ಉದಾಸೀನನು. ಯಾವಾಗಲೂ ಅಳ್ಳಾಡದೆ ನಿಂತಿರುವವನು. ಗುಣಗಳಿಲ್ಲದವನು. ಸಂಗವಿಲ್ಲದವನು. ಇನ್ನು ಮುಂದೆ ಜೀವನೋಪಾಯವು (ನನಗೆ) ಏನಿದ್ದೀತು? ನಮ್ಮ ಸ್ನೇಹವನ್ನು ನೀನು (ಹೀಗೆ) ಅಕಸ್ಮಾತ್ತಾಗಿ ಮಾಡದೆ ಇದ್ದರೂ ನಮ್ಮ ಪರಿಶುದ್ಧವಾದ ಹೃದಯದೊಳಗೆ ಮತ್ತೆ ವಾಸಮಾಡುವವನಾಗು.

**ಲೋಕಾಧೀಶೇ ತ್ವಯೀಶೇ ಕಿಮಿತಿ ಭವಭವಾ ವೇದನಾ ಸ್ವಾಶ್ರಿತಾನಾಂ**
**ಸಂಕೋಚಃ ಪಂಕಜಾನಾಂ ಕಿಮಿಹ ಸಮುದಿತೇ ಮಂಡಲೇ ಚಣ್ಡರಶ್ಮೇಃ ।**
**ಭೋಗಃ ಪೂರ್ವಾರ್ಜಿತಾನಾಂ ಭವತಿ ಭುವಿ ನೃಣಾಂ ಕರ್ಮಣಾಂ ಚೇದವಶ್ಯಂ**
**ತನ್ಮೇ ದೃಷ್ಟೈರ್ನೃಪುಷ್ಟೈಃ ನನು ದನುಜನೃಪೈರೂರ್ಜಿತಂ ನಿರ್ಜಿತಂ ತೇ ॥ ೨೪೬ ॥**

೨೪೬. ಲೋಕಗಳಿಗೆಲ್ಲ ಒಡೆಯನಾದ ನೀನು ಇರಲಾಗಿ ನಿನ್ನನ್ನು ಆಶ್ರಯಿಸಿದವರಿಗೆ ಸಂಸಾರದಲ್ಲಿ ಉಂಟಾಗುವ ಕಷ್ಟಗಳು ಇರುವವೇನು? (ಇರಲಾರವು-ಎಂದರ್ಥ.) ತೀಕ್ಷ್ಣವಾದ ಕಿರಣಗಳುಳ್ಳ ಸೂರ್ಯನ ಮಂಡಲವು ಕಾಣಿಸಿಕೊಳ್ಳುತ್ತಿರಲಾಗಿ ಕಮಲಗಳಿಗೆ ಮೊಗ್ಗಾಗಿರುವ ಸ್ಥಿತಿಯು ಇದ್ದೀತೇನು? ಪ್ರಪಂಚದಲ್ಲಿರುವ ಮನುಷ್ಯರಿಗೆ ಅವರು ಹಿಂದೆ ಮಾಡಿದ ಕರ್ಮಗಳ ಭೋಗವು ಅವಶ್ಯವಾಗಿ ಆಗಿಯೇತೀರುವದಾದರೆ ನಾನು ನೋಡಿರುವಂತೆ ಮನುಷ್ಯರನ್ನು (ತಿಂದು) ಬೆಳೆದಂಥ ರಾಕ್ಷಸರಾಜರಿಂದಲೂ ಅದು ಸಾಧಿಸಲ್ಪಟ್ಟಿದೆ. ಆದರೆ ಅಂಥವರನ್ನೂ ನೀನೇ ಜಯಿಸಿರುತ್ತೀಯೆ.

**ನಿತ್ಯಾನನ್ದಸುಧಾನಿಧೇರಧಿಗತಃ ಸನ್ನೀಲಮೇಘಃ ಸತಾ-**
**ಮೌತ್ಕಣ್ಠ್ಯ ಪ್ರಬಲಪ್ರಭಞ್ಜನಭರೈರಾಕರ್ಷಿತೋ ವರ್ಷತಿ ।**
**ವಿಜ್ಞಾನಾಮೃತಮದ್ಭುತಂ ನಿಜವಚೋಧಾರಾಭಿರಾರಾದಿದಂ**
**ಚೇತಾಶ್ಚಾತಕ ಚೇನ್ನ ವಾಂಛಸಿ ಮೃಷಾ ಕ್ರಾನ್ತೋಽಸಿ ಸುಪ್ತೋಽಸಿ ಕಿಮ್ ॥ ೨೪೭ ॥**

೨೪೭. ನಿತ್ಯಾನಂದವೆಂಬ ಅಮೃತಸಾಗರದಿಂದ ಹೊರಬಂದ ಸತ್ತೆಂಬ ಕೃಷ್ಣಮೇಘವು ಸತ್ಪುರುಷರ ಕುತೂಹಲವೆಂಬ ಪ್ರಬಲವಾದ ಗಾಳಿಯಿಂದ

ಸೆಳೆಯಲ್ಪಟ್ಟದ್ದಾಗಿ ಅದ್ಭುತವಾದ ವಿಜ್ಞಾನವೆಂಬ ಅಮೃತವನ್ನು ತನ್ನ ಮಾತುಗಳೆಂಬ ಧಾರೆಗಳಿಂದ ಎಲ್ಲೆಲ್ಲೂ ಸುರಿಸುತ್ತಿದೆ. ಎಲೈ ಮನಸ್ಸೆಂಬ ಚಾತಕಪಕ್ಷಿಯೆ, ಇದನ್ನು ನೀನು ಬಯಸದೆ ಇರುವೆಯಾದರೆ, ಅಸ್ವತವಾದ ತೋರಿಕೆಗಳಿಂದ ಸುತ್ತುವರೆಯಲ್ಪಟ್ಟಿರುವೆಯೊ? ಅಥವಾ ನಿದ್ರೆಹೋಗುತ್ತಿರುವೆಯೊ?

**ಚೇತಶ್ಚಂಚಲತಾಂ ವಿಹಾಯ ಪುರತಃ ಸಂಧಾಯ ಕೋಟಿದ್ವಯಂ**
**ತತ್ರೈಕತ್ರ ನಿಧೇಹಿ ಸರ್ವವಿಷಯಾನನ್ಯತ್ರ ಚ ಶ್ರೀಪತಿಮ್ ।**
**ವಿಶ್ರಾಂತಿರ್ಹಿತಮಪ್ಯಹೋ ಕ್ವ ನು ತಯೋರ್ಮಧ್ಯೇ ತದಾಲೋಚ್ಯತಾಂ**
**ಯುಕ್ತ್ಯಾ ವಾನುಭವೇನ ಯತ್ರ ಪರಮಾನನ್ದಶ್ಚ ತತ್ಸೇವ್ಯತಾಮ್ ॥ ೨೪೮ ॥**

೨೪೮. ಎಲೈ ಮನಸ್ಸೆ, ನೀನು ಚಾಂಚಲ್ಯವನ್ನು ಕ್ಷಣಕಾಲ ಬಿಟ್ಟು ಎರಡು ಪಕ್ಷಗಳನ್ನು ನಿನ್ನಮುಂದೆ ಒಡ್ಡಿಕೊಂಡು ಒಂದರಲ್ಲಿ ಎಲ್ಲಾ ವಿಷಯ (ಭೋಗಗಳ ಸುಖ)ಗಳನ್ನೂ ಇಡುವವನಾಗು. ಮತ್ತೊಂದರಲ್ಲಿ ಶ್ರೀಹರಿಯನ್ನಿಡು. ಅವುಗಳಲ್ಲಿ ವಿಶ್ರಾಂತಿಯೂ ಹಿತವೂ ಏತರಲ್ಲಿ ದೊರಕುವದು ?- ಎಂಬುದನ್ನು ಯುಕ್ತಿಯಿಂದಲೂ, ಅನುಭವದಿಂದಲೂ ಆಲೋಚನೆಮಾಡುವವನಾಗು. ಆಗ ಎಲ್ಲಿ ಪರಮಾನಂದವು ಇರುವದೋ ಅದನ್ನು ಸೇವಿಸುವವನಾಗು.

**ಪುತ್ರಾನ್ ಪೌತ್ರಮಥ ಸ್ತ್ರಿಯೋಽನ್ಯಯುವತೀರ್ವಿತ್ತಾನ್ಯಥೋಽನ್ಯದ್ಧನಂ**
**ಭೋಜ್ಯಾದಿಷ್ವಪಿ ತಾರತಮ್ಯವಶತೋ ನಾಲಂ ಸಮುತ್ಕಣ್ಠಯಾ ।**
**ನೈತಾದೃಗ್ ಯದುನಾಯಕೇ ಸಮುದಿತೇ ಚೇತಸ್ಯನನ್ತೇ ವಿಭೌ**
**ಸಾನ್ದ್ರಾನನ್ದಸುಧಾರ್ಣವೇ ವಿಹರತಿ ಸ್ವೈರಂ ಯತೋ ನಿರ್ಭಯಮ್ ॥ ೨೪೯ ॥**

೨೪೯. ಮಕ್ಕಳು, ಮೊಮ್ಮಕ್ಕಳು, ಸ್ತ್ರೀಯರು, ಪರಸತಿಯರು, ಧನಸಮೂಹ, ಹಾಗೂ ಮತ್ತೊಬ್ಬರ ಸ್ವತ್ತು, ತಿನ್ನುವಂಥ ಆಹಾರವಸ್ತುಗಳು -ಇವುಗಳೆಲ್ಲದರಲ್ಲಿಯೂ ತಾರತಮ್ಯಗಳಿರುವದರಿಂದ ಸುಮ್ಮನೆ ಚಾಪಲ್ಯವನ್ನು ಹೊಂದಿದ್ದು ಸಾಕು. ಅನಂತನೂ ವ್ಯಾಪಕನೂ ಎಲ್ಲೆಲ್ಲೂ ಆನಂದದ ಗನಿಯಾದ ಅಮೃತಸಮುದ್ರನೂ ಆದ ಯದುನಾಯಕನು ಸ್ವೇಚ್ಛೆಯಿಂದ ಮನಸ್ಸಿನಲ್ಲಿ ವಿಹಾರಮಾಡುತ್ತಿರಲು (ಮೇಲಿನಂತೆ) ಇಂಥ (ಕ್ಷುದ್ರಕಾಮಗಳು) ಸಂಭವಿಸಲಾರವು. ನಿರ್ಭಯವೇ ಎಲ್ಲೆಲ್ಲಿಯೂ (ಆಗ) ಇದ್ದುಕೊಂಡಿರುವದು.

**ಕಾಮ್ಯೋಪಾಸನಯಾರ್ಥಯನ್ತ್ಯನುದಿನಂ ಕಿಂಚಿತ್ಫಲಂ ಸ್ವೇಪ್ಸಿತಂ ।**
**ಕಿಂಚಿತ್ ಸ್ವರ್ಗಮಥಾಪವರ್ಗಮಪರೈರ್ಯೋಗಾದಿಯಜ್ಞಾದಿಭಿಃ ॥**
**ಅಸ್ಮಾಕಂ ಯದುನನ್ದನಾಂಘ್ರಿಯುಗಲಧ್ಯಾನಾವಧಾನಾರ್ಥಿನಾಂ ।**
**ಕಿಂ ಲೋಕೇನ ದಮೇನ ಕಿಂ ನೃಪತಿನಾ ಸ್ವರ್ಗಾಪವರ್ಗೈಶ್ಚ ಕಿಮ್ । ।೨೫೦ ॥**

೨೫೦. ಕಾಮ್ಯವಾದ ಉಪಾಸನೆಗಳಿಂದ ಪ್ರತಿದಿನವೂ ತಮಗೆ ಇಷ್ಟವಾದ ಒಂದಿಷ್ಟು ಫಲವನ್ನು ಅಥವಾ ಸ್ವರ್ಗವನ್ನು ಕೆಲವರು ಬೇಡುತ್ತಾರೆ. ಮತ್ತೆ ಕೆಲವರು

ಯೋಗಾಭ್ಯಾಸ (ಧ್ಯಾನ) ಯಜ್ಞಾದಿಗಳಿಂದ ಮೋಕ್ಷವನ್ನು ಬಯಸುತ್ತಾರೆ. ಯದುನಂದನನ ಪಾದಕಮಲಗಳ ಧ್ಯಾನದಲ್ಲಿಯೇ ಮನಸ್ಸನ್ನು ನೆಲೆಗೊಳಿಸಿರುವ ನಮಗೆ ಲೋಕದಿಂದಲಾಗಲಿ, ದಮೆಯಿಂದಾಗಲಿ, ರಾಜನಿಂದಾಗಲೀ, ಸ್ವರ್ಗ ಮೋಕ್ಷಫಲಗಳಿಂದಾಗಲೀ ಆಗಬೇಕಾದ್ದೇನಿದೆ ?

**ಆಶ್ರಿತಮಾತ್ರಂ ಪುರುಷಂ ಸ್ವಾಭಿಮುಖಂ ಕರ್ಷತಿ ಶ್ರೀಶಃ ।**
**ಲೋಹಮಪಿ ಚುಂಬಕಾಶ್ಮಾ ಸಂಮುಖಮಾತ್ರಂ ಜಡಂ ಯದ್ವತ್ ॥ ೨೫೧ ॥**

೨೫೧. ಲಕ್ಷ್ಮೀಪತಿಯಾದ (ಭಗವಂತನು) -ಸೂಜಿಗಲ್ಲು ತನಗೆ ಇದಿರಾದ ಜಡವಾದ ಕಬ್ಬಿಣವನ್ನೂ ಕೂಡ ಹೇಗೆ ಎಳೆದುಕೊಂಡುಬಿಡುವದೋ ಹಾಗೆ- ತನ್ನ ಆಶ್ರಿತನೂ ತನ್ನಕಡೆಗೆ ತಿರುಗಿದವನೂ ಆದ ಮನುಷ್ಯನನ್ನು ಎಳೆದುಕೊಂಡು ಬಿಡುತ್ತಾನೆ.

**ಅಯಮುತ್ತಮೋಽಯಮಧಮೋ ಜಾತ್ಯಾ ರೂಪೇಣ ಸಂಪದಾ ವಯಸಾ ।**
**ಶ್ಲಾಘ್ಯೋಽಶ್ಲಾಘ್ಯೋವೇತ್ಥಂ ನ ವೇತ್ತಿ ಭಗವಾನನುಗ್ರಹಾವಸರೇ ॥ ೨೫೨ ॥**

೨೫೨. ಭಗವಂತನು ಅನುಗ್ರಹಮಾಡುವ ಸಮಯದಲ್ಲಿ ಜಾತಿಯಿಂದಲೂ, ರೂಪದಿಂದಲೂ, ಐಶ್ವರ್ಯದಿಂದಲೂ, ವಯಸ್ಸಿನಿಂದಲೂ ಇವನು ಉತ್ತಮನು, ಅಧಮನು, ಸ್ತುತಿಗೆ ತಕ್ಕವನು, ತಕ್ಕವನಲ್ಲ- ಎಂಬೀ ರೀತಿಯಲ್ಲಿ ಎಂದಿಗೂ ವಿಚಾರಮಾಡುವದಿಲ್ಲ.

**ಅಂತಸ್ಥಭಾವಭೋಕ್ತಾ ತತೋಽನ್ತರಾತ್ಮಾ ಮಹಾಮೇಘಃ ।**
**ಖದಿರಶ್ಚಂಪಕ ಇವ ವಾ ಪ್ರವರ್ಷಣಂ ಕಿಂ ವಿಚಾರಯತಿ ॥ ೨೫೩ ॥**

೨೫೩. ಕಗ್ಗಲಿ (ಮರವು ಮೇಲೆ ಮುಳ್ಳಾಗಿದ್ದರೂ ಒಳಗೆ ಗಟ್ಟಿಯಾಗಿರುವಂತೆ) ಮತ್ತು ಸಂಪಿಗೆ ಮರವು (ಒಳಗೂ ಹೊರಗೂ ಸುವಾಸನೆಯಾಗಿರುವಂತೆ) ಒಳಗಿನ ಭಕ್ತಿಯನ್ನು ಸ್ವೀಕರಿಸುವ ಹಾಗೂ ಅದಕ್ಕಿಂತಲೂ (ಮನಸ್ಸಿಗಿಂತಲೂ) ಅಂತರಾತ್ಮನಾಗಿರುವ, ಮಹಾಮೇಘದಂತಿರುವ (ಭಗವಂತನು) ಮಳೆಯಂತೆ[1] (ಎಲ್ಲರಿಗೂ) ಅನುಗ್ರಹಿಸುವನು.

**ಯದ್ಯಪಿ ಸರ್ವತ್ರ ಸಮಃ ತಥಾಪಿ ನೃಹರಿಸ್ತಥಾಪ್ಯೇತೇ ।**
**ಭಕ್ತಾಃ ಪರಮಾನನ್ದೇ ರಮನ್ತಿ ಸದಯಾವಲೋಕೇನ ॥ ೨೫೪ ॥**

೨೫೪. ಭಗವಂತನಾದ ನರಹರಿಯು ಎಲ್ಲೆಲ್ಲೂ ಸಮನೇ ಆಗಿದ್ದರೂ ಆತನ ದಯೆಯ ನೋಟದ ಬಲದಿಂದ ಈ ಭಕ್ತರು ಪರಮಾನಂದರೂಪನಾದ (ಅವನಲ್ಲೇ) ವಿಹರಿಸುತ್ತಿರುವರು.

---

1. ಮಳೆಯು ಮರದ ಯೋಗ್ಯತೆಯನ್ನೇನೂ ನಿರೀಕ್ಷಿಸಿ ಹುಯ್ಯುವದಿಲ್ಲ. ಹಾಗೆ ಭಗವಂತನೂ ಅನುಗ್ರಹಿಸುವಾಗ ತಾರತಮ್ಯವನ್ನು ಪರಿಗಣಿಸುವದಿಲ್ಲ- ಎಂದಭಿಪ್ರಾಯ.

**ಸುತರಾಮನನ್ಯಶರಣಾಃ ಕ್ಷೀರಾದ್ಯಾಹಾರಮನ್ತರಾ ಯದ್ವತ್ ।**
**ಕೇವಲಯಾ ಸ್ನೇಹದೃಶಾ ಕಚ್ಛಪತನಯಾಃ ಪ್ರಜೀವನ್ತಿ ॥ ೨೫೫ ॥**

೨೫೫. ಆಮೆಯ ಮರಿಗಳು (ಮೊಲೆಯ) ಹಾಲೇ ಮುಂತಾದ ಆಹಾರವಿಲ್ಲದೆ ಹೇಗೆ ತಾಯಿಯ ಬರಿಯ ಪ್ರೇಮದಿಂದಲೇ ಬದುಕಿರುವವೋ ಹಾಗೆ ಮತ್ತೇನನ್ನೂ ಆಶ್ರಯಿಸದ ಅನನ್ಯಭಕ್ತರು (ಹರಿಯ ಪ್ರೇಮದಿಂದಲೇ) ಬದುಕಿರುತ್ತಾರೆ.

**ಯದ್ಯಪಿ ಗಗನಂ ಶೂನ್ಯಂ ತಥಾಪಿ ಜಲದಾಮೃತಾಂಶುರೂಪೇಣ ।**
**ಚಾತಕಚಕೋರನಾಮ್ನೋರ್ದೃಢಭಾವಾತ್ ಪೂರಯತ್ಯಾಶಾಮ್ ॥ ೨೫೬ ॥**

೨೫೬. ಆಕಾಶವು ಶೂನ್ಯವೇ ಆಗಿದ್ದರೂ ಚಾತಕದ ಮತ್ತು ಚಕೋರ ಎಂಬ ಪಕ್ಷಿಗಳ ದೃಢವಾದ ಭಾವನೆಯಿಂದ ಮೋಡಗಳ ನೀರಿನ ಹನಿಗಳ ಮೂಲಕ (ಅವುಗಳ) ಇಷ್ಟಾರ್ಥವನ್ನು ಪೂರೈಸುವದೋ ಹಾಗೆ.

**ತದ್ವದ್ ವ್ರಜತಾಂ ಪುಂಸಾಂ ದೃಗ್ವಾಙ್ಮನಸಾಮಗೋಚರೋಽಪಿ ಹರಿಃ ।**
**ಕೃಪಯಾ ಫಲತ್ಯಕಸ್ಮಾತ್ ಸತ್ಯಾನನ್ದಾಮೃತೇನ ವಿಪುಲೇನ ॥ ೨೫೭ ॥**

೨೫೭. (ಅದೇ ರೀತಿಯಾಗಿ) ಕಣ್ಣುಗಳಿಗಾಗಲೀ, ವಾಕ್ಕುಗಳಿಗಾಗಲೀ, ಮನಸ್ಸಿಗಾಗಲೀ ತೋರಿಕೊಳ್ಳದೆ ಇರುವವನಾದರೂ ಶ್ರೀಹರಿಯು ತನ್ನನ್ನು ಬಳಿಸಾರಿದ ಮನುಷ್ಯರಿಗೆ ಕೃಪೆಯಿಂದ, ಸತ್ಯವೂ ಆನಂದವೂ ಅಮೃತವೂ ಆಗಿರುವ ಬಹುರೂಪವಾದ (ಅನುಗ್ರಹ) ದಿಂದ ಫಲವನ್ನುಂಟುಮಾಡುತ್ತಾನೆ.

**ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಸ್ಯ ಶ್ರೀ ಶಂಕರಭಗವತಃ ಕೃತೌ**
**ಪ್ರಬೋಧಸುಧಾಕರಃ ಸಮಾಪ್ತಃ**

# ಪ್ರಶ್ನೋತ್ತರರತ್ನಮಾಲಿಕಾ

**ಕಃ ಖಲು ನಾಲಂಕ್ರಿಯತೇ ದೃಷ್ಟಾದೃಷ್ಟಾರ್ಥಸಾಧನಪಟೀಯಾನ್ ।**
**ಅಮುಯಾ ಕಂಠಸ್ಥಿತಯಾ ಪ್ರಶ್ನೋತ್ತರರತ್ನ ಮಾಲಿಕಯಾ ॥ ೧ ॥**

೧. ದೃಷ್ಟವಾದ (ಪುತ್ರಾದಿ) ಫಲಗಳು, ಅದೃಷ್ಟವಾದ (ಸ್ವರ್ಗಾದಿ) ಫಲಗಳು ಇವುಗಳನ್ನು ಸಂಪಾದಿಸಲು ಇಚ್ಛೆಯುಳ್ಳ ಸಾಧನಚತುರನಾದ ಯಾವನುತಾನೆ ಈ ಕೊರಳಲ್ಲಿರುವ ಪ್ರಶ್ನೋತ್ತರರತ್ನಮಾಲಿಕೆಯಿಂದ[1] ಭೂಷಿತನಾಗದೆ ಇದ್ದಾನು?

**ಭಗವನ್ ಕಿಮುಪಾದೇಯಂ ಗುರುವಚನಂ ಹೇಯಮಪಿ ಚ ಕಿಮಕಾರ್ಯಮ್।**
**ಕೋ ಗುರುರಧಿಗತತತ್ತ್ವಃ ಶಿಷ್ಯಹಿತಾಯೋದ್ಯತಃ ಸತತಮ್ ॥ ೨ ॥**

೨. ಪೂಜ್ಯರೆ, ಸ್ವೀಕರಿಸಬೇಕಾದದ್ದು ಯಾವದು? ಗುರುಗಳ ವಾಕ್ಯವು. ಬಿಡಬೇಕಾದದ್ದು ಯಾವದು ? ಮಾಡಬಾರದ್ದು. ಗುರುವು ಯಾರು ? ಯಾವನು ಶಿಷ್ಯನ ಹಿತಕ್ಕಾಗಿಯೇ ಯಾವಾಗಲೂ ಪ್ರಯತ್ನಶೀಲನಾಗಿದ್ದುಕೊಂಡು[2] ತತ್ತ್ವವನ್ನು ಕಂಡುಕೊಂಡವನಾಗಿರುವನೋ ಅವನು.

**ತ್ವರಿತಂ ಕಿಂ ಕರ್ತವ್ಯಂ ವಿದುಷಾಂ ಸಂಸಾರಸಂತತಿಚ್ಛೇದಃ ।**
**ಕಿಂ ಮೋಕ್ಷತರೋರ್ಬೀಜಂ ಸಮ್ಯಗ್ಜ್ಞಾನಂ ಕ್ರಿಯಾಸಿದ್ಧಮ್ ॥ ೩ ॥**

೩. ವಿವೇಕಿಗಳು ಜಾಗ್ರತೆಯಾಗಿ ಮಾಡಬೇಕಾದದ್ದು ಯಾವದು? ಸಂಸಾರ (ವೆಂಬ ಭ್ರಾಂತಿಯ) ಪರಂಪರೆಯನ್ನು ಕಳೆದುಕೊಳ್ಳುವದು. ಮೋಕ್ಷವೆಂಬ ಮರಕ್ಕೆ ಬೀಜವು ಯಾವುದು ? (ವೈದಿಕ) ಕರ್ಮಗಳ ಅನುಷ್ಠಾನದಿಂದ ಉಂಟಾದ (ಸತ್ತ್ವಶುದ್ಧಿಯಿಂದ ದೊರಕುವ) ಸಮ್ಯಗ್ದರ್ಶನವು.

**ಕಃ ಪಥ್ಯತರೋ ಧರ್ಮಃ ಕಃ ಶುಚಿರಿಹ ಯಸ್ಯ ಮಾನಸಂ ಶುದ್ಧಮ್ ।**
**ಕಃ ಪಂಡಿತೋ ವಿವೇಕೀ ಕಿಂ ವಿಷಮವಧೀರಣಾ ಗುರುಷು ॥ ೪ ॥**

೪. ಪಥ್ಯತರವಾದದ್ದು ಯಾವದು ? ಧರ್ಮವು. ಮಡಿಯಾಗಿರುವವನು ಯಾರು? ಯಾರ ಮನಸ್ಸು (ಕಾಮಾದಿಗಳ ಮಲವಿಲ್ಲದೆ) ಶುದ್ಧವಾಗಿ ಇರುವದೋ ಆತನೇ. ಪಂಡಿತನು ಯಾರು? (ಆತ್ಮಾನಾತ್ಮ) ವಿವೇಕವುಳ್ಳವನು. ಯಾವದು ವಿಪರೀತ ವಾದದ್ದು ? ಹಿರಿಯರ ವಿಷಯದಲ್ಲಿ (ಉಂಟಾಗಿರುವ) ತಿರಸ್ಕಾರವು.

---

1. ಮಾಲೆಯನ್ನು ಕೊರಳಲ್ಲಿ ಹಾಕಿಕೊಂಡು ಅಲಂಕರಿಸಿಕೊಳ್ಳುವಂತೆ ಈ ಪ್ರಶ್ನೋತ್ತರರತ್ನಮಾಲಿಕೆಯನ್ನು ಕಂಠಪಾಠಮಾಡಿಕೊಂಡಿದ್ದಲ್ಲಿ ಅಧ್ಯಾತ್ಮಸಾಧನಗಳ ರಹಸ್ಯವೆಲ್ಲವೂ ಗೊತ್ತಾಗುವದು.

2. ನಿಜವನ್ನು ಬಲ್ಲ ಗುರುವಿಗೆ ಯಾವಾಗಲೂ ಅದನ್ನು ಶಿಷ್ಯರಿಗೆ ಹೇಗೆ ತಿಳಿಸಿಯೇನು ? ಅವರನ್ನು ಉದ್ಧಾರಮಾಡಿಯೇನು ? ಎಂಬ ಹಂಬಲವಿರುತ್ತದೆ.

**ಕಿಂ ಸಂಸಾರೇ ಸಾರಂ ಬಹುಶೋಽಪಿ ವಿಚಿನ್ತ್ಯಮಾನಮಿದಮೇವ ।**
**ಕಿಂ ಮನುಜೇಷ್ವಿಷ್ಟತಮಂ ಸ್ವಪರಹಿತಾಯೋದ್ಯತಂ ಜನ್ಮ ॥೫॥**

೫. ಸಂಸಾರ (ಸೃಷ್ಟಿ)ದಲ್ಲಿ ಸಾರವಾದದ್ದು ಯಾವದು? ಬಹಳವಾಗಿ ಯೋಚಿಸಿದಮೇಲೂ ಇದೇ[1]. ಮನುಷ್ಯರಲ್ಲಿ ಹೆಚ್ಚು ಇಷ್ಟವಾದದ್ದು ಯಾವದು? ತನಗೂ ಮತ್ತೊಬ್ಬರಿಗೂ ಉಪಕಾರವಾಗುವದಕ್ಕಾಗಿಯೇ ಉಂಟಾಗಿರುವ ಹುಟ್ಟು.

**ಮದಿರೇವ ಮೋಹಜನಕಃ ಕಃ ಸ್ನೇಹಃ ಕೇ ಚ ದಸ್ಯವೋ ವಿಷಯಾಃ ।**
**ಕಾ ಭವವಲ್ಲೀ ತೃಷ್ಣಾ ಕೋ ವೈರೀ ಯಸ್ತ್ವನುದ್ಯೋಗಃ ॥೬॥**

೬. ಮದ್ಯದಂತೆ ಮೋಹವನ್ನುಂಟುಮಾಡುವದು ಯಾವದು? (ಅತಿಯಾದ) ಸ್ನೇಹವು[2]. ಕಳ್ಳರು ಯಾರು? (ಶಬ್ದಾದಿ) ವಿಷಯಗಳು[3]. ಸಂಸಾರದ (ಮೂಲವಾದ) ಬಳ್ಳಿಯು ಯಾವದು? ಆಶೆಯು. ಶತ್ರುವು ಯಾರು? ಉದ್ಯೋಗವಿಲ್ಲದಿರುವದು (ಸೋಮಾರಿಯಾಗಿರುವದು).

**ಕಸ್ಮಾದ್ ಭಯಮಿಹ ಮರಣಾದನ್ಧಾದಿಹ ಕೋ ವಿಶಿಷ್ಯತೇ ರಾಗೀ ।**
**ಕಃ ಶೂರೋ ಯೋ ಲಲನಾಲೋಚನಬಾಣೈರ್ನ ಚ ವ್ಯಥಿತಃ ॥೭॥**

೭. ಭಯವು ಯಾವದರ ದೆಸೆಯಿಂದ? ಸಾವಿನಿಂದ (ಎನ್ನಬೇಕು.) ಕುರುಡನಿಗಿಂತಲೂ ಹೆಚ್ಚಿನ (ಕುರುಡನು) ಯಾರು? (ವಿಷಯಗಳಲ್ಲಿಯೇ) ಪ್ರೀತಿಯುಳ್ಳವನು. ಶೂರನು ಯಾರು? ಯಾವನು ಸ್ತ್ರೀಯರ ಕುಡಿಗಣ್ಣಿನ ನೋಟಗಳೆಂಬ ಬಾಣಗಳಿಂದ ವ್ಯಥೆಪಡದೆ ಇರುವನೋ (ಅವನೇ.)

**ಪಾತುಂ ಕರ್ಣಾಂಜಲಿಭಿಃ ಕಿಮಮೃತಮಿಹ ಯುಜ್ಯತೇ ಸದುಪದೇಶಃ ।**
**ಕಿಂ ಗುರುತಾಯಾ ಮೂಲಂ ಯದೇತದಪ್ರಾರ್ಥನಂ ನಾಮ ॥೮॥**

೮. ಕಿವಿಗಳೆಂಬ ಬೊಗಸೆಗಳಿಂದ ಕುಡಿಯಲು ಯೋಗ್ಯವಾದ ಅಮೃತವು ಇಲ್ಲಿ ಯಾವದು? (ಜ್ಞಾನಿಗಳ) ಸದುಪದೇಶವು. ಗೌರವಕ್ಕೆ ಮೂಲವಾದದ್ದು ಯಾವದು? (ಯಾರನ್ನೂ ಏನನ್ನೂ) ಬೇಡದೆ ಇರುವದೆಂಬುದೇ (ಆಗಿದೆ.)

**ಕಿಂ ಗಹನಂ ಸ್ತ್ರೀಚರಿತಂ ಕಶ್ಚತುರೋ ಯೋ ನ ಖಣ್ಡಿತಸ್ತೇನ ।**
**ಕಿಂ ದುಃಖಮಸನ್ತೋಷಃ ಕಿಂ ಲಾಘವಮಧಮತೋ ಯಾ ಇ್ಞಾ ॥೯॥**

---

1. ಸಮ್ಯಗ್ಜ್ಞಾನವೇ- ಎಂದು ಹಿಂದಿನ ನಪುಂಸಕಲಿಂಗಶಬ್ದದಿಂದ ಪರಾಮರ್ಶಿಸಿ ತಿಳಿಯಬೇಕು.

2. ವಿಷಯಗಳ ಮೇಲಿನ ಪ್ರೀತಿಯು.

3. ಪಾಪಪುಣ್ಯಗಳೇ ಮುಂತಾದವುಗಳನ್ನು ಕಳ್ಳರೆಂದು ಛಾಂದೋಗ್ಯಭಾಷ್ಯದಲ್ಲಿ ಹೇಳಿದೆ. ಛಾಂ.೬-೧೪-೨ನ್ನುನೋಡಿರಿ.

೯. ತಿಳಿಯಲು ಕಷ್ಟಸಾಧ್ಯವಾದುದು ಯಾವದು? ಹೆಂಗಸಿನ ನಡತೆ (ಹಾಗೂ ಜೀವನ). ಜಾಣನು ಯಾರು? (ಸ್ತ್ರೀ ನಡತೆ) ಯಿಂದ ಯಾವನು ದೂಷಿಸಲ್ಪಟ್ಟಿಲ್ಲವೋ ಅವನು.[1] ದುಃಖವು ಯಾವದು? ಅತೃಪ್ತಿಯು. ಹಗುರವಾದದ್ದು ಯಾವದು? ನೀಚನಲ್ಲಿ ಬೇಡುವದು.

**ಕಿಂ ಜೀವಿತಮನವದ್ಯಂ ಕಿಂ ಜಾಡ್ಯಂ ಪಾಠತೋಽನಭ್ಯಾಸಃ ।**
**ಕೋ ಜಾಗರ್ತಿ ವಿವೇಕೀ ಕಾ ನಿದ್ರಾ ಮೂಢತಾ ಜನ್ತೋಃ ॥೧೦॥**

೧೦. ಜೀವನವು (ಬದುಕು) ಯಾವದು? ದೋಷವಿಲ್ಲದೆ ಇರುವದು. ಆಲಸ್ಯವು ಯಾವದು? ಓದುವದರಲ್ಲಿ ಮತ್ತೆ ಮತ್ತೆ ತೊಡಗದೆ ಇರುವದು. ಎಚ್ಚರವಾಗಿರುವವನು ಯಾರು? ವಿವೇಕಿಯು. ನಿದ್ರೆಯು ಯಾವದು? ಪ್ರಾಣಿಗಳ ದಡ್ಡತನ.

**ನಲಿನೀದಲಗತಜಲವತ್ತರಲಂ ಕಿಂ ಯೌವನಂ ಧನಂ ಚಾಯುಃ ।**
**ಕಥಯ ಪುನಃ ಕೇ ಶಶಿನಃ ಕಿರಣಸಮಾಃ ಸಜ್ಜನಾ ಏವ ॥೧೧॥**

೧೧. ತಾವರೆಯ ಎಲೆಯ ಮೇಲಿನ ನೀರಿನಂತೆ ಚಂಚಲವಾದದ್ದು ಯಾವದು? ಪ್ರಾಯವು. ಹಣವು ಮತ್ತು ಆಯುಸ್ಸು. ಹಾಗೆಂತ ಮತ್ತೊಮ್ಮೆ ಹೇಳು. ಚಂದ್ರನ ಕಿರಣಗಳಿಗೆ ಸಮಾನರಾದವರು ಯಾರು? ಸತ್ಪುರುಷರೇ ಸರಿ.

**ಕೋ ನರಕಃ ಪರವಶತಾ ಕಿಂ ಸೌಖ್ಯಂ ಸರ್ವಸಙ್ಗವಿರತಿರ್ಯಾ ।**
**ಕಿಂ ಸತ್ಯಂ ಭೂತಹಿತಂ ಪ್ರಿಯಂ ಚ ಕಿಂ ಪ್ರಾಣಿನಾಮಸವಃ ॥೧೨॥**

೧೨. ನರಕವು ಯಾವದು? ಮತ್ತೊಬ್ಬರಿಗೆ ಅಧೀನನಾಗಿರುವದು. ಸುಖವು ಯಾವದು? ಎಲ್ಲಾ (ವಿಷಯ) ಸಂಗಗಳಿಂದ ದೂರನಾಗಿರುವಿಕೆ. ಸತ್ಯವು ಯಾವದು? ಪ್ರಾಣಿಗಳಿಗೆ ಹಿತವಾದದ್ದು. ಮತ್ತು ಜೀವಿಗಳಿಗೆ ಪ್ರಿಯವಾದದ್ದು ಯಾವದು? (ಅವರವರ) ಪ್ರಾಣಗಳು.

**ಕೋಽನರ್ಥಫಲೋ ಮಾನಃ ಕಾ ಸುಖದಾ ಸಾಧುಜನಮೈತ್ರೀ ।**
**ಸರ್ವವ್ಯಸನವಿನಾಶೇ ಕೋ ದಕ್ಷಃ ಸರ್ವಥಾ ತ್ಯಾಗೀ ॥೧೩॥**

೧೩. ಕೆಟ್ಟ ಫಲವನ್ನುಂಟುಮಾಡುವದು ಯಾವದು? ದುರಭಿಮಾನವು. ಸುಖವನ್ನು ಕೊಡುವದು ಯಾವದು? ಸಾಧುಜನರ ಸಂಗವು. ಎಲ್ಲಾದುಃಖಗಳನ್ನೂ ಪರಿಹರಿಸಿಕೊಳ್ಳುವದರಲ್ಲಿ ಯಾವನು ಸಮರ್ಥನು? ಎಲ್ಲಾರೀತಿಯಿಂದಲೂ (ಪ್ರಪಂಚವನ್ನು) ತ್ಯಾಗಮಾಡಿದವನು

**ಕಿಂ ಮರಣಂ ಮೂರ್ಖತ್ವಂ ಕಿಂ ಚಾನರ್ಘಂ ಯದವಸರೇ ದತ್ತಮ್ ।**
**ಆಮರಣಾತ್ ಕಿಂ ಶಲ್ಯಂ ಪ್ರಚ್ಛನ್ನಂ ಯತ್ಕೃತಂ ಪಾಪಮ್ ॥೧೪॥**

---

1. ಸ್ತ್ರೀನಿಮಿತ್ತವಾಗಿ ದೂರುಗಳನ್ನು ಹೊಂದದೆ ಇರುವವನು.

೧೪. ಸಾವು ಯಾವದು? ಮೂರ್ಖತನವು. ಬೆಲೆಬಾಳತಕ್ಕದ್ದು ಯಾವದು? ಸಮಯದಲ್ಲಿಕೊಟ್ಟದ್ದು, ಸಾಯುವವರೆಗೂ ಚುಚ್ಚುತ್ತಿರುವದು ಯಾವದು? ಗುಟ್ಟಾಗಿ ಮಾಡಿರುವ ಪಾಪವು.

**ಕುತ್ರ ವಿಧೇಯೋ ಯತ್ನೋ ವಿದ್ಯಾಭ್ಯಾಸೇ ಸದೌಷಧೇ ದಾನೇ ।**
**ಅವಧೀರಣಾ ಕ್ವ ಕಾರ್ಯಾ ಖಲಪರಯೋಷಿತ್ ಪರಧನೇಷು ॥೧೫॥**

೧೫. ಪ್ರಯತ್ನವನ್ನು ಎಲ್ಲಿ ಮಾಡಬೇಕು? ವಿದ್ಯೆಯನ್ನು ಕಲಿಯುವದರಲ್ಲಿ ; ಒಳ್ಳೆಯ ಔಷಧಿಯನ್ನು (ಸಂಗ್ರಹಿಸುವದರಲ್ಲಿ ಮತ್ತು)ದಾನಮಾಡುವದರಲ್ಲಿ. ಧೋರಣೆ (ತಿರಸ್ಕಾರ)ವನ್ನು ಎಲ್ಲಿ ಮಾಡಬೇಕು? ದುಷ್ಟರು, ಪರಸ್ತ್ರೀಯರು, ಮತ್ತೊಬ್ಬರ ಹಣ (ಇವುಗಳಲ್ಲಿ).

**ಕಾಽಹರ್ನಿಶಮನುಚಿನ್ತ್ಯಾ ಸಂಸಾರಾಸಾರತಾ ನ ತು ಪ್ರಮದಾ ।**
**ಕಾ ಪ್ರೇಯಸೀ ವಿಧೇಯಾ ಕರುಣಾ ದೀನೇಷು ಸಜ್ಜನೇ ಮೈತ್ರೀ ॥೧೬॥**

೧೬. ಹಗಲೂ ರಾತ್ರೆಯೂ ಚಿಂತಿಸತಕ್ಕದ್ದು ಯಾವದು? ಸಂಸಾರದ ನಿಸ್ಸಾರತೆಯು. ಯಾವಳನ್ನು ಪ್ರಿಯಳನ್ನಾಗಿ ಮಾಡಿಕೊಳ್ಳಬೇಕು? ದೀನಜನರಲ್ಲಿ ಕರುಣೆ (ಎಂಬುವಳನ್ನೂ) ಮತ್ತು ಸತ್ಪುರುಷರಲ್ಲಿ ಸ್ನೇಹವರ್ತನೆ (ಎಂಬುವಳನ್ನು). ಆದರೆ ಎಂದಿಗೂ ಹೆಂಗಸನ್ನಲ್ಲ.

**ಕಣ್ಠಗತೈರಪ್ಯಸುಭಿಃ ಕಸ್ಯ ಹ್ಯಾತ್ಮಾ ನ ಶಕ್ಯತೇ ಜೇತುಮ್ ।**
**ಮೂರ್ಖಸ್ಯ ಶಙ್ಕಿತಸ್ಯ ಚ ವಿಷಾದಿನೋ ವಾ ಕೃತಘ್ನಸ್ಯ ॥೧೭॥**

೧೭. ಪ್ರಾಣಗಳು ಕೊರಳತುದಿಗೆ ಬಂದರೂ ಯಾವನ ಮನಸ್ಸನ್ನು ಗೆಲ್ಲಲು ಸಾಧ್ಯವಿರಲಾರದು? ಮೂರ್ಖನ, ಸಂಶಯಗ್ರಸ್ತನ, ಯಾವಾಗಲೂ ಕುಸಿದು ಕುಳಿತಿರುವವನ ಮತ್ತು ಉಪಕಾರವನ್ನು ಸ್ಮರಣೆ ಮಾಡದವನ (ಮನಸ್ಸು ಜಯಿಸಲು ಅಸಾಧ್ಯವಾದುದು).

**ಕಃ ಸಾಧುಃ ಸದ್ವೃತ್ತಃ ಕಮಧಮಮಾಚಕ್ಷತೇ ತ್ವಸದ್ವೃತ್ತಮ್ ।**
**ಕೇನ ಜಿತಂ ಜಗದೇತತ್ ಸತ್ಯತಿತಿಕ್ಷಾವತಾ ಪುಂಸಾ ॥೧೮॥**

೧೮. ಒಳ್ಳೆಯವನು ಯಾರು? ಒಳ್ಳೆಯ ನಡತೆಯುಳ್ಳವನು. ಯಾರನ್ನು ಅಧಮನೆನ್ನುವರು? ಕೆಟ್ಟನಡತೆಯವನನ್ನು. ಈ ಜಗತ್ತೆಲ್ಲವೂ ಯಾವನಿಂದ ಜಯಿಸಲ್ಪಟ್ಟಿರುವುದು? ಸತ್ಯ ಮತ್ತು ಸಹನೆಯಿಂದ ಕೂಡಿದ ಮನುಷ್ಯನಿಂದ.

**ಕಸ್ಮೈ ನಮಾಂಸಿ ದೇವಾಃ ಕುರ್ವನ್ತಿ ದಯಾಪ್ರಧಾನಾಯ ।**
**ಕಸ್ಮಾದುದ್ವೇಗಃ ಸ್ಯಾತ್ ಸಂಸಾರಾರಣ್ಯತಃ ಸುಧಿಯಃ ॥೧೯॥**

೧೯. ದೇವತೆಗಳು ಯಾವನಿಗೆ ನಮಸ್ಕರಿಸುತ್ತಾರೆ? ದಯೆಯೇ ಮುಖ್ಯವಾದ ಗುಣವುಳ್ಳವನಿಗೆ. ಏತರಿಂದ (ಮನಸ್ಸಿಗೆ) ನೋವಾಗುತ್ತದೆ? ವಿದ್ವಾಂಸನಾದವನಿಗೆ ಸಂಸಾರವೆಂಬ ಕಾಡಿನಿಂದ.

**ಕಸ್ಯ ವಶೇ ಪ್ರಾಣಿಗಣಃ ಸತ್ಯಪ್ರಿಯಭಾಷಿಣೋ ವಿನೀತಸ್ಯ ।**
**ಕ್ವ ಸ್ಥಾತವ್ಯಂ ನ್ಯಾಯ್ಯೇ ಪಥಿ ದೃಷ್ಟಾದೃಷ್ಟಲಾಭಾಢ್ಯೇ ॥ ೨೦ ॥**

೨೦. ಪ್ರಾಣಿಗಳ ಸಮೂಹವೆಲ್ಲವೂ ಯಾರ ವಶದಲ್ಲಿರುವದು? ಸತ್ಯವನ್ನೂ ಪ್ರಿಯವನ್ನೂ ಮಾತನಾಡುವ ವಿನಯಶೀಲನ (ವಶದಲ್ಲಿರುವವು.) ಎಲ್ಲಿ ನಿಲ್ಲಬೇಕು? ಇಹಪರಗಳಲ್ಲಿ ಲಾಭವನ್ನು ಕೊಡುವ ನ್ಯಾಯವಾದ ಹಾದಿಯಲ್ಲಿ.

**ಕೋಽನ್ಧೋ ಯೋಽಕಾರ್ಯರತಃ ಕೋ ಬಧಿರೋ ಯೋ ಹಿತಾನಿ ನ ಶೃಣೋತಿ ।**
**ಕೋ ಮೂಕೋ ಯಃ ಕಾಲೇ ಪ್ರಿಯಾಣಿ ವಕ್ತುಂ ನ ಜಾನಾತಿ ॥ ೨೧ ॥**

೨೧. ಕುರುಡನು ಯಾರು? ಯಾವನು ಮಾಡಬಾರದ್ದರಲ್ಲಿ ತೊಡಗಿರುವನೋ (ಅವನು). ಕಿವುಡನು ಯಾರು? ಯಾವನು ಹಿತವಚನಗಳನ್ನು ಕೇಳುವದಿಲ್ಲವೋ (ಅವನು). ಮೂಕನು ಯಾರು? ಸಮಯದಲ್ಲಿ ಒಳ್ಳೆಯ ಮಾತನ್ನಾಡಲು ಯಾವನು ಅರಿಯನೋ ಅವನು.

**ಕಿಂ ದಾನಮನಾಕಾಂಕ್ಷಂ ಕಿಂ ಮಿತ್ರಂ ಯೋ ನಿವಾರಯತಿ ಪಾಪಾತ್ ।**
**ಕೋಽಲಂಕಾರಃ ಶೀಲಂ ಕಿಂ ವಾಚಾಂ ಮಣ್ಡನಂ ಸತ್ಯಮ್ ॥ ೨೨ ॥**

ದಾನವು ಯಾವದು? ಏನನ್ನೂ (ಪ್ರತಿಯಾಗಿ)ಬಯಸದಿರುವದು. ಸ್ನೇಹಿತನು ಯಾರು? ಪಾಪದಿಂದ ಯಾವನು (ನಮ್ಮನ್ನು) ಹಿಂತಿರುಗಿಸುವನೋ (ಅವನು). ಒಡವೆಯು ಯಾವದು? ನಡತೆಯು. ಮಾತುಗಳಿಗೆ ಭೂಷಣವು ಯಾವದು? ನಿಜವು.

**ವಿದ್ಯುದ್ವಿಲಸಿತಚಪಲಂ ಕಿಂ ದುರ್ಜನಸಂಗತಿರ್ಯುವತಯಶ್ಚ ।**
**ಕುಲಶೀಲನಿಷ್ಪ್ರಕಂಪಾಃ ಕೇ ಕಲಿಕಾಲೇಽಪಿ ಸಜ್ಜನಾ ಏವ ॥ ೨೩॥**

೨೩. ಮಿಂಚಿನ ತೋರಿಕೆಯಂತೆ ಚಂಚಲವಾದದ್ದಾವುದು? ದುಷ್ಟರ ಸ್ನೇಹ ಮತ್ತು ಪ್ರಾಯದ ಹುಡುಗಿಯರು. ಕಲಿಗಾಲದಲ್ಲಿಯೂ ಕುಲ, ನಡತೆಗಳಿಂದ ಅಳ್ಳಾಡದೆ ಇರುವವರಾರು? ಸಜ್ಜನರೇ ಸರಿ.

**ಚಿಂತಾಮಣಿರಿವ ದುರ್ಲಭಮಿಹ ಕಿಂ ಕಥಯಾಮಿ ತಚ್ಚತುರ್ಭದ್ರಮ್ ।**
**ಕಿಂ ತದ್ವದನ್ತಿ ಭೂಯೋ ವಿಧೂತತಮಸೋ ವಿಶೇಷೇಣ ॥೨೪॥**

**ದಾನಂ ಪ್ರಿಯವಾಕ್ಸಹಿತಂ ಜ್ಞಾನಮಗರ್ವಂ ಕ್ಷಮಾನ್ವಿತಂ ಶೌರ್ಯಮ್**
**ವಿತ್ತಂ ತ್ಯಾಗಸಮೇತಂ ದುರ್ಲಭಮೇತಚ್ಚತುರ್ಭದ್ರಮ್ ॥ ೨೫ ॥**

೨೪-೨೫.(ಸ್ವರ್ಗಲೋಕದ) ಚಿಂತಾಮಣಿಯಂತೆ ಇಲ್ಲಿ ದುರ್ಲಭವಾದದ್ದಾವದೋ ಅದನ್ನು ಹೇಳುವೆನು. (ಏನೆಂದರೆ) ಚತುರ್ಭದ್ರವು. (ಮಂಗಳಕರವಾದ ನಾಲ್ಕು ವಸ್ತುಗಳು.) ಅಜ್ಞಾನವನ್ನು ಕಳೆದುಕೊಂಡಿರುವವರು ವಿಶೇಷವಾಗಿ ಅದು ಯಾವ ದೆನ್ನುವರು? (೧) ಉಪಚಾರದ ಮಾತಿನಿಂದ ಕೂಡಿದ ದಾನವು.

(೨) ಜಂಭವಿಲ್ಲದ ತಿಳಿವಳಿಕೆ. (೩) ಕ್ಷಮೆ (ಸಹನೆ)ಯಿಂದ ಕೂಡಿದ ಶೌರ್ಯವು. (೪) ತ್ಯಾಗದಿಂದ ಕೂಡಿದ ಐಶ್ವರ್ಯವು. ಇವೇ ಬಲ್ಲವರು ಹೇಳುವ ಚತುರ್ಭದ್ರವು.

**ಕಿಂ ಶೋಚ್ಯಂ ಕಾರ್ಪಣ್ಯಂ ಸತಿ ವಿಭವೇ ಕಿಂ ಪ್ರಶಸ್ತಮೌದಾರ್ಯಮ್**
**ಕಃ ಪೂಜ್ಯೋ ವಿದ್ವದ್ಭಿಃ ಸ್ವಭಾವತಃ ಸರ್ವದಾ ವಿನೀತೋ ಯಃ ॥ ೨೬ ॥**

೨೬. ಸಂತಾಪಪಡಬೇಕಾದ (ಸ್ಥಿತಿಯು) ಯಾವದು? ಜಿಪುಣತನವು. ಐಶ್ವರ್ಯವು ಇರಲಾಗಿ ಯಾವದು ಶ್ರೇಷ್ಠವಾದದ್ದು? ಔದಾರ್ಯವು. ವಿದ್ವಾಂಸರಿಂದ ಪೂಜಿಸಲ್ಪಡು ವವನು ಯಾರು? ಯಾವನು ಸ್ವಭಾವದಿಂದ ಯಾವಾಗಲೂ ವಿನಯಶೀಲನಾಗಿರುವನೋ ಅವನು.

**ಕಃ ಕುಲಕಮಲದಿನೇಶಃ ಸತಿಗುಣವಿಭವೇಽಪಿ ಯೋ ನಮ್ರಃ ।**
**ಕಸ್ಯ ವಶೇ ಜಗದೇತತ್ ಪ್ರಿಯಹಿತವಚನಸ್ಯ ಧರ್ಮನಿರತಸ್ಯ ॥ ೨೭ ॥**

೨೭. ಕುಲವೆಂಬ ತಾವರೆಗೆ ಸೂರ್ಯನು ಯಾರು? ಗುಣವೂ ಐಶ್ವರ್ಯವೂ ಇದ್ದರೂ ಯಾವನು ವಿನೀತನಾಗಿರುವನೋ (ಅವನು). ಈ ಜಗತ್ತೆಲ್ಲವೂ ಯಾರ ವಶದಲ್ಲಿರುವದು? ಯಾವನು ಪ್ರಿಯವೂ ಹಿತವೂ ಆದ ಮಾತುಳ್ಳವನೂ ಧರ್ಮನಿರತನೂ ಆಗಿರುವನೋ (ಅವನ ಹಿಡಿತದಲ್ಲಿರುವದು).

**ವಿದ್ವನ್ಮನೋಹರಾ ಕಾ ಸತ್ಕವಿತಾ ಬೋಧವನಿತಾ ಚ ।**
**ಕಂ ನ ಸ್ಪೃಶತಿ ವಿಪತ್ತಿಃ ಪ್ರವೃದ್ಧವಚನಾನುವರ್ತಿನಂ ದಾನ್ತಮ್ ॥ ೨೮ ॥**

೨೮. ವಿದ್ವಾಂಸರಿಗೆ ಚೇತೋಹಾರಿಯಾಗಿರುವವಳು ಯಾರು? ಒಳ್ಳೆಯ ಕವಿತೆ ಹಾಗೂ ಜ್ಞಾನವನಿತೆಯು. ಸಂಕಟವು ಯಾವನನ್ನು ಮುಟ್ಟಲಾರದು ? ಯಾವನು ಇಂದ್ರಿಯ ನಿಗ್ರಹದಿಂದ ಕೂಡಿದವನೂ, ಚೆನ್ನಾಗಿ ಅನುಭವಸ್ಥರಾದ ಹಿರಿಯರ ಮಾತುಗಳನ್ನು ಅನುಸರಿಸುವವನೂ ಆಗಿರುವನೋ (ಅವನನ್ನು.)

**ಕಸ್ಮೈ ಸ್ಪೃಹಯತಿ ಕಮಲಾ ತ್ವನಲಸಚಿತ್ತಾಯ ನೀತಿವೃತ್ತಾಯ ।**
**ತ್ಯಜತಿ ಚ ಕಂ ಸಹಸಾ ದ್ವಿಜಗುರುಸುರನಿನ್ದಾಕರಂ ಚ ಸಾಲಸ್ಯಮ್ ॥ ೨೯ ॥**

೨೯. ಲಕ್ಷ್ಮಿಯು ಯಾರನ್ನು ಬಯಸುತ್ತಾಳೆ? ಯಾವನು ಆಲಸ್ಯವಿಲ್ಲದೆ (ಉದ್ಯೋಗಶೀಲವಾದ) ಮನಸ್ಸುಳ್ಳವನೋ ಮತ್ತು ನೀತಿಮಾರ್ಗದಲ್ಲಿರುವನೋ (ಅವನನ್ನು.) ಹಠಾತ್ತನೆ ಯಾರನ್ನು ಬಿಡುತ್ತಾಳೆ? ಯಾವನು ಸೋಮಾರಿಯೂ ಬ್ರಾಹ್ಮಣರು, ಗುರುಗಳು, ದೇವತೆಗಳು- ಇವರನ್ನು ನಿಂದಿಸುವನೋ (ಅವನನ್ನು.)

**ಕುತ್ರ ವಿಧೇಯೋ ವಾಸಃ ಸಜ್ಜನನಿಕಟೇಽಥವಾ ಕಾಶ್ಯಾಮ್ ।**
**ಕಃ ಪರಿಹಾರ್ಯೋ ದೇಶಃ ಪಿಶುನಯುತೋ ಲುಬ್ಧಭೂಪಶ್ಚ ॥ ೩೦ ॥**

೩೦. ಎಲ್ಲಿ ವಾಸಮಾಡಬೇಕು? ಸಜ್ಜನರ ಸಮೀಪದಲ್ಲಿ ಅಥವಾ ಕಾಶಿಯಲ್ಲಿ. ಯಾವ ಜಾಗವನ್ನು ಬಿಡಬೇಕು? ಎಲ್ಲಿ ಚಾಡಿಕೋರರಿರುವನೋ ಜಿಪುಣನಾದ ರಾಜನಿರುವನೋ ( ಆ ಸ್ಥಳವನ್ನು ಬಿಡಬೇಕು.)

**ಕೇನಾಶೋಚ್ಯಃ ಪುರುಷಃ ಪ್ರಣತಕಲತ್ರೇಣ ಧೀರವಿಭವೇನ ।**
**ಇಹ ಭುವನೇ ಕಃ ಶೋಚ್ಯಃ ಸತ್ಯಪಿ ವಿಭವೇ ನ ಯೋ ದಾತಾ ॥ ೩೧ ॥**

೩೧. ಮನುಷ್ಯನು ಶೋಕವಿಲ್ಲದವನಾಗುವದು ಏತರಿಂದ? ಧೀರಳೂ, ಐಶ್ವರ್ಯ ವಂತಳೂ, ವಿಧೇಯಳೂ ಆದ ಹೆಂಡತಿಯಿಂದ. ಈ ಪ್ರಪಂಚದಲ್ಲಿ ಶೋಚ್ಯ ನಾದವನು ಯಾವನು ? ಐಶ್ವರ್ಯವಿದ್ದರೂ ಯಾವನು ದಾನಮಾಡುವದಿಲ್ಲವೋ ಅವನು.

**ಕಿಂ ಲಘುತಾಯಾ ಮೂಲಂ ಪ್ರಾಕೃತಪುರುಷೇಷು ಯಾ ಯಾಞ್ಚಾ ।**
**ರಾಮಾದಪಿ ಕಃ ಶೂರಃ ಸ್ಮರಶರನಿಹತೋ ನ ಯಶ್ಚಲತಿ ॥ ೩೨ ॥**

೩೨. ಹಗುರನಾಗುವದಕ್ಕೆ ಕಾರಣವೇನು? ಹೊಟ್ಟೆಪಾಡಿನ ಗುರಿಯುಳ್ಳ ಜನರಲ್ಲಿ ಬೇಡುವದು. ಶ್ರೀರಾಮನಿಗಿಂತ ಗಟ್ಟಿಗನು ಯಾರು? ಮನ್ಮಥನ ಬಾಣ ಗಳಿಂದ ಹೊಡೆಯಲ್ಪಟ್ಟರೂ ಯಾವನು ಅಳ್ಳಾಡುವದಿಲ್ಲವೋ ಅವನು.

**ಕಿಮಹರ್ನಿಶಮನುಚಿನ್ತ್ಯಂ ಭಗವಚ್ಚರಣಂ ನ ಸಂಸಾರಃ ।**
**ಚಕ್ಷುಷ್ಮನ್ತೋಽಪ್ಯನ್ಧಾಃ ಕೇ ಸ್ಯುಃ ಯೇ ನಾಸ್ತಿಕಾ ಮನುಜಾಃ ॥ ೩೩ ॥**

೩೩. ಹಗಲೂ ರಾತ್ರೆಯೂ ಆಲೋಚಿಸಬೇಕಾದದ್ದಾವುದು? ಭಗವಂತನ ಪಾದಗಳು. ಸಂಸಾರವಲ್ಲ. ಕಣ್ಣಿದ್ದರೂ ಕುರುಡರೆನ್ನಿಸಿಕೊಳ್ಳುವವರು ಯಾರು? ನಾಸ್ತಿಕರಾದ ಯಾವ ಮನುಷ್ಯರಿರುವರೋ ಅವರು.

**ಕಃ ಪಙ್ಗುರಿಹ ಪ್ರಥಿತೋ ವ್ರಜತಿ ಚ ಯೋ ವಾರ್ಧಕೇ ತೀರ್ಥಮ್ ।**
**ಕಿಂ ತೀರ್ಥಮಪಿ ಚ ಮುಖ್ಯಂ ಚಿತ್ತಮಲಂ ಯನ್ನಿವರ್ತಯತಿ ॥ ೩೪ ॥**

೩೪. ಕುಂಟನೆಂದು ಪ್ರಸಿದ್ಧನಾಗಿರುವವನು ಯಾರು? ಯಾವನು ಮುದುಕನಾದ ಮೇಲೆ ತೀರ್ಥಯಾತ್ರೆಗೆ ಹೋಗುತ್ತಾನೋ ಅವನು. ಮುಖ್ಯವಾದ ತೀರ್ಥವಾದರೂ ಯಾವದು? ಅಂತಃಕರಣದ ಮಲವನ್ನು (ಕೊಳೆಯನ್ನು) ಯಾವದು ಕಳೆಯುವದೋ ಅದು.

**ಕಿಂ ಸ್ಮರ್ತವ್ಯಂ ಪುರುಷೈರ್ಹರಿನಾಮ ಸದಾ ನ ಯಾವನೀ ಭಾಷಾ ।**
**ಕೋ ಹಿ ನ ವಾಚ್ಯಃ ಸುಧಿಯಾ ಪರದೋಷಶ್ಚಾನೃತಂ ತದ್ವತ್ ॥ ೩೫ ॥**

೩೫. ಮನುಷ್ಯರು ಯಾವಾಗಲೂ ನೆನೆಯಬೇಕಾದದ್ದು ಯಾವದು? ಹರಿಯ ನಾಮವು. (ಆದರೆ) ಯವನ ಭಾಷೆಯಲ್ಲ[1] ವಿದ್ವಾಂಸನಾದವನು ಹೇಳಬಾರದ್ದು ಯಾವದು? ಮತ್ತೊಬ್ಬರ ದೋಷವು ; ಹಾಗೆಯೇ ಸುಳ್ಳು.

1. ಇಂಗ್ಲಿಷು, ಅರಬ್ಬಿ - ಮುಂತಾದವುಗಳನ್ನು ಯವನಭಾಷೆಯೆನ್ನುವರು.

**ಕಿಂ ಸಂಪಾದ್ಯಂ ಮನುಜೈರ್ವಿದ್ಯಾ ವಿತ್ತಂ ಬಲಂ ಯಶಃ ಪುಣ್ಯಮ್ ।**
**ಕಃ ಸರ್ವಗುಣವಿನಾಶೀ ಲೋಭಃ ಶತ್ರುಶ್ಚ ಕಃ ಕಾಮಃ ॥ ೩೬ ॥**

೩೬. ಮನುಷ್ಯರಿಂದ ಸಂಪಾದಿಸಲ್ಪಡಬೇಕಾದದ್ದು ಯಾವದು? ವಿದ್ಯೆಯು, ಧನವು, ಬಲವು, ಯಶಸ್ಸು, (ಮತ್ತು) ಪುಣ್ಯವು. ಎಲ್ಲಾ ಗುಣಗಳನ್ನೂ ನಾಶ ಮಾಡ ತಕ್ಕದ್ದಾವುದು? ಲೋಭ (ಜಿಪುಣತನ)ವು. ಶತ್ರುವು ಯಾರು? ಕಾಮನು.

**ಕಾ ಚ ಸಭಾ ಪರಿಹಾರ್ಯಾ ಹೀನಾ ಯಾ ವೃದ್ಧಸಚಿವೇನ ।**
**ಇಹ ಕುತ್ರಾವಹಿತಃ ಸ್ಯಾತ್ ಮನುಜಃ ಕಿಲ ರಾಜಸೇವಾಯಾಮ್ ॥ ೩೭ ॥**

೩೭. ಯಾವ ಸಭೆಯನ್ನು ದೂರವಿಡತಕ್ಕದ್ದು? ಯಾವದು ವೃದ್ಧನಾದ ಮಂತ್ರಿಯಿಂದ ಕೂಡಿಲ್ಲವೋ ಅದು. ಮನುಷ್ಯನು ಇಲ್ಲಿ ಯಾವ (ವಿಷಯದಲ್ಲಿ) ಏಕಾಗ್ರತೆ ಯುಳ್ಳವನಾಗಿರಬೇಕು ? ರಾಜಸೇವೆಯನ್ನು ಮಾಡುವದರಲ್ಲಿ.

**ಪ್ರಾಣಾದಪಿ ಕೋ ರಮ್ಯಃ ಕುಲಧರ್ಮಃ ಸಾಧುಸಂಗಶ್ಚ ।**
**ಕಾ ಸಂರಕ್ಷ್ಯಾ ಕೀರ್ತಿಃ ಪತಿವ್ರತಾ ನೈಜಬುದ್ಧಿಶ್ಚ ॥ ೩೮ ॥**

೩೮. ಪ್ರಾಣಕ್ಕಿಂತಲೂ (ಹೆಚ್ಚಿನ) ಬೆಲೆಯುಳ್ಳದ್ದಾವುದು ? ಕುಲಧರ್ಮವು ಮತ್ತು ಸಾಧುಗಳ ಸಹವಾಸವು. ಕಾಪಾಡಿಕೊಳ್ಳಬೇಕಾದದ್ದಾವುದು? ಕೀರ್ತಿಯು. ಪತಿವ್ರತೆಯಾದ ಹೆಂಡತಿ ಮತ್ತು ನಿಜವಾದ (ಒಳ್ಳೆಯ) ಬುದ್ಧಿಯು.

**ಕಾ ಕಲ್ಪಲತಾ ಲೋಕೇ ಸಚ್ಛಿಷ್ಯಾಯಾರ್ಪಿತಾ ವಿದ್ಯಾ ।**
**ಕೋಽಕ್ಷಯವಟವೃಕ್ಷಃ ಸ್ಯಾತ್ ವಿಧಿವತ್ ಸತ್ಪಾತ್ರದತ್ತದಾನಂ ಸ್ಯಾತ್ ॥ ೩೯ ॥**

೩೯. ಲೋಕದಲ್ಲಿ ಕಲ್ಪಲತೆ (ಕೇಳಿದ್ದನ್ನು ಕೊಡುವ ಬಳ್ಳಿ) ಯಾವದು? ಒಳ್ಳೆಯ ಶಿಷ್ಯನಿಗೆ ಒಪ್ಪಿಸಲ್ಪಟ್ಟ ವಿದ್ಯೆಯು. ಅಕ್ಷಯವಾದ ವಟವೃಕ್ಷವು ಯಾವದು? ವಿಧಿಗೆ ಲೋಪವಿಲ್ಲದಂತೆ ಸತ್ಪಾತ್ರದಲ್ಲಿ ಮಾಡಿದ ದಾನವು.

**ಕಿಂ ಶಸ್ತ್ರಂ ಸರ್ವೇಷಾಂ ಯುಕ್ತಿರ್ಮಾತಾ ಚ ಕಾ ಧೇನುಃ ।**
**ಕಿಂ ನು ಬಲಂ ಯದ್ಧೈರ್ಯಂ ಕೋ ಮೃತ್ಯುರ್ಯದವಧಾನರಹಿತತ್ವಮ್ ॥ ೪೦ ॥**

೪೦. ಎಲ್ಲರಿಗೂ ಆಯುಧವು ಯಾವದು? ಯುಕ್ತಿಯು (ಉಪಾಯವು). ತಾಯಿಯು ಯಾರು? ಹಸುವು. ಬಲವು ಯಾವದು? ಧೈರ್ಯವು. ಮೃತ್ಯುವು ಯಾವದು? ಏಕಾಗ್ರತೆಯಿಲ್ಲದಿರುವದು.

**ಕುತ್ರ ವಿಷಂ ದುಷ್ಟಜನೇ ಕಿಮಿಹಾಶೌಚಂ ಭವೇದೃಣಂ ನೃಣಾಮ್ ।**
**ಕಿಮಭಯಮಿಹ ವೈರಾಗ್ಯಂ ಭಯಮಪಿ ಕಿಂ ವಿತ್ತಮೇವ ಸರ್ವೇಷಾಮ್ ॥ ೪೧ ॥**

೪೧. ವಿಷವು ಎಲ್ಲಿರುವದು? ದುಷ್ಟಜನರಲ್ಲಿ. ಮನುಷ್ಯರಿಗೆ ಮೈಲಿಗೆಯು ಯಾವದು? ಸಾಲವು. ಅಭಯವು ಯಾವದು? ವೈರಾಗ್ಯವು. ಎಲ್ಲರಿಗೂ ಭಯವುಂಟಾಗಲು ಕಾರಣವು ಯಾವದು? ಹಣವೇ.

**ಕಾ ದುರ್ಲಭಾ ನರಾಣಾಂ ಹರಿಭಕ್ತಿಃ ಪಾತಕಂ ಚ ಕಾ ಹಿಂಸಾ ।**
**ಕೋ ಹಿ ಭಗವತ್ಪ್ರಿಯಃ ಸ್ಯಾತ್ ಯೋಽನ್ಯಂ ನೋದ್ವೇಜಯೇದನುದ್ವಿಗ್ನಃ ॥ ೪೨ ॥**

೪೨. ಮನುಷ್ಯರಿಗೆ ದುರ್ಲಭವಾದುದಾವುದು? ಹರಿಭಕ್ತಿಯು. ಪಾಪವು ಯಾವದು? ಹಿಂಸೆಯು. ಭಗವಂತನಿಗೆ ಪ್ರಿಯನಾದವನು ಯಾವನು? ಯಾವನು ತಾನೂ ಆತಂಕಪಟ್ಟುಕೊಳ್ಳದೆ ಮತ್ತೊಬ್ಬರನ್ನೂ ಆತಂಕಗೊಳಿಸದೆ ಇರುವನೋ (ಅವನು).

**ಕಸ್ಮಾತ್ ಸಿದ್ಧಿಸ್ತಪಸೋ ಬುದ್ಧಿಃ ಕ್ವನು ಭೂಸುರೇ ಕುತೋ ಬುದ್ಧಿಃ ।**
**ವೃದ್ಧೋಪಸೇವಯಾ ಕೇ ವೃದ್ಧಾ ಯೇ ಧರ್ಮತತ್ತ್ವಜ್ಞಾಃ ॥ ೪೩ ॥**

೪೩. ಸಿದ್ಧಿಯು ಏತರಿಂದಾಗುವದು? ತಪಸ್ಸಿನಿಂದ. ಬುದ್ಧಿಯು ಎಲ್ಲಿರುವದು? ಭೂದೇವತೆ (ಯಾದ ಬ್ರಾಹ್ಮಣನಲ್ಲಿ). ಬುದ್ಧಿಯು ಏತರಿಂದ (ದೊರಕುವದು)? (ವಿದ್ಯಾ)ವೃದ್ಧರಾದವರ ಸೇವೆಯಿಂದ. ವೃದ್ಧರೆಂದರೆ ಯಾರು? ಧರ್ಮತತ್ತ್ವವನ್ನು ಬಲ್ಲವರು.

**ಸಂಭಾವಿತಸ್ಯ ಮರಣಾದಧಿಕಂ ಕಿಂ ದುರ್ಯಶೋ ಭವತಿ ।**
**ಲೋಕೇ ಸುಖೀ ಭವೇತ್ ಕೋ ಧನವಾನ್ ಕಿಂ ಧನಮಪಿ ಯತಶ್ಚೇಷ್ಟಮ್ ॥ ೪೪॥**

೪೪. ಗೌರವದಿಂದ ಬಾಳಿದವನಿಗೆ ಸಾವಿಗಿಂತಲೂ ಹೆಚ್ಚಿನದು ಯಾವದು ಇದ್ದೀತು? ಅಪಕೀರ್ತಿಯು. ಲೋಕದಲ್ಲಿ ಯಾವನು ಸುಖಿಯಾಗುವನು? ಧನವುಳ್ಳವನು. (ಹಾಗಾದರೆ) ಧನವೂ ಸುಖಕಾರಣವೆ ? (ಹಾಗಲ್ಲ); ಏತಕ್ಕಾಗಿ ಅದು ಬೇಕೋ ಅದರಿಂದ (ಸುಖವು).

**ಸರ್ವಸುಖಾನಾಂ ಬೀಜಂ ಕಿಂ ಪುಣ್ಯಂ ದುಃಖಮಪಿ ಕುತಃ ಪಾಪಾತ್ ।**
**ಕಸ್ಯೈಶ್ವರ್ಯಂ ಯಃ ಕಿಲ ಶಂಕರಮಾರಾಧಯೇದ್ ಭಕ್ತ್ಯಾ ॥ ೪೫ ॥**

೪೫. ಎಲ್ಲಾ ಸುಖಗಳಿಗೂ ಕಾರಣವು ಯಾವದು? ಪುಣ್ಯವು. ದುಃಖವಾದರೂ ಏತರ ದೆಸೆಯಿಂದ? ಪಾಪದಿಂದ. ಯಾವನಿಗೆ ಐಶ್ವರ್ಯವು ಲಭಿಸುವದು? ಯಾವನು ಭಕ್ತಿಯಿಂದ ಈಶ್ವರನನ್ನು ಪೂಜಿಸುವನೋ (ಅವನಿಗೆ).

**ಕೋ ವರ್ಧತೇ ವಿನೀತಃ ಕೋ ವಾ ಹೀಯೇತ ಯೋ ದೃಪ್ತಃ ।**
**ಕೋ ನ ಪ್ರತ್ಯೇತವ್ಯೋ ಬ್ರೂತೇ ಯಶ್ಚಾನೃತಂ ಶಶ್ವತ್ ॥ ೪೬ ॥**

೪೬. ಯಾವನು ಅಭಿವೃದ್ಧಿಯನ್ನು ಹೊಂದುವನು? ವಿನಯಸಂಪನ್ನನು. ಯಾವನು ಇಳಿದುಹೋಗುವನು? ಯಾವನು ಕೊಬ್ಬಿರುವನೋ ಅವನು. ಯಾವನನ್ನು ನಂಬಾರದು? ಯಾವಾಗಲೂ ಯಾವನು ಸುಳ್ಳುಹೇಳುವನೋ ಅವನನ್ನು.

**ಕುತ್ರಾನೃತೇಽಪ್ಯಪಾಪಂ ಯಚ್ಚೋಕ್ತಂ ಧರ್ಮರಕ್ಷಾರ್ಥಮ್ ।**
**ಕೋ ಧರ್ಮೋಽಭಿಮತೋ ಯಃ ಶಿಷ್ಟಾನಾಂ ನಿಜಕುಲೀನಾನಾಮ್ ॥ ೪೭ ॥**

೪೭. ಸುಳ್ಳು ಹೇಳಲ್ಪಟ್ಟರೂ ಪಾಪವು ಉಂಟಾಗದೆ ಇರುವದು ಎಲ್ಲಿ? ಧರ್ಮವನ್ನು ಕಾಪಾಡುವದಕ್ಕಾಗಿ ಎಲ್ಲಿ ಹೇಳಲ್ಪಡುವದೋ ಅಲ್ಲಿ. (ಎಲ್ಲರಿಗೂ) ಒಪ್ಪಿಗೆಯಾದ ಧರ್ಮವು ಯಾವದು? ಸತ್ಕುಲಪ್ರಸೂತರಾದ ಶಿಷ್ಟರು ಯಾವದನ್ನು ಧರ್ಮವೆಂದು ನಂಬಿನಡೆಯುವರೋ ಅದೇ.

**ಸಾಧುಬಲಂ ಕಿಂ ದೈವಂ ಕಃ ಸಾಧುಃ ಸರ್ವದಾ ತುಷ್ಟಃ ।**
**ದೈವಂ ಕಿಂ ಯತ್ಸುಕೃತಂ ಕಃ ಸುಕೃತೀ ಶ್ಲಾಘ್ಯತೇ ಚ ಯಃ ಸದ್ಭಿಃ ॥ ೪೮ ॥**

೪೮. ಸಾಧುಮನುಷ್ಯನಿಗೆ ಬಲವು ಯಾವದು? ದೈವಬಲವೇ. ಸಾಧುವು ಯಾರು? ಯಾವನು ಯಾವಾಗಲೂ ತೃಪ್ತನಾಗಿರುವನೋ ಅವನು. ದೈವವು ಯಾವದು? (ಹಿಂದೆ ಮಾಡಿರುವ) ಪುಣ್ಯವು. ಪುಣ್ಯವಂತನು ಯಾರು? ಸತ್ಪುರುಷರಿಂದ ಯಾವನು ಹೊಗಳಲ್ಪಡುವನೋ ಅವನು.

**ಗೃಹಮೇಧಿನಶ್ಚ ಮಿತ್ರಂ ಕಿಂ ಭಾರ್ಯಾ ಕೋ ಗೃಹೀ ಚ ಯೋ ಯಜತೇ ।**
**ಕೋ ಯಜ್ಞೋ ಯಃ ಶ್ರುತ್ಯಾ ವಿಹಿತಃ ಶ್ರೇಯಸ್ಕರೋ ನೃಣಾಮ್ ॥ ೪೯ ॥**

೪೯. ಗೃಹಸ್ಥನಿಗೆ ಸ್ನೇಹಿತನು ಯಾರು? ಹೆಂಡತಿಯು. ಗೃಹಸ್ಥನೆಂದರೆ ಯಾರು? ಯಾವನು ಯಜ್ಞ (ದೇವಪೂಜೆ, ಅತಿಥಿಸತ್ಕಾರ, ದಾನ)ಗಳನ್ನು ಮಾಡುವನೋ ಅವನು. ಯಜ್ಞವೆಂದರೆ ಯಾವದು? ಯಾವದು ಶ್ರುತಿಯಲ್ಲಿ ವಿಧಿಸಲ್ಪಟ್ಟಿರುವದೋ ಮತ್ತು ಮನುಷ್ಯರಿಗೆ ಶ್ರೇಯಸ್ಸನ್ನುಂಟುಮಾಡತಕ್ಕದ್ದೋ ಅದು.

**ಕಸ್ಯ ಕ್ರಿಯಾ ಹಿ ಸಫಲಾ ಯಃ ಪುನರಾಚಾರವಾನ್ ಶಿಷ್ಟಃ ।**
**ಕಃ ಶಿಷ್ಟೋ ಯೋ ವೇದಪ್ರಮಾಣವಾನ್ ಕೋ ಹತಃ ಕ್ರಿಯಾಭ್ರಷ್ಟಃ ॥ ೫೦ ॥**

೫೦. ಯಾವನು ಮಾಡಿದ ಕೆಲಸವು ಸಫಲವಾಗುವದು? ಯಾವನು ಆಚಾರವಂತನಾದ ಶಿಷ್ಟನೋ ಅವನು (ಮಾಡಿದ್ದು). ಶಿಷ್ಟನೆಂದರೆ ಯಾರು? ಯಾವನು ವೇದವನ್ನು ಪ್ರಮಾಣವೆಂತ ಸ್ವೀಕರಿಸುವನೋ ಅವನು. (ಗತಿ) ಕೆಟ್ಟವನು ಯಾರು? ಕರ್ತವ್ಯಕರ್ಮಗಳನ್ನು ಮಾಡದೆ ಜಾರಿದವನು.

**ಕೋ ಧನ್ಯಃ ಸಂನ್ಯಾಸೀ ಕೋ ಮಾನ್ಯಃ ಪಣ್ಡಿತಃ ಸಾಧುಃ ।**
**ಕಃ ಸೇವ್ಯೋ ಯೋ ದಾತಾ ಕೋ ದಾತಾ ಯೋಽರ್ಥಿತೃಪ್ತಿಮಾತನುತೇ ॥ ೫೧ ॥**

೫೧. ಧನ್ಯನು ಯಾರು? ಸಂನ್ಯಾಸಿಯು. ಗೌರವಸ್ಥನು ಯಾರು? ಸಾಧುವಾದ ವಿದ್ವಾಂಸನು. ಯಾರನ್ನು ಆಶ್ರಯಿಸಬೇಕು? ಯಾವನು ದಾನಮಾಡುತ್ತಾನೋ ಅವನನ್ನು ದಾನಮಾಡುವವನೆಂದರೆ ಯಾರು? ಯಾವನು ಯಾಚಕನನ್ನು ಸಂತೋಷಗೊಳಿಸುವನೋ ಅವನು.

**ಕಿಂ ಭಾಗ್ಯಂ ದೇಹವತಾಮಾರೋಗ್ಯಂ ಕಃ ಫಲೀ ಕೃಷಿಕೃತ್ ।**
**ಕಸ್ಯ ನ ಪಾಪಂ ಜಪತಃ ಕಃ ಪೂರ್ಣೋ ಯಃ ಪ್ರಜಾವಾನ್ ಸ್ಯಾತ್ ॥ ೫೨ ॥**

೫೨. ದೇಹವನ್ನು ಧರಿಸಿರುವ (ಮಾನವರ) ಭಾಗ್ಯವು ಯಾವದು? ಆರೋಗ್ಯ(ವಂತರಾಗಿರುವದು). ಫಲವನ್ನು ಪಡೆಯುವವನು ಯಾರು? ವ್ಯವಸಾಯಗಾರನು. ಪಾಪವು ಯಾರಿಗೆ ಸಂಭವಿಸುವದಿಲ್ಲ? ಜಪಮಾಡುವವನಿಗೆ. ಪೂರ್ಣನು ಯಾರು? ಯಾವನು ಮಕ್ಕಳುಳ್ಳವನೋ ಅವನು.

**ಕಿಂ ದುಷ್ಕರಂ ನರಾಣಾಂ ಯನ್ಮನಸೋ ನಿಗ್ರಹಃ ಸತತಮ್ ।**
**ಕೋ ಬ್ರಹ್ಮಚರ್ಯವಾನ್ ಸ್ಯಾತ್ ಯಶ್ಚಾಸ್ಖಲಿತೋರ್ಧ್ವರೇತಸ್ಕಃ ॥ ೫೩ ॥**

೫೩. ಮನುಷ್ಯರಿಗೆ ಕಷ್ಟಸಾಧ್ಯವಾದದ್ದು ಯಾವದು? ಮನಸ್ಸನ್ನು ಯಾವಾಗಲೂ ಹಿಡಿತದಲ್ಲಿಟ್ಟುಕೊಳ್ಳುವದು. ಬ್ರಹ್ಮಚರ್ಯವುಳ್ಳವನು ಯಾವನು? ಯಾವನು ಜಾರದೆ ಇರುವ ವೀರ್ಯವುಳ್ಳವನಾಗಿ ಇಂದ್ರಿಯನಿಗ್ರಹವನ್ನು ಹೊಂದಿರುವನೋ ಅವನು.

**ಕಾ ಚ ಪರದೇವತೋಕ್ತಾ ಚಿಚ್ಛಕ್ತಿಃ ಕೋ ಜಗದ್ಭರ್ತಾ ।**
**ಸೂರ್ಯಃ ಸರ್ವೇಷಾಂ ಕೋ ಜೀವನಹೇತುಃ ಸ ಪರ್ಜನ್ಯಃ ॥ ೫೪ ॥**

೫೪. ಪರದೇವತೆಯು ಯಾರು? ಚಿಚ್ಛಕ್ತಿಯು. ಜಗತ್ತಿಗೆ ಒಡೆಯನು ಯಾರು? ಸೂರ್ಯನು. ಎಲ್ಲರಿಗೂ ಜೀವನಕ್ಕೆ ಕಾರಣನು ಯಾರು? ಪರ್ಜನ್ಯ (ಮಳೆರಾಯ)ನು.

**ಕಃ ಶೂರೋ ಯೋ ಭೀತತ್ರಾತಾ ತ್ರಾತಾ ಚ ಕಃ ಸ ಗುರುಃ ।**
**ಕೋ ಹಿ ಜಗದ್ಗುರುರುಕ್ತಃ ಶಂಭುರ್ಜ್ಞಾನಂ ಕುತಃ ಶಿವಾದೇವ ॥ ೫೫ ॥**

೫೫. ಶೂರನು ಯಾರು? ಯಾವನು ಭಯದಲ್ಲಿರುವವನನ್ನು ಕಾಪಾಡುವನೋ ಅವನು. ಆ ಕಾಪಾಡುವವನಾದರೂ ಯಾರು? ಗುರುವೇ. ಹಾಗಾದರೆ ಜಗದ್ಗುರುವು ಯಾರು? ಪರಮೇಶ್ವರನು. ಜ್ಞಾನವು ಯಾವನಿಂದ ಪ್ರಾಪ್ತವಾಗುವದು? ಶಿವನಿಂದಲೇ.

**ಮುಕ್ತಿಂ ಲಭೇತ ಕಸ್ಮಾತ್ ಮುಕುನ್ದಭಕ್ತೇರ್ಮುಕುನ್ದಃ ಕಃ ।**
**ಯಸ್ತಾರಯೇದವಿದ್ಯಾಂ ಕಾ ಚಾವಿದ್ಯಾ ಯದಾತ್ಮನೋಽಸ್ಫೂರ್ತಿಃ ॥ ೫೬ ॥**

೫೬. ಮುಕ್ತಿಯನ್ನು ಏತರಿಂದ ಪಡೆಯಬೇಕು? ಮುಕುಂದನ ಭಕ್ತಿಯಿಂದ. ಮುಕುಂದನು ಯಾರು? ಯಾವನು (ನಮ್ಮನ್ನು) ಅವಿದ್ಯೆಯಿಂದ ದಾಟಿಸುವನೋ ಅವನು. ಹಾಗಾದರೆ ಅವಿದ್ಯೆಯು ಯಾವದು? ಆತ್ಮನ ಹೊಳೆಯದಿರುವಿಕೆಯೇ.

**ಕಸ್ಯ ನ ಶೋಕೋ ಯಃ ಸ್ಯಾದಕ್ರೋಧಃ ಕಿಂ ಸುಖಂ ತುಷ್ಟಿಃ ।**
**ಕೋ ರಾಜಾ ರಂಜನಕೃತ್ ಕಶ್ಚ ಶ್ವಾ ನೀಚಸೇವಕೋ ಯಃ ಸ್ಯಾತ್ ॥ ೫೭ ॥**

೫೭. ಶೋಕವು ಯಾವನಿಗೆ ಇರುವದಿಲ್ಲ? ಯಾವನು ಕೋಪವಿಲ್ಲದವನೋ ಅವನಿಗೆ. ಸುಖವು ಯಾವದು? ತೃಪ್ತಿಯು. ರಾಜನೆಂದರೆ ಯಾರು? ಪ್ರಜಾ ರಂಜನೆಯನ್ನು ಮಾಡುವವನು. ನಾಯಿಯು ಯಾರು? ಯಾವನು ನೀಚರನ್ನು ಸೇವಿಸುವನೋ ಅವನು.

**ಕೋ ಮಾಯೀ ಪರಮೇಶಃ ಕ ಇಂದ್ರಜಾಲಾಯತೇ ಪ್ರಪಂಚೋಽಯಮ್ ।**
**ಕಃ ಸ್ವಪ್ನನಿಭೋ ಜಾಗ್ರದ್ವ್ಯವಹಾರಃ ಸತ್ಯಮಪಿ ಕಿಂ ಬ್ರಹ್ಮ ॥೫೮॥**

೫೮. ಮಾಯೆಯುಳ್ಳವನು ಯಾರು? ಪರಮೇಶ್ವರನು. ಇಂದ್ರಜಾಲದಂತೆ ತೋರುವದು ಯಾವದು? ಈ ಪ್ರಪಂಚವೇ. ಕನಸಿಗೆ ಸಮಾನವಾದದ್ದು ಯಾವದು? ಎಚ್ಚರದ ವ್ಯವಹಾರವು. ಸತ್ಯವಾದುದಾದರೂ ಯಾವದು ? ಬ್ರಹ್ಮವು.

**ಕಿಂ ಮಿಥ್ಯಾ ಯದ್ವಿದ್ಯಾನಾಶ್ಯಂ ತುಚ್ಛಂ ತು ಶಶವಿಷಾಣಾದಿ ।**
**ಕಾ ಚಾನಿರ್ವಚನೀಯಾ ಮಾಯಾ ಕಿಂ ಕಲ್ಪಿತಂ ದ್ವೈತಮ್ ॥೫೯॥**

೫೯. ಸುಳ್ಳಾದದ್ದು ಯಾವದು? ಯಾವದು ಜ್ಞಾನದಿಂದ ಬಾಧಿತವಾಗುವದೋ ಅದು. ತುಚ್ಛವೆಂದರೆ ಯಾವದು? ಮೊಲದ ಕೊಂಬೇ ಮುಂತಾದದ್ದು. ಅನಿರ್ವಚನೀಯವಾದದ್ದು ಯಾವದು? ಮಾಯೆಯು. ಕಲ್ಪಿತವಾದದ್ದು ಯಾವದು? ದ್ವೈತವು.

**ಕಿಂ ಪಾರಮಾರ್ಥಿಕಂ ಸ್ಯಾದ್ ಅದ್ವೈತಂ ಚಾಜ್ಞತಾ ಕುತೋಽನಾದಿಃ ।**
**ವಪುಷಶ್ಚ ಪೋಷಕಂ ಕಿಂ ಪ್ರಾರಬ್ಧಂ ಚಾನ್ನದಾಯಿ ಕಿಂ ಚಾಯುಃ ॥೬೦॥**

೬೦. ಪರಮಾರ್ಥವಾದದ್ದು ಯಾವದು ? ಅದ್ವೈತವು. ಅಜ್ಞತೆಯು ಎಲ್ಲಿಂದ? ಅನಾದಿಯೆಂಬ (ಭಾವನೆ)ಯಿಂದ. ಶರೀರವನ್ನು ಪೋಷಿಸುವದು ಯಾವದು? ಪ್ರಾರಬ್ಧವು. ಅನ್ನವನ್ನು ಕೊಡುವದು ಯಾವದು? ಆಯುಸ್ಸು.

**ಕೋ ಬ್ರಾಹ್ಮಣೈರುಪಾಸ್ಯೋ ಗಾಯತ್ರ್ಯರ್ಕಾಗ್ನಿ ಗೋಚರಃ ಶಂಭುಃ ।**
**ಗಾಯತ್ರ್ಯಾಮಾದಿತ್ಯೇ ಚಾಗ್ನೌ ಶಂಭೌ ಚ ಕಿಂ ನು ತತ್ತತ್ವಮ್ ॥೬೧॥**

೬೧. ಬ್ರಾಹ್ಮಣರಿಂದ ಉಪಾಸನೆಮಾಡಲ್ಪಡಬೇಕಾದವನು ಯಾರು? ಗಾಯತ್ರಿ, ಸೂರ್ಯ, ಅಗ್ನಿ - ಇವುಗಳಲ್ಲಿ ಕಂಡುಬರುವ ಪರಮೇಶ್ವರನು. (ಹಾಗಾದರೆ) ಗಾಯತ್ರಿಯಲ್ಲಿಯೂ,ಸೂರ್ಯನಲ್ಲಿಯೂ, ಅಗ್ನಿಯಲ್ಲಿಯೂ ಮತ್ತು ಪರಮೇಶ್ವರನಲ್ಲಿಯೂ (ಉಪಾಸ್ಯವಾದದ್ದು) ಯಾವದು? ತತ್ತ್ವವೇ (ಎಂದರೆ ಪರಬ್ರಹ್ಮವೇ.)

**ಪ್ರತ್ಯಕ್ಷದೇವತಾ ಕಾ ಮಾತಾ ಪೂಜ್ಯೋ ಗುರುಶ್ಚ ಕಸ್ತಾತಃ ।**
**ಕಃ ಸರ್ವದೇವತಾತ್ಮಾ ವಿದ್ಯಾಕರ್ಮಾನ್ವಿತೋ ವಿಪ್ರಃ ॥೬೨॥**

೬೨. ಪ್ರತ್ಯಕ್ಷದೇವತೆಯು ಯಾರು? ತಾಯಿಯು. ಪೂಜ್ಯನಾದವನೂ ಗುರುವಾದವನೂ ಯಾವನು ? ತಂದೆಯು. ಸರ್ವದೇವತಾತ್ಮನು ಯಾರು? (ವೈದಿಕ) ವಿದ್ಯಾಕರ್ಮಗಳಿಂದ ಕೂಡಿದ ಬ್ರಾಹ್ಮಣನು.

**ಕಶ್ಚ ಕುಲಕ್ಷಯಹೇತುಃ ಸಂತಾಪಃ ಸಜ್ಜನೇಷು ಯೋಽಕಾರಿ ।**
**ಕೇಷಾಮಮೋಘವಚನಂ ಯೇ ಚ ಪುನಃ ಸತ್ಯಮೌನಶಮಶೀಲಾಃ ॥೬೩॥**

೬೩. ಕುಲವನ್ನು ನಾಶಮಾಡುವದು ಯಾವದು? ಸತ್ಪುರುಷರಲ್ಲಿ ಉಂಟು ಮಾಡಿದ ದುಃಖವು. ಯಾರ ವಾಕ್ಯವು ಬೆಲೆಯುಳ್ಳದ್ದು? ಯಾರು ಸತ್ಯ, ಮೌನ, ಶಮ-ಮುಂತಾದ ಗುಣಗಳುಳ್ಳವರೋ ಅವರದ್ದು.

**ಕಿಂ ಜನ್ಮ ವಿಷಯಸಂಗಃ ಕಿಮುತ್ತರಂ ಜನ್ಮ ಪುತ್ರಃ ಸ್ಯಾತ್ ।**
**ಕೋಽಪರಿಹಾರ್ಯೋ ಮೃತ್ಯುಃ ಕುತ್ರ ಪದಂ ವಿನ್ಯಸೇಚ್ಚ ದೃಕ್ ಪೂತೇ ॥ ೬೪ ॥**

೬೪. ಹುಟ್ಟು ಯಾವದು? ವಿಷಯಗಳ ಆಸಕ್ತಿಯು. ಮುಂದಿನ ಜನ್ಮವು ಯಾವದು? ಮಗನು. ಪರಿಹರಿಸಿಕೊಳ್ಳಲಾಗದ್ದು ಯಾವದು? ಮೃತ್ಯುವು. ಪಾದವನ್ನು ಎಲ್ಲಿಡಬೇಕು? ದೃಷ್ಟಿಯನ್ನು (ಚೆನ್ನಾಗಿ ಹಾಯಿಸಿದ) ಪವಿತ್ರವಾದ (ಸ್ಥಳದಲ್ಲಿ).

**ಪಾತ್ರಂ ಕಿಮನ್ನದಾನೇ ಕ್ಷುಧಿತಂ ಕೋಽರ್ಚ್ಯೋ ಹಿ ಭಗವದವತಾರಃ ।**
**ಕಶ್ಚ ಭಗವಾನ್ ಮಹೇಶಃ ಶಂಕರನಾರಾಯಣಾತ್ಮೈಕಃ ॥ ೬೫ ॥**

೬೫. ಅನ್ನದಾನಕ್ಕೆ ಅರ್ಹನಾದವನು ಯಾರು? ಹಸಿದವನು. ಪೂಜಿಸಲು ಯೋಗ್ಯವಾದದ್ದಾವುದು? ಭಗವಂತನ ಅವತಾರವು. ಮಹೇಶನಾದ ಭಗವಂತನು ಯಾರು? ಶಂಕರ ಮತ್ತು ನಾರಾಯಣರ ರೂಪಗಳಿಂದ ತೋರಿಕೊಂಡಿರುವ ಒಬ್ಬನೇ ಆದ ಆತ್ಮನು.

**ಫಲಮಪಿ ಭಗವದ್ಭಕ್ತೇಃ ಕಿಂ ತಲ್ಲೋಕಸ್ವರೂಪಸಾಕ್ಷಾತ್ತ್ವಮ್ ।**
**ಮೋಕ್ಷಶ್ಚ ಕೋ ಹ್ಯವಿದ್ಯಾಸ್ತಮಯಃ ಕಃ ಸರ್ವವೇದಭೂರಥ ಚೋಮ್ ॥ ೬೬ ॥**

೬೬. ಭಗವದ್ಭಕ್ತಿಯ ಫಲವಾದರೂ ಯಾವದು? ಆ ಬ್ರಹ್ಮದ ಲೋಕ ಪ್ರಾಪ್ತಿಯು ಮತ್ತು ಬ್ರಹ್ಮಸ್ವರೂಪದ ಸಾಕ್ಷಾತ್ಕಾರವು. ಮೋಕ್ಷವು ಯಾವದು? ಅವಿದ್ಯೆಯು ನಾಶ ವಾಗುವದೇ. ಎಲ್ಲಾ ವೇದಗಳಿಗೂ ಆಧಾರವು ಯಾವದು? 'ಓಂ' ಎಂಬಿದು.

**ಇತ್ಯೇಷಾ ಕಂಠಸ್ಥಾ ಪ್ರಶ್ನೋತ್ತರರತ್ನಮಾಲಿಕಾ ಯೇಷಾಮ್ ।**
**ತೇ ಮುಕ್ತಾಭರಣಾ ಇವ ವಿಮಲಾಶ್ಚಾಭಾನ್ತಿ ಸತ್ಸಮಾಜೇಷು ॥ ೬೭ ॥**

೬೭. ಈ ರೀತಿಯಾಗಿರುವ ಪ್ರಶ್ನೋತ್ತರರತ್ನಮಾಲಿಕೆಯು ಯಾರ ಕಂಠದಲ್ಲಿ ರುವದೋ ಅವರು ಮುತ್ತಿನ ಆಭರಣಗಳನ್ನು ಧರಿಸಿದವರಂತೆ ಪವಿತ್ರರಾಗಿ ಸತ್ಪುರುಷರ ಗುಂಪಿನಲ್ಲಿ ಪ್ರಕಾಶಿಸುವರು.

**ಇತಿ ಶ್ರೀ ಶಂಕರಾಚಾರ್ಯವಿರಚಿತಾ ಪ್ರಶ್ನೋತ್ತರರತ್ನಮಾಲಿಕಾ ಸಂಪೂರ್ಣಾ**

------------

# ಶ್ರೀರಾಮಭುಜಂಗಪ್ರಯಾತಸ್ತೋತ್ರಮ್

(ಶ್ರೀಶಂಕರಾಚಾರ್ಯವಿರಚಿತಮ್)

**ವಿಶುದ್ಧಂ ಪರಂ ಸಚ್ಚಿದಾನಂದರೂಪಂ**
**ಗುಣಾಧಾರಮಾಧಾರಹೀನಂ ವರೇಣ್ಯಮ್ ।**
**ಮಹಾಂತಂ ವಿಭಾಂತಂ ಗುಣಾಂತಂ ಗುಹಾಂತಂ**
**ಸುಖಾಂತಂ ಸ್ವಯಂ ಧಾಮ ರಾಮಂ ಪ್ರಪದ್ಯೇ ॥ ೧ ॥**

೧. ಪರಿಶುದ್ಧನೂ ಪರಮನೂ ಸಚ್ಚಿದಾನಂದಸ್ವರೂಪನೂ ಗುಣಗಳಿಗೆ ಆಶ್ರಯನೂ ಸ್ವತಃ ನಿರಾಧಾರನೂ ಶ್ರೇಷ್ಠನೂ ಮಹಾತ್ಮನೂ ಹೃದಯಗುಹೆಯಲ್ಲಿ ವಿರಾಜಿಸುತ್ತಿರುವವನೂ ತ್ರಿಗುಣಗಳ ಆಚೆಯಿರುವವನೂ ಸುಖದಪರಮಾವಧಿಯೂ ಸ್ವಮಹಿಮಪ್ರತಿಷ್ಠನೂ ಆದ ರಾಮನನ್ನು ಶರಣುಹೊಗುವೆನು.

**ಶಿವಂ ನಿತ್ಯಮೇಕಂ ವಿಭುಂ ತಾರಕಾಖ್ಯಂ**
**ಸುಖಾಕಾರಮಾಕಾರಶೂನ್ಯಂ ಸುಮಾನ್ಯಮ್ ।**
**ಮಹೇಶಂ ಕಲೇಶಂ ಸುರೇಶಂ ಪರೇಶಂ**
**ನರೇಶಂ ನಿರೀಶಂ ಮಹೀಶಂ ಪ್ರಪದ್ಯೇ ॥ ೨ ॥**

೨. ಮಂಗಳಸ್ವರೂಪನೂ ನಿತ್ಯನೂ ಅದ್ವಿತೀಯನೂ ಸರ್ವವ್ಯಾಪಕನೂ ಸಂಸಾರವನ್ನು ದಾಟಿಸುವವನೆಂದು ಪ್ರಸಿದ್ಧನೂ ಆದ, ಸುಖಸ್ವರೂಪನೂ ಸ್ವತಃ ನಿರಾಕಾರನೂ ಆದ , ಎಲ್ಲರಿಂದಲೂ ಗೌರವಿಸಲ್ಪಡುವ, ಮಹೇಶ್ವರನೂ ಕಲೆಗಳಿಗೆ ಒಡೆಯನೂ ದೇವತೆಗಳ ಪ್ರಭುವೂ ಹೆಚ್ಚಿನ ದಣಿಯೂ ಮಹಾರಾಜನೂ ತನಗೆ ಒಡೆಯರಿಲ್ಲದವನೂ ಭೂಪತಿಯೂ ಆದ ( ರಾಮನನ್ನು) ಶರಣುಹೊಗುವೆನು.

**ಯದಾಽವರ್ಣಯತ್ ಕರ್ಣಮೂಲೇಽನ್ತಕಾಲೇ**
**ಶಿವೋ ರಾಮ ರಾಮೇತಿ ರಾಮೇತಿ ಕಾಶ್ಯಾಮ್ ।**
**ತದೇಕಂ ಪರಂ ತಾರಕಬ್ರಹ್ಮರೂಪಂ**
**ಭಜೇಽಹಂ ಭಜೇಽಹಂ ಭಜೇಽಹಂ ಭಜೇಽಹಮ್ ॥ ೩ ॥**

೩. ಕಾಶೀಕ್ಷೇತ್ರದಲ್ಲಿ (ದೇಹಿಯು) ಸಾಯುತ್ತಿರುವ ಸಮಯದಲ್ಲಿ ಕಿವಿಯ ಬುಡದಲ್ಲಿ ಶಿವನು ರಾಮ, ರಾಮ-ಎಂದು ಹೇಳುತ್ತಿರುವನೋ ಅಂಥ ತಾರಕ ಪರಬ್ರಹ್ಮರೂಪನೂ ತಾನೊಬ್ಬನೇ ಆದ ರಾಮನನ್ನು ನಾನು ಬಾರಿಬಾರಿಗೂ ಭಜಿಸುವೆನು.

ಮಹಾರತ್ನಪೀಠೇ ಶುಭೇ ಕಲ್ಪಮೂಲೇ
ಸುಖಾಸೀನಮಾದಿತ್ಯಕೋಟಿಪ್ರಕಾಶಮ್ ।
ಸದಾ ಜಾನಕೀಲಕ್ಷ್ಮಣೋಪೇತಮೇಕಂ
ಸದಾ ರಾಮಚಂದ್ರಂ ಭಜೇಽಹಮ್ ಭಜೇಽಹಮ್ ॥ ೪ ॥

೪. ಕಲ್ಪವೃಕ್ಷದ ಬುಡದಲ್ಲಿರುವ ಮಹಾರತ್ನ ಪೀಠದಲ್ಲಿ ಸುಖವಾಗಿ ಕುಳಿತು ಕೊಂಡಿರುವ, ಕೋಟಿಸೂರ್ಯಪ್ರಕಾಶನಾದ, ಯಾವಾಗಲೂ ಸೀತಾಲಕ್ಷ್ಮಣರಿಂದ ಕೂಡಿರುವ, ಅದ್ವಿತೀಯ (ಸ್ವರೂಪನಾದ) ಶ್ರೀರಾಮಚಂದ್ರನನ್ನು ಯಾವಾಗಲೂ ಭಜಿಸುವೆನು.

ಕ್ವಣದ್ರತ್ನಮಂಜೀರಪಾದಾರವಿಂದಂ
ಲಸನ್ಮೇಖಲಾಚಾರುಪೀತಾಂಬರಾಢ್ಯಮ್ ।
ಮಹಾರತ್ನಹಾರೋಲ್ಲಸತ್ ಕೌಸ್ತುಭಾಂಗಂ
ನದಚ್ಚಂಚರೀಮಂಜರೀಲೋಲಮಾಲಮ್ ॥ ೫ ॥

೫. ಶಬ್ದಮಾಡುತ್ತಿರುವ ರತ್ನಮಯವಾದ ಪಾದಾಭರಣಗಳಿಂದ ಅಲಂಕೃತ ನಾದ, ಸುಂದರವಾದ ಪೀತಾಂಬರವನ್ನುಟ್ಟು ನಡುವಿನಲ್ಲಿ ವಿರಾಜಿಸುತ್ತಿರುವ ಉಡಿದಾರ ವುಳ್ಳವನಾದ, ಕೌಸ್ತುಭವೆಂಬ ಮಹಾರತ್ನದಿಂದ ಕೂಡಿದ ಹಾರದಿಂದ ವಿರಾಜಮಾನ ವಾದ ಕಂಠವುಳ್ಳ, ಶಬ್ದಮಾಡುತ್ತಿರುವ ಭ್ರಮರಗಳಿಂದ ತುಂಬಿದ ಚಿಗುರುಗಳ ಚಂಚಲವಾದ ಹಾರದಿಂದ ಅಲಂಕೃತನಾದ (ರಾಮನನ್ನು ಭಜಿಸುತ್ತೇನೆ).

ಲಸಚ್ಚಂದ್ರಿಕಾಸ್ಮೇರಶೋಣಾಧರಾಭಂ
ಸಮುದ್ಯತ್ ಪತಂಗೇಂದುಕೋಟಿಪ್ರಕಾಶಮ್ ।
ನಮದ್ಬ್ರಹ್ಮರುದ್ರಾದಿಕೋಟೀರರತ್ನ -
ಸ್ಫುರತ್ ಕಾಂತಿನೀರಾಜನಾರಾಧಿತಾಂಘ್ರಿಮ್ ॥ ೬ ॥

೬. ಪ್ರಕಾಶಮಾನವಾದ ಬೆಳದಿಂಗಳಿನಂತೆ ಕಾಂತಿಯಿಂದ ಒಪ್ಪುವ (ಮುಖ ದಲ್ಲಿರುವ) ಕೆಂಪಾದ ತುಟಿಗಳ ಹೊಳಪಿನಿಂದ ಕೂಡಿರುವ, ಹುಟ್ಟುತ್ತಿರುವ ಕೋಟಿ ಸೂರ್ಯಚಂದ್ರರಂತೆ ಪ್ರಕಾಶಮಾನನಾದ, ನಮಸ್ಕರಿಸುತ್ತಿರುವ ಬ್ರಹ್ಮ, ರುದ್ರರೇ ಮುಂತಾದವರ ಕಿರೀಟಗಳ ರತ್ನದ ಕಾಂತಿಯಿಂದ ಆರತಿಮಾಡಲ್ಪಟ್ಟ ಪಾದಗಳುಳ್ಳ (ರಾಮಚಂದ್ರನನ್ನು ಭಜಿಸುವೆನು).

ಪುರಃ ಪ್ರಾಂಜಲೀನಾಂಜನೇಯಾದಿಭಕ್ತಾನ್
ಸ್ವಚಿನ್ಮುದ್ರಯಾ ಭದ್ರಯಾ ಬೋಧಯಂತಮ್ ।
ಭಜೇಽಹಂ ಭಜೇಽಹಂ ಸದಾ ರಾಮಚಂದ್ರಂ
ತ್ವದನ್ಯಂ ನ ಮನ್ಯೇ ನ ಮನ್ಯೇ ನ ಮನ್ಯೇ ॥ ೭ ॥

೭. ಮುಂಭಾಗದಲ್ಲಿ ಕೈಮುಗಿದುಕೊಂಡು ನಿಂತಿರುವ ಆಂಜನೇಯನೇ ಮುಂತಾದ ಭಕ್ತರನ್ನು ತನ್ನ ಮಂಗಳಕರವಾದ ಜ್ಞಾನಮುದ್ರೆಯಿಂದ ಉಪದೇಶಿಸಿ ಉದ್ಧಾರ ಮಾಡುತ್ತಿರುವ, ಶ್ರೀರಾಮನನ್ನು ನಾನು ಯಾವಾಗಲೂ ಭಜಿಸುವೆನು. (ಎಲೈ ರಾಮನೆ,) ನಿನಗಿಂತ ಬೇರೆಯ ದೇವರನ್ನು ನಾನು ಕಾಣೆನು.

**ಯದಾ ಮತ್ಸಮೀಪಂ ಕೃತಾಂತಃ ಸಮೇತ್ಯ**
**ಪ್ರಚಂಡಪ್ರಕೋಪೈರ್ಭಟೈರ್ಭೀಷಯೇನ್ಮಾಮ್ ।**
**ತದಾವಿಷ್ಕರೋಷಿ ತ್ವದೀಯಂ ಸ್ವರೂಪಂ**
**ಸದಾಪತ್ ಪ್ರಣಾಶಂ ಸಕೋದಂಡಬಾಣಮ್ ॥ ೮ ॥**

೮. ಯಾವಾಗ ಯಮನು ನನ್ನ ಹತ್ತಿರಕ್ಕೆ ಬಂದು ತನ್ನ ಕಡೆಯವರಾದ ಭಯಂಕರಕೋಪವುಳ್ಳ ಸೇವಕರಿಂದ ನನ್ನನ್ನು ಹೆದರಿಸಲಿರುವನೋ ಆಗ ನಿನ್ನ ಕೋದಂಡಬಾಣಗಳಿಂದೊಡಗೂಡಿದ, ಸಂಕಟವನ್ನು ಪರಿಹಾರಮಾಡುವ ಸ್ವರೂಪ ದಿಂದ ನೀನು ತೋರಿಕೊಳ್ಳುವೆ.

**ನಿಜೇ ಮಾನಸೇ ಮಂದಿರೇ ಸನ್ನಿಧೇಹಿ**
**ಪ್ರಸೀದ ಪ್ರಸೀದ ಪ್ರಭೋ ರಾಮಚಂದ್ರ ।**
**ಸಸೌಮಿತ್ರಿಣಾ ಕೈಕಯೀನಂದನೇನ**
**ಸ್ವಶಕ್ತ್ಯಾನುಭಕ್ತ್ಯಾ ಚ ಸಂಸೇವ್ಯಮಾನ ॥ ೯ ॥**

೯. ಎಲೈ ಪ್ರಭುವಾದ ರಾಮಚಂದ್ರನೆ, ನನ್ನ ಶಕ್ತಿಭಕ್ತಿಗಳಿಗೆ ಅನುಗುಣವಾಗಿ ಸೇವಿಸಲ್ಪಡುವ ನೀನು ಲಕ್ಷ್ಮಣ , ಭರತರೊಡಗೂಡಿ ನನ್ನ ಮನಸ್ಸೆಂಬ ಮಂದಿರದಲ್ಲಿ ತೋರಿಕೊಳ್ಳುವವನಾಗು. ನನ್ನ ವಿಷಯದಲ್ಲಿ ಪ್ರಸನ್ನನಾಗು.

**ಸ್ವಭಕ್ತಾಗ್ರಗಣ್ಯೈಃ ಕಪೀಶೈರ್ಮಹೇಶೈಃ**
**ಅನೀಕೈರನೇಕೈಶ್ಚ ರಾಮ ಪ್ರಸೀದ ।**
**ನಮಸ್ತೇ ನಮೋಽಸ್ತ್ವೀಶ ರಾಮ ಪ್ರಸೀದ**
**ಪ್ರಶಾಧಿ ಪ್ರಶಾಧಿ ಪ್ರಕಾಶಂ ಪ್ರಭೋ ಮಾಮ್ ॥ ೧೦ ॥**

೧೦. ಎಲೈ ರಾಮನೆ, ನಿನ್ನ ಭಕ್ತಶ್ರೇಷ್ಠರಾದ ಕಪಿಪುಂಗವರು, ಮಹಾರಾಜರು ಗಳು, ಅವರ ಸೈನ್ಯವೇ ಮುಂತಾದ ಸಮಸ್ತಪರಿವಾರದೊಡನೆ ಪ್ರಸನ್ನನಾಗು, ನಿನಗೆ ಮತ್ತೆ ನಮಸ್ಕಾರ. ನನ್ನನ್ನು ಸಾಕ್ಷಾತ್ತಾಗಿಯೇ ಅಪ್ಪಣೆ ಮಾಡುವವನಾಗು.

**ತ್ವಮೇವಾಸಿ ದೈವಂ ಪರಂ ಮೇ ಯದೇಕಂ**
**ಸುಚೈತನ್ಯಮೇತತ್ತ್ವದನ್ಯಂ ನ ಮನ್ಯೇ ।**
**ಯತೋಽಭೂದಮೇಯಂ ವಿಯದ್ವಾಯುತೇಜೋ-**
**ಜಲೋರ್ವ್ಯಾದಿಕಾರ್ಯಂ ಚರಂ ಚಾಚರಂ ಚ ॥ ೧೧ ॥**

೧೧. ಒಬ್ಬನೇ ಆದ ಪರಮನಾದ ದೇವನು ನೀನೇ ಆಗಿರುವೆ. ಈ ನಿನ್ನ ಸ್ವರೂಪವು ಚೈತನ್ಯಮಯವಾಗಿರುವದು. ನಿನ್ನ ಹೊರತು ಬೇರೆಯವರನ್ನು ನಾನು ಕಾಣೆನು. ಯಾವ ನಿನ್ನಿಂದಲೇ ಈ ಅಳತೆಗೆ ಸಿಲುಕಿದ ಆಕಾಶ, ವಾಯು, ತೇಜಸ್ಸು, ನೀರು, ಭೂಮಿ- ಮುಂತಾದ ಕಾರ್ಯಗಳು (ಸೃಷ್ಟಿಗಳು), ಚೇತನಾಚೇತನಗಳು-ಸಹ (ಹೊರ ಬಂದಿರುವವು).

**ನಮಃ ಸಚ್ಚಿದಾನಂದರೂಪಾಯ ತಸ್ಮೈ**
**ನಮೋ ದೇವದೇವಾಯ ರಾಮಾಯ ತುಭ್ಯಮ್ ।**
**ನಮೋ ಜಾನಕೀಜೀವಿತೇಶಾಯ ತುಭ್ಯಂ**
**ನಮಃ ಪುಂಡರೀಕಾಯತಾಕ್ಷಾಯ ತುಭ್ಯಮ್** ॥ ೧೨ ॥

೧೨. ಸಚ್ಚಿದಾನಂದಸ್ವರೂಪನೂ, ದೇವದೇವನೂ, ಶ್ರೀರಾಮನೂ, ಜಾನಕೀ ಪ್ರಾಣಕಾಂತನೂ, ಕಮಲದಂತೆ ಕಣ್ಣುಗಳುಳ್ಳವನೂ ಆದ, ನಿನಗೆ ನಮಸ್ಕಾರ.

**ನಮೋ ಭಕ್ತಿಯುಕ್ತಾನುರಕ್ತಾಯ ತುಭ್ಯಂ**
**ನಮಃ ಪುಣ್ಯಪುಂಜೈಕಲಭ್ಯಾಯ ತುಭ್ಯಮ್ ।**
**ನಮೋ ವೇದವೇದ್ಯಾಯ ಚಾದ್ಯಾಯ ಪುಂಸೇ**
**ನಮಃ ಸುಂದರಾಯೇಂದಿರಾವಲ್ಲಭಾಯ** ॥ ೧೩ ॥

೧೩. ಭಕ್ತಿಯುಳ್ಳವರಲ್ಲಿ ಅನುರಾಗವುಳ್ಳವನೂ, ಪುಣ್ಯಸಮೂಹಗಳಿಂದ ಮಾತ್ರವೇ ಸಿಕ್ಕತಕ್ಕವನೂ ವೇದಗಳಿಂದ ಅರಿತುಕೊಳ್ಳಬೇಕಾದವನೂ, ಆದಿಪುರುಷನೂ ಸುಂದರರೂಪನೂ ಇಂದಿರಾರಮಣನೂ ಆದ ನಿನಗೆ ನಮಸ್ಕಾರ.

**ನಮೋ ವಿಶ್ವಕರ್ತ್ರೇ ನಮೋ ವಿಶ್ವಹರ್ತ್ರೇ**
**ನಮೋ ವಿಶ್ವಭೋಕ್ತ್ರೇ ನಮೋ ವಿಶ್ವಮಾತ್ರೇ ।**
**ನಮೋ ವಿಶ್ವನೇತ್ರೇ ನಮೋ ವಿಶ್ವಜೇತ್ರೇ**
**ನಮೋ ವಿಶ್ವಪಿತ್ರೇ ನಮೋ ವಿಶ್ವಗೋಪ್ತ್ರೇ** ॥ ೧೪ ॥

೧೪. ಪ್ರಪಂಚವನ್ನು ಸೃಷ್ಟಿಸುವವನೂ, ಸಂಹಾರಮಾಡುವವನೂ, ಪಾಲನೆ ಮಾಡುವವನೂ ಆದ, ಜಗತ್ತಿನ ತಾಯಿಯೂ, ತಂದೆಯೂ, ನಡೆಯಿಸುವವನೂ ಆದ, ಆದರೆ ಪ್ರಪಂಚವನ್ನು(ಮೀರಿ)ಗೆದ್ದಿರುವ ಹಾಗೂ ಅದರ ರಕ್ಷಕನಾದ ರಾಮನಿಗೆ ನಮಸ್ಕಾರ.

**ನಮಸ್ತೇ ನಮಸ್ತೇ ಸಮಸ್ತಪ್ರಪಂಚ**
**ಪ್ರಭೋಗಪ್ರಯೋಗಪ್ರಯಾಣಪ್ರವೀಣ।**
**ಮದೀಯಂ ಮನಸ್ತ್ವತ್ಪದದ್ವಂದ್ವಸೇವಾಂ**
**ವಿಧಾತುಂ ಪ್ರವೃತ್ತಂ ಸುಚೈತನ್ಯಸಿದ್ಧ್ಯೈ** ॥ ೧೫ ॥

೧೫. ಇಡಿಯ ಬ್ರಹ್ಮಾಂಡದ ರಚನೆ, ಅಳತೆ, ಅದರ ಪ್ರಯೋಜನಗಳ ತಿಳಿವಳಿಕೆಯಲ್ಲಿ ಪ್ರವೀಣನೂ ಸರ್ವಜ್ಞನೂ ಆದ ನಿನಗೆ ನಮಸ್ಕಾರ. ಹೆಚ್ಚಿನ ಬಲಶಕ್ತಿಚೈತನ್ಯಗಳನ್ನು ಪಡೆಯಲು ನನ್ನ ಮನಸ್ಸು ನಿನ್ನ ಪಾದಾರವಿಂದಗಳ ಸೇವೆಗೆ ಅಣಿಯಾಗುತ್ತಿರುವದು. ನೀನು ಅದನ್ನು ಅನುಗ್ರಹಿಸಿ ಕಾಪಾಡುವವನಾಗು.

**ಶಿಲಾಪಿ ತ್ವದಂಘ್ರಿಕ್ಷಮಾಸಂಗಿರೇಣು-**
**ಪ್ರಸಾದಾದ್ಧಿ ಚೈತನ್ಯಮಾಧತ್ತ ರಾಮ ।**
**ನರಸ್ತ್ವತ್ಪದದ್ವಂದ್ವಸೇವಾವಿಧಾನಾ-**
**ತ್ಸುಚೈತನ್ಯಮೇತೀತಿ ಕಿಂ ಚಿತ್ರಮತ್ರ** ॥ ೧೬ ॥

೧೬. ಎಲೈ ರಾಮನೆ, ಕಲ್ಲುಕೂಡ ನಿನ್ನ ಪಾದದಲ್ಲಿ ಅಂಟಿದ್ದ ಧೂಳಿನ ಮಹಿಮೆಯಿಂದ ಚೇತನತ್ವವನ್ನು ಪಡೆಯಿತು. ಹೀಗಿರುವಲ್ಲಿ ಮನುಷ್ಯನು ನಿನ್ನ ಪಾದಸೇವೆಯನ್ನು ಮಾಡುವವನಾದರೆ ಹೆಚ್ಚಿನ ಚೈತನ್ಯವನ್ನು (ಪರಮಪುರುಷಾರ್ಥವನ್ನು) ಪಡೆಯುತ್ತಾನೆ- ಎಂಬುದರಲ್ಲಿ ಆಶ್ಚರ್ಯವಾದರೂ ಏನಿದ್ದೀತು?

**ಪವಿತ್ರಂ ಚರಿತ್ರಂ ವಿಚಿತ್ರಂ ತ್ವದೀಯಂ**
**ನರಾ ಯೇ ಸ್ಮರನ್ತೀಹ ಭೋ ರಾಮಚಂದ್ರ ।**
**ಭವನ್ತಂ ಭವಾನ್ತಂ ಭರನ್ತಂ ಭಜಂತೋ**
**ಲಭಂತೇ ಕೃತಾಂತಂ ನ ಪಶ್ಯನ್ತ್ಯತೋಽನ್ತೇ** ॥ ೧೭ ॥

೧೭. ಎಲೈ ರಾಮಚಂದ್ರನೆ, ನಿನ್ನ ಪವಿತ್ರವೂ, ವಿಚಿತ್ರವೂ ಆದ ಚರಿತ್ರೆಯನ್ನು ಯಾವ ಮನುಷ್ಯರು ಸ್ಮರಣೆಮಾಡುವರೋ ಅವರು ಸಂಸಾರ (ಸಮುದ್ರದ) ದಡದಲ್ಲಿರುವ ಹಾಗೂ ಕಾಪಾಡುವ ನಿನ್ನನ್ನು ನೆರೆನಂಬಿ (ಪುರುಷಾರ್ಥಗಳನ್ನು) ಪಡೆದುಕೊಳ್ಳುವರು. ಅವರು ಕೊನೆಗಾಲದಲ್ಲಿ ಎಂದಿಗೂ ಯಮನನ್ನು ಕಾಣಲಾರರು.

**ಸ ಪುಣ್ಯಃ ಸ ಗಣ್ಯಃ ಶರಣ್ಯೋ ಮಮಾಯಂ**
**ನರೋ ವೇದ ಯೋ ದೇವಚೂಡಾಮಣಿಂ ತ್ವಾಮ್ ।**
**ಸದಾಕಾರಮೇಕಂ ಚಿದಾನಂದರೂಪಂ**
**ಮನೋವಾಗಗಮ್ಯಂ ಪರಂ ಧಾಮ ರಾಮ** ॥ ೧೮ ॥

೧೮. ಎಲೈ ರಾಮನೆ, ದೇವಶ್ರೇಷ್ಠನೂ, ಸದ್ರೂಪನೂ, ಏಕನೂ, ಚಿದಾನಂದಸ್ವರೂಪನೂ ಮನಸ್ಸು, ಮಾತುಗಳಿಗೆ ಅಗೋಚರನೂ ಪರಮಸ್ಥಾನವೂ ಆದ ನಿನ್ನನ್ನು ಯಾವನು ಅರಿತಿರುವನೋ ಆ ಮನುಷ್ಯನೇ ಪುಣ್ಯಶಾಲಿಯು. ಅವನೇ ಗಣ್ಯವ್ಯಕ್ತಿಯು. ಅವನು ನನಗೆ ರಕ್ಷಕನೂ ಹೌದು.

**ಪ್ರಚಂಡಪ್ರತಾಪಪ್ರಭಾವಾಭಿಭೂತ -**
**ಪ್ರಭೂತಾರಿವೀರ ಪ್ರಭೋ ರಾಮಚಂದ್ರ ।**
**ಬಲಂ ತೇ ಕಥಂ ವರ್ಣ್ಯತೇಽತೀವ ಬಾಲ್ಯೇ**
**ಯತೋಽಖಂಡಿ ಚಂಡೀಶಕೋದಂಡದಂಡಮ್ ॥ ೧೯ ॥**

೧೯. ಸಹಿಸಲಸಾಧ್ಯವಾದ ಪರಾಕ್ರಮದ ತಾಪದ ಶಕ್ತಿಯಿಂದ ತಿರಸ್ಕರಿಸಲ್ಪಟ್ಟ ಬಹುಮಂದಿ ಶತ್ರುಗಳುಳ್ಳ, ಪ್ರಭುವಾದ ಎಲೈ ರಾಮಚಂದ್ರನೆ, ನಿನ್ನ ಬಲವನ್ನು ಏನೆಂದು ವರ್ಣಿಸಲಾದೀತು? ಏಕೆಂದರೆ ತೀರ ಹುಡುಗತನದಲ್ಲಿಯೇ ಪರಮೇಶ್ವರನ ಧನುಸ್ಸನ್ನು ಮುರಿದಿರುತ್ತೀಯೆ.

**ದಶಗ್ರೀವಮುಗ್ರಂ ಸಪುತ್ರಂ ಸಮಿತ್ರಂ**
**ಸರಿದ್ದುರ್ಗಮಧ್ಯಸ್ಥರಕ್ಷೋಗಣೇಶಮ್ ।**
**ಭವನ್ತಂ ವಿನಾ ರಾಮ ವೀರೋ ನರೋ ವಾ**
**ಸುರೋ ವಾಮರೋ ವಾ ಜಯೇತ್ ಕಸ್ತ್ರಿಲೋಕ್ಯಾಮ್ ॥ ೨೦ ॥**

೨೦. ಮಕ್ಕಳು, ಸ್ನೇಹಿತರೊಡಗೂಡಿ ಸಮುದ್ರಮಧ್ಯದ ಲಂಕೆಯಲ್ಲಿ ವಾಸವಾಗಿದ್ದ ರಾಕ್ಷಸರ ಗುಂಪಿಗೆ ಒಡೆಯನಾಗಿದ್ದ ರಾವಣನನ್ನು, ಎಲೈ ರಾಮನೆ, ಮೂರು ಲೋಕ ಗಳಲ್ಲಿಯೂ ನಿನ್ನ ಹೊರತು ಬೇರೆ ಯಾವ ವೀರನಾಗಲಿ, ಮನುಷ್ಯನಾಗಲಿ, ದೇವತೆ ಯಾಗಲಿ, ಸಾವಿಲ್ಲದ ವ್ಯಕ್ತಿಯಾಗಲಿ ಜಯಿಸಿಯಾನು?

**ಸದಾ ರಾಮ ರಾಮೇತಿ ರಾಮಾಮೃತಂ ತೇ**
**ಸದಾರಾಮಮಾನಂದನಿಷ್ಯಂದಕಂದಮ್ ।**
**ಪಿಬಂತಂ ನಮನ್ತಂ ಸುದಂತಂ ಹಸಂತಂ**
**ಹನೂಮಂತಮಂತರ್ಭಜೇ ತಂ ನಿತಾಂತಮ್ ॥ ೨೧ ॥**

೨೧. ಎಲೈ ರಾಮನೆ, ಯಾವಾಗಲೂ ಸುಖಕರವೂ ಆನಂದವರ್ಧಕವೂ ಆಗಿ ಹರಿಯುತ್ತಿರುವ ನಿನ್ನ 'ರಾಮ' ಎಂಬ ಹೆಸರಿನ ಅಮೃತವನ್ನು ಸದಾ ಕುಡಿಯುತ್ತಲೂ ನಮಸ್ಕರಿಸುತ್ತಲೂ ಒಳ್ಳೆಯ ಹಲ್ಲುಗಳನ್ನು ಕಿರಿಯುತ್ತಾ ನಗುತ್ತಲೂ ಇರುವ ಹನುಮಂತನನ್ನು ನನ್ನ ಹೃದಯದಲ್ಲಿ ಎಂದೆಂದಿಗೂ ಸೇವಿಸುವೆನು.

**ಸದಾ ರಾಮ ರಾಮೇತಿ ರಾಮಾಮೃತಂ ತೇ**
**ಸದಾರಾಮಮಾನಂದನಿಷ್ಯಂದಕಂದಮ್ ।**
**ಪಿಬನ್ನನ್ವಹಂ ನನ್ವಹಂ ನೈವ ಮೃತ್ಯೋ**
**ರ್ಬಿಭೇಮಿ ಪ್ರಸಾದಾತ್ ಪವಿತ್ರಾತ್ತವೈವ ॥ ೨೨ ॥**

೨೨. ಎಲೈ ರಾಮನೆ, ಯಾವಾಗಲೂ ಸುಖಕರವೂ ಆನಂದಪ್ರವಾಹವೂ ಆಗಿ ಹರಿಯುತ್ತಿರುವ ನಿನ್ನ 'ರಾಮ' ಎಂಬ ಹೆಸರಿನ ಅಮೃತವನ್ನು ನಾನು ನಿತ್ಯವೂ ಕುಡಿಯುತ್ತಾ ನಿನ್ನ ಪವಿತ್ರವಾದ ಅನುಗ್ರಹದಿಂದ ಎಂದೆಂದಿಗೂ ಮೃತ್ಯುವಿಗೆ ಹೆದರುವದಿಲ್ಲ.

**ಅಸೀತಾಸಮೇತೈರಕೋದಂಡಭೂಷೈಃ**
**ಅಸೌಮಿತ್ರಿವಂದ್ಯೈರಚಂಡಪ್ರತಾಪೈಃ ।**
**ಅಲಂಕೇಶಕಾಲೈರಸುಗ್ರೀವಮಿತ್ರೈಃ ।**
**ಅರಾಮಾಭಿಧೇಯೈರಲಂ ದೈವತೈರ್ನಃ ॥ ೨೩ ॥**

೨೩. ಸೀತಾದೇವಿಯಿಂದ ಕೂಡಿರದ, ಧನುಸ್ಸನ್ನು ಕೈಯಲ್ಲಿ ಹಿಡಿಯದೆ ಇರುವ, ಲಕ್ಷ್ಮಣನಿಂದ ನಮಸ್ಕರಿಸಲ್ಪಡದ, ಪ್ರಪಂಡವಾದ ಪರಾಕ್ರಮಗಳಿಲ್ಲದ, ಲಂಕೇಶನಾದ ರಾವಣನನ್ನು ಸಂಹಾರಮಾಡದ, ಸುಗ್ರೀವನ ಸ್ನೇಹವಿಲ್ಲದ, ರಾಮನೆಂಬ ಹೆಸರೇ ಇಲ್ಲದ ದೇವತೆಗಳಿಂದ ನಮಗಾಗಬೇಕಾದದ್ದೇನೂ ಇಲ್ಲ.

**ಅವೀರಾಸನಸ್ಥೈರಚಿನ್ಮುದ್ರಿಕಾಢ್ಯೈ-**
**ರಭಕ್ತಾಂಜನೇಯಾದಿತತ್ತ್ವಪ್ರಕಾಶೈಃ ।**
**ಅಮಂದಾರಮೂಲೈರಮಂದಾರಮಾಲೈ-**
**ರರಾಮಾಭಿಧೇಯೈರಲಂ ದೈವತೈರ್ನಃ ॥ ೨೪ ॥**

೨೪. ವೀರಾಸನದಲ್ಲಿ ಕುಳಿತಿರದ, ಚಿನ್ಮುದ್ರೆಯಿಂದ ಕೂಡಿರದ, ಆಂಜನೇಯನೇ ಮುಂತಾದ ಭಕ್ತರಿಗೆ ತತ್ತ್ವವನ್ನು ಉಪದೇಶಮಾಡಿ ಪ್ರಕಾಶಗೊಳಿಸದೆ ಇರುವ, ಮಂದಾರವೃಕ್ಷದ ಬುಡದಲ್ಲಿ ಇರದ, ಮಂದಾರಮಾಲೆಯನ್ನೂ ಧರಿಸದೆ ಇರುವ ರಾಮ ನೆಂಬ ಹೆಸರನ್ನು ಹೊತ್ತಿರದೆ ಇರುವ ದೇವತೆಗಳಿಂದ ಇನ್ನು ಸಾಕು.

**ಅಸಿಂಧುಪ್ರಕೋಪೈರವಂದ್ಯಪ್ರತಾಪೈ-**
**ರಬಂಧುಪ್ರಯಾಣೈರಮಂದಸ್ಮಿತಾಢ್ಯೈಃ ।**
**ಅದಂಡಪ್ರವಾಸೈರಖಂಡಪ್ರಬೋಧೈ-**
**ರರಾಮಾಭಿಧೇಯೈರಲಂ ದೈವತೈರ್ನಃ ॥ ೨೫ ॥**

೨೫. ಸಮುದ್ರವನ್ನು ಕುರಿತು ಕೋಪಮಾಡದಿರುವ, ನಮಸ್ಕರಿಸುವಂಥ ಪ್ರತಾಪವಿಲ್ಲದ, ಬಂಧುಸಮೇತ ಪ್ರಯಾಣಮಾಡದಿರುವ, ಮುಗುಳುನಗೆಯಿಂದ ಕೂಡಿದ ಮುಖವಿಲ್ಲದ, ದಂಡಕಾರಣ್ಯದಲ್ಲಿ ಪ್ರವಾಸಮಾಡದಿರುವ, ನಾಶಗೊಳಿಸದೆ ಇರುವ ಬಲಶಾಲಿಗಳಾದ ರಾಕ್ಷಸರುಳ್ಳ, ರಾಮನೆಂಬ ಹಸರಿಲ್ಲದ ದೇವತೆಗಳು ಇನ್ನು ಸಾಕು.

**ಹರೇ ರಾಮ ಸೀತಾಪತೇ ರಾವಣಾರೇ**
**ಖರಾರೇ ಮುರಾರೇಽ ಸುರಾರೇ ಪರೇತಿ ।**
**ಲಪಂತಂ ನಯಂತಂ ಸದಾಕಾಲಮೇವಂ**
**ಸಮಾಲೋಕಯಾಲೋಕಯಾಶೇಷಬಂಧೋ ॥ ೨೬ ॥**

೨೬. ಹರಿಯೆ, ಶ್ರೀರಾಮನೆ, ಸೀತಾಪತಿಯೆ, ರಾವಣಶತ್ರುವೆ, ಖರನಿಗೆ ವೈರಿಯೆ, ಮುರಾರಿಯೆ, ರಾಕ್ಷಸಶತ್ರುವೆ, ಪರಬ್ರಹ್ಮವೆ-ಎಂದು ಯಾವಾಗಲೂ ಉಚ್ಚರಿಸುತ್ತಾ ಸದಾಕಾಲವೂ ಕಾಲಕ್ಷೇಪಮಾಡುತ್ತಿರುವ ನನ್ನನ್ನು ನೋಡು. ಎಲೈ ಎಲ್ಲರ ಬಂಧುವೆ, ನನ್ನನ್ನು ಕರುಣಿಸಿನೋಡು.

**ನಮಸ್ತೇ ಸುಮಿತ್ರಾಸುಪುತ್ರಾಭಿವಂದ್ಯ**
**ನಮಸ್ತೇ ಸದಾ ಕೈಕಯೀ ನಂದನೇಡ್ಯ ।**
**ನಮಸ್ತೇ ಸದಾ ವಾನರಾಧೀಶ ವಂದ್ಯ**
**ನಮಸ್ತೇ ನಮಸ್ತೇ ಸದಾ ರಾಮಚಂದ್ರ ॥ ೨೭ ॥**

೨೭. ಸುಮಿತ್ರೆಯ ಮಗನಾದ ಲಕ್ಷ್ಮಣನಿಂದ ನಮಸ್ಕರಿಸಲ್ಪಟ್ಟವನಿಗೆ ವಂದನೆಗಳು. ಕೈಕೇಯಿಯ ಮಗನಾದ ಭರತನಿಂದ ಸದಾ ಸ್ತೋತ್ರಮಾಡಲ್ಪಟ್ಟವನಿಗೆ ನಮಸ್ಕಾರಗಳು. ವಾನರರಿಗೆ ಒಡೆಯನಾದ ಸುಗ್ರೀವನಿಂದ ಸದಾ ನಮಸ್ಕರಿಸಲ್ಪಡುವವನಿಗೆ ವಂದನೆಗಳು. ಎಲೈ ರಾಮಚಂದ್ರನೆ, ನಿನಗೆ ಯಾವಾಗಲೂ ನಮಸ್ಕಾರಗಳು.

**ಪ್ರಸೀದ ಪ್ರಸೀದ ಪ್ರಚಂಡಪ್ರತಾಪ**
**ಪ್ರಸೀದ ಪ್ರಸೀದ ಪ್ರಚಂಡಾದಿಕಾಲ ।**
**ಪ್ರಸೀದ ಪ್ರಸೀದ ಪ್ರಪನ್ನಾನುಕಂಪಿನ್**
**ಪ್ರಸೀದ ಪ್ರಸೀದ ಪ್ರಭೋ ರಾಮಚಂದ್ರ ॥ ೨೮ ॥**

೨೮. ಪ್ರಚಂಡವಾದ ಪರಾಕ್ರಮವುಳ್ಳ, ಭಯಂಕರರಾದ ಶತ್ರುಗಳಿಗೂ ಯಮನಾಗಿರುವ, ಶರಣಾಗತರಲ್ಲಿ ದಯೆಯುಳ್ಳ ಪ್ರಭುವಾದ ರಾಮಚಂದ್ರನೆ, ಪ್ರಸನ್ನನಾಗು.

**ಭುಜಂಗಪ್ರಯಾತಂ ಪರಂ ವೇದಸಾರಂ**
**ಮುದಾ ರಾಮಚಂದ್ರಸ್ಯ ಭಕ್ತ್ಯಾ ಚ ನಿತ್ಯಮ್ ।**
**ಪಠನ್ ಸಂತತಂ ಚಿಂತಯನ್ ಸ್ವಾಂತರಂಗೇ**
**ಸ ಏವ ಸ್ವಯಂ ರಾಮಚಂದ್ರಃ ಸ ಧನ್ಯಃ ॥ ೨೯ ॥**

೨೯. ಪರಮವಾದ ಮತ್ತು ವೇದಗಳ ಸಾರವಾದ ಭುಜಂಗಪ್ರಯಾತವೆಂಬ ವೃತ್ತದಲ್ಲಿ ರಚಿಸಲ್ಪಟ್ಟಿರುವ ಶ್ರೀರಾಮಚಂದ್ರನ ಈ ಸ್ತೋತ್ರವನ್ನು ಸಂತೋಷದಿಂದಲೂ ಭಕ್ತಿಯಿಂದಲೂ ಪ್ರತಿನಿತ್ಯವೂ ಪಠನಮಾಡುತ್ತಾ ಯಾವಾಗಲೂ ತನ್ನ ಮನಸ್ಸಿನಲ್ಲಿ ಅನುಸಂಧಾನಮಾಡುತ್ತಿರುವವನೇ ಧನ್ಯನು. ಅವನೇ ಸಾಕ್ಷಾತ್ ಶ್ರೀರಾಮನು.

॥ ಇತಿ ಶ್ರೀರಾಮಭುಜಂಗಪ್ರಯಾತಮ್ ॥

.............

|| ಓಂ ||

# ಶ್ರೀ ದತ್ತಲಹರೀ ಸ್ತೋತ್ರಮ್

( ದಲಾದನಋಷಿವಿರಚಿತಮ್ )

**ದಲಾದನಋಷಿರುವಾಚ -**

**ವಿಭುರ್ನಿತ್ಯಾನಂದಃ ಶ್ರುತಿಗಣಶಿರೋವೇದ್ಯಮಹಿಮಾ**
**ಯತೋ ಜನ್ಮಾದ್ಯಸ್ಯ ಪ್ರಭವತಿ ಸ ಮಾಯಾಗುಣವತಃ ।**
**ಸದಾಧಾರಃ ಸತ್ಯೋ ಜಯತಿ ಪುರುಷಾರ್ಥೈಕಫಲದಃ**
**ಸದಾ ದತ್ತಾತ್ರೇಯೋ ವಿಹರತಿ ಮುದಾ ಜ್ಞಾನಲಹರಿಃ ॥ ೧ ॥**

೧. ದಲಾದನಋಷಿಯಿಂತೆಂದನು : ಸರ್ವವ್ಯಾಪಕನೂ ನಿತ್ಯಾನಂದಸ್ವರೂಪನೂ ಶ್ರುತಿಸಮೂಹಗಳ ಶಿಖರವಾದ ಉಪನಿಷತ್ತುಗಳಿಂದ ತಿಳಿಯಲ್ಪಡುವ ಮಹಿಮೆಯುಳ್ಳವನೂ ಮಾಯಾಗುಣಗಳಿಂದ ಕೂಡಿದ ಯಾವನ ದೆಸೆಯಿಂದ ಈ ಜಗತ್ತಿನ ಉತ್ಪತ್ತಿ, ಸ್ಥಿತಿ, ಪ್ರಲಯಗಳಾಗುವವೋ, ಆ ಸದಾಶ್ರಯನೂ ಸತ್ಯನೂ ಪುರುಷಾರ್ಥಗಳ ಮುಖ್ಯ ಫಲ ಸ್ವರೂಪನೂ ಜ್ಞಾನಪ್ರವಾಹನೂ ಆದ ದತ್ತಾತ್ರೇಯನು ಸಂತೋಷದಿಂದ ವಿಹರಿಸುತ್ತಾ ಜಯಿಸುತ್ತಿರುವನು.

**ಹರೀಶಬ್ರಹ್ಮಾಣಃ ಪದಕಮಲಪೂಜಾಂ ವಿದಧತೋ**
**ಜಗದ್ರಕ್ಷಾಶಿಕ್ಷಾಜನನಕರಣೇ ತೇ ಹ್ಯಧಿಕೃತಾಃ ।**
**ಅಭೂವನ್ ಇಂದ್ರಾದ್ಯಾ ಹರಿದಧಿಪತಾಂ ದೇವಮುನಯಃ**
**ಪರಂ ತತ್ತ್ವಂ ಪ್ರಾಪುಃ ಶಶಿದಿನಕರೌ ಜ್ಯೋತಿರಮಲಮ್ ॥ ೨ ॥**

೨. (ದತ್ತಾತ್ರೇಯನ) ಪಾದಪದ್ಮಗಳನ್ನು ಪೂಜಿಸಿ ಹರಿ, ಹರ, ಬ್ರಹ್ಮರುಗಳು ಜಗತ್ತಿನ ರಕ್ಷಣೆ, ಸಂಹಾರ, ಸೃಷ್ಟಿಗಳೆಂಬ ಕಾರ್ಯಗಳನ್ನು ನಿರ್ವಹಿಸುವ ಅಧಿಕಾರಸ್ಥಾನಗಳಲ್ಲಿ ನಿಯಮಿತರಾದರು. ಇಂದ್ರಾದಿದೇವತೆಗಳು ದಿಕ್ಕುಗಳಿಗೆ ಒಡೆಯರಾದರು. ದೇವಋಷಿಗಳು ಪರಮತತ್ತ್ವವನ್ನೇ ಪಡೆದುಕೊಂಡರು. ಸೂರ್ಯಚಂದ್ರರು ಜಗತ್ತನ್ನು ಬೆಳಗುವವರಾಗಿ ನಿರ್ಮಲಪ್ರಕಾಶರೂಪರಾದರು.

**ಪರಂ ಜ್ಯೋತಿರ್ಮೂರ್ತೇ ತವ ರುಚಿರತೇಜಃಕಲರವಾದ್**
**ಜಗದ್ವ್ಯಾಪ್ಯೇದಾನೀಂ ತಪನಶಶಿತಾರಾಹುತಭುಜಃ ।**
**ಮಹಾತೇಜಃಪುಂಜಾಃ ಸಕಲಜಗದಾರಾಧ್ಯಚರಿತಾಃ**
**ಚರಂತ್ಯೇವಂ ಲೋಕಾನ್ ನತಜನಮನೋಽಭೀಷ್ಟಫಲದಾಃ ॥ ೩ ॥**

೩. ಎಲೈ ಜ್ಯೋತಿರ್ಮೂರ್ತಿಯೆ, ನಿನ್ನ ಮಂಗಳಕರವಾದ ಪರಮತೇಜಸ್ಸಿನ ಅಲ್ಪ ಅಂಶಮಾತ್ರದಿಂದ ಸೂರ್ಯ, ಚಂದ್ರ, ನಕ್ಷತ್ರಗಳು, ಅಗ್ನಿ- ಮೊದಲಾದವರು ಹೆಚ್ಚಿನ ಬೆಳಕಿನ ಗನಿಗಳಾಗಿ, ಎಲ್ಲಾ ಜನರಿಂದಲೂ ಪೂಜಿಸಲ್ಪಡುವ ಚಾರಿತ್ರ್ಯವುಳ್ಳವರೂ ನಮಸ್ಕರಿಸಿದವರ ಮನೋರಥಗಳನ್ನು ಈಡೇರಿಸುವವರೂ ಆಗಿ ಈಗ ಪ್ರಪಂಚವನ್ನೆಲ್ಲ ವ್ಯಾಪಿಸಿಕೊಂಡು ಎಲ್ಲೆಲ್ಲೂ ಸಂಚರಿಸುತ್ತಿರುವರು.

**ಭವನ್ಮಾಯಾರೂಪಂ ಜಗದಖಿಲಜೀವಾತ್ಮಕಮಿದಂ**
**ಭವದ್ರೂಪಂ ಪ್ರಾಹುರ್ನಿಖಿಲನಿಗಮಾಂತಃಶ್ರುತಿಚಯಾಃ ।**
**ತ್ವಯಾ ಸೃಷ್ಟಂ ಚಾದೌ ಹೃತಮವಿತಮೇತತ್ತದಧುನಾ**
**ಪ್ರಭಾವಂ ತೇ ವೇತ್ತುಂ ಪ್ರಭವತಿ ಜನಃ ಕೋಽವನಿತಲೇ ॥೪॥**

೪. ನಿನ್ನ ಮಾಯಾರೂಪವೇ ಜಗತ್ತಾಗಿದೆ. ಸೃಷ್ಟಿಯಲ್ಲಿನ ಎಲ್ಲಾ ಜೀವರುಗಳ ರೂಪವೂ ನಿನ್ನ ರೂಪವೇ- ಎಂದು ಎಲ್ಲಾ ವೇದೋಪನಿಷತ್ತುಗಳ ಸಮೂಹವೂ ಹೇಳುತ್ತಿದೆ. ಆದಿಯಲ್ಲಿ ಬ್ರಹ್ಮಾಂಡವನ್ನು ನೀನೇ ಸೃಷ್ಟಿಸಿ ಅನಂತರ ಕಾಪಾಡಿ (ಪ್ರಲಯದಲ್ಲಿ) ಉಪಸಂಹಾರಮಾಡಿದ್ದೀಯೆ. ಈಗ ಭೂಮಂಡಲದಲ್ಲಿ ಈ ನಿನ್ನ ಪ್ರಭಾವವನ್ನು ತಿಳಿಯಲು ಯಾರುತಾನೆ ಸಮರ್ಥರಿದ್ದಾರು?

**ಕೃಪಾಸಿಂಧೋ ತಾವಜ್ಜನುರಜನನಸ್ಥಾಪ್ಯಕಥಿತೇ**
**ಜಗದ್ರಕ್ಷಾದೀಕ್ಷಾ ಭವತಿ ಖಲು ನೋ ಚೇತ್ ಕಥಮಿದಮ್ ।**
**ಅನೀಹಸ್ಯಾಕರ್ತುಸ್ತವ ಜಗತಿ ಕರ್ಮೋಽಪಕೃತಯೇ**
**ಪ್ರಮಾಣೀಕರ್ತುಂ ವಾ ಸ್ವಕೃತನಿಗಮಾರ್ಥಾನಿತಿ ಮತಿಃ ॥೫॥**

೫. ಎಲೈ ಕೃಪಾಸಮುದ್ರನೆ, ಹುಟ್ಟೆಂಬ ವಿಕಾರವು ಎಲ್ಲಿಯೂ ಹೇಳಲ್ಪಡದಿರುವ ನಿನ್ನ ಹುಟ್ಟಾದರೋ ಜಗತ್ತಿನ ರಕ್ಷಣೆಯೆಂಬ ದೀಕ್ಷೆಯನ್ನು (ಹೊರೆಯನ್ನು) ನೀನು ಧರಿಸಿರುವದರ ಕುರುಹಾಗಿದೆ. ಹಾಗಿಲ್ಲದಿದ್ದರೆ ಏನೊಂದೂ ಕಾಮವಿಲ್ಲದ, ಅಕರ್ತೃವಾದ ನಿನಗೆ ಜನ್ಮಕರ್ಮಗಳಾದರೂ ಏಕೆ ಬೇಕು? ಆದ್ದರಿಂದ ನೀನೇ ಹೊರಪಡಿಸಿರುವ ವೇದಾರ್ಥಗಳನ್ನು ಪ್ರಮಾಣಗಳೆಂದು ಸಿದ್ಧಗೊಳಿಸುವದಕ್ಕೂ ಜಗತ್ತಿನ ಉದ್ಧಾರಕ್ಕೂ ನೀನು ದೇಹಧಾರಣೆಯನ್ನು ಮಾಡಿರುವೆ- ಎಂದು ನನ್ನ ಅಭಿಪ್ರಾಯವು.

**ಮಹಾವಿದ್ಯಾರೂಪೇ ಭಗವತಿ ನಿಬದ್ಧತ್ವಮುಚಿತಂ**
**ಹೃದಾ ವಾಚಾಽಗಮ್ಯೇ ಪರಮಪಿ ವಿಮುಹ್ಯಂತಿ ಕವಯಃ ।**
**ಅವಿದ್ಯಾತೀತಃ ಕಿಂ ಯದಿ ಗುಣವಿಹೀನೋಽಪಿ ಗುಣವಾನ್**
**ಅವಿದ್ಯಾಯುಕ್ತೋಽಯಂ ತ್ವಿತಿ ವದತಿ ಮಾಯಾಮುಷಿತಧೀಃ ॥೬॥**

೬. ಮಹಾವಿದ್ಯಾಸ್ವರೂಪನಾದ ನೀನು (ಜ್ಞಾನಿಗಳ) ಹೃದಯದಲ್ಲಿ ಕಟ್ಟಿ ಹಾಕಲ್ಪಟ್ಟಿರುವದು ಯೋಗ್ಯವೇ ಆಗಿದೆ. ಏಕೆಂದರೆ ಮಾತಿನಿಂದ ತಿಳಿಯಲಸಾಧ್ಯನಾದ ನಿನ್ನ ವಿಷಯದಲ್ಲಿ ಕವಿಗಳೂ ಹೆಚ್ಚಿನ ಮೋಹವನ್ನೇ ಹೊಂದಿರುತ್ತಾರೆ. ಹೇಗೆಂದರೆ : ನೀನು ಅವಿದ್ಯೆಯನ್ನು ಮೀರಿದವನೊ, ಅವಿದ್ಯೆಯಿಂದ ಕೂಡಿದವನೊ, ಗುಣ ರಹಿತನೊ, ಸಗುಣನೊ- ಎಂದು ಮಾಯೆಯಿಂದ ಅಪಹರಿಸಲ್ಪಟ್ಟ ಬುದ್ಧಿಯವನು ಹೇಳುತ್ತಾನಲ್ಲವೆ?

**ಭವಾನಾದೌ ಯಾದೋನರಮೃಗಮುಖಶ್ವಾದಿಕತನೂಃ**
**ವಿಧತ್ತೇ ಲೋಕಾನಾಮವನಿಕೃತಿಹೇತೋರನು ಯುಗಮ್ ।**
**ವಿಶುದ್ಧಸ್ತ್ವಂ ಲೀಲಾನರವಪುರಿದಾನೀಮಟಸಿ ಗಾಂ**
**ಪವಿತ್ರೀಕರ್ತುಂ ವಾ ಪರಿಜನನಿವಾಸಾಂಗಣತಲಮ್ ॥ ೭ ॥**

೭. ಪೂಜ್ಯನಾದ ನೀನು ಸೃಷ್ಟಿಯ ಆದಿಯಲ್ಲಿ ನೀರಿನಲ್ಲಿ (ವಾಸಿಸುವ ಮತ್ಸ್ಯಾದಿಗಳ) ಮತ್ತು ಮನುಷ್ಯ, ಮೃಗಗಳು, ನಾಯಿಯೇ- ಮುಂತಾದ ಶರೀರ ಗಳನ್ನು ಧರಿಸಿ ಲೋಕಗಳ ಪರಿಪಾಲನೆಗಾಗಿ ಪ್ರತಿಯುಗದಲ್ಲಿಯೂ ತೋರಿಕೊಳ್ಳು ತ್ತೀಯೆ. ಈಗಲಾದರೊ, ವಿಶುದ್ಧನಾದ ನೀನು ಲೀಲಾರೂಪವಾದ ಮಾನವಶರೀರ ವನ್ನು ಸ್ವೀಕರಿಸಿ (ಗುರುರೂಪದಿಂದ ಅವತರಿಸಿ) ಸೇವಕರಾದ ಜನರ ವಾಸಸ್ಥಾನಗಳ ಅಂಗಳವನ್ನು ಪವಿತ್ರಗೊಳಿಸುವದಕ್ಕಾಗಿಯೇ ಭೂಮಿಯಲ್ಲಿ ಸಂಚರಿಸುತ್ತಿರುವೆ.

**ಜಗದ್ರಕ್ಷಾರ್ಥಂ ವಾ ವಿಚರಿಸಿ ಜಗತ್ಯಾತ್ಮಜನತಾ**
**ಪರಿತ್ರಾಣಾಯಾದ್ಯಃ ಪರಮಪುರುಷೋಽಗಮ್ಯಚರಿತಃ ।**
**ಮೃಷಾಲೋಕೋ ಲೋಕೋ ವದತಿ ಮನುಜತ್ವಂ ತದಧುನಾ**
**ಯಯಾ ಶ್ರೀಕೃಷ್ಣತ್ವಂ ಯದವಬ್ರುವತೇ ಮೂಢಮತಯಃ ॥ ೮ ॥**

೮. ಪರಮಪುರುಷನೂ ತಿಳಿಯಲಸದಳವಾದ ಚರಿತ್ರೆಯುಳ್ಳವನೂ ಆದ ನೀನು ಜಗತ್ತಿನ ಹಾಗೂ ನಿನ್ನ ಭಕ್ತರ ಪರಿಪಾಲನೆಗಾಗಿ ಲೋಕದಲ್ಲಿ ಸಂಚರಿಸುತ್ತಿರುವೆ. ಹೀಗಿದ್ದರೂ ಸುಳ್ಳಾದ ತಿಳಿವಳಿಕೆಯುಳ್ಳ ಜನವು ನಿನಗೆ- ಹೇಗೆ ಮೂಢಮತಿಗಳು ಶ್ರೀಕೃಷ್ಣನ ಕೃಷ್ಣತ್ವವನ್ನು ತಿಳಿಯದೇ ಅವನನ್ನು ಮನುಷ್ಯನೆಂದೇ ಭಾವಿಸಿದ್ದರೋ ಹಾಗೆ- ಮಾನುಷತ್ವವನ್ನು ಆರೋಪಿಸಿರುವರು.

**ಮಹಾಯೋಗಾಧೀಶೈರವಿದಿತಮಹಾಯೋಗಚತುರಃ**
**ಕಥಂ ಜಾನಂತಿ ತ್ವಾಂ ಕುಟಿಲಮತಯೋ ಮಾದೃಶಜನಾಃ ।**
**ತಥಾಪಿ ತ್ವಾಂ ಜಾನೇ ತವ ಪದಯುಗಾಂಭೋಜಭಜನಾತ್**
**ನ ಚೇತ್ ತ್ವತ್ಪಾದಾಬ್ಜ ಸ್ಮೃತಿವಿಷಯವಾಣೀ ಕಥಮಭೂತ್ ॥ ೯ ॥**

೯. ಮಹಾಯೋಗೀಶ್ವರರುಗಳಿಂದಲೂ ತಿಳಿಯಲಾರದ ಮಹಾಯೋಗಚತುರ ನಾದ ನಿನ್ನನ್ನು ವಕ್ರಬುದ್ಧಿಯುಳ್ಳ ನನ್ನಂಥ ಜನರು ಹೇಗೆತಾನೆ ಅರಿತಾರು? ಆದರೂ

ನಾನು ನಿನ್ನ ಪಾದಸೇವೆಯನ್ನು ಮಾಡಿದ್ದರ ಪ್ರಭಾವದಿಂದ ನಿನ್ನನ್ನು ಬಲ್ಲೆನು. ಹಾಗಿಲ್ಲದಿದ್ದರೆ ನಿನ್ನ ಪಾದಾರವಿಂದಗಳ ನೆನಪಿನ ಸ್ವರೂಪವಾದ ಈ ಸ್ತೋತ್ರ ರೂಪವಾದ ಮಾತು ಹೇಗೆತಾನೆ ನನ್ನಿಂದ ಹೊರಬರಲು ಸಾಧ್ಯವಾಗುತ್ತಿತ್ತು?

**ಅಪಾರೇ ಸಂಸಾರೇ ಸುತಹಿತಕಲತ್ರಾದಿಭರಣಾ -**
**ದ್ಯುಪಾದೌ ಮಗ್ನಾಸ್ತತ್ತರಣಕರಣೋಪಾಯರಹಿತಾಃ ।**
**ಪತಂತಿ ತ್ವತ್ಪಾದಾಂಬುಜಯುಗಲಸೇವಾಸು ವಿಮುಖಾಃ**
**ನರಾಃ ಪಾಪಾತ್ಮಾನಃ ಪ್ರವರನರಕೇ ಶೋಕನಿಲಯೇ ॥೧೦॥**

೧೦. ದಾಟಲಸಾಧ್ಯವಾದ ಈ ಸಂಸಾರದಲ್ಲಿ ಮಗ, ನೆಂಟರು, ಹೆಂಡತಿ- ಮುಂತಾದವರನ್ನು ಕಾಪಾಡುವದೆಂಬ ಬಂಧನದಲ್ಲಿ ಸಿಕ್ಕಿಕೊಂಡು ಅದನ್ನು ದಾಟಲು ಏನೊಂದು ಉಪಾಯವನ್ನೂ ಕಾಣದೆ ಪಾಪಾತ್ಮರಾದ ಮನುಷ್ಯರು ನಿನ್ನ ಪಾದ ಯುಗಳಗಳ ಸೇವೆಯಲ್ಲಿಯೂ ವಿಮುಖರಾಗಿ ಎಂದರೆ ಚರಣಸೇವೆಯನ್ನೂ ಕೈಗೊಳ್ಳದೆ ದುಃಖದ ಮನೆಯಾದ ಹೆಚ್ಚಿನ ನರಕದಲ್ಲಿ ಬೀಳುವರು.

**ಸುಧಾಸಿಂಧೌ ದ್ವೀಪೇ ಕನಕಲತಿಕೇ ಕಲ್ಪಕವನೇ**
**ವಿತಾನೈರ್ಮುಕ್ತಾಢ್ಯೈಃ ನವಮಣಿಮಯೇ ಮಂಡಪವರೇ ।**
**ಅಶೇಷೈರ್ಮಾಣಿಕ್ಯೈಃ ಖಚಿತಹರಿಪೀಠೇಽಬ್ಜಕುಹರೇ**
**ಹುತಾಶಾರೇ ಧ್ಯಾಯೇತ್ತವ ಪರಮಮೂರ್ತಿಂ ನಿಖಿಲದಾಮ್ ॥ ೧೧ ॥**

೧೧. ಅಮೃತಸಮುದ್ರದ ನಡುವೆ ಇರುವ ಚಿನ್ನದ ಬಳ್ಳಿಗಳಿಂದ ಕೂಡಿದ ಕಲ್ಪ ವೃಕ್ಷವನದಲ್ಲಿ, ಮುತ್ತುಗಳಿಂದ ಹೆಣೆಯಲ್ಪಟ್ಟ ಹೊಸದಾದ ರತ್ನಖಚಿತ ಮಂಟಪದಲ್ಲಿ, ಎಲ್ಲಾ ರತ್ನಗಳಿಂದಲೂ ಕೆತ್ತಿ ಮೆಟ್ಟಲ್ಪಟ್ಟ ಸಿಂಹಾಸನದಲ್ಲಿ ತಾವರೆಯ ದಂಟಿನ ಆಕಾರದಲ್ಲಿರುವ ಜ್ಯೋತಿಯ ಶಿಖೆಯಲ್ಲಿ, ನಿನ್ನ ಪರಮವಾದ, ಎಲ್ಲಾ ಇಷ್ಟಾರ್ಥ ಗಳನ್ನೂ ಉಂಟುಮಾಡುವ, ಆಕಾರವನ್ನು (ಸಾಧಕನು) ಧ್ಯಾನಿಸಬೇಕು.

**ಧರಾಧಾರಾಧಾರೇ ಹುತವಹಪುರೇಽಧೀಶಗಣಪಂ**
**ವಿಧಿಂ ಶ್ರೀಶೇಷೌ ಪಾನಲಪವನವ್ಯೋಮಾನಿ ಹೃದಯೇ ।**
**ಯುತೌ ಜೀವಾತ್ಮಾನಾವಧಿಕಮವಮತ್ಯಾ[1] ಪ್ರವಿಶತೇ**
**ವಿಧತ್ತೇ ಜಾಯಾತ್ವಂ ಪರಕಲಿತವಾಮೇನ ವಪುಷಾ ॥ ೧೨ ॥**

೧೨. ಭೂಮಿಗೆ ಆಧಾರವಾಗಿರುವ ಅಗ್ನಿಪುರದಲ್ಲಿ - ಎಂದರೆ ನಾಭಿಯಲ್ಲಿ ಅದಕ್ಕೆ (ಮೂಲಾಧಾರಕ್ಕೆ) ಅಧಿಪತಿಯಾದ ಗಣೇಶನನ್ನೂ ಬ್ರಹ್ಮನನ್ನೂ ಶಕ್ತಿಯನ್ನೂ

1. ಅವಗತ್ಯಾ ಎಂದು ಪಾಠವಿದ್ದರೆ ಚೆನ್ನಾಗಿ ಹೊಂದುತ್ತದೆ. ಈ ಶ್ಲೋಕದ ಅರ್ಥವು ಸರಿಯಾಗಿ ತಿಳಿಯಲಿಲ್ಲ.

ಆದಿಶೇಷನನ್ನೂ ಚಿಂತಿಸಬೇಕು. ಅಗ್ನಿ, ವಾಯು, ಆಕಾಶತತ್ತ್ವಗಳನ್ನು ಹೃದಯದಲ್ಲಿ ಚಿಂತಿಸ ಬೇಕು. ಹೆಚ್ಚಿನ ತಿಳಿವಳಿಕೆಯಿಂದ ಶರೀರವನ್ನು ಹೊಕ್ಕಿರುವ ಜೀವಾತ್ಮ ಪರಮಾತ್ಮರುಗಳು ಒಂದುಗೂಡಿರುವಲ್ಲಿ ಪರಮೇಶ್ವರನ ಎಡಭಾಗವನ್ನಾಶ್ರಯಿಸಿರುವ ಪಾರ್ವತಿಯಂತೆ ಜೀವನು ಆಧೀನಭಾವವನ್ನು ಹೊಂದಿರುವನು. ಹೀಗೆಂದು ನಿನ್ನ ತತ್ತ್ವವನ್ನು ಸಾಧಕನು ಚಿಂತಿಸಬೇಕು.

**ಸಹಸ್ರಾರೇ ನೀರೇರುಹಿ ಸಕಲಶೀತಾಂಶುಲಲಿತೇ**
**ಸಹಂಸೇ ಹಂಸಂ ಯಃ ಸ್ಫುಟಮಪಿ ಭವಂತಂ ಕಲಯತೇ ।**
**ಸುಷುಮ್ನಾವರ್ತಿನ್ಯಾಂ ತವ ಚರಣಪೀಠೇಂದುಸುಧಯಾ -**
**ಪ್ಲುತೋ ಭಿತ್ವಾ ಗ್ರಂಥಿತ್ರಯಮಮೃತರೂಪೋ ವಿಚರತಿ ॥೧೩॥**

೧೩. ಕಲೆಯಿಂದ ಕೂಡಿದ ಚಂದ್ರನಿಂದ ಸಮೇತವಾದ ಹಂಸಯುಕ್ತವಾದ ಸಹಸ್ರಾರವೆಂಬ ಕಮಲದಲ್ಲಿ ಸ್ಫುಟವಾಗಿ ಕಾಣಿಸಿಕೊಳ್ಳುವ ನಿನ್ನನ್ನು ಯಾವನು ಧ್ಯಾನಿಸುವನೋ, ಅವನು ಸುಷುಮ್ನಾನಾಡಿಯಲ್ಲಿರುವ ನಿನ್ನ ಪಾದಗಳ ಪೀಠವೆಂಬ ಚಂದ್ರನಿಂದ ಹೊರಬಂದ ಅಮೃತದಿಂದ ತೋಯಿಸಲ್ಪಟ್ಟು ಮೂರು ಗ್ರಂಥಿಗಳನ್ನೂ ಭೇದಿಸಿಕೊಂಡು ಅಮೃತರೂಪನಾಗಿ ಸಂಚರಿಸುವನು.

**ತವಾಧಾರೇ ಶಕ್ತಿಸ್ಥಿತಕಮಲಕರ್ಮಾದ್ಯಭಿವೃತೇ**
**ಮಹಾಪೀಠೇ ವೈಶ್ವಾನರಪುರಮರುದ್ಗೇಹನಿಲಯೇ ।**
**ಧರಾವ್ಯೋಮಾಕಲ್ಪೇ ಸುರಮುನಿಮಹೇಂದ್ರಾದ್ಯಭಿನುತಂ**
**ಮಹಾತೇಜೋರಾಶಿಂ ನಿಗಮನಿಲಯಂ ನೌಮಿ ಹೃದಯೇ ॥೧೪॥**

೧೪. ನಿನ್ನ ಆಸನರೂಪವಾದ, ಕರ್ಮಾದಿಗಳಿಂದ ಆವೃತವಾದ ಶಕ್ತಿಯೆಂಬ ಕಮಲದ ಮಹಾಪೀಠದಲ್ಲಿ ಭೂಮಿ, ಆಕಾಶಗಳಂತೆ ಇರುವ- ಅಗ್ನಿ ತತ್ತ್ವದಿಂದ ಸುತ್ತುವರೆದ, ವಾಯುಮಯವಾದ, ಮನೆಯ ಒಳಭಾಗದಲ್ಲಿ ದೇವತೆಗಳು, ಮುನಿಗಳು- ದೇವೇಂದ್ರಾದಿಗಳಿಂದ ನಮಸ್ಕರಿಸಲ್ಪಟ್ಟ ಮಹಾತೇಜಃಸ್ವರೂಪನೂ ವೇದಗಳ ಭಂಡಾರವೂ ಆದ ನಿನ್ನನ್ನು ಹೃದಯದಲ್ಲಿಯೇ ನಮಸ್ಕರಿಸುವೆನು.

**ಭವತ್ಪಾದಾಂಭೋಜಂ ಭವಜಲಧಿಪೋತಂ ಭಜತಿ ಯೋ**
**ಮಹಾಸಂಸಾರಾಬ್ಧಿಂ ತರತಿ ತರತೀತ್ಯೇವ ನಿಗಮಃ ।**
**ಇಹಾಮುತ್ರ ತ್ರಾತುಂ ತವ ಚರಣಮೇವಾತ್ಮಶರಣಂ**
**ಭವೇದ್ಧೀರೋವಾಹಂಕೃತಿಪರಮನಸ್ಕೋಽಯಮಧುನಾ ॥೧೫॥**

೧೫. ಸಂಸಾರಸಮುದ್ರದಲ್ಲಿ ಹಡಗಿನಂತಿರುವ ನಿನ್ನ ಪಾದಕಮಲವನ್ನು ಯಾವನು ಸೇವಿಸುವನೋ-ಅವನು ಆ ಮಹಾಸಂಸಾರಸಾಗರವನ್ನು ದಾಟಿಯೇ ದಾಟುತ್ತಾನೆ- ಎಂದೇ ವೇದವು ತಿಳಿಸುತ್ತಿದೆ. ಹಿಂದೆ ಅಹಂಕಾರಯುಕ್ತನಾಗಿದ್ದವನು

ಈಗ ಇಹಪರಗಳಲ್ಲಿ ಸಿದ್ಧಿಯನ್ನು ಹೊಂದಲು ತನಗೆ ನಿನ್ನ ಚರಣವೇ ಶರಣವು-ಎಂದು ತಿಳಿದಾಗ ಧೀರನೇ ಆಗುವನು.

**ಯಥಾ ದಾರುಷ್ವಗ್ನಿರ್ನಿವಸತಿ ತಥಾ ದೇಹನಿಕರೇ**
**ಪ್ರವಿಶ್ಯ ತ್ವಂ ಚೈಕೋ ಬಹುವಿಧ ಇವಾಭಾಸಿ ತು ತಥಾ ।**
**ಚಲನ್ನೀರೇ ಚಂದ್ರಃ ಶತವಿಧ ಇವಾಭಾತಿ ಗುಣತೋ**
**ನ ಚೈತಚ್ಚಂದ್ರೇ ಸ್ಯಾನ್ನ ಶತವಿಧತಾ ನಾಪಿ ಚಪಲಮ್ ॥೧೬॥**

೧೬. ಹೇಗೆ ಕಟ್ಟಿಗೆಗಳಲ್ಲಿ ಬೆಂಕಿಯು ಇದ್ದುಕೊಂಡಿರುವದೋ ಹಾಗೆ ದೇಹಗಳಲ್ಲಿ ನೀನು ಪ್ರವೇಶಮಾಡಿದವನಾಗಿ, ಸ್ವತಃ ಒಬ್ಬನೇ ಆಗಿರುವೆಯಾದರೂ ಬಹುವಾಗಿ ತೋರಿಕೊಂಡಿರುವೆ. ಹೇಗೆಂದರೆ : ಅಳ್ಳಾಡುತ್ತಿರುವ ನೀರಿನಲ್ಲಿ ಅಲೆಗಳ ಬಡಿತದಿಂದ ನೂರಾರು ಚಂದ್ರರು ತೋರಿದರೂ ನಿಜವಾದ ಚಂದ್ರನಲ್ಲಿ ಆ ಭೇದವಾಗಲಿ, ಚಾಂಚಲ್ಯವಾಗಲಿ ಇರುವದಿಲ್ಲ.

**ದರಿದ್ರೋ ವಾ ಮೂಢಃ ಕಠಿನಹೃದಯೋ ವಾಪಿ ಭವತಾಂ**
**ದಯಾಪಾತ್ರಂ ಸ್ಯಾಚ್ಚೇದ್ವಜತಿ ಮಹತಾಮಪ್ಯಧಿಕತಾಮ್ ।**
**ನ ವಿದ್ಯಾ ರೂಪಂ ವಾ ನ ಕುಲಮಪಿ ವಾ ಕಾರಣಮಭೂತ್**
**ಮಹತ್ವೇ ಸೇವೈಕಾ ತವ ಪದಯುಗಾಂಭೋಜಕಲನಾ ॥೧೭॥**

೧೭. ದರಿದ್ರನಾಗಲಿ, ದಡ್ಡನಾಗಲಿ, ಕ್ರೂರಹೃದಯನಾಗಲಿ ನಿನ್ನ ದಯೆಗೆ ಪಾತ್ರನಾದರೆ ಅವನು ಮಹಾತ್ಮರಿಗಿಂತಲೂ ಹೆಚ್ಚಿನವನಾಗಿಬಿಡುವನು. ನಿನ್ನ ಪಾದಾರವಿಂದಗಳ ಬಳಿಸಾರುವಿಕೆ ಮತ್ತು ಸೇವೆಯೊಂದೇ ಮಹಾಪುರುಷನಾಗಲು ಕಾರಣವಾಗಿರುವದೇ ಹೊರತು ವಿದ್ಯೆಯಾಗಲಿ, ರೂಪವಾಗಲಿ, ಕುಲವಾಗಲಿ ಅಲ್ಲ.

**ನ ತೇ ಕಾರುಣ್ಯಂ ಸ್ಯಾತ್ ಸಕಲಗುಣವಾನಪ್ಯಗುಣವಾನ್**
**ಭವತ್ಕಾರುಣ್ಯಂ ಸ್ಯಾದಗುಣಗಣವೋ ವೋರುಗುಣವಾನ್ ।**
**ಯಥಾ ಪತ್ಯೌ ರಕ್ತೇ ಯದಪಿ ಚ ವಿರಕ್ತೇ ಚ ಯುವತೌ**
**ವೃಥಾ ಸೌಂದರ್ಯಂ ಸ್ಯಾತ್ ಸಕಲಮಪಿ ತೇಽನುಗ್ರಹವಶಾತ್ ॥೧೮॥**

೧೮. ನಿನ್ನ ದಯೆಯಿಲ್ಲದಿದ್ದರೆ ಎಲ್ಲಾ ಗುಣಗಳಿಂದ ಕೂಡಿದವನಾಗಿದ್ದರೂ ಗುಣವಂತನಲ್ಲದೆ ಹೋಗುವನು. ಆದರೆ ನಿನ್ನ ದಯೆಯಿದ್ದರೆ ಏನೂ ಗುಣಗಳಿಲ್ಲದವನೂ ಕೂಡ ತುಂಬ ಗುಣವುಳ್ಳವನಾಗುವನು. ಹೇಗೆಂದರೆ -ಗಂಡನು ಹೆಂಡತಿ

1. ಗಂಡನು ಪ್ರೀತಿಯುಳ್ಳವನಾಗಿದ್ದರೆ ಅದಕ್ಕಿಂತ ಹೆಂಡತಿಗೆ ಹೆಚ್ಚಿನದೇನೂ ಇಲ್ಲ. ಆಗ ಆಕೆಯು ಕುರೂಪಿಯೇ ಆಗಿದ್ದರೂ ಏನೂ ಚಿಂತೆಯಿಲ್ಲ. ಸೌಂದರ್ಯವು ಇದ್ದರೂ ಇಲ್ಲದಿದ್ದರೂ ಒಂದೇ. ಹಾಗೆಯೇ ಗಂಡನು ವಿರಕ್ತನಾದರೆ ಸೌಂದರ್ಯವತಿಯಾದ ಸ್ತ್ರೀಯಾದರೂ ಅದು ವ್ಯರ್ಥವೇ. ಅದರಂತೆ ದತ್ತನ ದಯೆಯಿಲ್ಲದಿದ್ದರೆ ಸದ್ಗುಣಗಳು ಇದ್ದರೂ ವ್ಯರ್ಥ. ದಯೆ ಇದ್ದರಂತೂ ಸದ್ಗುಣಗಳಿಂದಾಗಬೇಕಾದದ್ದೇನೂ ಇರುವದಿಲ್ಲ.

ಯಲ್ಲಿ ಆಸಕ್ತನಾಗಿರಲಿ, ವಿರಕ್ತನಾಗಿರಲಿ, ಆ ಸ್ತ್ರೀಯ ಸೌಂದರ್ಯವು ಹೇಗೆ ವ್ಯರ್ಥವೋ ಹಾಗೆ ಎಲ್ಲವೂ ನಿನ್ನ ಅನುಗ್ರಹದ ಅಧೀನವೇ ಆಗಿರುವದು.

**ಅನಾಥೇ ದೀನೇ ಮಯ್ಯಧಿಗತಭವತ್ಪಾದಶರಣೇ**
**ಶರಣ್ಯ ಬ್ರಹ್ಮಣ್ಯ ಪ್ರಥಿತಗುಣಸಿಂಧೋ ಕುರು ದಯಾಮ್ ।**
**ಮಹಾತೇಜೋವಾರ್ಧೇ ಸ್ವಸುಕೃತಮಹಿಮ್ನೈವ ಸತತಂ**
**ಪುರಾ ಪುಣ್ಯೈರ್ಹೀನಂ ಪುರುಷಮುಪಕುರ್ವಂತಿ ಕೃತಿನಃ ॥೧೯॥**

೧೯. ಎಲೈ ಶರಣ್ಯನೆ, ವೇದಪರಿಪಾಲಕನೆ, ಸುಪ್ರಸಿದ್ಧವಾದ ಗುಣಗಳ ಸಾಗರನೆ, ದೀನನೂ ದಿಕ್ಕಿಲ್ಲದವನೂ ಆದ, ನಿನ್ನ ಪಾದಗಳಿಗೇ ಬಳಿಸಾರಿ ಬಂದಿರುವ, ನನ್ನಲ್ಲಿ ದಯೆಯನ್ನು ಇಡು. ಎಲೈ ಮಹಾತೇಜೋಸಮುದ್ರನೆ, ತಾವೇ ಮಾಡಿದ ಪುಣ್ಯ ವಿಶೇಷಗಳಿಂದ ಕೂಡಿದ ಉದಾರಿಗಳಾದ ಜನರು ಹಿಂದೆ ಮಾಡಿದ ಪುಣ್ಯಗಳ ಬೆಂಬಲ ವಿಲ್ಲದ ದೀನಮನುಷ್ಯನನ್ನು ಉದ್ಧಾರಮಾಡುವರು.

**ಮಹಾಶ್ವೇತದ್ವೀಪೇಽಮರತರುಗಣಾತ್ಯಂತರುಚಿರೇ**
**ಮಣೇಃ ಪೀಠಾಂಭೋಜೇಽನಲಶಶಿಖಗಾಂತರ್ನಿವಸಿತಮ್ ।**
**ಗದಾಚಕ್ರಾಬ್ಜಾಸಿಪ್ರಸೃತಕರಪದ್ಮಂ ಮುರರಿಪುಂ**
**ಸ ಧನ್ಯಸ್ತ್ವಾಂ ಧ್ಯಾಯೇತ್ಪರತರಚಿದಾನಂದವಪುಷಮ್ ॥೨೦॥**

೨೦. ಮಹಾಶ್ವೇತದ್ವೀಪದಲ್ಲಿ ದೇವಲೋಕದ ವೃಕ್ಷಗಳ ಸಮೂಹದಿಂದ ಅತಿರಮಣೀಯವಾದ ಸ್ಥಳದಲ್ಲಿ, ರತ್ನದ ಕಮಲಪೀಠದಲ್ಲಿ ಅಗ್ನಿ, ಚಂದ್ರ, ಗರುಡನೇ ಮುಂತಾದ ದೇವತೆಗಳ ನಡುವೆ ನೆಲಸಿರುವ, ಗದೆ, ಚಕ್ರ, ಪದ್ಮ, ಕತ್ತಿಗಳನ್ನು ಹಿಡಿದು ಚಾಚಿದ ಕೈಗಳುಳ್ಳ, ಮುರನೆಂಬ ರಾಕ್ಷಸನನ್ನು ಸಂಹರಿಸಿದ ವಿಷ್ಣುವಿನ ಸ್ವರೂಪನೇ ಆದ ಚಿದಾನಂದಶರೀರವುಳ್ಳ ನಿನ್ನನ್ನು ಯಾವನು ಧ್ಯಾನಮಾಡುವನೋ ಅವನು ಧನ್ಯನು.

**ಲಸನ್ ಮೇರೋಃ ಶೃಂಗೇ ಸುರಮಣಿಮಯೇ ಕಲ್ಪಕತರು-**
**ಪ್ರಕೀರ್ಣೇ ವಾಕ್ ಪೀಠೇ ರವಿಶಶಿಕರಾಕೀರ್ಣಜಲಜೇ ।**
**ಸ್ಥಿತಂ ವಾಚಾಧೀಶೈರ್ನುತಮನುದಿನಂ ತ್ವಾಂ ಭಜತಿ ಯೋ**
**ಭವೇದ್ವಾಣೀಶಾನಾಮಪಿ ಗುರುರಜೇಯೋಽವನಿತಲೇ ॥೨೧॥**

೨೧. ವಿರಾಜಮಾನವಾದ ಮೇರುಪರ್ವತದ ಶಿಖರದಲ್ಲಿ, ಕಲ್ಪವೃಕ್ಷಗಳು ಹರಡಿ ಕೊಂಡಿರುವ ವನದಲ್ಲಿ ದೇವರತ್ನಗಳಿಂದ ನಿರ್ಮಿತವಾದ ಹಾಗೂ ಸೂರ್ಯ, ಚಂದ್ರರ ಕಿರಣಗಳಿಂದ ಆವೃತವಾದ ಪದ್ಮರೂಪವಾದ ವಾಕ್‌ಪೀಠದಲ್ಲಿ ಕುಳಿತಿರುವ, ಸದಾ ಕಾಲವೂ ಮಾತುಗಳಿಗೆ ಒಡೆಯರಾದ ಬೃಹಸ್ಪತಿಯೇ ಮುಂತಾದವರಿಂದ ನಮಸ್ಕರಿಸ ಲ್ಪಡುತ್ತಿರುವ ನಿನ್ನನ್ನು ಯಾವನು ಭಜಿಸುವನೋ ಅವನು ಭೂಮಂಡಲದಲ್ಲಿ ಎಲ್ಲಾ ಗುರುಗಳಿಗೂ ಗುರುವಾಗಿ ಅಜೇಯನಾಗುವನು.

**ಸಮುದ್ಯದ್ ಬಾಲಾರ್ಕಾಯುತನಿಭಶರೀರಂ ಮುನಿವರಂ**
**ಸ್ಥಿತಂ ಬೀಜೇ ಮಾರೇ ತ್ರಿದಶಪತಿಗೋಪಾತಿರುಚಿರೇ ।**
**ಹೃದಿ ತ್ವಾಂ ಯಃ ಪಶ್ಯನ್ ಸುಖಕರಮಿತಿ ಧ್ಯಾಯತಿ ಸದಾ**
**ಸ ಏವಾಹಂ ನೂನಂ ಸ ಭವತಿ ಜಗನ್ಮೋಹನಕರಃ ॥ ೨೨ ॥**

೨೨. ಇಂದ್ರಗೋಪಮಣಿಯಂತೆ ಅತಿಸುಂದರವಾದ ಕಾಮದೇವನ ಮೂಲ ರೂಪದಲ್ಲಿ ನೆಲಸಿರುವ, ಆಗತಾನೆ ಹುಟ್ಟುತ್ತಿರುವ ಹತ್ತು ಸಾವಿರ ಬಾಲಸೂರ್ಯರ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿದ ಶರೀರವುಳ್ಳ, ಮುನಿಶ್ರೇಷ್ಠನಾದ ನಿನ್ನನ್ನು ಹೃದಯದಲ್ಲಿ ಕಾಣುತ್ತಾ ಸುಖವುಂಟುಮಾಡುವವನೆಂದೂ, ಅವನೇ ನಾನು- ಎಂದೂ ಯಾವನು ಚಿಂತಿಸುವನೋ ಅವನು ಜಗತ್ತನ್ನೆಲ್ಲ ಮೋಹನ ಗೊಳಿಸುವವನೇ ಆಗುವನು.

**ನಿಧಿರ್ವಿಶ್ವೇಷಾಂ ತ್ವಂ ನಿಜಚರಣಪದ್ಮದ್ವಯವತಾಂ**
**ಶರಣ್ಯಶ್ಚಾರ್ಕಾಣಾಂ ಚಕಿತಹೃದಯಾನಾಮಭಯದಃ ।**
**ವರೇಣ್ಯಃ ಸಾಧೂನಾಂ ವರದ ಇತಿ ವಾ ಕಾಮಿತಧಿಯಾಂ**
**ಭವತ್ಸೇವಾ ಜಂತೋಃ ಸುರತರುಸಮಾನಾನುಫಲತಿ ॥ ೨೩ ॥**

೨೩. ನೀನು ಎಲ್ಲಾ ನಿಧಿಗಳಿಗೂ ನಿಧಿಯು. ಪಾದಕಮಲದ್ವಯವುಳ್ಳವರಿಗೆಲ್ಲ (ದೇವತೆಗಳಿಗೆಲ್ಲ) ಶರಣ್ಯನು.(ದ್ವಾದಶ) ಸೂರ್ಯರಿಗೆ (ಸೂರ್ಯನು.) ಹೆದರಿದ ಮನಸ್ಸುಳ್ಳವರಿಗೆ ಅಭಯಪ್ರದನು. ಸಾಧುಗಳಿಗೆ ಸಾಧುಶ್ರೇಷ್ಠನು. ಸಕಾಮರಿಗೆ ವರಪ್ರದನು. ಹೀಗೆ ಪ್ರಾಣಿಗಳೆಲ್ಲರಿಗೂ ನಿನ್ನ ಸೇವೆಯು ಕಲ್ಪವೃಕ್ಷಕ್ಕೆ ಸಮಾನವಾಗಿ ಫಲವನ್ನುಂಟು ಮಾಡುವದು.

**ಯಥಾ ವೈ ಪಾಂಚಾಲೀ ನಟತಿ ಕುಹಕೇಚ್ಛಾನುಸರಣಂ**
**ಕುಲಾಲೇನ ಭ್ರಾಂತಂ ಭ್ರಮತಿ ಚ ಸಕೃಚ್ಚಕ್ರಮನಿಶಮ್ ।**
**ತಥಾ ವಿಶ್ವಂ ಸರ್ವಂ ವಿಯತಿ ಮನವಶ್ಚಾನುಗುಣಿತಾಃ**
**ಸ್ವತಂತ್ರಃ ಕೋಽವಾಸ್ತೇ ವದ ಪರಸುರೇಶ ತ್ರಿಭುವನೇ ॥ ೨೪ ॥**

೨೪. ಹೇಗೆ ಗೊಂಬೆಯು ಸೂತ್ರಧಾರನ ಇಚ್ಛಾನುಸಾರವಾಗಿ ಕುಣಿಯುವದೋ, ಹೇಗೆ ಕುಂಬಾರನು ತಿರುಗಿಸಿದ ಗಾಲಿಯು ಒಂದೇಸಮನೆ ಯಾವಾಗಲೂ ತಿರುಗುವದೋ ಹಾಗೆ ಲೆಕ್ಕಮಾಡಲ್ಪಟ್ಟ ಮನುಗಳಿಂದ ಕೂಡಿದ ಈ ವಿಶ್ವವೆಲ್ಲವೂ ಆಕಾಶ (ರೂಪನಾದ ನಿನ್ನಲ್ಲಿ) ತಿರುಗುತ್ತಿರುವದು. ಪರಮನಾದ ದೇವೇಶನೆ, ತ್ರಿಲೋಕಗಳಲ್ಲಿ ಸ್ವತಂತ್ರನಾದವನು ಯಾವನಿದ್ದಾನೆ? ಹೇಳು.

**ತ್ವಯಾಜ್ಞಪ್ತೋ ಧಾತಾ ಸೃಜತಿ ಜಗದೀಶೋಽಪಿ ಹರತೇ**
**ಹರಿಃ ಪುಷ್ಣಾತೀದಂ ತಪತಿ ತಪನೋ ಯಾತಿ ಪವನಃ ।**
**ಧರಾಂ ಸಾದ್ರಿದ್ವೀಪಾಂ ವಹತಿ ಭುಜಗಾನಾಮಧಿಪತಿಃ**
**ಸುರಾಃ ಸರ್ವೇ ಯುಷ್ಮದ್ಭಯಪರವಶಾದ್ ಬಿಭ್ರತಿ ಬಲಿಮ್ ॥ ೨೫ ॥**

೨೫. ಎಲೈ ದೇವನೆ, ನಿನ್ನಿಂದ ಅಪ್ಪಣೆಮಾಡಲ್ಪಟ್ಟ ಬ್ರಹ್ಮನು ಸೃಷ್ಟಿಯನ್ನು ಮಾಡುವನು. ಈಶ್ವರನು ಸಂಹಾರವನ್ನು ಮಾಡುವನು. ಹರಿಯು (ಇದನ್ನು) ಕಾಪಾಡು ವನು. ಸೂರ್ಯನು (ನಿನ್ನ ಆದೇಶದಂತೆಯೇ) ಬೆಳಗುವನು. ವಾಯುವು ಬೀಸುತ್ತಾನೆ. ಹಾವುಗಳಿಗೆ ಒಡೆಯನಾದ ಆದಿಶೇಷನು ಬೆಟ್ಟ, ದ್ವೀಪಗಳಿಂದ ಕೂಡಿದ ಈ ಭೂಮಿಯನ್ನು ಹೊತ್ತಿರುವನು. ಹೀಗೆ ಎಲ್ಲಾ ದೇವತೆಗಳೂ ನಿಮ್ಮ ಭಯಕ್ಕೆ ವಶರಾಗಿ ನಿಮಗೆ ಪೂಜೆಯನ್ನು ಸಮರ್ಪಿಸುತ್ತಿರುವರು.

**ಸ್ವಯಂ ಮುಕ್ತೇಃ ಪೂರ್ವಂ ಸ್ವಕೃತಸುಕೃತಂ ಮಾಂ ನಯತಿ ಚೇದ್**
**ಭವಾಸತ್ತ್ವಂ ಕಾ ವಾ ತವ ಚರಣಪಂಕೇರುಹರತಿಃ ।**
**ಹರೇತ್ ಪಾಪೌಘಂ ನಃ ಶುಭಮಪಿ ದದಾತೀತಿ ಚ ಸದಾ**
**ಭವಂತ್ಯಾಶಾಬದ್ಧಾಃ ಸಕಲಮಪಿ ಧಾತುರ್ವಶಮಹೋ ॥ ೨೬ ॥**

೨೬. ತಾನು ಮುಕ್ತಿಯನ್ನು ಹೊಂದುವ ಮುಂಚೆಯೇ ತಾನು ಮಾಡಿರಬಹುದಾದ ಪುಣ್ಯವು (ಫಲದಕಡೆಗೆ) ನನ್ನನ್ನು ಎಳೆದೊಯ್ಯುವದಾದರೆ ಸಂಸಾರವು ಮಿಥ್ಯೆಯೆಂಬುದು ಹೇಗಾದೀತು? ಆದ್ದರಿಂದ ನಿನ್ನ ಪಾದಕಮಲಗಳಲ್ಲಿ ಭಕ್ತಿಯಿರುವಿಕೆಯು ಪಾಪ (ಪುಣ್ಯ)ಗಳ ಸಮೂಹವೆಲ್ಲವನ್ನೂ ಅಪಹರಿಸತಕ್ಕದ್ದಾಗಿರಬೇಕು. ನಮಗೆ (ಮುಕ್ತಿಯೆಂಬ) ಶುಭವನ್ನೂ ಉಂಟುಮಾಡತಕ್ಕದ್ದಾಗಿರಬೇಕು. ಹೀಗೆಂದು ನಾವು ಆಸೆಯಿಂದಿರುವೆವು. ಎಲ್ಲವೂ ಸೃಷ್ಟಿ ಕರ್ತನಾದ ನಿನ್ನ ಅಧೀನವಲ್ಲವೆ ?

**ಪ್ರಧಾನಂ ವಾ ಕರ್ಮ ಸ್ಥಿತಿಲಯವಿಸರ್ಗೇಽಲಮಿತಿ ಚೇತ್**
**ಜಡತ್ವಾತ್ ಕ್ಷೀಣತ್ವಾತ್ ಕಥಮುಚಿತಮೇತನ್ನಿಗದಿತುಮ್ ।**
**ತಯೋರೀಶೋಽನೀಶೇ ಭವತಿ ಜಗದುತ್ಪತ್ತಿವಿಲಯಾ -**
**ವನಾನ್ಯಾಸನ್ ಬ್ರಹ್ಮಾಸ್ತ್ವಿತಿ ವದತಿ ಶಾಸ್ತ್ರಂ ಶ್ರುತಿರಪಿ ॥ ೨೭ ॥**

೨೭. ಸಾಂಖ್ಯರು ಹೇಳುವ ಪ್ರಧಾನವಾಗಲಿ, ಮೀಮಾಂಸಕರು ಹೇಳುವ ಕರ್ಮವಾಗಲಿ, ಜಗತ್ತಿನ ಉತ್ಪತ್ತಿಸ್ಥಿತಿಲಯಗಳಿಗೆ ಸಮರ್ಥವೆಂದೂ ಅವೇ ಸಾಕೆಂದೂ ಹೇಳುವದಾದರೆ ಪ್ರಧಾನ (ಪ್ರಕೃತಿ)ವು ಜಡವಾದ್ದರಿಂದಲೂ ಕರ್ಮಗಳು ಸವೆದು ಹೋಗುವದರಿಂದಲೂ ಈ ಮಾತುಗಳು ಹೇಳಲು ಹೇಗೆತಾನೆ ಯೋಗ್ಯವಾದಾವು? ಆದ್ದರಿಂದ ಅವುಗಳಿಗೆ ಒಡೆಯನೂ ತನಗೆ ಯಾರೂ ಒಡೆಯರಿಲ್ಲದವನೂ ಆದ ನೀನು ಇದ್ದು ಕೊಂಡಿರಲಾಗಿ ಪ್ರಪಂಚದ ಉತ್ಪತ್ತಿಸ್ಥಿತಿಲಯಗಳುಂಟಾದವು. ವೇದರೂಪವಾದ ಶಾಸ್ತ್ರವೂ ಬ್ರಹ್ಮವೇ ಜಗತ್ಕಾರಣವೆಂದು ಹೇಳುತ್ತಿದೆ.

**ಭವತ್ಸೇವಾ ಜಂತೋರ್ಭವದವಹುತಾಶಾಂಬುದನಿಭಾ**
**ಮಹಾಮೋಹಧ್ವಾಂತಪ್ರತಿಹತಮತೇರ್ದೀಪಕಲಿಕಾ ।**
**ಸುಧಾವರ್ಷಿಣ್ಯೇಷಾ ವಿಹಿತಮನಸಾಂ ನಿರ್ಮಲನೃಣಾಂ**
**ಉಪಾಧ್ಯಾಯಾ ಬ್ರಹ್ಮಪ್ರವಚನವಿಧಾನೇಽತಿಚತುರಾ ॥ ೨೮ ॥**

೨೮. ಎಲೈ ಗುರುವೆ, ನಿನ್ನ ಸೇವೆಯು ಮಾನವನಿಗೆ ಸಂಸಾರವೆಂಬ ಕಾಡುಗಿಚ್ಚಿನ ಬೆಂಕಿಗೆ ಕಾರ್ಮೋಡದಂತೆ ಇರುವದು. ಅತಿ ಹೆಚ್ಚಿನ ಮೋಹವೆಂಬ (ಅಂತಃಕರಣದ) ಕತ್ತಲೆಯಿಂದ ಆವರಿಸಲ್ಪಟ್ಟ ಬುದ್ಧಿಯವನಿಗೆ ಅರಳಲಿರುವ ಮೊಗ್ಗಿನಂತಿರುವ ದೀಪವಾಗಿರುವದು. ಸಂಸ್ಕೃತವಾದ ಮನಸ್ಸುಳ್ಳ ನಿರ್ಮಲಚಿತ್ತದ ಮನುಷ್ಯರಿಗೆ ಈ ಸೇವೆಯೆಂಬುದು ಅಮೃತವನ್ನು ಸುರಿಸುತ್ತಿರುವದು. ಬ್ರಹ್ಮತತ್ತ್ವವನ್ನು ತಿಳಿಯಿಸಿಕೊಡುವ ಕ್ರಮದಲ್ಲಿ ಅತಿಬುದ್ಧಿವಂತಳಾದ ಉಪಾಧ್ಯಾಯಿನಿಯಂತಿರುವದು.

**ಅವಜ್ಞಾಯೈ ಲೋಕೇ ಬಹುಪರಿಚಿತಿಃ ಪ್ರಾಕೃತಮತಿಃ**
**ನಿರಸ್ಯಾಪೋ ಗಾಂಗಾಃ ಪ್ರಸರತಿ ಯಥಾ ನಾಲ್ಪತಟಿನೀಮ್ ।**
**ವಿಶುದ್ಧ್ಯರ್ಥಂ ತತ್ತ್ವಂ ಸಕಲಪುರುಷಾರ್ಥೈಕಫಲದಂ**
**ಭವಂತಂ ಹಿತ್ವಾಽನ್ಯಂ ಭಜತಿ ಗುರುಮಾಶಾಪರವಶಃ ॥ ೨೯ ॥**

೨೯. ಲೋಕದಲ್ಲಿ ಅತಿಹೆಚ್ಚಾದ ಸಲಿಗೆಯೂ ಪರಿಚಯವೂ ತಿರಸ್ಕಾರಕ್ಕೆ ಕಾರಣವಾಗುವವು. ಮೂಢಮನುಷ್ಯನು ಗಂಗೆಯ ಪವಿತ್ರವಾದ ಜಲವನ್ನು ಕೈಬಿಟ್ಟು ಪರಿಶುದ್ಧಿಗಾಗಿ ದೊಡ್ಡ ಸರೋವರವನ್ನಾಶ್ರಯಿಸುವನು.[1] ಹಾಗೆಯೇ ಎಲ್ಲಾ ಪುರುಷಾರ್ಥಗಳ ಮುಖ್ಯ ಫಲವಾದ ಮೋಕ್ಷವನ್ನೇ ಕೊಡುವ ಗುರುವಾದ ನಿನ್ನನ್ನು, ಬಿಟ್ಟು ಆಶೆಗೆ ತುತ್ತಾದ ಮಾನವನು ಬೇರೊಬ್ಬನನ್ನು ಆಶ್ರಯಿಸುತ್ತಿರುವನು.

**ನಿಮೀಲ್ಯಾಕ್ಷಿದ್ವಂದ್ವಂ ನಿಗಮನಿರತೋ ನಿಶ್ಚಲಮನಾಃ**
**ಪ್ರಕಾಶಂತಂ ದೃಷ್ಟ್ವಾ ತ್ರಿಭುವನಮುದಂ ಜ್ಞಾನಪರಯಾ ।**
**ಲಲಾಟೇಽಧೋಮುಖ್ಯಾ ರಸಜನಿತದಿವ್ಯಾಂಜನಧರಂ**
**ಸ್ಮರೇದ್ಯಸ್ತ್ವಾಂ ಯೋಗೀ ಭವತಿ ನಿಧಿಸಿದ್ಧೇರಧಿಪತಿಃ ॥ ೩೦ ॥**

೩೦. ಎರಡು ಕಣ್ಣುಗಳನ್ನೂ ಅರೆಮುಚ್ಚಿದವನಾಗಿ ಅಳ್ಳಾಡದ ಮನಸ್ಸಿನಿಂದ, ವೇದೋಕ್ತಧ್ಯಾನನಿರತನಾಗಿ ತನ್ನ ಜ್ಞಾನದೃಷ್ಟಿಯಿಂದ ಮೂರು ಲೋಕಗಳಿಗೂ ಆನಂದವನ್ನು ನೀಡುತ್ತಾ ಹಣೆಯಲ್ಲಿರುವ ಕಣ್ಣನ್ನು ಕೆಳಮುಖವಾಗಿ ಮಾಡಿ ಆನಂದರಸದಿಂದುಂಟಾದ ದಿವ್ಯವಾದ ಅಂಜನವನ್ನು ಧರಿಸಿರುವ ಪ್ರಕಾಶಮಾನವಾದ ಸ್ವರೂಪವುಳ್ಳ

---

1. ಗಂಗೆಯು ಎಲ್ಲಾ ಪಾಪಗಳನ್ನೂ ತೊಳೆಯುವ ಸಾಮರ್ಥ್ಯವುಳ್ಳವಳಾದರೂ ಯಾತ್ರಿಕನು ಬೇರೆಬೇರೆಯ ನದೀ ಸರೋವರಗಳಿಗೂ ಶುದ್ಧಿಗಾಗಿ ಹೋಗುವನು. ಇದೇ ಅವನ ಮೂಢತನವು.

ನಿನ್ನನ್ನು ಯಾವ ಯೋಗಿಯು ಧ್ಯಾನಿಸುತ್ತಾನೋ ಅವನು ಎಲ್ಲಾ ನಿಧಿಗಳ ಸಿದ್ಧಿಗೂ ಒಡೆಯನಾಗುತ್ತಾನೆ.

**ಮಹಾಮಾಯಾಮಂತ್ರಾಕ್ಷರಕಮಲಪದ್ಮಾಸನಯುತಂ.**
**ಮಹಾನೀಲಚ್ಛಾಯಂ ಮಧುಮುದಿತಯೋಗಿನ್ಯಭಿವೃತಮ್ ।**
**ದಧಾನಂ ಸದ್ಬೋಧಾಸಿತಕನಕಗೋಕ್ಷೀರತಿಲಕಂ**
**ಮುನೇ ಯಸ್ತ್ವಾಂ ಪಶ್ಯೇದ್ಭವತಿ ಸಕಲಾದೃಶ್ಯಕತನುಃ ॥ ೩೧ ॥**

೩೧. ಎಲೈ ಮುನಿಯೆ, ಮಹಾಮಾಯೆಯ ಮಂತ್ರಾಕ್ಷರಗಳಿಂದ ಕೂಡಿದ ಕಮಲಪೀಠದಲ್ಲಿ ಪದ್ಮಾಸನದಲ್ಲಿ ಕುಳಿತಿರುವ, ಇಂದ್ರನೀಲಮಣಿಯ ಕಾಂತಿಯುಳ್ಳ ಶರೀರದಿಂದ ಕೂಡಿದ, ಮಧುಪಾನದಿಂದ ಸಂತುಷ್ಟರಾದ ಯೋಗಿನೀಗಣಗಳಿಂದ ಸುತ್ತುವರೆಯಲ್ಪಟ್ಟ ಮತ್ತು ನಿಜವಾದ ಜ್ಞಾನವೆಂಬ ಬಿಳುಪಾದ ಹಾಗೂ ಚಿನ್ನ, ಹಸುವಿನ ಹಾಲಿನಂತೆ ಹಳದಿಮಿಶ್ರವಾದ ತಿಲಕದಿಂದ ಹಣೆಯಲ್ಲಿ ಒಪ್ಪುವ, ನಿನ್ನನ್ನು ಯಾವನು ಕಾಣುವನೋ ಅವನು ಎಲ್ಲರಿಗೂ ಅದೃಶ್ಯವಾಗುವಂಥ (ಸೂಕ್ಷ್ಮ) ಶರೀರವುಳ್ಳವನಾಗುವನು.

**ಸುಧಾಧಾರೇ ಹೇತೌ ಸಕಲಜಗತಾಂ ಸ್ವರ್ಣಕಲಿತೇ**
**ಸಿತಾಂಭೋಜೇ ತೇಜೋಽಧಿಕತಪನಬಿಭ್ರನ್ ಶ್ರುತಿತನುಮ್ ।**
**ಮಣಿಪ್ರೋತೇ ಪೀಠೇ ನಿಖಿಲಸುರಬೃಂದೈಃ ಪರಿವೃತೇ**
**ಸ್ಥಿತಂ ತ್ವಾಮಾರೋಗ್ಯಂ ಸ್ಮರತಿ ಹೃದಿ ತಸ್ಯಾಮೃತಮಯಮ್ ॥ ೩೨ ॥**

೩೨. ಸಕಲಪ್ರಪಂಚಕ್ಕೂ ಆಧಾರವಾದ ಅಮೃತವೆಂಬ ಕಾರಣರೂಪವಾದ ಬಿಳಿಯ ತಾವರೆಯಲ್ಲಿ ಸೂರ್ಯನನ್ನೂ ಮೀರಿದ ತೇಜಸ್ಸಿನಿಂದ ವೇದಮಯವಾದ ಶರೀರವನ್ನು ಧರಿಸಿ ಕುಳಿತಿರುವ, ಹಾಗೂ ಮಣಿಗಳಿಂದ ಹೆಣೆಯಲ್ಪಟ್ಟ ಪೀಠದಲ್ಲಿ ಸಮಸ್ತದೇವತೆಗಳ ಗುಂಪಿನಿಂದ ಸುತ್ತುವರೆಯಲ್ಪಟ್ಟು ಆಸೀನನಾಗಿರುವ, ಮತ್ತು ಅಮೃತಮಯವಾದ ಆರೋಗ್ಯವನ್ನು ಸೂಸುತ್ತಿರುವ ನಿನ್ನನ್ನು ಹೃದಯದಲ್ಲಿ ಸ್ಮರಿಸುವವನು ತಾನೂ ಅಮೃತಮಯನೇ ಆಗುವನು.

**ಪರತ್ರಾದಾತಾ ಚೇದ್ಭವತಿ ನ ದದಾತ್ಯೈಹಿಕಸುಖಂ**
**ದದಾತ್ಯೇತತ್ ಸೌಖ್ಯಂ ನ ವಿತರತಿ ಚಾಮುಷ್ಮಿಕಸುಖಮ್ ।**
**ಭವತ್ಸೇವಾ ಜಂತೋರಿಹಪರಸುಖಪ್ರಾಭಯಕರೀ**
**ಸುರಾಣಾಮನ್ಯೇಷಾಮನು ಶರಣಮಾತ್ಮೈವಮಕರೋತ್ ॥ ೩೩ ॥**

೩೩. ಯಾವದೇ ಸಾಧನವು ಪರಲೋಕದ ಸುಖವನ್ನು ಕೊಡುವಂಥದ್ದು ಐಹಿಕಸುಖವನ್ನುಂಟುಮಾಡಲಾರದು. ಈ ಲೋಕದ ಸುಖವನ್ನು ಕೊಡತಕ್ಕದ್ದು ಪರಲೋಕದ ಸುಖವನ್ನು ಕೊಡಲಾರದು. ಆದರೆ ನಿನ್ನ ಸೇವೆಯೆಂಬುದಾದರೊ, ಪ್ರಾಣಿ

ಗಳಿಗೆ ಇಹ-ಪರಸೌಖ್ಯಗಳೆರಡನ್ನೂ ಕೊಟ್ಟು ಅಭಯವನ್ನೂ ಕೊಡುವಂಥದ್ದಾಗಿದೆ. ಉಳಿದ ದೇವತೆಗಳೆಲ್ಲರ ಆತ್ಮನಾದ ಬ್ರಹ್ಮ (ರೂಪನಾದ ನಿನ್ನ) ಈ ಸೇವೆಯು ಹೀಗೆ ಫಲವನ್ನು ಕೊಟ್ಟಿತು.

**ಜಟೀ ವಲ್ಕೀ ಕ್ವಾಪಿ ಕ್ವಚಿದಪಿ ಸುಭೂಷಾಂಬರಭೃತೀ**
**ಕ್ವಚಿದ್ ಭೂತ್ಯಾ ಲಿಪ್ತಃ ಕ್ವಚಿದಪಿ ಸುಗಂಧಾಂಕಿತತನುಃ ।**
**ಕ್ವಚಿದ್ ಯೋಗೀ ಭೋಗೀ ಕ್ವಚಿದಪಿ ವಿರಾಗೀ ವಿಹರಸೇ**
**ಬಹುಜ್ಞಾನೀ ಜ್ಞಾತುಂ ತವ ಗತಿಮಶಕ್ತಾಶ್ಚ ಮುನಯಃ ॥ ೩೪ ॥**

೩೪. ಕೆಲವುವೇಳೆ ಜಟಾಧಾರಿಯಾಗಿ, ನಾರುಮಡಿಯನ್ನುಟ್ಟವನಾಗಿಯೂ, ಕೆಲವು ಸಲ ಒಳ್ಳೆಯ ವಸ್ತ್ರಾಭರಣಗಳಿಂದಲಂಕೃತನಾಗಿಯೂ ಕೆಲವು ವೇಳೆ ವಿಭೂತಿ ಯಿಂದ ಬಳಿಯಲ್ಪಟ್ಟವನಾಗಿ, ಕೆಲವು ಸಲ ಸುಗಂಧ (ದ್ರವ್ಯ)ಗಳಿಂದ ಅಲಂಕರಿಸಲ್ಪಟ್ಟ ಶರೀರದವನಾಗಿ, ಕೆಲವು ವೇಳೆ ಯೋಗಿಯಾಗಿಯೂ, ಭೋಗಿಯಾಗಿಯೂ ಇನ್ನೂ ಕೆಲವು ವೇಳೆ ವೈರಾಗ್ಯವಂತನಾಗಿಯೂ ನೀನು ವಿಹಾರಮಾಡುತ್ತಿರುವೆ. ಹೆಚ್ಚಿನ ಜ್ಞಾನಿ ಯಾದ ನಿನ್ನ ಸ್ವರೂಪವನ್ನು ತಿಳಿಯಲು ಮುನಿಗಳೂ ಅಸಮರ್ಥರಾಗಿರುವರು.

**ವಿಶುದ್ಧಂ ಚೈತನ್ಯಂ ಕ್ವಚನ ಜಡವತ್ ಕ್ವಾಪಿ ಸಕಲಾ -**
**ಗಮಜ್ಞೋಽಪ್ಯಜ್ಞಃ ಸ್ಯಾದ್ವಿಹರಸಿ ಕದಾಚಿತ್ ಬಹುವಿಧಃ ।**
**ಋಷಿಭ್ಯಸ್ತ್ವಂ ತತ್ತ್ವಂ ಪರಮಮುಪದೇಷ್ಟಾಸಿ ವಿತತಂ**
**ಚರಿತ್ರಂ ತೇ ವೇತ್ತುಂ ಚತುರಧಿಕವಕ್ತ್ರಾ ನ ಚತುರಾಃ ॥ ೩೫ ॥**

೩೫. ಪರಿಶುದ್ಧಚೈತನ್ಯನೇ ಆದ ನೀನು ಕೆಲವು ಕಡೆ ಜಡನಂತೆಯೂ ಕೆಲವು ಉಪಾಧಿಗಳಲ್ಲಿ ಎಲ್ಲಾ ಶಾಸ್ತ್ರಗಳನ್ನೂ ಬಲ್ಲವನಾಗಿದ್ದರೂ ಅಜ್ಞನಂತೆಯೂ ನಾನಾರೀತಿ ಯಿಂದ ನೀನು ವಿಹಾರಮಾಡುತ್ತಿರುವೆ. ನೀನು ಋಷಿಗಳಿಗೆ ಹೆಚ್ಚಿನ ವಿಸ್ತಾರದಿಂದ ತತ್ತ್ವವನ್ನು ಉಪದೇಶಮಾಡಿರುವೆ. ನಿನ್ನ ಚರಿತ್ರೆಯನ್ನು ತಿಳಿಯಲು ನಾಲ್ಕಕ್ಕೂ ಹೆಚ್ಚಿನ ಮುಖವುಳ್ಳವರೂ ಕೂಡ ಸಮರ್ಥರಾಗಲಾರರು.

**ಮಣಿರ್ವಾ ಮಂತ್ರೋ ವಾ ವಿವಿಧವಿಮಲೈಶ್ವರ್ಯಮಪಿ ವಾ**
**ಮಹಾಯೋಗೋಽಷ್ಟಾಂಗಾಭ್ಯಸನವಿಹಿತೋ ವಾ ತ್ರಿಭುವನಮ್ ।**
**ಸಮರ್ಥಂ ಚೈಕೈಕಂ ಪ್ರಭವತಿ ವಶೀಕರ್ತುಮಧಿಕಂ**
**ಸ್ಥಿತಂ ತ್ವಯ್ಯೇವೇದಂ ತವ ಕಿಮುತ ಲೋಕೈಕವಶತಾ ॥ ೩೬ ॥**

೩೬. ಮಣಿಯಾಗಲಿ, ಮಂತ್ರವಾಗಲಿ, ನಾನಾವಿಧವಾದ ವಿಮಲವಾದ ಅಣಿಮಾದಿಸಿದ್ಧಿರೂಪವಾದ ಐಶ್ವರ್ಯವಾಗಲಿ, ಮಹಾಯೋಗ, ಅಷ್ಟಾಂಗ ಯೋಗಾಭ್ಯಾಸದ ವಿಧಾನವಾಗಲಿ, ಒಂದೊಂದೂ ಮೂರು ಲೋಕಗಳನ್ನೂ ವಶ

ಮಾಡಿಕೊಳ್ಳಲು ಸಮರ್ಥವಾಗಿರುವವು. ಆದರೆ ಈ ಎಲ್ಲಾವಸ್ತುಗಳೂ ಒಟ್ಟಿಗೇ ನಿನ್ನಲ್ಲೇ ಇದ್ದು ಕೊಂಡಿರುವವು. ಹೀಗಿರುವಲ್ಲಿ ಲೋಕಗಳನ್ನೆಲ್ಲ ವಶಮಾಡಿ ಕೊಂಡಿರುವ ನಿನ್ನ ಮಹಿಮೆಯನ್ನು ಏನೆಂದು ಬಣ್ಣಿಸಲಾದೀತು?

**ಸರಸ್ವತ್ಯಾಧಾರಸ್ಥಿತಮರುದತಿಪ್ರೇರಿತಪರಾಂ**
**ನೃಪೋ ಧಾರಾಂ ಭಿತ್ವಾ ರಸಕಮಲವಾಸಾಧಿಪಪುರೀ ।**
**ಪರಂ ತೇಜೋರೂಪಂ ಸಕಲಭುವನಾಲೋಕನಿರತೋ**
**ಭವಂ ತೇ ಸಂಯೋಗಾದ್ ಪರಮಸಮವೇತಂ ಮುನಿಪತಿಃ ॥ ೩೭ ॥**

(ಈ ಶ್ಲೋಕದ ಅರ್ಥವು ತಿಳಿಯಲಿಲ್ಲವಾದ್ದರಿಂದ ಅನುವಾದಮಾಡಿಲ್ಲ)

**ಅಪಾಂ ತತ್ತ್ವಂ ಹಂಸಂ ಸಕಲಭುವದೇಹೇ ಜಲರುಹೇ**
**ತಟಿದ್ಭಾಸ್ವದ್ದೀಪ್ತಿಪ್ರಕಟದಲಷಟ್ಕೇ ಸುಲಲಿತೇ ।**
**ಪರಂ ಸ್ವಾಧಿಷ್ಠಾನೇ ರುಚಿರತರರೂಪಂ ನಿರುಪಮಂ**
**ಸ್ಥಿತಂ ಧ್ಯಾಯೇತ್ ತ್ವಾಂ ಯೋ ಮದನಸಮರೂಪೋ ವಿಜಯತೇ ॥ ೩೮ ॥**

೩೮. ಎಲ್ಲರ ಶರೀರದಲ್ಲಿಯೂ ಇದ್ದುಕೊಂಡಿರುವ, ಮಿಂಚಿನಂತೆ ಪ್ರಕಾಶ ಮಾನವಾದ ತೇಜಸ್ಸಿನಿಂದ ಹೊರತೋರಿಕೊಂಡ, ಆರುದಳಗಳುಳ್ಳ , ಸುಂದರವಾದ ಸ್ವಾಧಿಷ್ಠಾನವೆಂಬ ಕಮಲದಲ್ಲಿ ಜಲತತ್ತ್ವನೂ, ಅತಿಸುಂದರರೂಪನೂ ಉಪಮಾನ ರಹಿತನೂ ಆಗಿರುವ ಪರಮನಾದ ನಿನ್ನನ್ನು ಯಾವನು ಚಿಂತಿಸುವನೋ ಅವನು ಮನ್ಮಥನಿಗೆ ಸಮಾನವಾದ ರೂಪದವನಾಗಿ ವಿರಾಜಿಸುತ್ತಿರುವನು.

**ಪರೀತಂ ತ್ವಾಂ ವಿಷ್ಣೋ ಹುತವಹನಮಾಯಾವಿಲಸಿತೇ**
**ಸರೋಜೇ ನೀಲಾಭೇ ಮಣಿರಚಿತಪೀಠೇ ಮಣಿಗೃಹೇ ।**
**ಮಹಾಸಿದ್ಧೇಃ ಕಲ್ಪದ್ರುಮವರತಲೇ ಸ್ವರ್ಣನಿಚಯಾತ್**
**ಪ್ರವರ್ಷದ್ಭಿಃ ಸ ಸ್ಯಾತ್ ಪರಮತನುಭೂತಿಃ ಸ್ಮರತಿ ಯಃ ॥ ೩೯ ॥**

೩೯. ಎಲೈ ವಿಷ್ಣುವೆ, ಆಗ್ನಿಯ ತತ್ತ್ವವಾದ, ಮಾಯೆಯಿಂದ ವಿರಾಜಿಸುತ್ತಿರುವ ನೀಲವರ್ಣದ ಕಮಲದಲ್ಲಿ ಮಣಿಗಳಿಂದ ರಚಿತವಾದ ಪೀಠವುಳ್ಳ ಮಣಿಗೃಹದಲ್ಲಿ ಹಾಗೂ ಚಿನ್ನದ (ಹೂಗಳ) ಸಮೂಹವನ್ನೇ ಸುರಿಸುತ್ತಿರುವ ಶ್ರೇಷ್ಠವಾದ ಕಲ್ಪವೃಕ್ಷದ ಬುಡದಲ್ಲಿ ಮಹಾಸಿದ್ಧಿಗಳಿಂದ ಸುತ್ತುವರೆಯಲ್ಪಟ್ಟಿರುವ ನಿನ್ನನ್ನು ಯಾವನು ಸ್ಮರಿಸು ವನೋ ಅವನು ಹೆಚ್ಚಿನ ಶಾರೀರವಿಭೂತಿ (ಸಿದ್ಧಿ) ಯುಳ್ಳವನಾಗುವನು.

**ಮರುತ್ತಾರಾಪ್ರಾಭೇ ಕನಕರುಚಿಪದ್ಮೇ ಶ್ರುತಿಮಯಂ**
**ಪ್ರಭುಂ ಲೋಕಾತೀತಂ ನಿಖಿಲನಿಗಮಾವೇದ್ಯಚರಿತಮ್ ।**
**ಭಜಂತೇ ಯೇ ತ್ವಾಂ ತೇ ಸುದೃಢತರತಾದಾತ್ಮ್ಯಕದೃಶಾ**
**ಚಿದಾನಂದಂ ಮಾಯಾಗುಣವಿರಹಿತಂ ಯಾಂತಿ ಪರಮಮ್ ॥ ೪೦ ॥**

೪೦. ಗಾಳಿಯಂತೆ ಚಂಚಲವೂ ನಕ್ಷತ್ರಗಳಂತೆ ಪ್ರಕಾಶಮಾನವೂ ಆದ ಮನೋಹರವಾದ ಚಿನ್ನದ ಕಮಲದಲ್ಲಿ ವೇದಮಯನೂ, ಪ್ರಭುವೂ ಲೋಕಗಳನ್ನು ಮೀರಿದವನೂ ಸಮಸ್ತವೇದಗಳಿಂದಲೂ ತಿಳಿಸಲ್ಪಡುವ ಮಹಿಮೆಯುಳ್ಳವನೂ ಆದ ನಿನ್ನನ್ನು ಯಾರು ಪ್ರಬಲವಾದ ಹೆಚ್ಚಿನ ತಾದಾತ್ಮ್ಯ ದೃಷ್ಟಿಯಿಂದ ಭಜಿಸುವರೋ ಅವರು ಮಾಯಾಗುಣಗಳಿಲ್ಲದ ಪದವಿಯನ್ನು ಹೊಂದುವರು.

**ಸುಧಾಶುದ್ಧೇ ವ್ಯೋಮ್ನಿ ದ್ರುಹಿಣರಮಣೀಬೀಜಲಸಿತೇ**
**ವಿಶುದ್ಧಾಂಭೋಜಾಂತೇ ಸುರನರಖಗಾದ್ಯಂತರಹಿತಮ್ ।**
**ಭವಂತಂ ಭಾವೋತ್ಥೈಃ ಕುಸುಮಮುಖಪೂಜೋಪಕರಣೈಃ**
**ಸಮರ್ಹನ್ ಲೋಕೇ ನಾಽದ್ವಿತಯಪರಮಂ ಬ್ರಹ್ಮ ಭಜತೇ ॥ ೪೧॥**

೪೧. ಅಮೃತದಂತೆ ಪರಿಶುದ್ಧವಾದ ಹೃದಯಾಕಾಶದಲ್ಲಿ ಸರಸ್ವತಿಯ ಬೀಜಾಕ್ಷರದಿಂದ ಅಲಂಕೃತವಾದ ಪವಿತ್ರವಾದ ತಾವರೆಯ ನಡುವೆ ದೇವ, ಮನುಷ್ಯ, ಪಕ್ಷ್ಯಾದಿ- ಲೆಕ್ಕವಿಲ್ಲದಷ್ಟು ರೂಪಗಳಿಂದ ತೋರಿಕೊಳ್ಳುವ ವಿಭೂತಿಯುಳ್ಳ ನಿನ್ನನ್ನು, ಭಾವನೆಯಿಂದ ಕಲ್ಪಿಸಿದ ಹೂವೇ ಮುಂತಾದ ಪೂಜೆಯ ಸಾಮಗ್ರಿಗಳಿಂದ ಪೂಜಿಸುವ ಮನುಷ್ಯನು ಅದ್ವಿತೀಯವಾದ ಪರಬ್ರಹ್ಮವನ್ನೇ ಹೊಂದುವವನಾಗುತ್ತಾನೆ.

**ತಡಿಲ್ಲೇಖಾಶೋಚಿರ್ದ್ವಿದಲಕಮಲೇ ಭಾತಿ ಪರಮೋ**
**ಮಹಾಮುಕ್ತಾನಂಗೋಽನಲಶಶಿದೃಶೋಽಕ್ಷೀಣಿ ಭವತೇ ।**
**ಅಶೇಷಶ್ರೋತ್ರೇಷು ದ್ವಿರಸಜಲವಾನಂಗಕನಕಃ**
**ಶ್ರುತಿಪ್ರಾಣೋಽಷ್ಟಾಂಗಪ್ರಗುಣಿತಕಲಾಪೀಠನಿಲಯಃ ॥ ೪೨ ॥**

೪೨. ಮಿಂಚಿನ ಬಳ್ಳಿಯಂತೆ ಕಾಂತಿಯುಳ್ಳ ಎರಡು ದಲದ ಕಮಲದಲ್ಲಿ ವಿರಾಜಮಾನನಾಗಿರುವ ಪರಮನಾದ ನಿನಗೆ ಅಗಲವಾಗಿ ತೆರೆಯಲ್ಪಟ್ಟ ಕಾಮ, ಅಗ್ನಿ, ಚಂದ್ರರೆಂಬ ಮೂರು ಕಣ್ಣುಗಳು ಇವೆ. ಇನ್ನು ಎಲ್ಲಾ ಕಿವಿಗಳಲ್ಲಿಯೂ ನೀರಿನಲ್ಲಿರುವ ಹಾವೇ (ಮುಂತಾದ) ಎರಡು ನಾಲಗೆಯ ಪ್ರಾಣಿಗಳಂತಿರುವ ಕನಕಾಭರಣಗಳಿವೆ. ನಿನ್ನ ಉಸಿರೇ ವೇದಗಳಾಗಿವೆ. ಚೆನ್ನಾಗಿ ಅಭ್ಯಸಿಸಲ್ಪಟ್ಟ ಅಷ್ಟಾಂಗಯೋಗಗಳೆಂಬ ಕಲೆಗಳ ಪೀಠವೇ ನಿನ್ನ ವಾಸಸ್ಥಾನವಾಗಿರುವದು.

**ಕ್ವಚಿದ್ ಗುಹ್ಯಂ ಜಿಹ್ವಾ ಕ್ವ ಚ ಗುದಕಮನ್ಯತ್ರ ಕವಿಕಾ**
**ಕ್ವಚಿದ್ ವಾಗನ್ಯತ್ರ ಶ್ರುತಿರಪರತೋ ಲೋಚನಯುಗಮ್ ।**
**ಸಮಾಕರ್ಷಂತ್ಯಾತ್ಮಾನಮಿವ ಬಹುಭಾರ್ಯಾಃ ಪ್ರಲುಭಿತಾಃ**
**ತತೋ ಧ್ಯಾತುಂ ಸ್ಥಾತುಂ ಕಥಮಪಿ ನ ಸಕ್ತಾಸ್ತವ ಪದಮ್ ॥ ೪೩ ॥**

೪೩. ರಹಸ್ಯೇಂದ್ರಿಯವು ಒಂದು ಕಡೆಗೆ, ನಾಲಗೆ ಮತ್ತೊಂದು ಕಡೆಗೆ, ಅಪಾನವು ಇನ್ನೊಂದೆಡೆಗೆ, ಬಾಯಿ (ಹೊಟ್ಟೆ) ಒಂದು ಕಡೆಗೆ, ಮಾತು (ನಾಲಗೆ) ಮತ್ತೊಂದು ಕಡೆಗೆ ಕಿವಿಗಳು ಇನ್ನೊಂದು ಕಡೆಗೆ, ಎರಡೂ ಕಣ್ಣುಗಳು ಮತ್ತೊಂದು ಕಡೆಗೆ ಹೀಗೆ ಒಬ್ಬ ಯಜಮಾನನನ್ನು ಐದಾರು ಜನ ಹೆಂಡತಿಯರು ಲೋಭವಶರಾಗಿ ತಮ್ಮ ತಮ್ಮ ಕಡೆಗೆ ಎಳೆಯುವಂತೆ- (ಈ ಇಂದ್ರಿಯಗಳೆಂಬಿವು) ನನ್ನನ್ನು ಎಳೆದಾಡುತ್ತಿವೆ. ಇವು ನಿನ್ನ ಸ್ವರೂಪವನ್ನು ಧ್ಯಾನಮಾಡುವದಕ್ಕಾಗಲಿ, ಅಲ್ಲಿಯೇ ನೆಲೆನಿಲ್ಲುವದಕ್ಕಾಗಲಿ ಇಷ್ಟವುಳ್ಳವುಗಳಾಗಿಲ್ಲ. [1]

**ಅಶಕ್ತೋಽಹಂ ಸ್ನಾತುಂ ಕ್ಷಣಮಪಿ ಜಪಂ ಕರ್ತುಮಪಿ ವಾ**
**ಧನಾಭಾವಾದೇವಾತಿಥಿಜನಸಪರ್ಯಾ ಚ ನ ಕೃತಾ ।**
**ಕುತೋ ಜ್ಞಾನಂ ಧ್ಯಾನಂ ತ್ವಕೃತಗುರುದೇವಸ್ಯ ಮಮ ಭೋ**
**ಭವೇದೇವೈಕಾಶಾ ವಸತಿ ತವ ಭಕ್ತತ್ವಜನಿತಾ ॥ ೪೪ ॥**

೪೪. ನಾನು ಸ್ನಾನಮಾಡಲು ಅಥವಾ ಒಂದು ಕ್ಷಣಕಾಲ ಜಪಮಾಡುವದಕ್ಕೂ (ಇಂದ್ರಿಯ ಮನಸ್ಸುಗಳು ಸ್ವಾಧೀನವಿಲ್ಲದ್ದರಿಂದ) ಅಸಮರ್ಥನಾಗಿರುವೆನು. ಹಣ ವಿಲ್ಲದ್ದರಿಂದಲೇ ಅತಿಥಿಜನಗಳ ಸೇವೆಯನ್ನೂ ನಾನು ಮಾಡಲಿಲ್ಲ. ಹೀಗೆ ಗುರು-ದೇವತೆಗಳ ಪೂಜಾದಿಗಳನ್ನೇ ಮಾಡದಿರುವ ನನಗೆ ಧ್ಯಾನವಾಗಲಿ, ಜ್ಞಾನವಾಗಲಿ, ಎಲ್ಲಿ ದಕ್ಕಬೇಕು? ಆದರೂ ನನಗೆ ಒಂದು ಆಶೆಯಿದೆ, ಅದೇನೆಂದರೆ : ನಾನು ನಿನ್ನ ಭಕ್ತನಾಗಿರುವೆನಾದ್ದರಿಂದ (ಉದ್ಧಾರವಾದೇನು ಎಂಬಿದು.)

**ಅಮಂದೇ ಮಂದಾರದ್ರುಮಚರಸಮೀಪೇ ಮಣಿಮಯೇ**
**ಸುಖಾಸೀನಂ ಪೀಠೇ ಸುರವರಮುನೀಂದ್ರಾದಿವಿನುತಮ್ ।**
**ಸ್ವಹೃತ್ಪದ್ಮೇ ವಾಪಿ ಸ್ಥಿತಮನುದಿನಂ ತ್ವಾಂ ಭಜತಿ ಯಃ**
**ಸಚೇಹಾಮುಷ್ಮಿನ್ ವಾ ಸಕಲಜನಪೂಜ್ಯಶ್ಚ ಭವತಿ ॥ ೪೫ ॥**

೪೫. ದಟ್ಟವಾದ ಮಂದಾರವೃಕ್ಷಗಳ ಸಮೀಪದಲ್ಲಿ ಮಣಿಮಯವಾದ ಪೀಠದಲ್ಲಿ ಸುಖಾಸನದಲ್ಲಿ ಕುಳಿತಿರುವ, ದೇವತೆಗಳು ಹಾಗೂ ಋಷಿಶ್ರೇಷ್ಠರುಗಳಿಂದ ನಮಸ್ಕರಿಸಲ್ಪಟ್ಟ ಅಥವಾ ತನ್ನ (ಸಾಧಕನ) ಹೃದಯಕಮಲದಲ್ಲಿಯೇ ಇದ್ದುಕೊಂಡಿರುವ ನಿನ್ನನ್ನು ಯಾವನು ಪ್ರತಿದಿನವೂ ಭಜಿಸುವನೋ ಅವನು ಈ ಲೋಕದಲ್ಲಿಯೂ ಪರಲೋಕಗಳಲ್ಲಿಯೂ ಎಲ್ಲಾ ಜನರಿಂದಲೂ ಪೂಜ್ಯನಾಗಿ ಆಗುವನು.

**ತೃಣಂ ಮೇರುಂ ಕುರ್ಯಾತ್ ಸುರವರಗಿರಿಂ ವಾಪಿ ಚ ತೃಣಂ**
**ಭವತ್ಸಾಮರ್ಥ್ಯಂ ವಾಽಘಟಿತಘಟನಾಘ್ರೌಢಿಮತನೋ ।**

---

1. ಶ್ರೀಮದ್ಭಾಗವತದ ೭-೯-೪೦ನೆಯ ಶ್ಲೋಕಕ್ಕೆ ಈ ಶ್ಲೋಕವನ್ನು ಹೋಲಿಸಿರಿ.

**ಇದಂ ಜಾನೇ ತಸ್ಮೈ ಪುನರಪಿ ನ ಜಾನಂತಿ ಕವಯೋ**
**ಷ್ಯಹೋ ಯುಷ್ಮನ್ಮಾಯಾ ಸಕಲಜನಮೋಹೋನ್ಮದಕರೀ ॥ ೪೬ ॥**

೪೬. ಸಂಭವಿಸದೆ ಇರುವಂಥದ್ದನ್ನು ಸಂಭವಿಸುವಂತೆ ಮಾಡುವ ಬಲವಾದ ಶರೀರವುಳ್ಳ (ಸಾಮರ್ಥ್ಯವುಳ್ಳ) ನಿನ್ನ ಮಹಿಮೆಯು ಹುಲ್ಲುಕಡ್ಡಿಯನ್ನು ಮೇರುಪರ್ವತವನ್ನಾಗಿಯೂ ಹಾಗೆಯೇ ಮೇರುವನ್ನು ಹುಲ್ಲುಕಡ್ಡಿಯಾಗಿಯೂ ಮಾಡಬಲ್ಲದು. ನಿನ್ನ ಮಾಯೆಯು ಎಲ್ಲಾ ಜನರಿಗೂ ಮೋಹವನ್ನೂ ಬುದ್ಧಿವಿಕಲ್ಪವನ್ನೂ ಮಾಡುವಂಥದ್ದೆಂದು ನಾನು ಬಲ್ಲೆನು. ಆದರೆ ಎಂಥ ಜಾಣರೂ ಇದನ್ನು ಅರಿಯರು. ಆಶ್ಚರ್ಯವು!

**ನಟೋ ಭೂಯೋ ವೇಷೈರ್ಬಹುವಿಧ ಇವಾಭಾತಿ ಗುಣಿನೋ**
**ಯಥೈಕೋ ವಾಕಾಶೋ ಘಟಮಠಗುಹಾಸ್ವಂತರಗತಃ ।**
**ಯಥೈಕಂ ಗಾಂಗೇಯಂ ಕಟಕಮಕುಟಾದ್ಯಾಕೃತಿವಶಾತ್**
**ತಥಾ ದತ್ತಾತ್ರೇಯ ತ್ವಮಪಿ ಬಹುರೂಪಸ್ತ್ರಿಭುವನಮ್ ॥ ೪೭ ॥**

೪೭. ಒಬ್ಬನೇ ನಟನು ನಾನಾ ವೇಷಗಳ ನಿಮಿತ್ತ, ಹಾಗೂ ಗುಣಗಳನ್ನು ಹೊರಪಡಿಸುವ ಮೂಲಕ ಬಹಳ ವ್ಯಕ್ತಿಗಳಾಗಿರುವಂತೆ ತೋರುವನೋ, ಹೇಗೆ ಒಂದೇ ಆಗಿರುವ ಆಕಾಶವು ಮಡಕೆ, ಕೋಣೆ, ಗುಹೆಗಳಲ್ಲಿ ಹೊಕ್ಕಾಗ ಬೇರೆ ಬೇರೆಯಾಗಿರುವಂತೆ ಕಂಡುಬರುವದೋ, ಹೇಗೆ ಚಿನ್ನವು ಒಂದೇ ಆದರೂ ಕಡಗ, ಕಿರೀಟ-ಮುಂತಾದ ಆಕಾರಗಳ ನಿಮಿತ್ತ ಬೇರೆಬೇರೆಯಾಗಿ ಕಾಣುವದೋ ಹಾಗೆ ಎಲೈ ದತ್ತಾತ್ರೇಯನೆ, ನೀನೂ ಕೂಡ ಬಹಳ ರೂಪನಾಗಿದ್ದು ಮೂರು ಲೋಕಗಳಾಗಿ ತೋರಿಕೊಂಡಿರುತ್ತೀಯೆ.

**ಸಹಸ್ರಾಂಶುಪ್ರಾಬ್ಜೇ ಸುರತರುಸಮಾಢ್ಯೇಽಧಿಕತರೇ**
**ವಿಮಾನೇ ಹಂಸಾಖ್ಯೇ ಸ್ಥಿತಮಮೃತನೀಹಾರವಪುಷಮ್ ।**
**ಪರೀತಂ ತ್ವಾಂ ಧ್ಯಾಯೇದ್ಯದರಜಸಮಾರೂಢಮನಿಲೈ**
**ರಶೇಷೈರಾಜ್ಞಾಯಾಂ ಭವತಿ ಖಚರೋ ವ್ಯೋಮಗಮನೈಃ ॥ ೪೮ ॥**

೪೮. ಸೂರ್ಯಬಿಂಬಕ್ಕೆ ಸಮಾನವಾದ ಕಮಲದಲ್ಲಿ, ಹೆಚ್ಚಾದ ಕಲ್ಪವೃಕ್ಷಗಳಿಂದ ನಿಬಿಡವಾದ ಸ್ಥಳದಲ್ಲಿ, ಆಕಾಶದಲ್ಲಿ ಸಂಚರಿಸುವ ಹಂಸವೆಂಬ ವಿಮಾನದಲ್ಲಿದ್ದುಕೊಂಡಿರುವ, ಅಮೃತದ ಮಂಜಿನಂತಿರುವ ಶರೀರವುಳ್ಳ ನಿನ್ನನ್ನು ಪರಿಶುದ್ಧರಾದ ವಾಯು ದೇವತೆಗಳಿಂದ ಸುತ್ತುವರೆಯಲ್ಪಟ್ಟಿರುವವನಾಗಿದ್ದೀಯೆಂದು ಧ್ಯಾನಮಾಡಿದರೆ ಅಂಥವನು ಎಲ್ಲಾ ಆಕಾಶಗಮನಗಳಿಂದಲೂ ಕೂಡಿ ಅಪ್ಪಣೆಮಾಡುವಂಥ ಖೇಚರನಾಗುವನು.

**ಸ್ಥಿತಂ ಮೂಲಾಧಾರೇ ಕನಕರುಚಿರಾಂಗಂ ಹುತಭುಜಃ**
**ಶಿಖಾಭಿಃ ಪ್ರಖ್ಯಾಭಿಃ ವೃತಮಖಿಲತೇಜೋರಸಘಟಮ್ ।**
**ಧರಂತಂ ಭ್ರೂಮಧ್ಯೇ ಪ್ರಸೃತನಯನಃ ಪಶ್ಯತಿ ಚ ಯಃ**
**ಪರಂ ತ್ವಾಂ ಸತ್ಯಂ ಸ್ಯಾದಖಿಲರಸವಿದ್ಯಾತಿನಿಪುಣಃ ॥ ೪೯ ॥**

೪೯. ಚಿನ್ನದಂತೆ ಹೊಳೆಯುವ ಅವಯವಗಳುಳ್ಳ, ಪ್ರಸಿದ್ಧವಾದ ಅಗ್ನಿ ಜ್ವಾಲೆಗಳಿಂದ ಸುತ್ತುವರೆಯಲ್ಪಟ್ಟ ಎಲ್ಲಾ ತೇಜೋರಸಗಳ ಕಲಶವನ್ನು ಭ್ರೂಮಧ್ಯದಲ್ಲಿ ಧರಿಸಿ, ಮೂಲಾಧಾರಚಕ್ರದಲ್ಲಿರುವ ಪರಮನೂ ಸತ್ಯನೂ ಆದ ನಿನ್ನನ್ನುಅರಳಿಸಿದ ಕಣ್ಣುಗಳಿಂದ ಯಾವನು ನೋಡುವನೋ ಅವನು ಎಲ್ಲಾ ರಸವಿದ್ಯೆಗಳಲ್ಲಿಯೂ ಅತಿ ನಿಪುಣನಾಗುವನು.

**ಶಿರಃಪ್ರಾಂತಭ್ರಾತ್ರಾಯತಕುಟಿಲಬಾಲಾರ್ಕಮತುಲಂ**
**ಪ್ರದೀಪ್ತಸ್ವರ್ಣಾಢ್ಯಾರುಣಶತಲಸತ್ಕುಂಡಲಧರಮ್ ।**
**ಮರುತ್ಪುತ್ರಂ ಲಂಕಾಧಿಪತನುಜನಾಶೋದ್ಯತಕರಂ**
**ಸ್ಮರೇದ್ಯಸ್ತ್ವಾಂ ಯತ್ನಾತ್ಸಕಲಭಯಭೂತಾಪಹರಣೇ ॥ ೫೦ ॥**

೫೦. ತಲೆಯ ಪ್ರದೇಶದಲ್ಲಿ ಸಹೋದರನಂತಿರುವ ವಕ್ರವಾದ ಆಕಾರದ ಬಾಲಸೂರ್ಯನನ್ನು ಉಳ್ಳ, ಚೆನ್ನಾಗಿ ಹೊಳೆಯುತ್ತಿರುವ ಚಿನ್ನದಿಂದ ಮಾಡಿದ ಕೆಂಪಾದ ನೂರು ರತ್ನಗಳಿಂದ ಕೂಡಿದ ಕರ್ಣಾಭರಣಗಳನ್ನು ಧರಿಸಿರುವ, ಲಂಕೆಯ ಒಡೆಯನಾದ ರಾವಣನ ಮಗನಾದ (ಅಕ್ಷಕುಮಾರನನ್ನು) ವಿನಾಶಮಾಡಲು ಮೇಲಕ್ಕೆತ್ತಿದ ಕೈಯುಳ್ಳ ವಾಯುಪುತ್ರನಾದ ಹನುಮಂತನ ಅವತಾರನಾದ ನಿನ್ನನ್ನು ಯಾವನು ಧ್ಯಾನಿಸುವನೋ ಅವನು ಎಲ್ಲಾ ಭೂತಗಳ ಭಯವನ್ನೂ ಪರಿಹಾರಮಾಡಲು ಸಮರ್ಥನಾಗುವನು.

**ಗರುತ್ಮಂತಂ ಚಂಚಚ್ಚಲಕನಕಪಕ್ಷದ್ವಯಯುತಂ**
**ಸುಧಾಕುಂಭೋದ್ಭಾಸ್ವತ್ಕರಮಖಿಲಲೋಕಾಭಿಗಮನಮ್ ।**
**ಅಚಿಂತ್ಯಂ ವೇದೈಸ್ತ್ವಾಂ ಪರಮಮುನಿನಾಥಂ ಸ್ಮರತಿ ಯಃ**
**ಸ ದಕ್ಷೋಽಸೌ ವಾದೀ ಕಪಟವಿಷಜಂತುಪ್ರಹರಣೇ ॥ ೫೧ ॥**

೫೧. ಚಿನ್ನದಂತೆ ಹೊಂಬಣ್ಣದ ಚಂಚಲವಾದ ಎರಡು ರೆಕ್ಕೆಗಳುಳ್ಳ, ಕೈಯಲ್ಲಿ ಅಮೃತಕುಂಭವನ್ನು ಹಿಡಿದಿರುವವನಾಗಿ ಎಲ್ಲಾ ಲೋಕಗಳಿಗೂ ಸಂಚಾರಮಾಡುವ, ಗರುಡನ ಅವತಾರನೂ ವೇದಗಳಿಗೂ ಅಚಿಂತ್ಯನೂ ಆದ, ಪರಮರ್ಷಿಗಳಿಗೆಲ್ಲ ಒಡೆಯನಾದ ನಿನ್ನನ್ನು ಯಾವನು ಸ್ಮರಿಸುವನೋ ಅವನು ಎಲ್ಲಾ ವಿಷಜಂತುಗಳನ್ನೂ ನಿಗ್ರಹಿಸುವದರಲ್ಲಿ ಸಮರ್ಥನೆಂದು ಎಲ್ಲೆಲ್ಲಿಯೂ ಪ್ರಸಿದ್ಧನಾಗುವನು.

**ಸ್ತುತಿಂ ನಂದಂತಂ ಯೋ ಮನುಜಮುಪತಿಷ್ಠತ್ಯತಿಬಲಾತ್**
**ಕೃತಾಶಾಮಿಥ್ಯಾದ್ಯಾತ್ ಪ್ರಣತಜನಮಂದಾರ ಭವತಾ ।**
**ಅದತ್ತೇ ದತ್ತತ್ವಾತ್ ಅಮಲತರಚಿದ್ಗಮ್ಯವಿಭವಾತ್**
**ಸದಾ ದತ್ತಾತ್ರೇಯ ಭಜಸಿ ಭಜತಾಮಿಷ್ಟಫಲದಃ ॥ ೫೨ ॥**

೫೨. ನಮಸ್ಕರಿಸಿದವರಿಗೆ ಮಂದಾರವೃಕ್ಷದಂತಿರುವ ಎಲೈ ದತ್ತಾತ್ರೇಯನೆ, ನಿನ್ನ ಸ್ಮರಣೆಯನ್ನೇ ಹೊಗಳುತ್ತಾ ಯಾವ ಮನುಷ್ಯನಿರುವನೋ ಅಂಥವನನ್ನು ಅವನ ಮಿಥ್ಯೆಯಾದ ಬಯಕೆಗಳ ಮೂಲಕ ನೀನು ಬಳಿಸಾರುವೆಯಾದರೆ (ನಿನ್ನನ್ನು ನೆನೆಯುವವರ ಹೃದಯದಲ್ಲಿರುವ ಸುಳ್ಳು ಬಯಕೆಗಳೂ ನಿನ್ನ ರೂಪಾಂತರವೇ ಆದ್ದರಿಂದ)

ದಾನಕ್ಕರ್ಹವಲ್ಲದವುಗಳನ್ನು ದಾನಕೊಟ್ಟದ್ದರ ಫಲವಾಗಿ (ಆ ಬಯಕೆಗಳನ್ನು ನಿನಗೆ ಅರ್ಪಿಸಲಾಗಿ) ಪರಿಶುದ್ಧವಾದ ಚಿತ್ಸ್ವರೂಪನಾದ ನಿನ್ನ ಮಹಿಮೆಯಿಂದ ಆ ಭಕ್ತನಿಗೆ ನೀನು ಸತ್ಯವಾದ ಇಷ್ಟಾರ್ಥಗಳನ್ನು ಕೊಡುವವನೇ ಆಗಿರುತ್ತೀಯೆ.

**ವಿಧಿಂ ವಿಷ್ಣುಂ ಮಾಯಾಂ ಶೃಣಿಮದನಯೋನಿಂ ದಿನಕರಂ**
**ಮಿಲಿತ್ವಾನಂಗೇನಾನಲಯುವತಿಯುಕ್ತಾಂ ಜಪತಿ ಯಃ ।**
**ತರಾಖ್ಯಾಮಖ್ಯೇಯಾಂ ನಿಖಿಲನಿಗಮಾಢ್ಯಾಮಖಿಲದಾಂ**
**ಸ ಸಂಪದ್ಭಿರ್ದೇವಾಧಿಪವಿಭವಯುಕ್ತೋ ವಿಹರತಿ ॥ ೫೩ ॥**

೫೩. ಬ್ರಹ್ಮ, ವಿಷ್ಣು, ಮಾಯೆ, ಮನ್ಮಥನ ತಾಯಿ, ಸೂರ್ಯ- ಈ ದೇವತೆಗಳ ಬೀಜಾಕ್ಷರಗಳನ್ನು ಮನ್ಮಥಬೀಜದೊಡನೆ ಕೂಡಿಸಿ ಅಗ್ನಿಯ ಹೆಂಡತಿ (ಸ್ವಾಹಾದೇವಿ) ಯ ಹೆಸರಿನೊಡನೆ ಜೊತೆಮಾಡಿ ಯಾವನು ಜಪಿಸುವನೋ ಅವನು ತರಾ ಎಂಬ ಹೆಸರಿನ ವರ್ಣಿಸಲಸಾಧ್ಯವಾದ ಸಮಸ್ತವೇದಗಳ ಭಂಡಾರವಾದ, ಎಲ್ಲಾ ಇಷ್ಟಾರ್ಥ ಗಳನ್ನೂ ಕೊಡುವ ಐಶ್ವರ್ಯಗಳಿಂದ ಕೂಡಿದವನಾಗಿ ದೇವತೆಗಳೊಡೆಯ ನಾದ ಇಂದ್ರನ ಸಿರಿಯನ್ನೇ ಹೊಂದಿದವನಾಗಿ ಆನಂದದಿಂದ ವಿಹರಿಸುತ್ತಾನೆ.

**ಪರಾ ಮಾಯಾ ವಾಣೀ ಮದನಕಮಲಾಬೀಜಸಹಿತಂ**
**ಮನುಂ ಪ್ರತ್ಯೇಕಂ ತೇ ಜಪತಿ ಸತತಂ ನಿಶ್ಚಲಧಿಯಾ ।**
**ಯತಾಮೇತ್ಯೈಶ್ವರ್ಯಾಶ್ರುತಸಕಲವಿದ್ಯಾನಿಪುಣತಾಂ**
**ವಶಿತ್ವಂ ಬ್ರಹ್ಮೈಕ್ಯಂ ಸ್ವಪಿತಿ ಯದಿ ಯಾಯಾತ್ ಪರಮುನೇಃ ॥ ೫೪ ॥**

೫೪. ಪರಮಋಷಿಯಾದ ನಿನ್ನ ಮಂತ್ರವನ್ನು ಪರಾ ಹಾಗೂ ಮಾಯಾ-ಸರಸ್ವತೀ-ಮನ್ಮಥ-ಲಕ್ಷ್ಮೀ ಬೀಜಾಕ್ಷರಗಳೊಡನೆ ಕೂಡಿಸಿ ನಿಶ್ಚಲವಾದ ಮನಸ್ಸಿನಿಂದ ಯಾವಾಗಲೂ ಬಿಡಿಬಿಡಿಯಾಗಿ ಯಾವನು ಜಪಿಸುವನೋ ಅವನು ಐಶ್ವರ್ಯ, ವಿದ್ಯೆ, ಸಕಲಕಲಾನೈಪುಣ್ಯತೆ, ವಶಿತ್ವಗಳನ್ನು ಪಡೆಯುವನು. ಬ್ರಹ್ಮೈಕ್ಯವನ್ನೇ ಹೊಂದಿದವನಾಗಿ ಪರಮಶಾಂತನಾಗಿಬಿಡುವನು.

**ಅವಿಜ್ಞಾತಂ ಕಿಂಚಿತ್ತವ ಜಗತಿ ನಾಸ್ತಿ ಪ್ರಭವಿತುಃ**
**ತದಾ ವಿಜ್ಞಾತೋಽಹಂ ಯದಪಿ ಸಕಲಜ್ಞೇನ ಭವತಾ ।**
**ಅದೃಷ್ಟಂ ಮನ್ಯೇಽಹಂ ಪ್ರತಿಭಟಮವಿಜ್ಞಾನಕರಣೇ**
**ಮುನೇ ದತ್ತಾತ್ರೇಯ ಪ್ರಕುರು ಮಯಿ ಕಾರುಣ್ಯಮತುಲಮ್ ॥ ೫೫ ॥**

೫೫. ಎಲೈ ದತ್ತಾತ್ರೇಯಮುನಿಯೆ, ಈ ಜಗತ್ತಿನಲ್ಲಿ ನಿನಗೆ ತಿಳಿಯದ್ದೊಂದೂ ಇರುವದಿಲ್ಲ. ಹಾಗಾದರೆ ಎಲ್ಲವನ್ನೂ ಬಲ್ಲ ನಿನಗೆ ನಾನೂ ಗೊತ್ತಿರಲೇಬೇಕು . ಆದರೆ ನಾನು ನಿನಗೆ ಕಾಣಿಸಿಕೊಂಡಿಲ್ಲವೆಂಬುದು-ಒಬ್ಬೊಬ್ಬ ಯೋಧನೂ (ಬಿಡಿಬಿಡಿಯಾಗಿ) ಸೇನಾಪತಿಗೆ ಗೊತ್ತಿರಲಾರನೆಂಬಂತೆ ಭಾವಿಸುವೆನು. ಆದ್ದರಿಂದ ನೀನು ದಯಮಾಡಿ ನನ್ನ ಮೇಲೆ ಹೆಚ್ಚಿನ ಕರುಣಾದೃಷ್ಟಿಯನ್ನು ಇಡುವವನಾಗು.

**ಭವತ್ಪಾದಾಂಭೋಜದ್ವಯಶುಭರಸಾಸ್ವಾದಚತುರಂ**
**ಭ್ರಮದ್ ಭೃಂಗೀಶಂಖಾಯಿತಹೃದಯವೃತ್ತಿಂ ಕಲಯ ಮಾಮ್ ।**

**ಅನಾಧಾರಾಧಾರಾಶ್ರಿತಸುರತರೋ ತಾವಕಜನೇ**
**ಮುನೇ ಕಾರುಣ್ಯಾಬ್ಧೇ ಪ್ರಕುರು ಮಯಿ ಸಂಪತ್ಪ್ರಕಟನಮ್ ॥ ೫೬ ॥**

೫೬. ಕರುಣಾಸಾಗರನಾದ ಮುನಿಯೆ, ಆಧಾರವಿಲ್ಲದವರಿಗೆ ಆಧಾರನೂ ಆಶ್ರಿತ ರಿಗೆ ಕಲ್ಪವೃಕ್ಷನೂ ಆದವನೆ, ನಿನ್ನ ಎರಡು ಪಾದಾರವಿಂದಗಳ ಶುಭಕರವಾದ (ಭಕ್ತಿ)ರಸವನ್ನು ರುಚಿನೋಡುವದರಲ್ಲಿ ಜಾಣನನ್ನಾಗಿಯೂ, ಚಂಚಲವಾದ ದುಂಬಿ ಯಂತಿರುವ (ಮನಸ್ಸು) ನಿನ್ನ ನಾಮವನ್ನೇ ಧ್ವನಿಮಾಡುತ್ತಾ ಹೃದಯದಲ್ಲಿ ನೆಲೆಸು ವಂತೆಯೂ ಮಾಡು. ನಿನ್ನವರಾದ ಈ ಜನರಲ್ಲಿ ಎಂದರೆ ನನ್ನಲ್ಲಿ ಐಶ್ವರ್ಯಗಳ ಆವಿರ್ಭಾವವನ್ನು ಉಂಟುಮಾಡು.

**ವದಂತ್ಯೇಕೇ ಪಾರ್ಥಂ ತವ ಗತಿಮನೇಕಾರ್ಥಹರಿಣೀ**
**ಮಜಾನಂತೋ ಜ್ಞೇಯಾಮನಧಿಗತತತ್ತ್ವಾರ್ಥಮತಯಃ ।**
**ಮಹಾಯೋಗಿನ್ ಲೋಕೇ ಜಡಮತಿಕೃತೇ ತ್ವಂ ಧೃತವಪುಃ**
**ತದಾ ನೋ ಚೇದ್ ಭಕ್ತಸ್ವಜನಪರಿರಕ್ಷಾ ಕಥಮಹೋ ॥ ೫೭ ॥**

೫೭. ಎಲೈ ಮಹಾಯೋಗಿಯೆ, ನಿನ್ನ ತತ್ತ್ವವನ್ನರಿಯದ ಮೂಢಮತಿಗಳು ಏನೂ ಅರಿಯದವರಾಗಿ, ಅನೇಕ ಪ್ರಯೋಜನಗಳನ್ನುಂಟುಮಾಡುವ ನಿನ್ನ (ಮಾನುಷರೂಪದ) ಸಂಚಾರವನ್ನು ತಪ್ಪಾಗಿ ತಿಳಿಯುವರು. ಆದರೆ ನೀನಾದರೊ, ಲೋಕದಲ್ಲಿ ಜಡಬುದ್ಧಿ ಯವರ ಉದ್ಧಾರಕ್ಕಾಗಿ ಶರೀರವನ್ನು ಧರಿಸಿರುತ್ತೀಯೆ. ಹಾಗಿಲ್ಲದಿದ್ದರೆ ಸ್ವಜನರಾದ ನಿನ್ನ ಭಕ್ತರ ರಕ್ಷಣೆಯಾದರೂ ಹೇಗಾದೀತು?

**ಸ್ಮೃತಸ್ತ್ವಚ್ಛಿಷ್ಯೋ ವಾ ಜಗತಿ ಕೃತವೀರ್ಯಸ್ಯ ತನಯೋಽ**
**ರ್ಜುನೋ ರಾಜಾ ಚೋರಾದ್ ಭಯಮಹಿಭಯಂ ವೃಶ್ಚಿಕಭಯಮ್**
**ಹಿನಸ್ತ್ಯಾಜೌ ಶತ್ರ್ವಾದಿತಮಪಿ ಭಯಂ ಚೇತಿ ಗದಿತಂ**
**ಭವೇಯುಸ್ತ್ವಚ್ಛಿಷ್ಯಾಃ ಕಿಮುತ ಹೃತಚೋರಾಧಿಕಭಯಾಃ ॥ ೫೮ ॥**

೫೮. ನೀನಾಗಲಿ, ನಿನ್ನ ಶಿಷ್ಯನಾದ ಕಾರ್ತವೀರ್ಯಾರ್ಜುನನಾಗಲಿ, ಸ್ಮರಿಸ ಲ್ಪಟ್ಟರೆ ಕಳ್ಳರ ಭಯ. ಹಾವಿನ ಭಯ, ಚೇಳಿನ ಭಯಗಳನ್ನು ಹೋಗಲಾಡಿಸುತ್ತೀರಿ- ಎಂದು ಪ್ರಸಿದ್ಧವಾಗಿದೆ, ಮತ್ತು ಯುದ್ಧದಲ್ಲಿ ಶತ್ರುಭಯವನ್ನೂ ಪರಿಹಾರ ಮಾಡುವವರಾಗಿದ್ದೀರಿ. ಹೀಗಿರುವಲ್ಲಿ ನಿಮ್ಮ ಶಿಷ್ಯರಾಗಿಯೇ ಯಾರು ಆಗುವರೋ ಅಂಥವರು ಕಳ್ಳರೇ ಮುಂತಾದವರ ಹೆಚ್ಚಿನ ಭಯದಿಂದ ಬಿಡುಗಡೆ ಹೊಂದುತ್ತಾ ರೆಂದು ಹೇಳತಕ್ಕದ್ದೇನಿದೆ ?

**ಪದಾನಾಂ ಸೇವ್ಯೋ ವಾ ನ ಭವಸಿ ಯದಾ ಕಿಂಚನ ನೃಣಾಂ**
**ಪ್ರಿಯಃ ಸಾಧೂನಾಂ ತ್ವಂ ತವ ಚ ಸುಹೃದಸ್ತೇಽಪಿ ಸುಜನಾಃ ।**
**ಮಯಿ ತ್ವಾರ್ತೇ ದೀನೇ ಜನನಮರಣಾದ್ಯೈಃ ಕುರು ದಯಾಂ**
**ದಯಾವಾನ್ ಕೋ ವಾ ಮೇ ಭ್ರಮನಿಗಡನಿರ್ಮೋಚನವಿಧೌ ॥ ೫೯ ॥**

೫೯. ಸಾಧುಗಳಿಗೆ ಪ್ರಿಯನಾದ ನೀನು ಮನುಷ್ಯರಿಗೆ ಪಾದಸೇವೆಗೆ ದೊರಕುವ ದಿಲ್ಲವಾದರೆ ಅವರು ನಿನ್ನವರಾಗಿಯೂ ನೀನು ಅವರಿಗೆ ಸ್ನೇಹಿತನಾಗಿಯೂ ಆಗುವದು

ಹೇಗಾದೀತು? ಆರ್ತನೂ ಬಳಲಿದವನೂ ಆದ ನನ್ನಲ್ಲಿ ಜನನಮರಣಾದಿಗಳಿಂದ ಬಿಡುಗಡೆ ಮಾಡಿಸುವಂಥ ದಯೆಯನ್ನು ತೋರುವವನಾಗು. ಏಕೆಂದರೆ ನನ್ನ ಭ್ರಮೆ ಯೆಂಬ ಬೇಡಿ ಯನ್ನು ಬಿಡಿಸುವದರಲ್ಲಿ ದಯಾವಂತನಾದ ಯಾವನುತಾನೆ ಒಲ್ಲೆನು-ಎಂದಾನು?

**ಯಥಾ ಮಾತಾ ಪುತ್ರಂ ಸಕಲಗುಣಹೀನಂ ಚ ಕುಟಿಲಂ**
**ಪ್ರಪುಷ್ಣಾತ್ಯನ್ನಾದ್ಯೈಃ ಅನುದಿನಮತೀವಾದರಹಿತಾ ।**
**ತಥಾ ತ್ವಂ ಲೋಕಾನಾಂ ಮಮ ಚ ಪಿತರಾವಿತ್ಯಭಿಮತಂ**
**ತತಸ್ತ್ರಾತುಂ ದಾತುಂ ಫಲಮಭಿಮತಂ ಚಾರ್ಹಸಿ ವಿಭೋ ॥ ೬೦ ॥**

೬೦. ಎಲೈ ವಿಭುವೆ, ಹೇಗೆ ತಾಯಿಯು ಏನೊಂದೂ ಗುಣಗಳಿಲ್ಲದ, ವಂಚಕನಾದ ಮಗನನ್ನು ಕೂಡ ಪ್ರತಿದಿನವೂ ಅನ್ನವೇ ಮುಂತಾದವುಗಳನ್ನು ಕೊಟ್ಟು ಹಿತಳಾಗಿದ್ದುಕೊಂಡು ಅತ್ಯಂತ ಆದರದಿಂದ ಕಾಪಾಡುವಳೋ ಹಾಗೆಯೇ ಎಲ್ಲಾ ಲೋಕಗಳಿಗೂ ಮತ್ತು ನನಗೂ ತಂದೆತಾಯಿಗಳೆಂದು ಪ್ರಸಿದ್ಧನಾದ ನೀನು ಕಾಪಾಡುವ ದಕ್ಕೂ ಇಷ್ಟವಾದ ಫಲವನ್ನು ಕೊಡುವದಕ್ಕೂ ಅರ್ಹನಾಗಿದ್ದೀಯೆ.

**ಜಡಂ ವಾಚಾಧೀಶಂ ಸುಧಿಯಮಪಿ ಮೂಕಂ ಚ ಕುರುಷೇ**
**ರವೇಃ ಸ್ವಾಶಾಂ ಯಾಂತಂ ಯದಿ ಚ ಪುರುಷೇ ದೃಷ್ಟಿವಸತೇಃ ।**
**ಅಕರ್ತುಂ ಕರ್ತುಂ ವಾಽನ್ಯದಪಿ ಪರಿಕರ್ತುಂ ಚ ಮನುಜಃ**
**ತದಾ ಸರ್ವಂ ಕುರ್ಯಾಃ ಕ್ವಚನ ಕಿಮಸಾಧ್ಯಂ ತ್ರಿಭುವನೇ ॥ ೬೧ ॥**

೬೧. ನೀನು ಮೂಢನನ್ನು ಬೃಹಸ್ಪತಿಯನ್ನಾಗಿಯೂ ವಿದ್ವಾಂಸನನ್ನು ಮೂಕ ನನ್ನಾಗಿಯೂ ಮಾಡುವೆ. ಕಣ್ಣಿನಲ್ಲಿದ್ದುಕೊಂಡಿರುವ (ಅನುಗ್ರಾಹಕನಾದ) ಸೂರ್ಯನ ದಿಕ್ಕನ್ನು ಕುರಿತು ಹೋಗುವ ಮನುಷ್ಯನಿಗೆ (ಉಪಾಸಕನಿಗೆ) ಪುಣ್ಯಲೋಕಗಳನ್ನು ಗಳಿಸಿ ಕೊಡುವದಕ್ಕೂ, ಕೊಡದೆ ಇರುವದಕ್ಕೂ ಬೇರೆರೀತಿಯ ಫಲವನ್ನುಂಟುಮಾಡುವ ದಕ್ಕೂ ನೀನು ಸಮರ್ಥನು. ನೀನು ಎಲ್ಲವನ್ನೂ ಮಾಡಬಲ್ಲೆ, ಮಾಡಿಸಬಲ್ಲೆ, ಫಲಗಳ ನ್ನುಂಟು ಮಾಡಬಲ್ಲೆ; ನಿನಗೆ ಅಸಾಧ್ಯವಾದುದು ಈ ಮೂರುಲೋಕಗಳಲ್ಲಿ ಯಾವದೂ ಇರುವದಿಲ್ಲ.

**ಪುಮಾನ್ ಯೋ ವೈ ಯುಷ್ಮಚ್ಚರಣಪರಿಚರ್ಯಾಕೃತಿಪರೋ**
**ಮಹಾಲಾಪಾಸ್ಥಾನಾಶನಶಯನಪಾನಾನಿ ಕುರುತೇ ।**
**ಸ ವೈ ಧನ್ಯೋ ಲೋಕೇ ಸಕಲಜಗದಾರಾಧ್ಯಜನಿಮಾ**
**ಅಹೋ ಭಾಗ್ಯಂ ತಸ್ಯಾಗಣಿತಯಶಸಃ ಕೋಽಪಿ ನ ಭಜೇತ್ ॥ ೬೨ ॥**

೬೨. ಯಾವ ಮನುಷ್ಯನು ಲೋಕದಲ್ಲಿ ನಿಮ್ಮ ಚರಣಾರವಿಂದಗಳ ಸೇವೆಯನ್ನು ಮಾಡುವದರಲ್ಲಿಯೇ ತತ್ಪರನಾಗಿರುವನೋ ಅವನು ಹೆಚ್ಚಿನ ಹೆಸರು, ಸ್ಥಾನ, ಭೋಜನ, ಶಯನ, ಪಾನಗಳೇ ಮುಂತಾದ ಸುಖಗಳನ್ನು ಹೊಂದಿರುವನು. ಸಕಲಜಗತ್ತಿಗೂ ಪೂಜ್ಯ ನಾದ ಅವನ ಹುಟ್ಟು ಲೋಕದಲ್ಲಿ ಸಾರ್ಥಕವಾದುದು. ಅವನೇ ಧನ್ಯನು, ಲೆಕ್ಕವಿಲ್ಲದಂಥ ಕೀರ್ತಿಯುಳ್ಳ ಅವನ ಭಾಗ್ಯವನ್ನು ಯಾವನೊಬ್ಬನೂ ಪಡೆಯಲಾರನು.

**ಪ್ರಸಾದಾತ್ ತೇ ಯಸ್ಮಿನ್ ಪ್ರಬಲತರದಾರಿದ್ರ್ಯ ವಿಭವಃ**
**ಸ ಯಾಯಾದಿಂದ್ರತ್ವಂ ಸಕಲಸುರನಾರೀಪರಿವೃತಃ ।**
**ತವೋಪೇಕ್ಷಾ ಯಸ್ಮಿನ್ ಭವತಿ ಸ ಸುರಾಣಾಮಧಿಪತಿಃ**
**ಪರತ್ರ ಹ್ಯತ್ಯಂತಪ್ರವಿಹತಮಹೈಶ್ವರ್ಯವಿಭವಃ ॥ ೬೩ ॥**

೬೩. ಅತ್ಯಂತಹೆಚ್ಚಿನ ಬಡತನದಿಂದ ಕೂಡಿದವನು ನಿನ್ನ ಅನುಗ್ರಹದಿಂದ ಸಮಸ್ತ ದೇವತಾಸ್ತ್ರೀಯರೊಡಗೂಡಿ ಇಂದ್ರಪದವಿಯನ್ನು ಹೊಂದುವನು. ಆದರೆ ಯಾವನ ವಿಷಯದಲ್ಲಿ ನಿನ್ನ ಔದಾಸೀನ್ಯತೆಯುಂಟಾಗುವದೋ ಅವನು ದೇವತೆಗಳೊಡೆಯನಾಗಿದ್ದರೂ ಹೆಚ್ಚಾದ ಐಶ್ವರ್ಯ ವೈಭವಗಳೆಲ್ಲವನ್ನೂ ಕಳೆದುಕೊಂಡವನಾಗಿ ತೀರ ಕಡೆಗಣಿಸ ಲ್ಪಡುವನು.

**ಸದಾಮಂತ್ರೈರ್ಜುಷ್ಟಃ ಪುನರಪಿ ಮನೂನೇವ ಜಪತಿ**
**ಸ್ವಯಂ ತಂತ್ರಧ್ಯೇಯೋ ಯದಪಿ ಕುರುತೇ ತಂತ್ರನಿಚಯಮ್ ।**
**ಸದಾ ಬ್ರಹ್ಮಾನಂದಾಮೃತಜಲಧಿಕೇಲೀಕಲಿತಧೀಃ**
**ಸ ಭೂತೇರ್ಭೂಯಸ್ಯಾ ಭವತು ಭಗವನ್ ನಃ ಕುರು ದಯಾಮ್ ॥ ೬೪ ॥**

೬೪. ತಾನು ಯಾವಾಗಲೂ ಮಂತ್ರಗಳಿಂದ ಉಪಾಸ್ಯನಾಗಿದ್ದರೂ ಪುನಃ ಮಂತ್ರಗಳನ್ನೇ ಯಾವನು ಜಪಿಸುತ್ತಿರುವನೋ ತಾನೇ ತಂತ್ರಗಳಿಂದ ಚಿಂತಿಸಲ್ಪಡುವವ ನಾದರೂ ತಂತ್ರಗಳ ಸಮೂಹವನ್ನೇ ಯಾವನು ರಚಿಸುವನೋ ಯಾವಾಗಲೂ ಬ್ರಹ್ಮಾ ನಂದವೆಂಬ ಅಮೃತಸಮುದ್ರದಲ್ಲಿ ಕ್ರೀಡಿಸುವದರಲ್ಲಿ ಆಸಕ್ತನಾಗಿರುವ ಮನಸ್ಸುಳ್ಳ ವನೋ ಅವನು ಹೆಚ್ಚಿನ ಐಶ್ವರ್ಯಕ್ಕೆ ಕಾರಣನಾಗಲಿ ! ಎಲೈ ಪೂಜ್ಯನೆ, ನಮ್ಮ ಮೇಲೆ ದಯೆತೋರುವವನಾಗು!

**ತುರೀಯಾಗ್ನಿ ಶ್ವೇತದ್ಯುತಿದಿನಕೃದರ್ಕೈರ್ಮುನಿಪತೇ -**
**ರ್ಮಹಾವಿದ್ಯಾಖಂಡೈಃ ಪರಿಯುತಮಹಾನುಷ್ಟುಭಮನೋ ।**
**ಚತುರ್ಭಿಶ್ಚಕ್ರಾಬ್ಜಾಂಕುಶಗಣಧರಂ ಸಾಮಿ ಯುವತಿಂ**
**ನೃಸಿಂಹಂ ತ್ವದ್ರೂಪಂ ಭಜತಿ ಸ ಪುಮರ್ಥೈಕನಿಲಯಃ ॥ ೬೫ ॥**

೬೫. ತುರೀಯತತ್ತ್ವ, ಅಗ್ನಿ, ಬಿಳುಪಾದ ಕಾಂತಿಯುಳ್ಳ ಸೂರ್ಯ ಇವರುಗಳಿಂದಲೂ ಮುನಿಗಳೊಡೆಯನಾದವನ ಮಹಾವಿದ್ಯೆಯ ಭಾಗದಿಂದಲೂ ಕೂಡಿದ ದೊಡ್ಡ ಅನುಷ್ಟುಭದ ಮಂತ್ರರೂಪನೆ, ಚಕ್ರ, ಪದ್ಮ, ಅಂಕುಶಗಳಿಂದಲೂ (ಅಭಯ ಹಸ್ತ)ದಿಂದಲೂ ಕೂಡಿ ಯುವತಿಯಾದ ಲಕ್ಷ್ಮಿಯೊಡನೆ ಇರುವ ನಿನ್ನ ನೃಸಿಂಹ ರೂಪವನ್ನು ಭಜಿಸುವವನು ಎಲ್ಲಾ ಪುರುಷಾರ್ಥಗಳಿಗೂ ಯೋಗ್ಯನಾಗುವನು.

**ಮುನೇ ತೇ ಮಾಣಿಕ್ಯಪ್ರವರಖಚಿತೇ ಹೇಮಮುಕುಟೇ**
**ಪುರಾ ಕಲ್ಪಧ್ವಂಸೇ ಪರಿಕಲಿತಸೂರ್ಯಾಪರರುಚಃ ।**
**ವಸಂತ್ಯಸ್ಮಿನ್ ನೂನಂ ನ ಹಿ ಯದಿ ತದಾ ಭೂತಮುನಯೋ**
**ನ ವಿದ್ಯಂತೇ ಲೋಕಾಃ ಪ್ರಖರತಿಮಿರಾಂತೈಕಚತುರಾಃ ॥ ೬೬ ॥**

೬೬. ಎಲೈ ಮುನಿಯೆ, ಮಾಣಿಕ್ಯವೆಂಬ ರತ್ನಗಳಿಂದ ಮೆಟ್ಟಲ್ಪಟ್ಟ, ಹಾಗೂ ಸೂರ್ಯನನ್ನು ಮೀರಿಸುವ ಕಾಂತಿಯುಳ್ಳ ನಿನ್ನ ಚಿನ್ನದ ಕಿರೀಟದಲ್ಲಿ - ಈ ಹಿಂದೆ ಕಲ್ಪವು

ಪೂರ್ವೈಸಿ ಸೃಷ್ಟಿಯೆಲ್ಲವೂ ನಾಶವಾದಾಗ ಉಳಿದುಕೊಂಡ ಭೂತಸೂಕ್ಷ್ಮಗಳೂ, ದಟ್ಟವಾದ ಅಜ್ಞಾನವೆಂಬ ಕತ್ತಲೆಯನ್ನು ಕಳೆಯುವದರಲ್ಲಿ ಸಮರ್ಥರಾದ ಮುನಿಗಳೂ ಖಂಡಿತ ವಾಗಿಯೂ ವಾಸವಾಗಿರುವರು. ಹಾಗೇನಾದರೂ ಇಲ್ಲದೆಹೋಗಿದ್ದರೆ ಮುಂದಿನ ಕಲ್ಪಕ್ಕೆ ಈ ಲೋಕಗಳೇ ಇರುತ್ತಿರಲಿಲ್ಲ.

**ಅಹೋ ಯೋಗಿನ್ ನಾನಾಮಣಿಖಚಿತಭಾವಾಕ್ತ ಮುಕುಟಾ -**
**ಶಿಖಾಗ್ರಾಲಂಬಿನ್ಯತ್ರಿಕತಲಮಸೌ ರತ್ನಶಿಖರಾತ್ ।**
**ಮಹಾಮೇರೋರ್ಲೀಲಾಂ ಕಲಯತಿ ಸದಾ ಯಾಮಕಲಿತಾಂ**
**ಶರತ್ಸೌದಾಮಿನ್ಯಾಃ ಕಟಕವರತೇಜೋಮಯತನೋ ॥೬೭॥**

೬೭. ಎಲೈ ಯೋಗಿಯೆ. ಶ್ರೇಷ್ಠವಾದ ಚಿನ್ನದಂತೆ ಹೊಳೆಯುವ ಶರೀರವುಳ್ಳವನೆ, ನಿನ್ನ ಒಂದು ಶಿರಸ್ಸೆಂಬುದು ಅನೇಕ ವಿಧವಾದ ಮಣಿರತ್ನಗಳಿಂದ ಖಚಿತವಾದ ಜಟೆಯೆಂಬ ಕೀರೀಟದ ತುದಿಯಲ್ಲಿ ಇಳಿಬಿದ್ದಿರುವ ಕೂದಲುಗಳಿಂದ ರಾತ್ರಿಯಲ್ಲಿ ಶರತ್ಕಾಲದ ಮೋಡಗಳಲ್ಲಿ ಹೊಳೆಯುವ ಮಿಂಚಿನ ಬಳ್ಳಿಗಳಿಂದ ಕೂಡಿದ ಮಹಾಮೇರುಪರ್ವತದ ಶಿಖರದಂತೆ- ಶೋಭಾಯಮಾನವಾಗಿರುವದು.

**ಸುವಿಜ್ಞಾತಂ ಲೋಕೈರನವಧಿಸದಾದೇಶನಪರೈಃ**
**ಸುಧಾಖಂಡಂ ಲಬ್ಧ್ವಾ ತವ ನಿಬಿಡಭಾವಾಂಕಮಮಲಮ್ ।**
**ದ್ವಿತೀಯಂ ಸೋಮೇಂದುಸ್ಫುಟಮುಕುಟತಃ ಕಾಂತಮನಘಂ**
**ಮಹಾಮೂರ್ತಿಜ್ಯೋತ್ಸ್ನಾ ಹರತಿ ನತದಾರಿದ್ರ್ಯತಿಮಿರಮ್ ॥೬೮॥**

೬೮. ಎರಡನೆಯ ಶಿರಸ್ಸು- ಲೋಕದಲ್ಲಿ ನಿನ್ನ ಅಪ್ಪಣೆಯನ್ನು ಯಾವಾಗಲೂ ಹೊತ್ತು ನಡೆಸುವ ಪರಿಜನರಿಂದ ಚನ್ನಾಗಿ ತಿಳಿಯಲ್ಪಟ್ಟದೆ. ಮತ್ತು ನಿನ್ನ ಪರಿಶುದ್ಧವೂ ಕೃಪೆಯಿಂದ ತುಂಬಿರುವದೂ ಆದ ಅಂತಃಕರಣವೆಂಬ ಅಮೃತದ ಖಂಡವನ್ನು ಪಡೆದುಕೊಂಡವರಿಗೆ, ಚಂದ್ರಸೂರ್ಯರ ಕಾಂತಿಯುಕ್ತವಾದ ಕಿರೀಟಗಳ ಶೋಭೆಯನ್ನೂ ಮೀರಿದ್ದಾಗಿರುವ ಆ ಮುಖವು ಬೆಳದಿಂಗಳು ಕತ್ತಲೆಯನ್ನು ಕಳೆಯುವಂತೆ ದಾರಿದ್ರ್ಯವೆಂಬ ತಮಸ್ಸನ್ನು ಕಳೆಯತಕ್ಕದ್ದಾಗಿರುವದು.

**ಧೃತಂ ಪುಂಡ್ರಂ ಮಾತ್ರಾತ್ರಿತಯರುಚಿರಂ ಸಾಕ್ಷರಮಿದಂ**
**ಸಹಸ್ರಾರೇ ಹಂಸೈಃ ಸ್ಥಿತಪರಮಹಂಸಾ ಜಿಗಮಿಷೋ ।**
**ವಹಂತೀ ಪಾದಾಬ್ಜದ್ವಯಸರಲಲಾಕ್ಷಾರಸಪದಂ**
**ಪರಾ ಶಕ್ತೇಶ್ಚಂದ್ರೋಪಲರಚಿತಸೋಪಾನಪದವೀ ॥೬೯॥**

೬೯. ಓಂಕಾರದ ಮೂರು ಮಾತ್ರೆಗಳಂತೆ ಮನೋಹರವಾದ, ಅಕ್ಷರ ತತ್ತ್ವಗೂಢವಾದ ನಿನ್ನ ಹಣೆಯಲ್ಲಿ ಧರಸಿರುವ ಪುಂಡ್ರ(ನಾಮ)ವು- ಸಹಸ್ರಾರದಲ್ಲಿ ಹಂಸಗಳೊಡಗೂಡಿ ಪರಮಹಂಸವನ್ನು ಸೇರಲಿಚ್ಛಿಸುವ ಆತ್ಮದಂತೆ ಇದೆ. ಮತ್ತು ಅದು ಪರಾಶಕ್ತಿಯ ಪಾದಕಮಲಗಳಿಂದ ಹರಿದುಬರುತ್ತಿರುವ ಅಮೃತರಸದ ಸರೋವರಕ್ಕೆ ಚಂದ್ರಕಾಂತ ಶಿಲೆಗಳಿಂದ ರಚಿಸಲ್ಪಟ್ಟ ಮೆಟ್ಟಲಿನಂತಿರುವದು.

**ಶ್ರಯೇತೇ ಹೈಮಂತೇ ತರುವಿಮಲಪತ್ರೇ ಮಧುಕರೌ**
**ಶುಭಂ ಮರ್ಮಾಂಭೋಜೇ ಸ್ಥಿತಮಿತಿ ಸುಚಿತ್ರಂ ಶಮನಿಧೇ ।**
**ಕಠೋರೇಂದುಪ್ರಾಂಶುಪ್ರವರನಿಕರೀಭೂತತಿಮಿರಂ**
**ಸುಧಾಂಶುರ್ಭಾವಾಕ್ತೋ ಮುಕುಲಯತಿ ವಿದ್ಯುಚ್ಛವಲಯಮ್ ॥ ೭೦ ॥**

೭೦. ಹೇಮಂತಋತುವಿನಲ್ಲಿ ವೃಕ್ಷದ ಮನೋಹರವಾದ ಎಲೆಯಲ್ಲಿ ಆಶ್ರಯಿಸಿ ಕೊಂಡಿರುವ ಎರಡು ದುಂಬಿಗಳೊ, ಎಂಬಂತೆ ಎಲೈ ಶಮನಿಧಿಯೆ, ಕಮಲದ ಮೊಗ್ಗು ಗಳಂತೆ ಇರುವ ನಿನ್ನ ಹುಬ್ಬುಗಳು ಇರುವವು. ಪ್ರಕಾಶಮಯನಾದ ಚಂದ್ರನು ಹೆಚ್ಚು ದಟ್ಟವಾದ ಕತ್ತಲೆಯನ್ನು ಕೂಡ ಹೋಗಲಾಡಿಸಿದರೂ ಕಮಲವನ್ನು ಮೊಗ್ಗಾಗಿ ಮಾಡು ವಂತೆ ನಿನ್ನ ಮುಖಚಂದ್ರನೂ ಹುಬ್ಬುಗಳಿಗೆ ಮೊಗ್ಗಿನ ಕಾಂತಿಯನ್ನೀಯುತ್ತಿರುವನು.

**ತಮೋಭಿರ್ಭೂಕಾಲೀಗೃಹಮಿದಮನುಜ್ಜೃಂಭಿತಮಿತಿ**
**ತ್ವದೀಯೇ ನೇತ್ರಾಬ್ಜೇ ಕಮಲಸದನಾ ಜೃಂಭಿತವತೀ ।**
**ಸದಾ ಸುಜ್ಞಾನೇನಾವಿಶತಿ ಸದಯಾಕ್ಷಿ ಪ್ರಸರತಿ**
**ಪ್ರಭೋ ಯಸ್ಮಿನ್ ಸ್ಯಾತ್ತೇ ಧ್ರುವಮತಿಧನೋಽಯಂ ಮುನಿಪತೇ ॥ ೭೧ ॥**

೭೧. ಭೂಲೋಕದ ಕಾಳಿಕಾದೇವಿಯ ಆಲಯದಂತೆ ಇರುವ, ಈ ನಿನ್ನ ಕಮಲ ದಂತಿರುವ ಕಣ್ಣುಗಳಲ್ಲಿ- ಇದು ಹೊರಮುಖವಾಗಲಾರದು- ಎಂದು ಯೋಚಿಸಿ ಲಕ್ಷ್ಮೀದೇವಿಯು ಆವಿರ್ಭವಿಸಿದಳು. (ಪ್ರತ್ಯಙ್ಮುಖನಾಗಿರುವ ನಿನ್ನ ನೇತ್ರಗಳಿಂದ ಹೊರಮುಖಳಾಗಿ ಲಕ್ಷ್ಮಿಯೇ ಹುಟ್ಟಿರುತ್ತಾಳೆ.) ಯಾವಾಗಲೂ ಉತ್ತಮ ಜ್ಞಾನದಿಂದಲೂ ದಯೆಯಿಂದಲೂ ಪರಿಪೂರ್ಣವಾಗಿದ್ದು ಹರಡಿರುವ ನಿನ್ನ ದೃಷ್ಟಿಯು ಯಾವನಲ್ಲಿ ಬೀಳುವದೋ ಅವನು-ಎಲೈ ಮುನಿಶ್ರೇಷ್ಠನೆ, ಮಹಾಧನಿಕನೇ ಆಗು ವನು.

**ಯದಾ ಯೋಗಿನ್ನೀಷದ್ ವಲಿರತಿಲಸತ್ ಕಾರಕದೃಶೋ -**
**ರುಪಾಂತೇ ನೀಲಾಲೀ ಉದರಯುಗಲೀ ಕಂಜದಲಯೋಃ ।**
**ವರಂ ಕಾರಾಯೇತೇ ಕನಕಮಕರೀಕುಂಡಲಯುಗೇ**
**ಕಟಾಕ್ಷೌ ಚಾಂಪೇಯಸ್ತಬಕವಿಚರಂತಾವಿವ ವರೌ ॥ ೭೨ ॥**

೭೨. ಎಲೈ ಯೋಗಿಯೇ, ಯಾವಾಗ ನಿನ್ನ ಕಮಲನೇತ್ರಗಳ ದಳಗಳ ತುದಿಯಲ್ಲಿ ಸ್ವಲ್ಪಮಟ್ಟಿಗೆ ಕಪ್ಪುಛಾಯೆಯ ಕಾಂತಿಯು ಪ್ರಕಾಶಮಾನವಾಗಿ ಹೊರ ತೋರುವದೋ ಆಗ ಶ್ರೇಷ್ಠವಾದ ಸಂಪಿಗೆಯ ಮೊಗ್ಗಿನಂತೆ ಇರುವ ಆ ಕುಡಿಗಣ್ಣಿನ ನೋಟಗಳು ಸುವರ್ಣಮಯವಾದ ಮಕರಕುಂಡಲಗಳೊಡನೆ ಕೂಡಿ ವಿಶೇಷವಾಗಿ ವಿರಾಜಿಸುವವು.

**ತ್ರಯೀ ವಿದ್ಯಾರೂಪಸ್ತ್ರಿತನುರಹಿಮಾಂಶುಃ ಪ್ರತಿದಿನಂ**
**ಶ್ರುತೌ ಭಾವಾತ್ ಕೇಚಿದ್ ವಿವಿಧಮಕರೀಕುಂಡಲಪದಃ ।**
**ಮಿಲಿತ್ವಾಽಽಮ್ನಾಯಂ ತೇ ಘನತರಮುಪಾಧಿದ್ವಯಮಪಿ**
**ವ್ಯನಕ್ತಿ ಶ್ರೀಕಾರೇ ನಿಖಿಲಜಗದುದ್ದೀಪಕ ಮುನೇ ॥ ೭೩ ॥**

೨೩. ಇಡಿಯ ಜಗತ್ತನ್ನೇ ಎಚ್ಚರಿಸುವ ಎಲೈ ಮುನಿಯೆ, ವೇದವಿದ್ಯಾರೂಪವಾದ ತ್ರಿವಿಧಶರೀರಗಳ ಸಾರವಾದ ತಂಪಿಲ್ಲದ ಚಂದ್ರನಾಗಿರುವ ನಿನ್ನ ಕಿವಿಯಲ್ಲಿರುವ ಕುಂಡಲಗಳು ಪ್ರತಿದಿನವೂ ಶುಭ್ರ ಶರೀರದೊಡನೆ ಒಂದಾಗಿ ಸ್ಥೂಲಸೂಕ್ಷ್ಮಗಳೆಂಬ ಎರಡು ಉಪಾಧಿಗಳ ಮೇಳನದಿಂದ ಸೃಷ್ಟಿಯಾಗುವಂತೆ ನಿನ್ನ ಸ್ವರೂಪದಲ್ಲಿ ಶ್ರೀಕಾರ ವನ್ನು ಸ್ಫುಟಗೊಳಿಸುತ್ತಿರುವವು.

**ಕಪೋಲೌ ಯಾವಷ್ಮಾಕೌ ಸ್ಫುಟಮುಕುರಬಿಂಬಪ್ರತಿಭಟೌ**
**ಭೃಶಂ ಸಂಘರ್ಷಿತ್ವಾತ್ ಪ್ರತಿದಿನಸಮಾರೋಪಿತರುಚೌ ।**
**ನಿಜಾ ಕಾಂತಿರ್ನಿತ್ಯಾ ಕನಕನಿಕಷೋಽತ್ಯಂತಮಹಿಮಾ**
**ತ್ವದೀಯೋ ನೀಚೈವ ಪ್ರಚುರತರಕಾಂತಿಸ್ತವ ಮುನೇ ॥ ೨೪ ॥**

೨೪. ಎಲೈ ಮುನಿಯೆ, ನಿಮ್ಮ ಎರಡು ಕೆನ್ನೆಗಳು ಸ್ವಚ್ಛವಾದ ಕನ್ನಡಿಯ ಪ್ರತಿಬಿಂಬ ಶಕ್ತಿಯನ್ನೂ ಎದುರಿಸುವವುಗಳಾಗಿ ಯಾವಾಗಲೂ ಒಂದರೊಡನೊಂದು ಸ್ಪರ್ಧಿಸುತ್ತಿರುವದರಿಂದ ಪ್ರತಿದಿನವೂ ಹೆಚ್ಚುತ್ತಿರುವ ಕಾಂತಿಯುಳ್ಳವುಗಳಾಗಿ, ಚಿನ್ನ ದೊಡನೆ ಒರೆಹಚ್ಚಿ ದಾಗಲೂ ಹೆಚ್ಚಿನ ಮಹಿಮೆಯಿಂದ ಎದ್ದು ತೋರುವಂಥ ನಿತ್ಯವಾದ ನಿಮ್ಮ ಪ್ರಕಾಶವನ್ನೂ ಹಿಮ್ಮೆಟ್ಟಿಸುತ್ತಿರುವವು. ಆದರೂ ನಿಮ್ಮ ತೇಜಸ್ಸು ಅಧಿಕತರ ವಾಗಿಯೇ, ಇರುವದು.

**ಮುಖೇಂದುಂ ದೃಷ್ಟ್ವಾ ತೇ ಯದಿ ವಿಶತಿ ರಾಹುಪ್ರತಿಭಯಾತ್**
**ಶಶೀ ವಕ್ತ್ರಂ ಪ್ರಾಪ್ಯ ದ್ವಿಗುಣಿತಕಲಾನಾಂ ನಿಧಿರಭೂತ್ ।**
**ದ್ವಿಜಾನಾಂ ರಾಜತ್ವಂ ಪ್ರಕಟಿತಮತೇ ದತ್ತಶರಣೇ**
**ಬಲೇನಾಹೋ ಸ್ವಾಮಿನ್ ಕಥಮಪಿ ಚ ಲಭ್ಯೋ ಹಿ ಮಹಿಮಾ ॥ ೨೫ ॥**

೨೫. ಎಲೈ ಪ್ರಭುವೆ, ಚಂದ್ರನು ರಾಹುವಿಗೆ ಅಂಜಿದವನಾಗಿ ನಿನ್ನ ಮುಖ ಕಮಲವನ್ನು ಕಂಡು ಅದನ್ನು ಒಳಹೊಕ್ಕವನಾದನು. ಇದರಿಂದ ಅವನು ತನ್ನ ಕಲೆಗಳನ್ನು ದ್ವಿಗುಣವಾಗಿ ಮಾಡಿಕೊಂಡವನಾಗಿ ಕಲಾನಿಧಿಯೆನಿಸಿದನು. ಮತ್ತು ಎಲೈ ಜ್ಞಾನಿಯೆ, ಆ ಚಂದ್ರನು ದ್ವಿಜರಾಜನೆಂದೂ ಪ್ರಖ್ಯಾತನಾದನು. ಆಶ್ಚರ್ಯವೆಂದರೆ : ದತ್ತನಿಗೆ ಶರಣಾಗುವದರ ಬಲದಿಂದ ಹೇಗೋ ಮಹಿಮೆಯನ್ನೂ ಪಡೆಯಬಹು ದಲ್ಲವೆ?

**ತವಾಯಂ ಬಿಂಬೋಷ್ಠಶ್ಚುಬುಕಸಹಿತೋ ವಿದ್ರುಮಲತಾ -**
**ಸಮಾಕ್ಷಿಪ್ತಾ ತಿರ್ಯಗ್ಯದಿ ಬಹುಪದಂ ಸ್ಯಾತ್ ಫಲಯುಗಮ್ ।**
**ವ್ರಜೇ ತತ್ಸಾಮ್ಯಂ ತನ್ನಿಹಿತಮುತ ವಾ ಪಲ್ಲವದಲಂ**
**ಯದಿ ಸ್ಯಾತ್ತೇ ನಾರಸ್ತುಲಯಿತುಮಹೋ ಸಂಯಮಿಪತೇ ॥ ೨೬ ॥**

೭೬. ಎಲೈ ಯತಿಶ್ರೇಷ್ಠನೆ, ಗಲ್ಲದಿಂದ ಕೂಡಿದ ನಿನ್ನ ತುಟಿಗಳು ಹವಳದ ಬಳ್ಳಿಯು ಎಲೆಗಳಿಂದ ಸುತ್ತುವರಿಯಲ್ಪಟ್ಟು ಕೆಳಮುಖವಾಗಿ ಎರಡು ಹಣ್ಣುಗಳನ್ನು ಜೋತು ಬಿಟ್ಟಿರುವಂತೆ ಕಂಡುಬರುತ್ತಿದೆ. ಅಥವಾ ಉಪಮಾನವನ್ನು ಕೊಡಬಹುದಾದ ಚಿಗುರುಗಳು ಯಾವದಾದರೂ ಇದ್ದರೆ ಅವುಗಳಲ್ಲಿರುವ ಕಾಂತಿಯಾದರೂ ನಿನ್ನ ತುಟಿಗಳಿಗೆ ಹೋಲಿಕೆ ಯಾದೀತು.

**ಭವದ್ವಾಣೀಶ್ರೇಣೀಂ ಶ್ರವಣಪುಟಸೌಖ್ಯಪ್ರಕರಣೀಂ**
**ವಿಜೇತುಂ ವಾಕ್ ಶ್ರುತ್ವಾ ಸ್ವಯಮುತ ವಿದಿತ್ವಾಽಹಮಿತಿ ಭಾಕ್ ।**
**ಆಶಕ್ತಾ ತೇಽತ್ಯಂತಂ ಫಣಿಲಲಿತಜಿಹ್ವಾಗ್ರಮಿಷತಃ**
**ಪ್ರವಿಷ್ಟಾ ವಕ್ತ್ರಾಂತಂ ಸಿತಮಣಿಲಸದ್ ವಿದ್ರುಮಗೃಹಮ್ ॥ ೭೭ ॥**

೭೭. ಕಿವಿಗಳಿಗೆ ಇಂಪಾದ ನಿನ್ನ ಮಾತಿನ ಸರಣಿಯನ್ನು ಗೆಲ್ಲುವದಕ್ಕಾಗಿ ತಾನೇ ಹೆಚ್ಚಿನವಳೆಂದು ಭಾವಿಸಿದ ವಾಗ್ದೇವತೆಯು ಸರಳವಾದ ಶಬ್ದಗಳ ರೂಪದಿಂದ ನಿನ್ನ ನಾಲಗೆಯ ತುದಿಯನ್ನು ಪ್ರವೇಶಿಸಿದವಳಾಗಿ, ನಿನ್ನನ್ನು ಗೆಲ್ಲಲು ಸಾಧ್ಯವಾಗದೆ ಶುದ್ಧವಾದ ಮಣಿಗಳಂತೆ ಇರುವ ಹಲ್ಲುಗಳುಳ್ಳ, ಹವಳದ ಮನೆಯೆಂಬ ನಿನ್ನ ಬಾಯಲ್ಲಿ ಯಾವಾಗಲೂ ಇದ್ದು ಕೊಂಡಿರುವಳು.

**ತವಾವೃತ್ತಾ ರೇಖಾತ್ರಯವಿಲಸಿತಾಕಂಬರಭವ-**
**ಚ್ಛರಾಣಾಮಾಧಾರಃ ಕಥಮಭವದೇತನ್ನ ಯದಿ ಚೇತ್।**
**ಅಥೇಮಾಮೂದೇಹಾ ತ್ವಿಹ ಕವಿಹರಾದ್ಯಾಕೃತಿಧರಾಂ**
**ತದಾ ನೋ ಚೇದ್ವೇದತ್ರಿತಯಕಲಿತಾಂ ವಾಪಿ ಗಣಯೇ ॥ ೭೮ ॥**

೭೮. (ಈ ಶ್ಲೋಕದ ಅಭಿಪ್ರಾಯವು ತಿಳಿದಿಲ್ಲ.)

**ಮಹಾನಂತಶ್ಚಾಸೀದ್ವಿಷಧರವರೋ ವಾಸುಕಿರಸೌ**
**ನಿಬರ್ಹಂತೌ ಮರ್ತ್ಯಾಧಿಕಭಯಕರತ್ವಂ ಗಣಯತಾಮ್ ।**
**ಭುಜಾಕಾರೌ ಸ್ವೀಯೌ ತವ ತು ಭುಜಸತ್ವಂ ವಿದಧತಾಂ**
**ಮುನೇ ಭೂತೌ ಸ್ನಿಗ್ಧೌ ಸಪದಿ ವರದೌ ಚಾಭಯಕರೌ ॥ ೭೯ ॥**

೭೯. ಎಲೈ ಮುನಿಯೆ, ಮಹಾವಿಷಧಾರಿಯಾದ ಅನಂತನೂ ಈ ವಾಸುಕಿಯೂ ಮನುಷ್ಯರಿಗೆ ಹೆಚ್ಚಿನ ಭಯವನ್ನುಂಟುಮಾಡುವವರಾಗಿ ಪರಿಗಣಿಸಲ್ಪಟ್ಟಿದ್ದರು. ಆದರೆ ಅವರು ಯಾವಾಗ ನಿನ್ನ ಭುಜಗಳ ಆಕಾರವನ್ನು ಹೊಂದಿದರೋ, ಆ ಕೂಡಲೆ ಎಲ್ಲರಿಗೂ ಪ್ರಿಯರಾಗಿ, ವರಪ್ರದರಾಗಿ, ಅಭಯದಾಯಕರಾಗಿ ಆಗಿಬಿಟ್ಟರು.

**ಮುನೇ ಗಂಗಾಸ್ರೋತೋಮರವರಗಿರಿಪ್ರಾಸ್ಥಫಲಕೇ**
**ಪ್ರಸಾದೇ ಸ್ವರ್ಣಾಢ್ಯೇ ಪ್ರಭವಭವಮದ್ಧಾಗಲುಲಿತಮ್ ।**
**ತ್ರಿಸೂತ್ರಂ ಸುಸ್ನಿಗ್ಧಂ ಧವಲಮುಪವೀತಂ ಕಲಯತೇ**
**ಮಹಾಯೋಗಿನ್ ಮೂರ್ತಿತ್ರಯಮಪಿ ವಿಲೀನಂ ತದಥವಾ ॥ ೮೦ ॥**

೮೦. ಎಲೈ ಮುನಿಯೆ, ದೇವಗಿರಿಯ ಸುವರ್ಣಮಯವಾದ ತಪ್ಪಲು ಪ್ರದೇಶದಲ್ಲಿ ತೋರುತ್ತಾ ಹಾರುತ್ತಾ ನಲಿಯುತ್ತಾ ಹರಿದು ಬರುತ್ತಿರುವ ಗಂಗಾ ಪ್ರವಾಹದಂತೆ ನಿನ್ನ ಸುಂದರವಾದ ಶುಭ್ರವಾದ ಮೂರು ದಾರಗಳಿಂದ ಕೂಡಿದ ಯಜ್ಞೋಪವೀತವು ವಿರಾಜ ಮಾನವಾಗಿರುವದು. ಎಲೈ ಮಹಾಯೋಗಿಯೆ, ಅಥವಾ ಬ್ರಹ್ಮವಿಷ್ಣು ಮಹೇಶ್ವರರೆಂಬ ತ್ರಿಮೂರ್ತಿಗಳೂ ಕಲೆತಿರುವರೊ, ಎಂಬಂತೆ ಅದು ಕಂಡುಬರುತ್ತಿದೆ.

**ಪ್ರಸಿದ್ಧಃ ಸ್ವರ್ಣಾದಿರ್ದಿವಿ ವಿಬುಧವಾಚೋ ವಿತರಣಾತ್**
**ಪ್ರಶಸ್ತೌ ತೌ ಶಸ್ತೌ ಅಖಿಲಪುರುಷಾರ್ಥಪ್ರಕರಣಾತ್ ।**
**ಜನಾನಾಂ ಪಾದಾಬ್ಜದ್ವಿತಯಮಧಿಕಂ ಪ್ರೇಮ ಭಜತಾಂ**
**ಮುನೀಂದ್ರ ತ್ರೈಲೋಕ್ಯಾದ್ಭುತಗಣಮಣಿಕ್ಷೀರಜಲಧೇ ॥೮೧॥**

೮೧. ಎಲೈ ಮುನಿಶ್ರೇಷ್ಠನೆ, ಮೂರು ಲೋಕಕ್ಕೂ ಅದ್ಭುತವಾದ ಕೌಸ್ತುಭಮಣಿಯನ್ನು ಹೆತ್ತಕ್ಷೀರಸಮುದ್ರದಂತಿರುವವನೆ, ಸ್ವರ್ಗಲೋಕದಲ್ಲಿ ದೇವತೆಗಳ ಮಾತುಗಳಲ್ಲಿಯೂ ಪ್ರಸ್ತಾಪಿ ಸಲ್ಪಟ್ಟ, ಪ್ರಸಿದ್ಧವಾದ ಆ ಪೂಜ್ಯವಾದ ಎರಡು (ಹಸ್ತಗಳು) ಹೆಚ್ಚಿನ ಪ್ರೇಮದಿಂದ ನಿನ್ನ ಪಾದಾರವಿಂದಗಳನ್ನು ಭಜಿಸುವ ಜನರಿಗೆ ವರಪ್ರದವಾಗಿರುವವು.

**ಇಯಂ ರೋಮ್ಣಾಂ ರಾಜಿರ್ವಿಲಸತಿ ಮಹಾನಾಭಿಸರಸಃ**
**ಪ್ರವೃತ್ತಾ ಕುಲ್ಯೇವ ಪ್ರತಿಪತಿತಭಂಗ್ಯಸ್ತ್ರಿವಲಯಃ ।**
**ನವಾಲೇಖಾಲೋಕತ್ರಯವಿಭಜನಾರ್ಥೇ ವಿರಚಿತೌ**
**ಮುನೇ ದತ್ತಾತ್ರೇಯ ತ್ವದುದರವಿಲಗ್ನಾ ವಿಲಸಿತಾ ॥೮೨॥**

೮೨. ಎಲೈ ದತ್ತಾತ್ರೇಯ ಮುನಿಯೆ, ದೊಡ್ಡದಾದ ಹೊಕ್ಕುಳೆಂಬ ಸರೋವರದಿಂದ ಹೊರಟಿರುವ ಕಾಲುವೆಯಂತೆ ಇರುವ ವಕ್ರವಾದ ಆಕಾರವುಳ್ಳ ನಿನ್ನ ಹೊಟ್ಟೆಯನ್ನಾಶ್ರಯಿಸಿರುವ ಮೂರುಸುತ್ತಿನ ಈ ರೋಮರಾಜಿಯು ಹೊಸದಾಗಿ ಸೃಷ್ಟಿಸಲ್ಪಟ್ಟ ಮೂರು ಲೋಕಗಳನ್ನು ವಿಭಜನೆಮಾಡಲು ಬರೆದಿರುವ ಗುರುತಿನ ಗೆರೆಗಳಂತೆ ವಿರಾಜಿಸುತ್ತಿರುವದು.

**ಧ್ರುವಂ ಶಂ ಮಾಮೌಂಜೀತ್ರಿತಯವಲಿರೇಖಾವರತನೋ**
**ರುರುಕ್ಷೋಃ ಪ್ರಾಸಾದಂ ಸ್ವಶಯಹೃದಯಾಖ್ಯಂ ತವ ಹರೇ ।**
**ಮಹಾಲಕ್ಷ್ಮ್ಯಶ್ಚಂಚತ್ಕನಕಮಯಸೋಪಾನಪದವೀ**
**ನ ಚೇನ್ನಾಭೀಕುಂಡೇ ಪುರಿಚಿದುಪಲಬ್ಧಾ ಪರಿದಯಾ ॥೮೩॥**

೮೩. ಸುಖಕರವಾದ ಲಕ್ಷ್ಮೀಸೂಚಕವಾದ ಮೂರುಸುತ್ತಿನ ಮೌಂಜೀ ರೇಖೆಯಿಂದ ಅಲಂಕೃತವಾದ ಶರೀರವುಳ್ಳವನೆ, ತನ್ನ ಆತ್ಮಸ್ವರೂಪವೇ ಆದ ಹೃದಯ ಗುಹೆಯೆಂಬ ಉಪ್ಪರಿಗೆಯನ್ನು ಏರಲಿಚ್ಛಿಸುವವನಿಗೆ ಅದು ಮೆಟ್ಟಿಲಿನಂತಿರುವದು ಮತ್ತು

ಚಂಚಲೆಯಾದ ಮಹಾಲಕ್ಷ್ಮಿಯ ಗೃಹದ ಸುವರ್ಣಮಯವಾದ ಮೆಟ್ಟಿಲಿನಂತೆಯೂ ಇದೆ. ಹಾಗಿಲ್ಲದಿದ್ದರೆ ಅದು ನಾಭಿಯ ಮೇಲ್ಭಾಗದಲ್ಲಿಯೇ ಕರುಣೆಯಿಂದ ಏಕೆ ರಚಿಸಲ್ಪಡುತ್ತಿತ್ತು?

**ಪ್ರವೃತ್ತಾವೂರೂ ತೇ ಲಸದುದರಲೋಕವ್ರಜಧೃತಿಃ**
**ಧೃತಾ ಸಾ ಕುರ್ವೀಂದ್ರಸ್ಫುಟಪಟುಕರೌ ಸಂಪ್ರಕಟಿತೌ ।**
**ಕಟೌ ವಿಸ್ತಾರೌ ಯತ್ಕಟಕಫಲಕೌ ತಾವಿವ ಮುನೇ**
**ಮಹಾಯೋಗಿನ್ ವಿಶ್ವಂಭರ ಇತಿ ಚ ನೂನಂ ತ್ವಮಧಿಸೂಃ ॥ ೮೪ ॥**

೮೪. ಎಲೈ ಮಹಾಯೋಗಿಯೆ, ನಿನ್ನ ಪ್ರಕಾಶಮಾನವಾದ ಹೊಟ್ಟೆಯಲ್ಲಿರುವ ಲೋಕಗಳ ಸಮೂಹವನ್ನು ಧರಿಸುವ ಶಕ್ತಿಯುಳ್ಳ ಎರಡು ತೊಡೆಗಳು (ಲೋಕೇಶನಾದ) ಇಂದ್ರನಂತೆ ಸಮರ್ಥವಾದವುಗಳೆಂದು ಕಂಡುಬರುತ್ತಿವೆ. ಅವು ಸೊಂಟದಲ್ಲಿ ಹರಡಿ ಕೊಂಡಿರುವ ಚಿನ್ನದ ಫಲಕಗಳಂತೆಯೂ ಇದ್ದುಕೊಂಡು ನೀನು ಜಗತ್ತನ್ನೇ ಧರಿಸಿರುವವನು, ಹಾಗೂ ಅದನ್ನು ಮೀರಿದವನು- ಎಂಬುದನ್ನು ಸೂಚಿಸುವವು.

**ಕೃಪಾಲೋ ವಿಶ್ವೇಶ ತ್ರಿಭುವನತಲೇ ತೇ ಪ್ರಮಿತಿತೋ**
**ದಿವಾ ರಾತ್ರೌ ಸ್ಥಾನಂ ಮಿಲತಿ ವಪುಷೋ ಜಾನುಯುಗಲಮ್ ।**
**ಅಭಕ್ತಾನಿತ್ಯೇತತ್ಕಥಿತಮಭಿಯುಕ್ತೈಃ ಸಮತನೋಃ**
**ಪ್ರದುಷ್ಯಂತೇ ಸಂಪ್ರತ್ಯಪಿ ತದಿದಮರ್ಥಂ ಹಿ ಸುದೃಢಮ್ ॥ ೮೫ ॥**

೮೫. ಎಲೈ ಕೃಪಾಳುವೆ, ವಿಶ್ವೇಶ್ವರನೆ, ಮೂರುಲೋಕಗಳಲ್ಲಿಯೂ ಹಗಲೂ ರಾತ್ರೆಯೂ ತಿರುಗಾಡುತ್ತಾ ಭಕ್ತರಲ್ಲದವರನ್ನು ಅಳತೆ ಹಾಕುವದರಲ್ಲಿ ನಿನ್ನ ಮೊಣಕಾಲು ಗಳೆರಡೂ (ಪ್ರವೃತ್ತ ವಾಗಿವೆಯೋ-ಎಂಬಂತೆ) ನಿನ್ನ ಶರೀರದಲ್ಲಿ ಸ್ಥಾನವನ್ನು ಹೊಂದಿವೆ. ಸಮಭಾವನೆಯುಳ್ಳವನಾದ ನಿನಗೆ ಇದು ಹೇಗೆ ಹೋಂದೀತು? ದೋಷವಾದೀತಲ್ಲವೆ? ಎಂದು ಇಂದಿಗೂ ಬಲ್ಲವರಿಂದ ಹೇಳಲ್ಪಡುತ್ತಿದೆ. ಈ ಅಭಿಪ್ರಾಯವು ಈಗ ದೃಢವಾಗಿದೆ.

**ಜಗನ್ಮೂಲಂ ಸೃಷ್ಟ್ವಾ ಸಕಲಜಗತಾಂ ಸರ್ವಕುಶಲೋ**
**ಭವೇಜ್ಜಂಘೇ ಲಕ್ಷ್ಮೀಕೃದಸಮಸರಸ್ಯಃ ಪ್ರಕುರುತೇ ।**
**ಪ್ರಕೃಷ್ಟೌ ತೌ ವೀರೌ ಭ್ರಮಯಿತವಿಲಕ್ಷ್ಯೋಽಲ್ಪಗುಣವಾನ್**
**ಮುನೇ ತೇ ನಾನಾಂಗಸ್ತವ ತು ವಿಮುಖೋ ಲಕ್ಷಣವತಃ ॥ ೮೬ ॥**

೮೬. ಎಲೈ ಮುನಿಯೆ, ಎಲ್ಲಾ ಬ್ರಹ್ಮಾಂಡದ ಮೂಲವನ್ನೂ ಉಂಟುಮಾಡಿ ಬಹಳ ಕುಶಲನಾದ ನೀನು ಲಕ್ಷ್ಮೀಪ್ರದವಾದ ನಿನ್ನ ಕಣಗಾಲುಗಳಲ್ಲಿ ವೈಷಮ್ಯವನ್ನು (ಸೃಷ್ಟಿ ವೈಚಿತ್ರ್ಯವನ್ನು) ಇಟ್ಟಿರುವೆ. ಸುಪ್ರಸಿದ್ಧವಾದ ಬಲವಾದ ಆ ಎರಡು

(ಕಾಲುಗಳು) ತಿರುಗುವಿಕೆಯಿಂದಲೇ ಈ ಅಲ್ಪವಾದ ವೈಚಿತ್ರ್ಯವನ್ನು ಹೊರಹಾಕುವವು. ಹೀಗೆ ನಿನ್ನ ಅನೇಕ ಅವಯವಗಳು ಲಕ್ಷಣವಂತನಾದ ನಿನಗೆ ಹೊರತಾಗಿಯೇ ಇವೆ.

**ನರಾಣಾಂ ನಾನಾರ್ಥಪ್ರದರಸಗುಟಿತ್ವಂ ಚ ದಧತೋ**
**ಮುನೇ ಗುಲ್ಫೌ ಗೂಢೌ ತವಚರಣಪುಷ್ಟೌ ಪ್ರಕಟಿತೌ ।**
**ಘಟಾವೃತ್ತಿರ್ನಾರ್ಯೋರಿವ ಸಕಲಕೌ ವೃತ್ತರುಚಿರೌ**
**ವಿರಾಜೇತೇ ತೇಜೋನಿಕರಕವಿತಾಯಾಂ ಸುವಪುಷಾ ॥ ೮೭ ॥**

೮೭. ಎಲೈ ಮುನಿಯೆ, ಮನುಷ್ಯರಿಗೆ ಅನೇಕ ಪ್ರಯೋಜನಗಳನ್ನುಂಟು ಮಾಡುವ ಕುಪ್ಪಿಗೆಮಾತ್ರೆಗಳಂತೆ ಇರುವ ನಿನ್ನ ಹಿಮ್ಮಡಿಯ ಗಂಟುಗಳು ನಿನ್ನ ಪಾದಗಳ ಮಾಂಸಖಂಡ ಗಳಿಂದ ಬೆಳೆಸಲ್ಪಟ್ಟು ಗೂಢವಾಗಿಯೇ (ಸ್ವಲ್ಪವೇ) ಹೊರತೋರಿ ಕೊಂಡಿವೆ. ಸ್ತ್ರೀಯರ ಘಟೋಪಮವಾದ (ಗುಲ್ಫಗಳಂತೆ) ಸುಂದರವಾಗಿರುವ ಇವು ಒಳ್ಳೆಯ ಶರೀರದೊಡನೆ ಕೂಡಿ ಪ್ರಕಾಶಗಳ ಸಮೂಹದಲ್ಲಿ ಹೊಳೆಯುತ್ತಿರುವವು.

**ಸದಾಧಾರಂ ಯುಷ್ಮತ್ ಪ್ರಪದಮತಿಪೂಜ್ಯಂ ಸುರುಚಿರಂ**
**ಧ್ರುವಾತ್ಮಾನಂ ಮತ್ವಾ ಜಿತಮಿತಿ ಸದಾ ಕಚ್ಛಪಪತಿಃ ।**
**ವಿವೇಶಾದೌ ಭೂಮೇರ್ಯದಿ ತದಿದಮೇಕಂ ಸ್ಮಯಕರಂ**
**ತ್ವಿದಾನೀಂ ತಜ್ಜಾತಿರ್ಮುಕುಲಿತಶಿರಶ್ಚಾಭವದಹೋ ॥ ೮೮ ॥**

೮೮. ಸತ್ಪುರುಷರಿಗೆ ಆಶ್ರಯವಾದ, ಅತಿಪೂಜ್ಯವಾದ, ಮನೋಹರವಾದ ನಿಮ್ಮ ಮುಂಗಾಲುಗಳು ತನ್ನನ್ನು ಗೆದ್ದುಬಿಟ್ಟವೆಂದು ಭಾವಿಸಿ ಆಮೆಯ ರಾಜನು ಭೂಮಿಯೊಳಗೆ ಪ್ರವೇಶಿಸಿಬಿಟ್ಟನು ; ಓೀಗೆಂಬುದು ನಿಜವಾದರೆ ಈಗ ಆ ಜಾತಿಯ ಪ್ರಾಣಿಗಳೆಲ್ಲವೂ ತಲೆತಗ್ಗಿಸಿದವುಗಳಾಗಿಯೇ ಇದ್ದುಕೊಂಡಿರುವದು ಇನ್ನೂ ಆಶ್ಚರ್ಯ ಕರವೇ ಆಗಿದೆ.

**ಮಯಾ ದತ್ತಂ ಕಿಂಚಿನ್ನ ಯದಿ ಕಲಿತಂ ವಾಸವಮಹಂ**
**ತದಾರೋಚಿರ್ಜಾನಂ ಜನನಮಪಿ ಪಂಕಪ್ರಕಟಿನಮ್ ।**
**ಪ್ರವಿಶ್ಯೇತ್ಯಾಯೋಜ್ಯಂ ನ ಚಲತಿ ಹ ಯತ್ತತ್ತ್ವದಭಿಯಾ**
**ಪದಂ ತೇ ತು ಶ್ರೀದಂ ಸಕಲಸಮಯೇ ಶ್ರೀನಿಲಯನಮ್ ॥ ೮೯ ॥**

೮೯. ಲಕ್ಷ್ಮೀಪ್ರದವಾದ ಹಾಗೂ ಯಾವಾಗಲೂ ಸಂಪತ್ತಿಗೆ ಆವಾಸಸ್ಥಾನವಾದ ನಿನ್ನ ಪಾದವು, ನಾನು ಏನೊಂದನ್ನೂ ದಾನಮಾಡಿದವನಲ್ಲವಾದರೂ ಪಾಪಿಷ್ಠನಾದ ನನ್ನ ಹುಟ್ಟನ್ನು ಪವಿತ್ರಗೊಳಿಸಿ ಅಭಯವನ್ನುಂಟುಮಾಡಿ ದೇವೇಂದ್ರನನ್ನೂ ಮೀರಿದ ಸಂಪತ್ತನ್ನು ಕೊಟ್ಟು ನನ್ನ ಹೃದಯವನ್ನು ಹೊಕ್ಕು ಉದ್ಧಾರ ಮಾಡಿರುವದು.

**ಮುನೇ ತೇ ಪಾದಾಬ್ಜಂ ನವಮಮೃತಪಾದೋದ್ಭವಮಹೋ**
**ಶ್ರಿತಃ ಸೌಂದರ್ಯಂ ತತ್ ಪಶುಪತಿಶಿರೋಽಬ್ಜಂ ಹಿಮಕರಃ ।**

**ನಿವೃತ್ತಂ ಸ್ವಸ್ಯಾಂಕಂ ಭಜತಿ ಭವದೇಕಾತ್ಮಪುರುಷಾಃ**
**ಕಥಂ ಬ್ರಹ್ಮಾಗಾರೇ ಪರಮಪುರುಷಾನಾಂಘ್ರಿಭಜನಾ ॥೯೦॥**

೯೦. ಎಲೈ ಮುನಿಯೆ, ಹೊಸದಾದ ಅಮೃತದ ಅಂಶದಿಂದ ಹುಟ್ಟಿದ ನಿನ್ನ ಪಾದ ಕಮಲದ ಸೌಂದರ್ಯವನ್ನು ಪರಮೇಶ್ವರನ ಜಟಾಜೂಟವನ್ನಾಶ್ರಯಿಸಿರುವ ಕಳಂಕ ರಹಿತ ನಾದ ಚಂದ್ರನು ಸ್ವೀಕರಿಸಿರುವನು. ನಿನ್ನನ್ನೇ ಧ್ಯಾನಿಸುವ ಭಕ್ತರು ಬ್ರಹ್ಮನ ಅರಮನೆಯಲ್ಲಿದ್ದರೂ ಪರಮಪುರುಷನಾದ ನಿನ್ನನ್ನೇ ಭಜಿಸುವರು. ಇಂಥ ಪಾದ ಗಳುಳ್ಳ ನೀನು ಪೂಜ್ಯ ನಾಗಿರುವೆ.

**ನ ಚಿತ್ರಂ ತೇ ಪಾದೌ ವಿವರತ ಇತಿ ಪ್ರಾರ್ಥಿತಫಲಂ**
**ವಿಧಿಂ ಶ್ರೀಶಂ ರಕ್ಷಾಕಲುಷವಿಪದಂ ದೃಶ್ಯಮತುಲಮ್ ।**
**ಸ್ಮರಾಂತಶ್ರೀಗಂಗಾಧರಚರಣಶಂಖಾಂಬುಜಸುರ -**
**ದ್ರುಮಾಶ್ಚಂಚದ್ಭಾವಾನತಜನಪದಾನಂದಕಲನಾತ್ ॥೯೧॥**

೯೧. ನಿನ್ನ ಪಾದಗಳು ಬೇಡಿದ ವರಗಳನ್ನು ಕೊಡುತ್ತವೆ - ಎಂಬುದೇನೂ ಆಶ್ಚರ್ಯವಲ್ಲ. ಏಕೆಂದರೆ ಶಂಖ, ಪದ್ಮ, ದೇವತರುಗಳ ಚಿಹ್ನಾಲಂಕೃತವಾದ ಕಾಮವೈರಿ ಯಾದ ಪರಮೇಶ್ವರನ ಪಾದಗಳು, ಸೇವೆಯನ್ನು ಕೈಗೊಳ್ಳುವ ಜನರಿಗೆ ಆನಂದವನ್ನುಂಟು ಮಾಡುವದು ಪ್ರಸಿದ್ಧವಾಗಿರುವದರಿಂದ (ಅಂಥ ಪರಮೇಶ್ವರನಾದ ನೀನು) ಬ್ರಹ್ಮನನ್ನೂ ವಿಷ್ಣುವನ್ನೂ ಒಳಗೊಂಡು ಎಲ್ಲ ದೇವತೆಗಳ ಸ್ವರೂಪನೂ ಆಗಿದ್ದೀಯೆ. ದಟ್ಟವಾದ ಹಾಗೂ ವಿಪತ್ಕಾರಕವಾದ ದೃಶ್ಯ (ವಸ್ತು)ಗಳಿಂದ ರಕ್ಷಿಸು ವವನೂ ಆಗಿರುವೆ.

**ತ್ರಿಖಂಡೈಃ ಶ್ರೀವಿದ್ಯಾಮನುವರಭವೈರ್ಭಾವಕರಿಪೋ**
**ವಿವೃದ್ಧಸ್ತೇ ಮಂತ್ರೋ ವಿಷವದತಿ ಯೋ ಜ್ಯೋತಿರಮಲಮ್ ।**
**ಷಡರ್ಣಾಚಂದ್ರಾರ್ಕಪ್ರಕರರುಚಿ ತನ್ಮೇ ಪ್ರಭವತಾಂ**
**ಸದಾ ಜ್ಞಾನಾನಂದಂ ಯುವತಿನ್ನಮಯಂ ಲೋಚನಪದಮ್ ॥೯೨॥**

೯೨. ಸಂಸಾರಶತ್ರುವಾದವನೆ, ವಿಮಲವಾದ ಜ್ಯೋತಿಃಸ್ವರೂಪವಾದ, ಶ್ರೀವಿದ್ಯೆ, ಶ್ರೇಷ್ಠನಾದ ಮನುವಿನ (ಬೀಜಾಕ್ಷರಗಳಿಂದ) ಕೂಡಿದ ಮೂರು ವಿಭಾಗ ವುಳ್ಳಂಥ ನಿನ್ನ ಮಂತ್ರವು ವಿವೃತವಾಗಿರುವದು. ಷಟ್‌ಚಕ್ರವ್ಯಾಪಿಯೂ ಸೂರ್ಯ ಚಂದ್ರರಂತೆ ತೇಜೋ ಮಯವೂ ಆದ ಅದು ನನಗೆ ಯಾವಾಗಲೂ ಮುಕ್ತಿಯೆಂಬ ಯುವತಿಯ ಕಣ್ಣುಗಳಂತೆ ಇರುವ ಜ್ಞಾನಾನಂದಗಳನ್ನು ಉಂಟು ಮಾಡಲಿ.

**ಸಮುನ್ಮೀಲದ್ ಭಾನುಪ್ರಕರರುಚಿ ವಾಕ್‌ಬೀಜಮಮಲಂ**
**ಮರುತ್ವದ್ ಗೋಪಾಭ್ಯಾಂ ಮದನಲಿಪಿಮಾಧಾರಕಮಲೇ ।**
**ಹೃದಬ್ಜೇ ಶಕ್ತ್ಯಾಖ್ಯಂ ಸಿತಕರಕರಾಭಂ ಶಿರಸಿಜೇ**
**ಸರೋಜೇ ತ್ವಾಂ ಧ್ಯಾಯೇತ್ ಸಕಲಪುರುಷಾರ್ಥಾನ್ ಸ ಲಭತೇ ॥೯೩॥**

೯೩. ಯಾವನು ನಿನ್ನನ್ನು ಉದಯಿಸುತ್ತಿರುವ ಸೂರ್ಯನ ಕಿರಣಗಳ ಕಾಂತಿಯುಳ್ಳ ವಾಗ್ಬೀಜವಾದ ಶುದ್ಧವಾದ ಹಾಗೂ ಇಂದ್ರಗೋಪಮರಕತಮಣಿಗಳಿಂದಾದ ಕಾಮ ಬೀಜಾಕ್ಷರಯುಕ್ತವಾದ ಆಧಾರಕಮಲದಲ್ಲಿ, ಹಾಗೂ ಹೃದಯ ಕಮಲದಲ್ಲಿ ಶಕ್ತಿಯೆಂಬ ಹೆಸರಿನಿಂದ, ಮತ್ತು ಶಿರಸ್ಸಿನಲ್ಲಿರುವ ಕಮಲದಲ್ಲಿ ಶುಭ್ರವಾದ ಕಿರಣಗಳಿಂದ ಕೂಡಿದವನನ್ನಾಗಿ ಧ್ಯಾನಿಸುವನೋ ಅವನು ಎಲ್ಲಾ ಪುರುಷಾರ್ಥಗಳನ್ನೂ ಪಡೆಯುವನು.

**ಚಿದಂಶತ್ವಾದ್ರೂಪಂ ಕಿಮಪಿ ಸವಿತುರ್ಮಂಡಲಗತಂ**
**ವರೇಣ್ಯಂ ಭರ್ಗೋ ವೈ ತ್ರಿವಿಧತನುದೇವಸ್ಯ ವಪುಷಿ ।**
**ಮುನೇ ಧೀಮಹ್ಯಾಸದ್ಧರಿರಪಿ ಧಿಯೋ ಯೋ ನ ಇತರತ್**
**ಪ್ರಚೋದಾಯಾಸ್ತತ್ತ್ವಂ ಸ್ಥಿತಿಲಯಸೃಜಸ್ತ್ವಂ ಮುನಿಪತೇ ॥೯೪॥**

೯೪. ಎಲೈ ಮುನಿಯೆ, ಸೂರ್ಯನ ಮಂಡಲಾಂತರ್ಗತವಾದ ಚಿದಂಶವಾದ ಒಂದಾನೊಂದು ನಿನ್ನ ವರಣೀಯವಾದ ರೂಪವು ಮೂರುವಿಧವಾದ ಶರೀರವನ್ನೂ ಧರಿಸಿರುವ ಆ ದೇವನ ಮಂಡಲದಲ್ಲಿ ತೇಜೋಮಯವಾಗಿ ಇದ್ದುಕೊಂಡಿದೆ. ನಾವು ಅದನ್ನು ಧ್ಯಾನಿಸುವೆವು. ಅಲ್ಲಿರುವ ನಾರಾಯಣನು ನಮ್ಮ ಮತ್ತು ಉಳಿದ ಎಲ್ಲಾ ಪ್ರಾಣಿಗಳ ಬುದ್ಧಿವೃತ್ತಿಯನ್ನೂ ಪ್ರೇರಿಸಲಿ. ಮುನಿಪತಿಯೆ, ಸೃಷ್ಟಿ ಸ್ಥಿತಿಲಯಗಳನ್ನು ಮಾಡುವ ತತ್ತ್ವವೇ ನೀನಾಗಿರುವೆ.

**ಹರಿಸ್ತಂತುಃ ಪ್ರೋತಃ ಸದಸಿ ಶಿಖರೇ ಶುಭ್ರಕಪಟೋ**
**ಜಗನ್ಮೂಲಸ್ಥಾಣುಸ್ತ್ವಮಿತಿ ಸುಭವಸ್ಪಂದಮುನಿಭಿಃ ।**
**ಜ್ವರೀಭಿಃ ಸ್ವರ್ಣಾಢ್ಯಃ ಪವನಹತತದ್ಬಿಂದುನಿಕರೈಃ**
**ಜರಾಸಕ್ತಾಬ್ಜಾಹೀರುಚಿರಮಭಿಷಿಕ್ತಃ ಸ್ಥಿತ ಇವ ॥೯೫॥**

೯೫. (ಈ ಶ್ಲೋಕದ ಅಭಿಪ್ರಾಯವು ತಿಳಿಯಲಿಲ್ಲ.)

**ದುರಾಚಾರೋ ಜಾರಃ ಚಪಲಮತಿರಾಜಃ ಪರವಶಃ**
**ಪರದ್ರವ್ಯಾಕಾಂಕ್ಷೀ ಬಹುಜನವಿರೋಧೀ ಚ ಸತತಮ್ ।**
**ತದಾ ಚಾಹಂ ಪೂತಸ್ತವ ಪದಯುಗೇ ಸ್ಪರ್ಶವಶತೋ**
**ಹ್ಯಯಃಪಿಂಡಃ ಸ್ವರ್ಣಂ ಭವತಿ ಹಿ ಯದಾ ಸಿದ್ಧಸುರತಿಃ ॥೯೬॥**

೯೬. ದುರಾಚಾರಿಯೂ, ವ್ಯಭಿಚಾರಿಯೂ, ಚಪಲಬುದ್ಧಿಗಳೊಡೆಯನೂ (ಇಂದ್ರಿಯ) ಪರವಶನೂ ಪರದ್ರವ್ಯವನ್ನು ಬಯಸುವವನೂ, ಯಾವಾಗಲೂ ಬಹುಜನ ವಿರೋಧಿಯೂ ಆದ ನಾನು ನಿನ್ನ ಪಾದಾರವಿಂದಗಳ ಸ್ಪರ್ಶದನಿಮಿತ್ತವಾಗಿ ಪವಿತ್ರವಾಗಿ ಬಿಟ್ಟೆನು. ಹೇಗೆಂದರೆ ಕಬ್ಬಿಣದ ತುಂಡು ಯಾವಾಗ ರಸಸಿದ್ಧರ ಪ್ರಯೋಗದಿಂದ ಸಂಸ್ಕೃತವಾಗುವದೋ ಆಗ ಚಿನ್ನವಾಗಿಬಿಡುವದಷ್ಟೆ !

**ಪರಿಕ್ರಾಂತಾ ದೇಶಾ ಬಹುತರಧನಸ್ಯಾರ್ಜನಧಿಯಾ**
**ಕುಲಾಚಾರಂ ಹಿತ್ವಾ ಕುಮತಿನೃಪಸೇವಾಪಿ ಚ ಕೃತಾ ।**
**ವಿಧಾಯಾಸೌ ಶ್ರಾಂತಃ ಕಿಮಪಿ ನ ಚ ಲಬ್ಧಂ ತು ವಪುಷಾ**
**ಶ್ರಿತಂ ತ್ವತ್ಪಾದಾಬ್ಜಂ ಶ್ರಿತಮನುಜಮಂದಾರಮಧುನಾ ॥೯೭॥**

೯೭. ಬಹಳವಾದ ಧನಸಂಪಾದನೆಯ ಬುದ್ಧಿಯಿಂದ ದೇಶಗಳನ್ನು ತಿರುಗಿದ್ದಾಯಿತು. ಕುಲಾಚಾರವನ್ನೂ ಕೈಬಿಟ್ಟು ದುರ್ಬುದ್ಧಿಯ ರಾಜರುಗಳ ಸೇವೆಯನ್ನೂ ಮಾಡಿದ್ದಾಯಿತು. ಆದರೆ ಈ ಶರೀರ ಶ್ರಮದಿಂದ ಆಯಾಸವೊಂದು ಹೊರತು ಮತ್ತೇನೂ ದೊರಕಲಿಲ್ಲ. ಈಗ ಶರಣಾಗತರಿಗೆ ಮಂದಾರದಂತಿರುವ ನಿನ್ನ ಪಾದಾರವಿಂದವನ್ನು ಆಶ್ರಯಿಸಿದ್ದಾಗಿದೆ.

**ತ್ವದೀಯೋ ಮೇ ದೇಹಃ ತ್ವಮಪಿ ಪಿತರೌ ಭ್ರಾತೃಸುಹೃದಃ**
**ತ್ವಮೇವ ಬ್ರಹ್ಮನ್ ಮೇ ಸುತಹಿತಗೃಹಕ್ಷೇತ್ರನಿವಹಾಃ ।**
**ತ್ವಮೇವ ಪ್ರಾಣೋ ಮೇ ಧನಮಪಿ ಮಮತ್ವಾತ್ತವ ಪದಂ**
**ನ ಜಾನೇ ಮಯ್ಯೇವ ಸ್ಥಿತತರಮುಹುರ್ಮ್ರೀಯಮಧುನಾ ॥೯೮॥**

೯೮. ಈ ನನ್ನ ದೇಹವು ನಿನ್ನದೇ. ನೀನು ಕೂಡ ನನಗೆ ತಂದೆತಾಯಿಯರು, ಸೋದರರು, ಸ್ನೇಹಿತರು ಎಲ್ಲವೂ ಆಗಿರುವೆ. ಎಲೈ ಬ್ರಹ್ಮಜ್ಞಾನಿಯೆ, ನೀನೇ ನನ್ನ ಹಿತನಾದ ಮಗ, ಮನೆ, ಜಮೀನು ಮುಂತಾದ ಭೋಗ್ಯಸಮೂಹಗಳಾಗಿರುವೆ. ನೀನೇ ನನ್ನ ಪ್ರಾಣ, ಧನ, ಎಲ್ಲವೂ ಆಗಿರುವೆ. ನಿನ್ನ ಪದವಿಯೂ ನನ್ನದೇ. ನನ್ನಲ್ಲಿಯೇ ಪೂರ್ಣವಾಗಿ ನೀನು ಇದ್ದು ಕೊಂಡಿರುವೆಯಾದರೂ ನಿನ್ನನ್ನು ನಾನು ಅರಿಯದೆ ಇರುವೆನು.

**ನಮಸ್ತೇ ತಾರಾಯಾಮೃತಜಲಧಿಧಾಮ್ನೇಽಧಿಮಹಸೇ**
**ನಮಸ್ತೇ ಬ್ರಹ್ಮಾದ್ಯೈರ್ಮುನಿಸುರವರ್ಯೈಃ ಕ್ಲೃಪ್ತಮನಸೇ ।**
**ನಮಸ್ತೇ ಯನ್ನಾರಾಯಣಮುನಿವಿಲಾಸಾಯ ಭವತೇ**
**ಮನೂನಾಂ ಕೋಟೀನಾಮಚಲಗಣಿತಾನಾಂ ಚ ಪತಯೇ ॥೯೯॥**

೯೯. ಸಂಸಾರತಾರಕನಾದ ನಿನಗೆ ನಮಸ್ಕಾರ. ಅಮೃತಸಮುದ್ರದಲ್ಲಿ ಸ್ಥಾನವನ್ನು ಹೊಂದಿರುವ ತೇಜೋರೂಪನಾದ ಮತ್ತು ಬ್ರಹ್ಮನೇ ಮುಂತಾದ ದೇವತೆಗಳಿಂದಲೂ ಮುನಿಗಳಿಂದಲೂ ತಿಳಿಯಲ್ಪಟ್ಟವನಾದ ನಿನಗೆ ನಮಸ್ಕಾರ. ನಾರಾಯಣಮುನಿ ರೂಪದಿಂದ ತಪಸ್ಸುಮಾಡುತ್ತಿರುವ ವಿಭೂತಿಯಾದ ನಿನಗೆ ನಮಸ್ಕಾರ. ಬೆಟ್ಟದಷ್ಟು ಎಣಿಸಲ್ಪಟ್ಟ ಕೋಟಿಕೋಟಿಮನುಗಳೊಡೆಯನಾದ ನಿನಗೆ ನಮಸ್ಕಾರವು.

**ನಮಸ್ತೇ ದೇವೈರಪ್ಯವಿದಿತಮಹಿಮ್ನೇಽತಿಯಶಸೇ**
**ನಮಸ್ತೇ ದಿಕ್ಪಾಲಪ್ರಕಟಮುಕುಟಾಲಂಕೃತಪದೇ ।**

**ನಮಸ್ತೇ ತೇಜಸ್ವಿನ್ ನತಮನುಜಮಂದಾರವಪುಷೇ**
**ನಮೋ ದತ್ತಾತ್ರೇಯಾಕೃತಿಹರಿಹರಾಜಾಯ ಮಹತೇ ॥೧೧೦॥**

೧೧೦. ದೇವತೆಗಳಿಂದಲೂ ತಿಳಿಯಲಸಾಧ್ಯವಾದ ಮಹಿಮೆಯುಳ್ಳ ಹೆಚ್ಚಿನ ಯಶೋವಂತನಾದ ನಿನಗೆ ನಮಸ್ಕಾರ. ದಿಕ್ಪಾಲಕರ ಸುಪ್ರಸಿದ್ಧವಾದ ಕಿರೀಟಗಳಿಂದ ಭೂಷಿತವಾದ ಪಾದವುಳ್ಳ ನಿನಗೆ ನಮಸ್ಕಾರ. ಎಲೈ ತೇಜಸ್ವಿಯೆ, ನಮಸ್ಕರಿಸಿದ ಜನರಿಗೆ ಮಂದಾರವೃಕ್ಷದಂತೆ ಇಷ್ಟಾರ್ಥಗಳನ್ನು ಕೊಡುವ ಶರೀರವುಳ್ಳವನಾಗಿರುವ ಹರಿ ಹರಬ್ರಹ್ಮ ರೂಪನಾದ ದತ್ತಾತ್ರೇಯನಾದ ಮಹಾತೇಜೋಮಯನಿಗೆ ನಮಸ್ಕಾರವು.

**ನಮಸ್ತೇ ಪಾಪೌಘಾಚಲವಿತತಿಸಂಹಾರಪತಯೇ**
**ನಮಸ್ತೇ ದಾರಿದ್ರ್ಯವ್ಯಥಿತಜನದೈವಾಂತನಿಧಯೇ ।**
**ನಮಸ್ತೇ ರೋಗಾರ್ತಾನತಮನುಜದಿವ್ಯೌಷಧಿದೃಶೇ**
**ನಮಸ್ತೇ ದೈವಂ ಮೇ ನ ಹಿ ನ ಹಿ ಜಗತ್ಯಾಂ ತವ ಪದಮ್ ॥೧೧೧॥**

೧೧೧. ಪಾಪಗಳ ಸಮೂಹವೆಂಬ ಬೆಟ್ಟಗಳ ಸಾಲನ್ನು ನಾಶಗೊಳಿಸುವ ಪ್ರಭುವೆ, ನಿನಗೆ ನಮಸ್ಕಾರವು. ದಾರಿದ್ರ್ಯದಿಂದ ಬಳಲಿದ ಜನರ ದುರ್ದೈವವನ್ನು ಕೊನೆಗಾಣಿಸುವ ನಿಧಿಯಾದವನೆ, ನಿನಗೆ ನಮಸ್ಕಾರವು. ಖಾಯಿಲೆಯಿಂದ ಬಳಲಿ ಮೊರೆಹೊಕ್ಕ ಮನುಷ್ಯರಿಗೆ ದಿವ್ಯೌಷಧಿಯೂ (ಮೋಕ್ಷ) ಮಾರ್ಗದರ್ಶಿಯೂ ಆದವನೆ, ನಿನಗೆ ನಮಸ್ಕಾರವು. ನಿನ್ನ ಪಾದಗಳ ಹೊರತು ಈ ಜಗತ್ತಿನಲ್ಲಿ ನನಗೆ ಬೇರೊಂದು ದೇವರಿಲ್ಲ-ದೇವರಿಲ್ಲವೇ ಇಲ್ಲ.

**ಅಸೌ ದತ್ತಾತ್ರೇಯಸ್ತುತಿಯುತಕೃತಿರ್ಜ್ಞಾನಲಹರೀ**
**ಸುಧಾಧಾರಾಪೂರಾಖಿಲನಿಗಮಸಾರಾ ನು ಪಠತಾಮ್ ।**
**ಶ್ರುತಶ್ರೀವಿದ್ಯಾಯುರ್ವಿಭವಧನಧಾನ್ಯಾಮೃತಚಯಂ**
**ದದಾತ್ಯೇವಾತ್ಯಂತಂ ಜಯತಿ ಸಕಲಾಹ್ಲಾದಜನಿಕಾ ॥೧೧೨॥**

೧೧೨. ಈ ಜ್ಞಾನಪ್ರವಾಹರೂಪವಾದ, ಮತ್ತು ಪಠನಮಾಡುವವರಿಗೆ ಸಕಲ ವೇದಗಳ ಸಾರವಾದ ಅಮೃತಧಾರೆಯ ಪ್ರವಾಹವನ್ನು ಹರಿಸುವ ದತ್ತಾತ್ರೇಯರ ಸ್ತೋತ್ರ ರೂಪವಾದ ಈ ಕೃತಿಯು ವಿದ್ಯೆ, ಐಶ್ವರ್ಯ, ಜ್ಞಾನ, ಆಯುಸ್ಸು, ವೈಭವ, ಧನ, ಧಾನ್ಯ- ಮುಂತಾದ ಅಮೃತಸಮಾನವಾದ ಫಲಸಮೂಹವನ್ನು ಖಂಡಿತವಾಗಿ ಕೊಟ್ಟೇ ಕೊಡುವದು. ಹೀಗೆ ಈ ಸ್ತೋತ್ರವು ಸಕಲರಿಗೂ ಆನಂದವನ್ನುಂಟುಮಾಡುತ್ತಾ ಯಾವಾಗಲೂ ವಿಜಯಿಯಾಗಿರುವದು.

**ಇತಿ ಶ್ರೀ ದಲಾದನಮುನಿವಿರಚಿತಾ ದತ್ತಾತ್ರೇಯಜ್ಞಾನಲಹರೀ ಶ್ರೀ ದತ್ತಪದಪ್ರಾಪಿಕಾ ಸಂಪೂರ್ಣಾ**

**ಓಂ ತತ್ಸತ್**

# ಗುರುಪ್ರಶಂಸಾ

**ರೂಢಾಽವಿದ್ಯಾ ಜಗನ್ಮಾಯಾ ದೇಹೇಽಸ್ತಿ ಧ್ವಾಂತರೂಪಿಣೀ ।**
**ತದ್ವಾರಕಃ ಪ್ರಕಾಶಶ್ಚ ಗುರುಶಬ್ದೇನ ಕಥ್ಯತೇ ॥ ೧ ॥**

೧. ಈ ದೇಹದಲ್ಲಿ ಕತ್ತಲೆಯ ರೂಪವಾಗಿರುವ, ಜಗನ್ಮಾಯೆಯಾದ ಅವಿದ್ಯೆಯು ಬೇರುಬಿಟ್ಟುಕೊಂಡು ಇರುವದು. ಅದನ್ನು ನಿವಾರಣೆಮಾಡಿ ಬೆಳಕನ್ನುಂಟುಮಾಡುವವನನ್ನು 'ಗುರು' ಎಂದು ಕರೆಯುವರು.

**ಗುಕಾರಶ್ಚಾಂಧಕಾರೋ ಹಿ ರುಕಾರಸ್ತೇಜ ಉಚ್ಯತೇ ।**
**ಅಜ್ಞಾನಗ್ರಾಸಕಂ ಬ್ರಹ್ಮ ಗುರುರೇವ ನ ಸಂಶಯಃ ॥ ೨ ॥**

೨. 'ಗು' ಎಂಬಿದೇ ಕತ್ತಲೆಯು, 'ರು' ಎಂಬಿದೇ ಬೆಳಕು. ಅಜ್ಞಾನವೆಂಬ ಕತ್ತಲೆಯನ್ನು ನುಂಗಿಹಾಕುವ ಬ್ರಹ್ಮವೆಂಬ ತೇಜವು ಗುರುವೇ. ಈ ವಿಷಯದಲ್ಲಿ ಸಂಶಯವಿಲ್ಲ.

**ಗುಕಾರಶ್ಚಾಂಧಕಾರಸ್ತು ರುಕಾರಸ್ತನ್ನಿರೋಧಕಃ ।**
**ಅಂಧಕಾರವಿನಾಶಿತ್ವಾತ್ ಗುರುರಿತ್ಯಭಿಧೀಯತೇ ॥ ೩ ॥**

೩. 'ಗು' ಎಂದರೆ ಕತ್ತಲೆಯು. 'ರು' ಎಂದರೆ ಅದನ್ನು ನಿವಾರಣೆಮಾಡ ತಕ್ಕದ್ದು. ಆದ್ದರಿಂದ ಅಜ್ಞಾನವೆಂಬ ಕತ್ತಲೆಯನ್ನು ಕಳೆಯುವವನಾದ್ದರಿಂದ ಗುರುವೆಂದು ಕರೆಯುತ್ತಾರೆ.

**ಗುಕಾರಸ್ಸ್ಯಾತ್ ಗುಣಾತೀತೋ ರೂಪಾತೀತೋ ರುಕಾರಕಃ ।**
**ಗುಣರೂಪವಿಹೀನತ್ವಾತ್ ಗುರುರಿತ್ಯಭಿಧೀಯತೇ ॥ ೪ ॥**

೪. 'ಗು' ಎಂದರೆ ಗುಣಗಳನ್ನು ಮೀರಿದವನೆಂದೂ 'ರು' ಎಂದರೆ ರೂಪಗಳನ್ನು ಮೀರಿದವನೆಂದೂ ಅರ್ಥ. ಹೀಗೆ ಗುಣರೂಪಗಳೆಲ್ಲವನ್ನೂ ಮೀರಿದವನಾದ್ದರಿಂದ ಗುರುವೆಂದು ಕರೆಯಲ್ಪಡುತ್ತಾನೆ.

**ಗುಕಾರಃ ಪ್ರಥಮೋ ವರ್ಣ ಮಾಯಾದಿಗುಣಭಾಸಕಃ ।**
**ರುಕಾರೋಽಸ್ತಿ ಪರಂ ಬ್ರಹ್ಮ ಮಾಯಾಭ್ರಾಂತಿವಿಮೋಚಕಮ್ ॥ ೫ ॥**

೫. 'ಗು' ಎಂಬೀ ಮೊದಲನೆಯ ಅಕ್ಷರವು ಮಾಯೆಯೇ ಮುಂತಾದ ಗುಣಗಳನ್ನು ಸೂಚಿಸುವದು. 'ರು' ಎಂಬಿದು ಪರಬ್ರಹ್ಮವೇ ಆಗಿದ್ದು ಮಾಯೆಯ ಭ್ರಾಂತಿಯಿಂದ ಬಿಡಿಸತಕ್ಕದ್ದಾಗಿರುವದು.

**ಅಕ್ಷರತ್ವಾತ್ ವರೇಣ್ಯತ್ವಾತ್ ಧೂತಸಂಸಾರಬಂಧನಾತ್ ।**
**ತತ್ತ್ವಮಸ್ಯಾದಿಲಕ್ಷ್ಯತ್ವಾದವಧೂತ ಇತೀರ್ಯತೇ ॥ ೬ ॥**

೬. ನಾಶವಿಲ್ಲದವನೂ ಶ್ರೇಷ್ಠನೂ ಸಂಸಾರಬಂಧವನ್ನು ಕೊಡವಿಕೊಂಡು ತತ್ತ್ವಮಸಿ ಮುಂತಾದ ವಾಕ್ಯಗಳ ಲಕ್ಷ್ಯವಾದ ಬ್ರಹ್ಮದಲ್ಲಿ ನಿಷ್ಠನೂ ಆಗಿರುವವನು 'ಅವಧೂತ' ನೆನಿಸುವನು.

**೫. ಪ್ರಕರಣಗಳು - ೫ನೆಯ ಸಂಪುಟ:** ಸರ್ವವೇದಾಂತ ಸಿದ್ಧಾಂತ ಸಾರ ಸಂಗ್ರಹವೆಂಬ ಅಪೂರ್ವ ಪ್ರಕರಣವನ್ನು ಈ ಸಂಪುಟದಲ್ಲಿ ಅಳವಡಿಸಲಾಗಿದೆ. ಅಧ್ಯಾರೋಪಾಪವಾದ, ಅವಸ್ಥಾತ್ರಯ, (ಪಂಚಕೋಶ) ಪರಿಶೀಲನೆಯಿಂದ ವಿಶ್ವ ವೈಶ್ವಾನರ, ತೈಜಸ, ಹಿರಣ್ಯಗರ್ಭ, ಪ್ರಾಜ್ಞ ಈಶ್ವರ - ಎಂಬ ಸಮಷ್ಟಿವ್ಯಷ್ಟ್ಯುಪಾಧಿಗಳಿಂದ ಆತ್ಮವಿಭಾಗ ಮತ್ತು ಅವರ ಐಕ್ಯವನ್ನು ಪ್ರತಿಪಾದಿಸಿ ಶ್ರವಣಮನನನಿದಿಧ್ಯಾಸನಗಳನ್ನು ವಾಕ್ಯಾರ್ಥ ಜ್ಞಾನಕ್ಕೆ ಸಾಧನವಾಗಿ ಹೇಳಿರುವದಲ್ಲದೆ ಸಮಾಧಿಯ ವಿವರಗಳನ್ನೂ ತಿಳಿಸಿದೆ. ವೇದಾಂತವಿಚಾರಪರೀಶೀಲಕರು ಅವಶ್ಯವಾಗಿ ಓದಬೇಕಾದ ಗ್ರಂಥವಿದ

**(ಮೊದಲನೆಯ ಮುದ್ರಣ : ( 1969) ಪು. ಡೆಮ್ಮಿ ೧೨ + ೨೩೮)**

**೬. ಪ್ರಕರಣಗಳು - ೬ನೆಯ ಸಂಪುಟ:** ವಿಷ್ಣುಸಹಸ್ರನಾಮಭಾಷ್ಯ ಶ್ರೀ ಶಂಕರಾಚಾರ್ಯ ವಿರಚಿತವೆಂದು ಪ್ರಸಿದ್ಧವಾಗಿರುವ ವಿಷ್ಣುಸಹಸ್ರನಾಮ ಭಾಷ್ಯವನ್ನು ಮೂಲ, ಅನುವಾದ, ಟಿಪ್ಪಣಿ - ಇತ್ಯಾದಿಗಳೊಡನೆ ಕೊಡಲಾಗಿದೆ. ಅತ್ಯಮೂಲ್ಯವಾದ ಗ್ರಂಥವಿದು.

**(ಎರಡನೆಯ ಮುದ್ರಣ : ( 1947, 1986) ಪು. ಡೆಮ್ಮಿ ೧೧+೩೦೫)**

**೭. ಪ್ರಕರಣಗಳು - ೭ನೆಯ ಸಂಪುಟ:** ಸನತ್ಸುಜಾತೀಯಮ್ ; ಮಹಾಭಾರತದಲ್ಲಿ ಉದ್ಯೋಗಪರ್ವದಲ್ಲಿರುವ ಈ ಭಾಗವು ಧೃತರಾಷ್ಟ್ರನಿಗೆ ಸನತ್ಸುಜಾತರು ಮಾಡಿರುವ ತತ್ತ್ವೋಪದೇಶಗಳನ್ನು ಒಳಗೊಂಡಿದೆ. ಶಾಂಕರಭಾಷ್ಯ, ಮೂಲ, ಅನುವಾದ, ಟಿಪ್ಪಣಿಗಳೊಡನೆ ಜಿಜ್ಞಾಸುಗಳಿಗೆ ಉಪಯುಕ್ತವಾಗಿದೆ.

**(ಮೊದಲನೆಯ ಮುದ್ರಣ : ( 1976) ಪು. ಡೆಮ್ಮಿ ೧೪+೨೪೦)**

**೮. ಪ್ರಕರಣಗಳು - ೮ನೆಯ ಸಂಪುಟ : ಪ್ರಬೋಧಸುಧಾಕರ ಇತ್ಯಾದಿ :** ಶ್ರೀ ಶಂಕರಭಗವತ್ಪಾದ ರಚಿತವೆಂದು ಸುಪ್ರಸಿದ್ಧವಾಗಿರುವ 'ಪ್ರಬೋಧಸುಧಾಕರ' ಎಂಬ ಚಿಕ್ಕ ಪ್ರಕರಣ ಗ್ರಂಥ. ಭಕ್ತಿ ಹಾಗೂ ಯೋಗದರ್ಶನಗಳಿಂದ ಮಿಶ್ರವಾದ ವೇದಾಂತ ಸಿದ್ಧಾಂತವು ಇದರಲ್ಲಿ ನಿರೂಪಿಸಲ್ಪಟ್ಟಿದೆ 'ಪ್ರಶ್ನೋತ್ತರಮಾಲಿಕಾ' ಎಂಬ ಹೆಸರಿನ ಪ್ರಸಿದ್ಧವಾಗಿರುವ ಆಚಾರ್ಯರ ಮತ್ತೊಂದು ಕೃತಿಯನ್ನೂ, ಶ್ರೀರಾಮಭುಜಂಗಪ್ರಯಾತಸ್ತೋತ್ರ, ದತ್ತಲಹರೀ - ಎಂಬ ವಿಷಯಗಳನ್ನೂ ಸೇರಿಸಿ ಸಂಪುಟವನ್ನು ಹೊರತಂದಿದೆ. ಈಗ ಇದು ನಿಮ್ಮ ಕೈಯಲ್ಲಿದೆ.

**(ಎರಡನೆಯ ಮುದ್ರಣ : ( 1978, 1999) ಪು. ಡೆಮ್ಮಿ ೮+೧೦೪)**

**ಹೆಚ್ಚಿನ ವಿವರಗಳಿಗೆ ಮತ್ತು ಪುಸ್ತಕಗಳ ಪೂರ ಬೆಲೆಪಟ್ಟಿಗೆ ಸಂಪರ್ಕಿಸಿ.**

**ಅ.ಪ್ರ.ಕಾ. ಹೊಳೆನರಸೀಪುರ**
ಹಾಸನ ಜಿಲ್ಲೆ - 573211
ದೂ : 08175 - 73820

**ಅ.ಪ್ರ.ಕಾ. ತ್ಯಾಗರಾಜನಗರ**
ಬೆಂಗಳೂರು - 560 028
ದೂ. : 080 - 6525548

# ಸಂಸ್ಥಾಪಕರ ಸ್ಮರಣೆ



ಕರ್ನಾಟಕದೇಶದ ಅಭಿನವಶಂಕರಾಚಾರ್ಯರೆಂದೇ ಸುಪ್ರಸಿದ್ಧರಾಗಿರುವ ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು ಶಾಂಕರ ವೇದಾಂತದ ವಿಷಯಕ್ಕೆ 20ನೆಯ ಶತಮಾನದ ಅಧಿಕೃತ ವಕ್ತಾರರೂ, ಬರಹಗಾರರೂ ಆಗಿದ್ದರು. ಪೂಜ್ಯಶ್ರೀಶ್ರೀಗಳವರ ಅನುವಾದ, ಟಿಪ್ಪಣಿ, ವಿಮರ್ಶಾತ್ಮಕ ಪೀಠಿಕೆ ಗಳಿಂದ ಅಲಂಕೃತವಾದ ಶ್ರೀಶಂಕರರ ಪ್ರಸ್ಥಾನತ್ರಯ ಭಾಷ್ಯಗಳು ಸಂಸ್ಕೃತವು ಬಾರದ ಕನ್ನಡಿಗರಾದ ಅಧ್ಯಾತ್ಮ ವಿಚಾರ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

5. 1. 1880 ರಂದು ಜನಿಸಿದ ಪೂಜ್ಯ ಶ್ರೀಶ್ರೀಗಳವರ ಪೂರ್ವಾಶ್ರಮದ ಹೆಸರು ವೈ. ಸುಬ್ಬರಾವ್ ಎಂದಿತ್ತು. 1948 ರವರೆಗೆ (68 ನೆಯ ವಯಸ್ಸಿನವರೆಗೆ) ಅವರು ''ಸುಬ್ರಾಯ'' ರೆಂದೇ ಪ್ರಖ್ಯಾತರಾಗಿದ್ದರು. 10. 6. 1948 ರಂದು ಸಂನ್ಯಾಸವನ್ನು ಸ್ವೀಕರಿಸಿ **ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳಾದರು.**

'ಬೆಳಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿದಂದಿನಿಂದ ಬದುಕಿರುವ ವರೆಗೂ ವೇದಾಂತಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು ''ಪುರುಷಸರಸ್ವತಿ'' ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಅವರು ಸಂಸ್ಥಾಪಿಸಿರುವ ಅಧ್ಯಾತ್ಮಪ್ರಕಾಶ ಕಾರ್ಯಾಲಯವು ದೇಶವಿದೇಶ ಗಳಲ್ಲೂ ಪ್ರಖ್ಯಾತವಾಗಿದ್ದು ಈಗಲೂ ನಿಜವಾದ ಅಧ್ಯಾತ್ಮವಿದ್ಯೆಯ ಅಂತರರಾಷ್ಟ್ರೀಯ ಕೇಂದ್ರವಾಗಿದೆ.

ಪೂಜ್ಯರು ಕರ್ನಾಟಕದ ಅಭಿನವಶಂಕರಾಚಾರ್ಯರಾಗಿ ಬಾಳಿ 1975ನೇ ಆಗಸ್ಟ್ 5 (1880- 1975)ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ.

**ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ ।**
**ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥**

**''ಓಂ ನಮೋ ಭಗವತೇ ಸಚ್ಚಿದಾನಂದಾಯ''**